**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕರ್ನಾಟಕ ವಿಧಾನ ಪರಿಷತ್ತು

18ನೇ ಡಿಸೆಂಬರ್ 2018
ಮಂಗಳವಾರ

**ವಿಷಯಾನುಕ್ರಮಣಿಕೆ**

1. **ಪ್ರಶ್ನೋತ್ತರಗಳು.**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

882 – ಬೆಳಗಾವಿಯ ಹಿಡಕಲ್ ಜಲಾಶಯ ನಿರ್ಮಾಣದಿಂದ ಕುರ್ಣಿ ಏತ ನೀರಾವರಿ ಯೋಜನೆಯ ಕಾಲುವೆಗಳಿಗೆ ನೀರು ಹರಿಯದೆ ಇರುವ ಬಗ್ಗೆ
– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ

852– ಸೌಲಭ್ಯಪೂರ್ಣ ಆದರ್ಶಗ್ರಾಮ ನಿರ್ಮಾಣ ಕುರಿತು –ಡಾ।ತೇಜಸ್ವಿನಿಗೌಡ

928– ನಾಗರಿಕರಿಗೆ ವೈದ್ಯಕೀಯ ಸೌಲಭ್ಯ ನೀಡುವ ಬಗ್ಗೆ –ಶ್ರೀ ಪಿ.ಆರ್.ರಮೇಶ್

913– ಪ್ರಕೃತಿ ವಿಕೋಪಕ್ಕೊಳಗಾದ ಕೊಡಗು ಜಿಲ್ಲೆಯ ಗ್ರಾಮ ಪಂಚಾಯಿತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ವಿಶೇಷ ಅನುದಾನ ಮಂಜೂರು ಮಾಡುವ ಕುರಿತು –ಶ್ರೀಮತಿ ಎಸ್.ವೀಣಾ ಅಚ್ಚಯ್ಯ

871– ರಾಜ್ಯದಲ್ಲಿ ಸ್ವಚ್ಛ ಭಾರತ ಅಭಿಯಾನದಡಿ ಶೌಚಾಲಯಗಳನ್ನು ನಿರ್ಮಿಸುವ ಬಗ್ಗೆ
–ಶ್ರೀ ಎನ್.ಅಪ್ಪಾಜಿಗೌಡ

914– ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ನೇಮಕಗೊಂಡಿರುವ ಸಿಬ್ಬಂದಿಗೆ ಪಿಂಚಣಿ ಹಾಗೂ ಇತರ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ –ಶ್ರೀ ಎಸ್.ವ್ಹಿ.ಸಂಕನೂರ

886– ಸಣ್ಣ ನೀರಾವರಿ ಇಲಾಖೆಗೆ ಸೇರಿದ ಕೆರೆಗಳಿಗೆ ಬಿಡುಗಡೆಯಾಗಿರುವ ಅನುದಾನದ ಬಗ್ಗೆ
–ಶ್ರೀ ಎಸ್.ರವಿ (ಶ್ರೀ ಎಚ್.ಎಂ.ರೇವಣ್ಣನವರ ಪರವಾಗಿ)

894– ಸಣ್ಣ ನೀರಾವರಿ ಇಲಾಖೆಗೆ ನೀಡಿರುವ ಅನುದಾನದ ಬಗ್ಗೆ
–ಶ್ರೀ ಕಾಂತರಾಜು(ಬಿಎಂಎಲ್)

877 – ಕಿಂಡಿ ಅಣೆಕಟ್ಟು ಕುರಿತು –ಶ್ರೀ ಕೆ.ಹರೀಶ್‌ಕುಮಾರ್

900– ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆ ತುಂಬುವ ಬಗ್ಗೆ –ಶ್ರೀ ಪುಟ್ಟಣ್ಣ

926– ಬೀದರ್ ಜಿಲ್ಲೆಯ ಭೀಮ್ಸ್ ಮೆಡಿಕಲ್ ಕಾಲೇಜಿನ ಬಗ್ಗೆ –ಶ್ರೀ ಅರವಿಂದ್ ಕುಮಾರ್ ಅರಳಿ

006– ಕೆರೆ ತುಂಬಿಸುವ ಯೋಜನೆಯ ಕುರಿತು –ಶ್ರೀ ಎನ್.ರವಿಕುಮಾರ್

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**2. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು.**

**ಅ) ಹಾನಗಲ್ ತಾಲ್ಲೂಕಿನ ರೈತರಿಗೆ ಬ್ಯಾಂಕ್ ಮೂಲಕ ವಿಮೆ ವಿತರಣೆಯಲ್ಲಿ ತಾರತಮ್ಯವಾಗಿರುವ ಬಗ್ಗೆ.**

-ಶ್ರೀ ಶ್ರೀನಿವಾಸ್ ವಿ.ಮಾನೆ
-ಶ್ರೀ ಡಿ.ಕೆ.ಶಿವಕುಮಾರ್(ಜಲಸಂಪನ್ಮೂಲ ಸಚಿವರು)

**ಆ) ಬೆಳಗಾವಿ ಸುವರ್ಣ ವಿಧಾನಸೌಧಕ್ಕೆ ಕೆಲವು ಕಛೇರಿಗಳನ್ನು ಸ್ಥಳಾಂತರಿಸುವ ಬಗ್ಗೆ.**

-ಶ್ರೀ ಎಸ್.ವ್ಹಿ.ಸಂಕನೂರ
-ಶ್ರೀ ಡಿ.ಕೆ.ಶಿವಕುಮಾರ್(ಜಲಸಂಪನ್ಮೂಲ ಸಚಿವರು)

**ಇ) ಕೈಗಾ ಪರಮಾಣ ವಿದ್ಯುತ್ ಸ್ಥಾವರದ 5 ಮತ್ತು 6ನೇ ಘಟಕ ನಿರ್ಮಾಣಕ್ಕೆ ಸಾರ್ವಜನಿಕರ ವಿರೋಧದ ಬಗ್ಗೆ.**

– ಶ್ರೀ ಶ್ರೀಕಾಂತ ಎಲ್, ಘೋಟ್ನೆಕರ
– ಶ್ರೀ ಡಿ.ಕೆ.ಶಿವಕುಮಾರ್(ಜಲಸಂಪನ್ಮೂಲ ಸಚಿವರು)

**ಈ)ರಾಜ್ಯ ಸರ್ಕಾರಿ ನೌಕರರಿಗೆ ಪರಿಮಿತಿ ರಜಾ ಪಟ್ಟಿಯಲ್ಲಿ ಕ್ರೈಸ್ತ ಸಮುದಾಯದವರಿಗೆ ಪವಿತ್ರ ಹಬ್ಬವಾದ ಕನ್ಯಾಮರಿಯಮ್ಮ ಜಯಂತಿ ಹಬ್ಬವನ್ನು ಸೇರಿಸುವ ಬಗ್ಗೆ.**

– ಶ್ರೀ ಐವನ್ ಡಿ'ಸೋಜಾ
– ಶ್ರೀ ಡಿ.ಕೆ.ಶಿವಕುಮಾರ್(ಜಲಸಂಪನ್ಮೂಲ ಸಚಿವರು)

**ಉ) ಬಾಗಲಕೋಟೆ ಜಿಲ್ಲೆಯಲ್ಲಿ ದಿನಾಂಕ 14-12-2018ರಂದು 13 ಸಹ ಶಿಕ್ಷಕರು ಮತ್ತು 5 ಜನ ಅಂಗನವಾಡಿ ಕಾರ್ಯಕರ್ತೆಯರನ್ನು ಅಮಾನತ್ತು ಮಾಡಿರುವ ಬಗ್ಗೆ.**

– ಶ್ರೀ ಎಸ್.ಆರ್. ಪಾಟೀಲ್
– ಶ್ರೀ ಡಿ.ಕೆ.ಶಿವಕುಮಾರ್(ಜಲಸಂಪನ್ಮೂಲ ಸಚಿವರು)

**ಊ) ಉತ್ತರ ಕರ್ನಾಟಕದಲ್ಲಿ ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸುವ ಬಗ್ಗೆ.**

ಶ್ರೀ ಎನ್.ರವಿಕುಮಾರ್
ಶ್ರೀ ಡಿ.ಕೆ.ಶಿವಕುಮಾರ್( ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**ಋ) ಚಿಕ್ಕಮಗಳೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ಮತ್ತು ಕೃಷಿ ಉದ್ದೇಶಕ್ಕಾಗಿ ಬಳಸುವ ನೀರಿಗೆ ನೀಡುವ ನೀರಿನ ಹಕ್ಕುಪತ್ರ ದೃಢೀಕರಣದಲ್ಲಿ ಉಂಟಾಗಿರುವ ಗೊಂದಲದ ಬಗ್ಗೆ.**

– ಶ್ರೀ ಎಂ.ಕೆ.ಪ್ರಾಣೇಶ್
– ಶ್ರೀ ಡಿ.ಕೆ.ಶಿವಕುಮಾರ್( ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎ) **ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮಹಾಲಕ್ಷ್ಮಿ ಏತ ನೀರಾವರಿ ಯೋಜನೆ ನೆನಗುದಿಗೆ ಬಿದ್ದಿರುವ ಬಗ್ಗೆ.**

- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
- ಶ್ರೀ ಡಿ.ಕೆ.ಶಿವಕುಮಾರ್( ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

ಏ) **ಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿನ ಭತ್ತ ಖರೀದಿ ಕೇಂದ್ರದಲ್ಲಿ ನೋಂದಣಿ ಮಾಡಿಸಿಲ್ಲವೆಂಬ ಕಾರಣಕ್ಕೆ ಜ್ಯೋತಿ ತಳಿ ಭತ್ತವನ್ನು ಖರೀದಿಸಲು ನಿರಾಕರಿಸುತ್ತಿರುವ ಬಗ್ಗೆ.**

ಶ್ರೀ ಎಸ್.ನಾಗರಾಜು(ಸಂದೇಶ್ ನಾಗರಾಜು)
ಶ್ರೀ ಡಿ.ಕೆ.ಶಿವಕುಮಾರ್( ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

ಐ) **ಬೆಂಗಳೂರು ಮೆಜಿಸ್ಟಿಕ್ ಪ್ರದೇಶದಲ್ಲಿ ಸುರಕ್ಷತಾ ಕ್ರಮಗಳ ಕೊರತೆ ನಿವಾರಣೆ ಬಗ್ಗೆ.**

ಶ್ರೀ ಯು.ಬಿ.ವೆಂಕಟೇಶ್
ಶ್ರೀ ಡಿ.ಕೆ.ಶಿವಕುಮಾರ್( ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

3. **ಮಾನ್ಯ ಸಭಾಪತಿಯವರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರಿಂದ ಹೇಳಿಕೆ.**

ಅ) **ಆರೋಗ್ಯ ಇಲಾಖೆಯಲ್ಲಿನ ಗುತ್ತಿಗೆ ನೌಕರರಿಗೆ ವೇತನದ ಜೊತೆಗೆ ಇತರೇ ಸೌಲಭ್ಯಗಳನ್ನು ನೀಡುವ ಬಗ್ಗೆ.**

- ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)

ಆ) **ವಿಷಯ: ನಾಪೋಕ್ಲು ಹೋಬಳಿಯಲ್ಲಿ ನಡೆದ ಕೃಷಿ ಅಭಿಯಾನ ಕಾರ್ಯಕ್ರಮದಲ್ಲಿ ರೈತರಿಗೆ ನೀಡದ ಫಲಕಗಳ ಬಗ್ಗೆ.**

- ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)

4. **ಪ್ರಕಟಣೆ**

5. **ಸಭೆಯ ಮುಂದಿಡಲಾದ ಕಾಗದ ಪತ್ರಗಳು**

6. **ವರದಿಯನ್ನೊಪ್ಪಿಸುವುದು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**7. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ**

**ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ.**

ಡಾಃವೈ.ಎ.ನಾರಾಯಣಸ್ವಾಮಿ
ಶ್ರೀ ಎಂ.ನಾರಾಯಣಸ್ವಾಮಿ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
ಶ್ರೀ ಲಹರ್‌ಸಿಂಗ್ ಸಿರೋಯಾ
ಶ್ರೀ ಯು.ಬಿ.ವೆಂಕಟೇಶ್
ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
ಶ್ರೀ ಎಸ್.ಎಲ್.ಧರ್ಮೇಗೌಡ
ಶ್ರೀಮತಿ ಎಸ್.ವೀಣಾ ಅಚ್ಚಯ್ಯ
ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

**8. ಗಮನಸೆಳೆಯುವ ಸೂಚನೆಗಳು**

**ಅ) ಬಾಪೂಜಿ ಸೇವಾ ಕೇಂದ್ರಗಳಲ್ಲಿ ಸಿಬ್ಬಂದಿಗಳನ್ನು ನೇಮಿಸದಿರುವುದು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸದಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಕುರಿತು.**

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
ಶ್ರೀ ಎಂ.ಕೆ.ಪ್ರಾಣೇಶ್
ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
ಶ್ರೀ ಕೃಷ್ಣಬೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)
ಶ್ರೀ ಮಾನೆ ಶ್ರೀನಿವಾಸ್
ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ ಪಿ.ಆರ್.ರಮೇಶ್

**ಆ) ಚಿನ್ನ-ಬೆಳ್ಳಿ ಕೆಲಸಗಾರರ ಮೇಲೆ ವಿನಾಃ ಕಾರಣ ದೂರು ದಾಖಲು ಮಾಡುತ್ತಿರುವುದು, ಕಳ್ಳತನ ಪ್ರಕರಣಗಳ ತನಿಖೆ ನೆಪದಲ್ಲಿ ಚಿನ್ನ-ಬೆಳ್ಳಿ ಕೆಲಸಗಾರರ ಮೇಲೆ ದೌರ್ಜನ್ಯ ನಡೆಸುತ್ತಿರುವ ಬಗ್ಗೆ.**

ಶ್ರೀ ಕೆ.ಪಿ.ನಂಜುಂಡಿ
ಡಾಃಜಿ.ಪರಮೇಶ್ವರ(ಉಪ ಮುಖ್ಯಮಂತ್ರಿಗಳು)
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಆಯನೂರು ಮಂಜುನಾಥ್
ಡಾಃ ತೇಜಸ್ವಿನಿಗೌಡ
ಶ್ರೀ ಎಸ್.ಎಲ್.ಭೋಜೇಗೌಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಇ) ಬೆಂಗಳೂರು ನಗರದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಸಿಎ ನಿವೇಶನಗಳನ್ನು ಗುತ್ತಿಗೆ ಪಡೆದ ಸಂಸ್ಥೆಗಳು ನಿವೇಶನ ಪಡೆಯುವ ಸಂದರ್ಭದಲ್ಲಿ ತಿಳಿಸಿದ ಉದ್ದೇಶಕ್ಕಾಗಿ ಉಪಯೋಗಿಸದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸುತ್ತಿರುವ ಬಗ್ಗೆ.**

ಶ್ರೀ ಎಂ.ಸಿ.ವೇಣುಗೋಪಾಲ್
ಡಾಃಜಿ.ಪರಮೇಶ್ವರ್(ಉಪ ಮುಖ್ಯಮಂತ್ರಿಗಳು)

**೯. ಪ್ರಕಟಣೆ**

**೧೦. ನಿಯಮ ೩೩೦ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲಿನ ಚರ್ಚೆ.**

**ಕರಾವಳಿ ಜಿಲ್ಲೆಗಳಲ್ಲಿ ಮರಳು ಸಮಸ್ಯೆ ತೀವ್ರಗೊಂಡಿದ್ದು, ಈ ಸಂಬಂಧ ಸರ್ಕಾರ ಮತ್ತು ಖಾಸಗಿ ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಂಡಿರುವುದರಿಂದ ಕಾರ್ಮಿಕರು ಅನುಭವಿಸುತ್ತಿರುವ ತೊಂದರೆ ಬಗ್ಗೆ.**

ಶ್ರೀ ಐವನ್ ಡಿ'ಸೋಜಾ
ಶ್ರೀ ಕೆ.ಹರೀಶ್‌ಕುಮಾರ್
ಶ್ರೀ ಎಸ್.ಎಲ್.ಭೋಜೇಗೌಡ
ಡಾಃತೇಜಸ್ವಿನಿಗೌಡ
ಡಾಃವೈ.ಎ.ನಾರಾಯಣಸ್ವಾಮಿ
ಶ್ರೀ ಆರ್.ಪ್ರಸನ್ನಕುಮಾರ್
ಶ್ರೀ ಎಂ.ನಾರಾಯಣಸ್ವಾಮಿ
ಶ್ರೀ ರಾಜಶೇಖರ್ ಬಸವರಾಜ ಪಾಟೀಲ್(ಗಣಿ ಮತ್ತು ಭೂವಿಜ್ಞಾನ ಮತ್ತು ಮುಜರಾಯಿ ಸಚಿವರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(509) 18.12.2018 11.40 SV-VK

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ 18ನೇ ಡಿಸೆಂಬರ್ 2018**

**ಸದನವು ಬೆಳಗಾವಿಯ ಸುವರ್ಣಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 46 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಟಿಪ್ಪು ಜಯಂತಿಯ ವಿಚಾರವಾಗಿ ಪ್ರಸ್ತಾಪಿಸಲಾದ ಗಮನ ಸೆಳೆಯುವ ಸೂಚನೆಗೆ ನಿನ್ನೆ ಅಂದರೆ ಸೋಮವಾರ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡುತ್ತಾರೆ ಎಂದು ಮಾನ್ಯ ಸಭಾನಾಯಕರು ಹೇಳಿದ್ದರು. ನಿನ್ನೆ ಬೇರೆ ಬೇರೆ ಕಾರಣಗಳಿಂದ ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ ಎನ್ನುವ ಹಿನ್ನೆಲೆಯಲ್ಲಿ ನಾವು ಅದನ್ನು ಕೇಳಿರಲಿಲ್ಲ. ಇಂದು ಮಾನ್ಯ ಮುಖ್ಯಮಂತ್ರಿಗಳಿಂದ ಎಷ್ಟು ಹೊತ್ತಿಗೆ ಉತ್ತರವನ್ನು ಕೊಡಿಸಲಾಗುವುದು ಎಂಬ ಬಗ್ಗೆ ಸರ್ಕಾರವನ್ನು ಕೇಳಬಯಸುತ್ತೇವೆ.

**ಶ್ರೀ ಕೃಷ್ಣ ಬೈರೇಗೌಡ (ಕಾನೂನು ಮತ್ತು ಸಂಸದೀಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈಗಷ್ಟೇ ಇಲ್ಲಿಗೆ ಬಂದಿದ್ದಾರೆ. ಅವರಿಗೆ ಸಂಬಂಧಪಟ್ಟ ಕೆಲವು ವಿಷಯಗಳು ಇಂದು ಇಲ್ಲಿ ಪಟ್ಟಿಯಾಗಿವೆ. ಅವರೊಂದಿಗೆ ಸಮಾಲೋಚಿಸಿ, ಪ್ರಶ್ನೋತ್ತರ ಮುಗಿಯುವುದರೊಳಗೆ ಸದನಕ್ಕೆ ತಿಳಿಸುತ್ತೇನೆ. ಅವರು ಇಂದೇ ಉತ್ತರಿಸುತ್ತಾರೆಯೆ ಅಥವಾ ನಾಳೆ ಉತ್ತರಿಸುತ್ತಾರೆಯೆ ಎಂದು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ. ಗುರುವಾರದಂದು ಈ ಸದನದಲ್ಲಿ ಅರ್ಧ ಸಮಯ ನಿಗದಿಯಾಗಿದ್ದು, ತಾವು ಒಪ್ಪುವುದಾದರೆ ಎರಡನ್ನು ಸೇರಿಸಿ ತೆಗೆದುಕೊಳ್ಳಬಹುದು. ಇಂದೇ ಉತ್ತರಿಸುವಂತೆ ಅವರ ಬಳಿ ಮನವಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಮ್ಮದೇನೂ ಗೊಂದಲವಿಲ್ಲ. ಮೊನ್ನೆ ಕೂಡ ಈ ವಿಷಯವು ಮಾನ್ಯ ಮುಖ್ಯಮಂತ್ರಿಯವರು ಇರುವ ದಿವಸಕ್ಕಾಗಿ ನಿಗದಿಯಾಗಿತ್ತು. ಆದರೆ ಆ ದಿನ ಕೊಟ್ಟಿರಲಿಲ್ಲ. ಆದ್ದರಿಂದ ದಯವಿಟ್ಟು ಇಂದು ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಕೊಡಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಇದರ ಬಗ್ಗೆ ಸಂದೇಶವನ್ನು ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 1. ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಸಭಾಪತಿಯವರು:-** ಈಗ ಪ್ರಶ್ನೋತ್ತರ ಅವಧಿ. ಮಾನ್ಯ ಅರುಣ ಶಹಾಪುರ ಅವರ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಲಾಗಿದೆ. ಮಾನ್ಯ ಹರೀಶ್ ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಬೇಕಾದಂತಹ ಮಾನ್ಯ ಸಣ್ಣ ನೀರಾವರಿ ಸಚಿವರು ತಡವಾಗಿ ಬರುವುದಾಗಿ ತಿಳಿಸಿರುತ್ತಾರೆ. ಮುಂದಿನ ಪ್ರಶ್ನೆ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಅವರದ್ದು.

**ಪ್ರಶ್ನೆ ಸಂಖ್ಯೆ 882**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಬೆಳಗಾವಿ ಜಿಲ್ಲೆ ಹಿಡಕಲ್ ಜಲಾಶಯದ ನಿರ್ಮಾಣದಿಂದಾಗಿ ಹುಕ್ಕೇರಿ ತಾಲ್ಲೂಕಿನ 22 ಹಳ್ಳಿಗಳು ಮುಳುಗಡೆಯಾದರೂ ಈ ಜಲಾಶಯದ ಹತ್ತಿರದ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಕೋಚರಿ ಏತ ನೀರಾವರಿ ಮತ್ತು ಕುರ್ಣಿ ಏತ ನೀರಾವರಿ ಯೋಜನೆಯ ಕಾಲುವೆಗಳಿಗೆ ನೀರು ಹರಿಯದಿರುವುದರಿಂದ ರೈತರು ಸಂಕಷ್ಟದಲ್ಲಿರುವುದು ನಿಜವೇ ಎಂಬುದಾಗಿ ನಾನು ಪ್ರಶ್ನೆಯನ್ನು ಕೇಳಿದ್ದೆನು. ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಕೊಟ್ಟಿರುತ್ತಾರೆ. ಆದರೆ ಅವರ ಉತ್ತರದಲ್ಲಿ ತಿಳಿಸಿರುವ ಹಾಗೆ ಈ ಒಂದು ಯೋಜನೆಯು ಕ್ರಮವಾಗಿ 19 ಮತ್ತು 32 ವರ್ಷಗಳ ಹಿಂದೆ ಅನುಷ್ಠಾನವಾಗಿರುವ ಯೋಜನೆಯಾಗಿರುವುದರಿಂದ ಈ ಯೋಜನೆಗಾಗಿ ಉಪಯೋಗಿಸಲಾಗಿರುವ ಪಂಪ್, ಮೋಟಾರು ಹಾಗೂ ವಿದ್ಯುತ್ ಉಪಕರಣಗಳ ಸಾಮರ್ಥ್ಯ ಕುಂಠಿತಗೊಂಡಿರುವ ಮತ್ತು ಕಾಲುವೆಗಳು ಶಿಥಿಲಾವಸ್ಥೆಗೊಂಡಿರುವ ಹಿನ್ನೆಲೆಯಲ್ಲಿ ನೀರನ್ನು ಪೂರೈಸುವುದಕ್ಕೆ ತೊಂದರೆಯಾಗಿರುತ್ತದೆ ಎನ್ನುವ ವಿಷಯವನ್ನು ಮಾನ್ಯ ಸಚಿವರು ಒಪ್ಪಿಕೊಂಡಿರುತ್ತಾರೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ಒಂದು ಅಂಶವನ್ನು ತರಬಯಸುತ್ತೇನೆ. ಹುಕ್ಕೇರಿ ತಾಲ್ಲೂಕಿನ ಯಾವ ಭಾಗದಲ್ಲಿ ಹಿಡಕಲ್ ಜಲಾಶಯ ನಿರ್ಮಾಣಗೊಂಡಿದೆಯೋ, ರೈತರು ತಮ್ಮ ಜಮೀನುಗಳನ್ನು ಕಳೆದುಕೊಂಡು ಅಭಿವೃದ್ಧಿಯಿಂದ, ನೀರಾವರಿಯಿಂದ ವಂಚಿತರಾಗಿರುವ ಆ ಭಾಗದ ಜನರಿಗೆ ನೀರಾವರಿಯನ್ನು ಕೊಡಬೇಕೆಂದು ಹಿಂದಿನ ನೀರಾವರಿ ಸಚಿವರಾಗಿದ್ದಂತಹ ಶ್ರೀ ಮಲ್ಲಾರಗೌಡ ಪಾಟೀಲರು ಮತ್ತು ಹಿಂದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ ಯೋಜನೆಗೆ ಚಾಲನೆಯನ್ನು ಕೊಟ್ಟು ಆ ಭಾಗದ ಜನರ, ರೈತರ ಬೇಡಿಕೆಗೆ ಸ್ಪಂದಿಸತಕ್ಕಂತಹ ಕೆಲಸವನ್ನು ಸರ್ಕಾರ ಮಾಡಿತ್ತು.

**(...ಮುಂದು)**

(510) 18.12.2018 ಕೆಜಿ.ಬಿಎನ್ಎಸ್ 11.50

**(ಸಭಾಪತಿಯವರು ಉಪಸ್ಥಿತಿ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಮುಂದು.....):-**

ಆದರೆ, ಕಾಲ ಕ್ರಮೇಣ ಆ ಯೋಜನೆಯ ನೀರು ಕೊನೆಯ ಭಾಗದ ರೈತರಿಗೆ ಇವತ್ತಿಗೂ ಸಹ ತಲುಪುತ್ತಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಕೋಚರಿ ಏತ ನೀರಾವರಿಗೆ ಬರುವಂತಹ ಸುಲ್ತಾನಪುರ, ಬೇಣಿವಾಡ, ಮದಮಕ್ಕನಾಳ, ಹುಕ್ಕೇರಿ, ಬಸ್ತವಾಡ, ಗೌಡವಾಡ, ಅರ್ಜುನವಾಡ, ಕೋಚರಿ, ಮೊಸರಗುಪ್ಪಿ, ಶಿಂಗಾವ ಹಾಗೂ ಲಕ್ಕಿ, ಕುರ್ಣಿ ಏತ ನೀರಾವರಿ ಬರುವಂತಹ ಇಂಗಳ, ಹೊಸೂರ, ಯರನಾಳ, ಯರಗಟ್ಟಿ, ಬಡಕುಂದ್ರಿ, ಕುರ್ಣಿ, ಯಮನಕಂಡಿ, ಹಂಚಿನಾಳ, ಹಾಗೂ ಉಳ್ಳಾಗಡ್ಡಿ ಖಾನಾಪುರ ಏನಿವೆ, ಇವುಗಳಿಗೆ ಒಂದು ಮತ್ತು ಎರಡನೆ ಹಂತದ ಯೋಜನಗಳೇನಿವೆ, ಇವುಗಳ ಒಟ್ಟು ಯೋಜನೆಗಳಿಗೆ ಮತ್ತೊಮ್ಮೆ ಕಾಯಕಲ್ಪ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಲಿದೆಯೇ? ಇದಕ್ಕೆ ಇನ್ನೂ ಬೇಕಾದಂತಹ ಹೆಚ್ಚಿನ ಅನುದಾನವನ್ನು ಕೊಟ್ಟು ಇವತ್ತು ಕೊನೆಯ ಭಾಗದ ರೈತರಿಗೆ ನೀರು ತಲುಪುತ್ತಿಲ್ಲ ಅಲ್ಲಿ pump machinery ಇರಬಹುದು, pipe line ಅಳವಡಿಕೆ ಇರಬಹುದು, ಆ ಎರಡು ಯೋಜನೆಗಳನ್ನು ಮತ್ತೊಮ್ಮೆ ಪುನರುಜ್ಜೀವನಗೊಳಿಸಿ ಆ ಭಾಗದ ರೈತರಿಗೆ ನೀರನ್ನು ಕೊಡುವಂತಹ ಕೆಲಸನ್ನು ಸರ್ಕಾರ ಮಾಡಲಿದೆಯೇ ಎನ್ನುವಂತಹ ಪ್ರಶ್ನೆಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು practical ಆದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಇಲ್ಲ (ಈ) ಮೂರು ಯೋಜನೆಗಳು ಏನು ಇವೆ, ಅವುಗಳಲ್ಲಿ ಕೋಚರಿ ಏತ ನೀರಾವರಿ ಯೋಜನೆಯನ್ನು 1999 ರಲ್ಲಿ ಕಾರ್ಯಗತಗೊಳಿಸಲಾಗಿದೆ. ಕುರ್ಣಿ-1ನೇ ಹಂತ ಏತ ನೀರಾವರಿ ಯೋಜನೆ 1986 ರಲ್ಲಿ ಮತ್ತು ಕುರ್ಣಿ 2ನೇ ಹಂತದ ಏತ ನೀರಾವರಿ ಯೋಜನೆ 1986

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1996) ರಲ್ಲಿ ಆಗಿವೆ. ನಾನು ಈಗಾಗಲೇ ಕೊನೆಯ ಭಾಗಕ್ಕೆ ನೀರು ಹೋಗುತ್ತಿಲ್ಲವೆಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಇಲ್ಲಿ ಕೆಲವು ವರ್ಷಗಳಿಂದ ನೀರಿನ ಒಳ ಹರಿವು ಕಡಿಮೆ ಆಗಿದೆ. ವಿದ್ಯುತ್ ಪೂರೈಕೆಯಲ್ಲೂ ಸಹ ವ್ಯತ್ಯಾಸ ಆಗಿದೆ. ಅದನ್ನು ಇಲ್ಲವೆಂದು ನಾನು ಹೇಳುವುದಿಲ್ಲ. ಅಲ್ಲಿ ಕೆಲವು 19 ವರ್ಷ, 32 ವರ್ಷಗಳ ಹಳೆಯ ಮೋಟರ್‌ಗಳಿದ್ದು ಅವು ಹಾಳಾಗಿವೆ. ಈಗ ಹೊಸ software ಗಳನ್ನು ಅಳವಡಿಸಿಕೊಳ್ಳುವುದಕ್ಕೆ starter ಗಳನ್ನು ಮಾಡಿಸುವುದಕ್ಕೆ ಈಗಾಗಲೇ ಕೋಚರಿಯಲ್ಲಿ ಕ್ರಮ ತೆಗೆದುಕೊಂಡಿದೇವೆ. ಇನ್ನು ಐದು ವರ್ಷ ಹೊಸದಾಗಿ ನೀರನ್ನು pump ಮಾಡುವುದಕ್ಕೆ ಯಂತ್ರಗಳನ್ನು ಅಳವಡಿಸಲು ಇಲ್ಲೂ ಸಹ ವ್ಯವಸ್ಥೆ ಮಾಡಿದ್ದೇವೆ. ನಾನು ಕೊಡಲೇ ಬದಲಾವಣೆ ಮಾಡುವಂತಹಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಅದಷ್ಟು ಬೇಗ ಅದನ್ನು ಬದಲಾವಣೆ ಮಾಡಿಸಿ ಆ ನೀರನ್ನು ಅಳವಡಿಸುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, Chief Engineer, Irrigation (North), ಇವರು ಈ project ಅನ್ನು detail ಆಗಿ revise ಮಾಡಿ ಎಲ್ಲಾ ಹಳ್ಳಿಗಳಿಗೂ ನೀರು ತಲುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದಕ್ಕೆ ಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಆಗಬಹುದು.

ಪ್ರಶ್ನೆ ಸಂಖ್ಯೆ 852

(ಉತ್ತರವನ್ನು ಲಗತ್ತಿಸಲಾಗಿದೆ)

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದಾದ್ಯಂತ ಗ್ರಾಮ ಸಂಪರ್ಕಕ್ಕೆ ಬಾಕಿಯಿರುವ ರಸ್ತೆಗಳ ಉದ್ದ ಎಷ್ಟು ಮತ್ತು ಅದಕ್ಕೆ ಬೇಕಾಗಿರುವ ಹಣಕಾಸಿನ ಮೊತ್ತವೆಷ್ಟು ಹಾಗೂ ಇದರಲ್ಲಿ ಕೇಂದ್ರದ ಹಾಗೂ ರಾಜ್ಯದ ಪಾಲೆಷ್ಟು ಇದರ ಪೂರ್ಣ ಸಂಪರ್ಕಕ್ಕೆ ಬೇಕಾದ ಕಾಲಮಿತಿ ಎಷ್ಟು ಎಂದು ಕೇಳಿದ್ದೇನೆ. ಅಲ್ಲದೇ, ಕುಡಿಯುವ ನೀರು, ಮೂಭೂತ ಸೌಕರ್ಯಗಳಾದ ರಸ್ತೆ, ವಿಶೇಷವಾಗಿ ಎಲ್ಲಾ ಜನ ಪತ್ರಿನಿಧಿಗಳಿಗೆ ಎದುರು ಆಗುವಂತಹ ದೊಡ್ಡ ಸಮಸ್ಯೆ ಎಂದರೆ ಪ್ರತಿ ಗ್ರಾಮಕ್ಕೂ ಉತ್ತಮವಾದಂತಹ ಒಳ್ಳೆಯ ರಸ್ತೆ ಬೇಕೆಂದು ಕೇಳುತ್ತಾರೆ. ಅದು ಜನರ ಹಕ್ಕು ಎಂದು ಭಾವಿಸಿದ್ದೇನೆ. ಅದೇ ರೀತಿ ಕುಡಿಯುವ ನೀರು. ನಾವು ವಿಶೇಷ ಸಂದರ್ಭದಲ್ಲಿ ಶುದ್ಧ ಕುಡಿಯುವ ನೀರನ್ನು ಪಡೆಯುತ್ತಿಲ್ಲವೆಂದು ನೋಡುತ್ತಿದ್ದೇವೆ. ಮಾನ್ಯ ಸಚಿವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರ ಉತ್ತರದಲ್ಲಿ ಕೊಳವೆ ಬಾವಿ ಮೂಲಕ, ಜಲಧಾರೆ ನದಿಗಳಿಂದ ನೀರನ್ನು ಶುದ್ಧೀಕರಿಸಿ ಆ ಒಂದು ಯೋಜನೆಯನ್ನು ಯೋಜಿಸಲಾಗಿದೆ ಎಂದು ಹೇಳಿದ್ದಾರೆ. ಇಷ್ಟು ದಶಕಗಳಲ್ಲಿ ನಾವು ಶುದ್ಧ ಕುಡಿಯುವ ನೀರಿನ ಪಡೆಯುತ್ತಿಲ್ಲ ಎನ್ನುವಂಥದ್ದು ಮಾನ್ಯ ಸಚಿವರು ಒದಗಿಸಿದ್ದಾರೆ. ಸುಮಾರು 266.22 ಲಕ್ಷ ಜಾನುವಾರುಗಳ ಸಂಖ್ಯೆ ಇದೆ ಎಂದು ತಿಳಿಸಿದ್ದಾರೆ. ಏಕೆಂದರೆ, ಮನುಷ್ಯರಿಗೂ ಮತ್ತು ಪ್ರಾಣಿಗಳಿಗೂ ನೀರು ಬೇಕಾಗಿರುತ್ತದೆ. ನಾವು ಇದನ್ನು ನೋಡಿದಾಗ ಆದರ್ಶಗ್ರಾಮ ಮತ್ತು ಸುವರ್ಣ ಗ್ರಾಮದ ಯೋಜನೆಯಡಿಯಲ್ಲಿ 5,613 ಹಳ್ಳಿಗಳು, ಗ್ರಾಮ ವಿಕಾಸ ಯೋಜನೆಯಲ್ಲಿ 939 ಹಳ್ಳಿಗಳು ಮತ್ತು ಮುಖ್ಯ ಮಂತ್ರಿಗಳ ಗ್ರಾಮ ವಿಕಾಸ ಯೋಜನೆಯಲ್ಲಿ 963 ಹಳ್ಳಿಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ. ಇಂತಹದ್ದನ್ನು ಬಿಟ್ಟರೆ ಪರಿಪೂರ್ಣವಾದಂತಹ ಗ್ರಾಮವಿಕಾಸವನ್ನು ನಾವು ಮಾಡದೇ ಹೋದರೆ, ಈಗ ಹೆಚ್ಚಾಗಿ ಅಲ್ಲಿನ ಜನರು ಮೂಲಭೂತ ಸೌಕರ್ಯಗಳನ್ನು ಕೇಳುತ್ತಿದ್ದಾರೆ. ರಸ್ತೆಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಇದು ಯಾವುದೇ ರಸ್ತೆಗಳು ಸಹ ಡಾಂಬರು ರಸ್ತೆಯಾಗಿರಲಿ ಅಥವಾ ಉತ್ತಮವಾದಂತಹ ಸಂಚಾರಕ್ಕೆ ಬೇಕಾದಂತಹ ಗುಣಮಟ್ಟದ ರಸ್ತೆಗಳು ಆಗಿರುವುದಿಲ್ಲ. ಅಲ್ಲದೇ, ರಾಜ್ಯದ ಅನುದಾನ ಕೂಡ ಇದಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆದ್ಯತೆ ಕೊಡುತ್ತಿರುವುದು ಕಂಡುಬರುತ್ತಿಲ್ಲ. ಪಂಚಾಯಿತಿಗಳಿಗೆ ಬರುತ್ತಿದ್ದ 30 ರಿಂದ 35 ಲಕ್ಷ ಹಣ ಕೇಂದ್ರದಿಂದ ಬರುತ್ತಿದೆ. ಇನ್ನಿತರೆ ಯೋಜನೆಯಡಿ ಕೇಂದ್ರದ 75 ಭಾಗ ಮತ್ತು ರಾಜ್ಯದ 25 ಭಾಗ ಬರುತ್ತಿತ್ತು. 2016 ನೇ ಸಾಲಿನಿಂದೀಚೆಗೆ 60 ಮತ್ತು 40ರ ಅನುಪಾತದಲ್ಲಿ ಬರುತ್ತಿದೆ. ನನ್ನ ಕಾಳಜಿ ಏನೆಂದರೆ, ಪರಿಪೂರ್ಣವಾದಂತಹ ಗ್ರಾಮವಿಕಾಸ, ವಲಸೆಯನ್ನು ತಡೆಯಬೇಕಾದರೆ, ಇವತ್ತಿನ ದಿವಸಗಳಲ್ಲಿ ಪಟ್ಟಣ್ಣ ಪ್ರದೇಶಗಳಲ್ಲಿ ಒತ್ತಡ ಜಾಸ್ತಿಯಾಗಿದೆ, ವಲಸೆ ಬರುವಂತಹದ್ದು. ನಾವು ಆದಷ್ಟು ಗ್ರಾಮಗಳಲ್ಲಿ ಸ್ವಾವಲಂಬಿ ಗ್ರಾಮವಿಕಾಸವನ್ನು ಮಾಡಿದರೆ ಇದನ್ನು ತಡೆಯಬಹುದು ಮತ್ತು ಇದು ಅವರ ಮೂಲಭೂತ ಹಕ್ಕು ಆಗಿದೆ. ಮಾನ್ಯ ಸಚಿವರು ರಾಜ್ಯದಲ್ಲಿನ ಎಲ್ಲಾ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ. ರಸ್ತೆ ಸಂಪರ್ಕ ಇಲ್ಲದ ಗ್ರಾಮಗಳು ಇರುವುದಿಲ್ಲವೆಂದು ಉತ್ತರ ನೀಡಿದ್ದಾರೆ. ಆದರೆ, ಆ ರಸ್ತೆಗಳು ಅತ್ಯುತ್ತಮವಾದಂತಹ ರಸ್ತೆ ಸಂಪರ್ಕಗಳು ಆಗಿರುವುದಿಲ್ಲ. ಈಗಲೂ ಸಹ ಸರ್ಕಾರದ ಮೇಲೆ ಹೆಚ್ಚು ಒತ್ತಡ ಇರುವುದರಿಂದ ಏನು ತೊಂದರೆಗಳು ಎಂದು ತಿಳಿಯಬಯಸುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ:–** ಮನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೂರು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ನೀರು, ರಸ್ತೆ ಮತ್ತು ಗ್ರಾಮದ ವಿಕಾಸದ ಬಗ್ಗೆ ಕೇಳಿದ್ದಾರೆ. ಬಹುತೇಕ ಎಲ್ಲಾ ಗ್ರಾಮಗಳಿಗೂ ನೀರನ್ನು ಒಂದಲ್ಲ ಒಂದು ಮೂಲದಿಂದ ಕೊಡುತ್ತಿದ್ದೇವೆ. ಬರಗಾಲ ಬಂದಾಗ ನೀರಿನ ಲಭ್ಯತೆ ನಿಂತು ಹೋದಾಗ tanker ಮುಖಾಂತರ ಅಥವಾ ರೈತರ ಖಾಸಗೀ ಬೋರ್‌ವೆಲ್‌ನಿಂದ ತೆಗೆದುಕೊಳ್ಳುವುದರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಕ ನೀರನ್ನು ಕೊಡುತ್ತಿದ್ದೇವೆ. ಈಗಾಗಲೇ ಬರಗಾಲ ಪ್ರಾರಂಭವಾಗಿರುವುದಿಂದ ಸುಮಾರು 400 ರಿಂದ 500 ಗ್ರಾಮಗಳಲ್ಲಿ tanker ಮೂಲಕ ನೀರನ್ನು ಸರಬರಾಜು ಮಾಡುತ್ತಿದ್ದೇವೆ. ಇದನ್ನು ಹೊರತು ಪಡಿಸಿ ಕೊಳವೆ ಬಾವಿ ಅಥವಾ ನದಿಯಿಂದ ನಾವು ನೀರನ್ನು ತೆಗೆದುಕೊಂಡು ಈಗಾಗಲೇ ಎಲ್ಲಾ ಗ್ರಾಮಗಳಿಗೂ ಸಹ ಕೊಡುತ್ತಿದ್ದೇವೆ. ಮುಂದುವರಿದು seasonal variations ಇರಬಾರದು. ವರ್ಷ ಪೂರ್ತಿ ಗುಣಮಟ್ಟದ ನೀರು ಸಿಗಬೇಕೆಂದು ಜಲಾಧಾರೆ ಯೋಜನೆಯನ್ನು ನಾವು ಈ ವರ್ಷದಿಂದ ಯೋಜನೆಯನ್ನು ರೂಪಿಸುತ್ತಿದ್ದೇವೆ. ಈ ಹಿಂದಿನ ಸರ್ಕಾರದಲ್ಲಿ ಗದಗದಲ್ಲಿ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಮಾಡಿದ್ದಾರೆ, ನಾವು ಅದೇ ಮಾದರಿಯನ್ನು ತೆಗೆದುಕೊಂಡು ಎಲ್ಲಾ ಜಿಲ್ಲೆಗಳಿಗೂ ವರ್ಷ ಪೂರ್ತಿ ನೀರು ಖಾತ್ರಿ ಇರುವ ಹಾಗೆ ನೀರು ಸರಬರಾಜು ಮಾಡುವಂಥದ್ದು ನದಿ ಮೂಲದಿಂದ ತೆಗೆದುಕೊಂಡು ಅದನ್ನು ಶುದ್ಧೀಕರಿಸಿ ಪ್ರತಿ ಗ್ರಾಮಕ್ಕೂ ಸಹ ನಿರಂತರವಾಗಿ ಕುಡಿಯುವ ನೀರನ್ನು ಕೊಡಬೇಕೆಂದು ಒಂದು 5 ರಿಂದ 6 ವರ್ಷ ಹಿಡಿಯುತ್ತದೆ. ಈ ಯೋಜನೆಗೆ ಸುಮಾರು 60 ರಿಂದ 70 ಸಾವಿರ ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತದೆ. ಈ ಯೋಜನೆ ಕೆಲವೇ ದಿವಸಗಳಲ್ಲಿ ಒಂದು ಯೋಜನೆಯ ರೂಪುರೇಷೆಗಳನ್ನು ಸಂಪುಟದ ಮುಂದೆ ತೆಗೆದುಕೊಂಡು ಹೋಗುತ್ತಿದ್ದೇವೆ. ಅದನ್ನು ಹಂತ ಹಂತವಾಗಿ ಅನುಷ್ಠಾನ ಮಾಡಿ ಈ seasonal variations ಅನ್ನು ತಡೆಗಟ್ಟಿ ಶುದ್ಧ ನೀರನ್ನು ಕೊಡುವುದಕ್ಕೆ ಒಂದು ದೀರ್ಘ ಯೋಜನೆಯನ್ನು ರೂಪಿಸುತ್ತಿದ್ದೇವೆ.

ಮಾನ್ಯ ಸಭಾಪತಿವರೇ, ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ, 48 ಸಾವಿರ ಕೀಲೋಮೀಟರ್‌ನಷ್ಟು ರಸ್ತೆಗಳನ್ನು ಇಲ್ಲಿಯವರೆಗೆ ನಮ್ಮ ಇಲಾಖೆಯ ವತಿಯಿಂದ ಎಲ್ಲವನ್ನು ಸೇರಿಸಿದರೆ ಡಾಂಬರೀಕರಣ ಮಾಡಿದ್ದೇವೆ. ಅದರಲ್ಲಿ ಕೆಲವು ಗುಣಮಟ್ಟದ್ದು ಇವೆ. ಇನ್ನು ಕೆಲವು ಕಳಪೆ ಮಟ್ಟದ್ದುಇದೆ (ಹದಗೆಟ್ಟಿದೆ). ಅದಕ್ಕೆ ನಾವು ಮುಚ್ಚು ಮರೆ ಮಾಡುವಂಥದ್ದು ಏನು ಇಲ್ಲ. ನಾವು ಅದಕ್ಕೂ ಸಹ ಒಂದು ಧೀರ್ಘ ಕಾಲದ ಯೋಜನೆಯನ್ನು ರೂಪಿಸುತ್ತಿದ್ದೇವೆ. ಹಳ್ಳಿಗಳಲ್ಲೂ ಸಹ ಆದ್ಯತೆಯ ಗ್ರಾಮೀಣ ರಸ್ತೆ ಈಗ ಯಾವ ತರಹ major district road ಇದೆ ಅದೇ ತರಹ major village road ಎಂದು ನಮ್ಮ ಇಲಾಖೆಯಲ್ಲಿಯೇ ಒಂದು categorization ಮಾಡಿ ಅದರ maintenance ಅನ್ನು ನಾವೇ ತೆಗೆದುಕೊಂಡು ಅವುಗಳನ್ನು ಎಲ್ಲಾ ಅವಧಿಯಲ್ಲೂ ಸಹ ಯಾವ ತರಹ ಲೋಕೋಪಯೋಗಿ ಇಲಾಖೆಯಲ್ಲಿ maintenance ಗೆ provision ಮಾಡಿದ್ದಾರೆ, ಅದನ್ನು ನಾವು ಸಹ provision ಮಾಡಿ ಜಿಲ್ಲಾ ಹಂತದಲ್ಲಿ ಅದನ್ನು maintain ಮಾಡಬೇಕು. Throughout the year ಅವು motorable condition ನಲ್ಲಿ ಇರಬೇಕೆಂದು, at least ಕೆಲವು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಸ್ತೆಗಳಾದರೂ, ಎಲ್ಲಾ ರಸ್ತೆಗಳನ್ನು ನಾವು ಯಾವಾಗಲೂ maintain ಮಾಡುವುದಕ್ಕೆ ಕಷ್ಟವಾಗುತ್ತದೆ. major village road ಗಳನ್ನಾದರೂ maintain ಮಾಡಬೇಕೆಂದು ಚಿಂತನೆ ಮಾಡುತ್ತಿದ್ದೇವೆ. ಮುಂದಿನ ವರ್ಷದಲ್ಲಿ ಅದನ್ನು ಕಾರ್ಯರೂಪಕ್ಕೆ ತರುವಂತಹ ಪ್ರಯತ್ನ ಮಾಡುತ್ತೇವೆ. ಅದು ಇನ್ನು ನಮ್ಮ ಇಲಾಖೆಯ ಹಂತದಲ್ಲಿದೆ. ಅದು ಇನ್ನು ಸರ್ಕಾರದ ಹಂತಕ್ಕೆ ಹೋಗಿಲ್ಲ. ಅದು ರಸ್ತೆಗಳ ಬಗ್ಗೆ.

ಮಾನ್ಯ ಸಭಾಪತಿಯವರೇ, P.M.G.S.Y. (Pradhan Mantri Gram Sadak Yojana) Phase-III ಅನ್ನು ಕೇಂದ್ರ ಸರ್ಕಾರ ಕಳೆದ ಜನವರಿಯ ಆಯವ್ಯಯದಲ್ಲಿ ಘೋಷಣೆ ಮಾಡಿದೆ. ಆದರೆ, ಅದರ ಆದೇಶ ಹೊರಗೆ ಬಂದಿಲ್ಲ. P.M.G.S.Y. Phase-III ಬಂದರೆ, 8 ಸಾವಿರ ಕಿಲೋಮೀಟರ್ ಕರ್ನಾಟಕದಲ್ಲಿ ಕೇಂದ್ರದ್ದು ಭಾಗ ಶೇಕಡಾ 60 ರಷ್ಟು ನಮ್ಮ ಭಾಗ ಶೇಕಡಾ 40 ರಷ್ಟು P.M.G.S.Y. ಮುಖಾಂತರ ಸುಧಾರಣೆ ಮಾಡುವುದಕ್ಕೆ ಅವಕಾಶ ಇದೆ. ನಾವು ಕೇಂದ್ರ ಸರ್ಕಾರದ ಆದೇಶಕ್ಕಾಗಿ ಕಾಯುತ್ತಿದ್ದೇವೆ. ತಮಗೆ ಗೊತ್ತಿರುವಂತೆ, P.M.G.S.Y. ನಿಂದ ಕಳೆದ ನಾಲ್ಕೈದು ವರ್ಷಗಳಿಂದ ನಮ್ಮ ರಾಜ್ಯಕ್ಕೆ ಅನುದಾನ ಬಂದಿಲ್ಲ. P.M.G.S.Y. Phase-III ಆದೇಶ ಹೊರಬಂದರೆ ನಮ್ಮ ರಾಜ್ಯಕ್ಕೆ ಸ್ವಲ್ಪ ಅನುದಾನ ಸಿಗಬಹುದು. ಇಲ್ಲವೆಂದರೆ, ಕಳೆದ ನಾಲ್ಕೈದು ವರ್ಷಗಳಿಂದ ವಂಚಿತರಾಗಿದ್ದೇವೆ. ಅದು ಒಂದು ಯೋಜನೆಯನ್ನು ಸಹ ನಾವು ದೃಷ್ಟಿಯಲ್ಲಿ ಇಟ್ಟುಕೊಂಡಿದ್ದೇವೆ. ಮಾನ್ಯ ಸದಸ್ಯರು ಗ್ರಾಮಗಳ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಗ್ರಾಮ ವಿಕಾಸ ಯೋಜನೆ ಏನಿದೆ, ಅದರಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಒಂದು ಗ್ರಾಮಕ್ಕೆ ಸುಮಾರು 75 ಲಕ್ಷದಿಂದ ಒಂದು ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಿ ಮಾಡುತ್ತಿದ್ದೇವೆ. ಆದರೆ, ದೊಡ್ಡ ಪ್ರಮಾಣದಲ್ಲಿ ಸುಮಾರು 30 ಸಾವಿರಕ್ಕಿಂತ ಹೆಚ್ಚು ಗ್ರಾಮಗಳು ಇರುವುದರಿಂದ ಅವುಗಳನ್ನು ಹಂತ ಹಂತವಾಗಿ tackle ಮಾಡುತ್ತಿದ್ದೇವೆ. ಗ್ರಾಮ ವಿಕಾಸ ಯೋಜನೆಯಡಿ ಒಂದು ಗ್ರಾಮಕ್ಕೆ ಸುಮಾರು 75 ಲಕ್ಷದಿಂದ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆ ಯೋಜನೆಯನ್ನು ಈ ವರ್ಷ ನಾವು fresh work ಅನ್ನು ತೆಗೆದುಕೊಂಡಿಲ್ಲ. ಮುಂದಿನ ವರ್ಷ ತೆಗೆದುಕೊಂಡು ಇನ್ನು ಹೆಚ್ಚಿನ ಹಳ್ಳಿಗಳಿಗೆ ತಲುಪಿಸುವಂತಹ ಪ್ರಯತ್ನ ಮಾಡುತ್ತೇವೆ.

( ಮುಂದು.. .. )

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(511)18-12-2018(12-00)ಎಂವಿ-ಬಿಎಸ್ಎಸ್

**(ಸಭಾಪತಿಯವರ ಉಪಸ್ಥಿತಿ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೆ, ಇಲ್ಲಿ ಎರಡು-ಮೂರು ಸಮಸ್ಯೆಗಳಿವೆ. ಸರ್ಕಾರ ತುಂಬಾ ದುಬಾರಿ ಹಣ ಖರ್ಚು ಮಾಡಿ ರಸ್ತೆಯನ್ನು ನಿರ್ಮಾಣ ಮಾಡುತ್ತದೆ. ಇರತಕ್ಕಂತಹ ಸಂಪನ್ಮೂಲದಿಂದಲೇ ಕೊಡಬೇಕೆಂದು ರಸ್ತೆಗಳನ್ನು ನಿರ್ಮಾಣ ಮಾಡುತ್ತದೆ. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿರಬಹುದು, ಚಿಕ್ಕಬಳ್ಳಾಪುರ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಗಣಿಗಾರಿಕೆ ನಡೆಯುತ್ತಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಹೋಗುವುದಕ್ಕೆ, ಪರವಾನಿಗೆಗಿಂತ ಜಾಸ್ತಿ ತೂಕವನ್ನು ಹಾಕಿದಂತಹ ಲಾರಿಗಳು ಗ್ರಾಮೀಣ ರಸ್ತೆಯಲ್ಲಿ ಬಂದಾಗ. ಅಂದರೆ, ನಂದಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯನವರ ಗ್ರಾಮವಾದ ಮುದ್ದೇನಹಳ್ಳಿ ಮಾರ್ಗವಾಗಿ ದೊಡ್ಡಬಳ್ಳಾಪುರದ ಕಡೆಗೆ ಬರುತ್ತದೆ. ಆ ರಸ್ತೆಗಳು ಎಷ್ಟರಮಟ್ಟಿಗೆ ಹಾಳಾಗುತ್ತದೆ ಎಂದರೆ, ಸ್ವಲ್ಪ ಪ್ರಮಾಣದ ಹಣವನ್ನು ಪಂಚಾಯಿತಿಗೆ ಕೊಡುತ್ತಾರೆ. ಪಂಚಾಯಿತಿಗಳಿಗೆ ಈ ತರಹದ ಅಸಹಾಯಕತೆ ಏಕೆ ಉಂಟಾಗಿದೆ ಎಂದರೆ, ಪಂಚಾಯಿತಿ ನಡೆಸುವುದಕ್ಕೆ ಮತ್ತು electricity bills ಕಟ್ಟುವುದಕ್ಕೆ ಸಮಸ್ಯೆಗಳಿವೆ. ಆದ್ದರಿಂದ ರಸ್ತೆಗಳನ್ನು ಹಾಳು ಮಾಡುವಂತಹ ಈ ತರಹದ ಸಂಚಾರವನ್ನು ತಡೆಯಬೇಕು.

ಎರಡನೆಯದಾಗಿ, ಕೊಳವೆಬಾವಿಗಳ ಮೂಲಕ ನೀರನ್ನು ಒದಗಿಸುವುದಕ್ಕೆ ಅದರ ಮೇಲೆ ಏನು ನೀವು ಅವಲಂಬಿತರಾಗಿದ್ದೀರಿ, ನದಿಗಳು ಇರುವ ಕಡೆ ನದಿಯ ಮೂಲದಿಂದ ನೀರನ್ನು ತೆಗೆದುಕೊಳ್ಳುತ್ತೀರಿ, ನದಿಯ ನೀರನ್ನು ತೆಗೆದುಕೊಳ್ಳುವುದು ಸರಿ. ಮಳೆಯ ಪ್ರಮಾಣ ಕಡಿಮೆ ಇರತಕ್ಕಂಥ fluoride ನೀರಿನ ಮೇಲೆ, 1500 ರಿಂದ 1700 ಅಡಿ ಅಂತರದಲ್ಲಿ ಕೊಳವೆ ಬಾವಿಗಳಿಂದ ನೀರನ್ನು ಎತ್ತುವಂತಹ ಕೋಲಾರ, ಚಿಕ್ಕಬಳ್ಳಾಪುರ ಮತ್ತು ದೇವನಹಳ್ಳಿಗಳಲ್ಲಿ fluoride ನೀರು ಮತ್ತು ವಿಷಯುಕ್ತ ನೀರು ಇರುವುದರಿಂದ ಆ ನೀರನ್ನು ಶುದ್ಧೀಕರಿಸದೆ ಕೊಡಬಾರದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಕೆಲವು ಗ್ರಾಮಗಳಲ್ಲಿನ ಖಾಸಗಿ ಬೋರ್‌ವೆಲ್‌ಗಳ ಪರಿಸ್ಥಿತಿ ಬಗ್ಗೆ ಸಹ ಮಾತನಾಡಿದ್ದಾರೆ. ಅವುಗಳನ್ನು ಕೂಡ ಶುದ್ಧೀಕರಣ ಮಾಡುವಂತಹ ಒಂದು ವ್ಯವಸ್ಥೆ ಆಗಿರುವುದಿಲ್ಲ. ಮತ್ತೆ ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಇನ್ನೊಂದು ಸಮಸ್ಯೆ ಎಂದರೆ, ನದಿ ನೀರನ್ನು ಅವಲಂಬಿಸಿರುವುದರಿಂದ, ಈ ಅತಿವೃಷ್ಟಿ ಮತ್ತು ಗುಡ್ಡ ಕುಸಿತದಿಂದ ಮತ್ತು ಸಾಂಕ್ರಾಮಿಕ ರೋಗಗಳು ಅಂದರೆ, ನದಿ ನೀರು ಕೂಡ ಕಲುಷಿತವಾಗುವುದರಿಂದ, ಶುದ್ಧೀಕರಣ ಮಾಡಿಯೇ ಕುಡಿಯುವ ನೀರನ್ನು ಒದಗಿಸುವುದಕ್ಕೆ ನದಿ ಅವಲಂಬಿತ ಕರಾವಳಿ ಪ್ರದೇಶ, ಮಲೆನಾಡು ಪ್ರದೇಶ ಮತ್ತು ಬಯಲುಸೀಮೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡೂ ಭಾಗಗಳಲ್ಲಿ ಶುದ್ಧೀಕರಿಸಿಯೇ ನೀರನ್ನು ಕೊಡಬೇಕು ಎನುವಂಥದ್ದಕ್ಕೆ ಆದ್ಯತೆಯನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಆಗ್ರಹ ಮಾಡುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೆ, ಗ್ರಾಮೀಣ ರಸ್ತೆಗಳಲ್ಲೂ ಸಹ ಕೆಲವು ರಸ್ತೆಗಳು ವಾಣಿಜ್ಯ ಸಂಪರ್ಕವನ್ನು ಹೊಂದಿರುವಂತಹ ಕಡೆ, ನಾವು ಅಲ್ಲಿನ ರಸ್ತೆಗೆ ಹತ್ತು ಟನ್ ಸಾಮರ್ಥ್ಯದ ಗುಣಮಟ್ಟವನ್ನು ಇಟ್ಟಿರುತ್ತೇವೆ. ಆದರೆ, ಅಲ್ಲಿ ಮೂವತ್ತು ಟನ್ ಸಾಮರ್ಥ್ಯದ ವಾಹನಗಳು ಸಂಚರಿಸುತ್ತಿರುವುದರಿಂದ ಆ ರಸ್ತೆಗಳು ಕೆಟ್ಟಿವೆ. ಒಂದು ಶಾಶ್ವತವಾದ ಪರಿಹಾರವನ್ನು ನಾನು ಏನು ಹೇಳಿದೆ ಎಂದರೆ, 'Major Village Road' ಎಂಬ ಒಂದು concept ಮಾಡುವಾಗ, ಇದನ್ನು ಸಹ ಗಣನೆಗೆ ತೆಗೆದುಕೊಂಡಿದ್ದೇವೆ. ನಾವು ಎಲ್ಲಾ ರಸ್ತೆಗಳನ್ನು ಮೂವತ್ತು ಟನ್‌ಗೆ ಮೇಲ್ದರ್ಜೆಗೇರಿಸಿದರೆ ಅದರ ಖರ್ಚು ಮೂರು ಪಟ್ಟು ಹೆಚ್ಚಾಗುತ್ತದೆ. ಅದರ ಅವಶ್ಯಕತೆ ಇರುವುದಿಲ್ಲ. ಆದರೆ, commercial traffic ಇರುವ ಕಡೆ ಅದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು policy design ಮಾಡುವಾಗ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಹಾಗೆಯೇ ಕುಡಿಯುವ ನೀರಿನ ಬಗ್ಗೆಯು ಸಹ ಹೇಳಿದ್ದಾರೆ. ಈಗ ಕೋಲಾರ ಮತ್ತು ಚಿಕ್ಕಬಳ್ಳಾಪುರ fluoride affected ಗೆ ಸಂಬಂಧಪಟ್ಟಂತೆ ಇವತ್ತು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಇದೆ. ಎತ್ತಿನಹೊಳೆ ಯೋಜನೆ ನದಿಯಿಂದ ನೀರನ್ನು ತೆಗೆದುಕೊಂಡು ಈ ಭಾಗಗಳಿಗೆ ಕೊಡಬೇಕೆಂದು ನಾವು ಅದನ್ನು pursue ಮಾಡುತ್ತಿದ್ದೇವೆ. ಕೊರಟಗೆರೆ ಮತ್ತು ದೊಡ್ಡಬಳ್ಳಾಪುರ ಬಾರ್ಡರ್‌ನಲ್ಲಿ impounding reservoir ಮಾಡುವಂಥದ್ದು, ಅಲ್ಲಿಂದ ಲಿಫ್ಟ್ ಮಾಡಿ, ಈ ಜಿಲ್ಲೆಗಳಿಗೆ ನೀರನ್ನು ಕೊಡುವುದಕ್ಕೆ ಸಂಬಂಧಪಟ್ಟಂತೆ ಇವತ್ತು ಸಹ ಸಭೆಯನ್ನು ಇಟ್ಟುಕೊಂಡಿದ್ದೇವೆ. ಒಂದು long term solution ಮಾಡುತ್ತೇವೆ.

**(ಪ್ರಶ್ನೆ ಸಂಖ್ಯೆ: 928)**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಇಲ್ಲಿ ಬಹಳ ಪ್ರಮುಖವಾದಂತಹ ವಿಚಾರವೆಂದರೆ, ಆರೋಗ್ಯ ಎಲ್ಲರಿಗೂ ಸಿಗಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. ಈ ಉದ್ದೇಶ ಫಲಪ್ರದವಾಗಿದೆಯೇ ಎಂಬುದು ಬಹಳ ಮುಖ್ಯವಾದ ಅಂಶ. ಇವತ್ತು ಈ ಆರೋಗ್ಯ ಯೋಜನೆಗೆ ಮತ್ತು health promotion

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

activities ಗೆ ಉತ್ತೇಜನ ಕೊಡುವಂಥದ್ದಕ್ಕೆ. ಮೊದಲನೆಯದಾಗಿ, preventive measures ಎಂದು ಕೊಡುವುದು ಬಹಳ ಮುಖ್ಯವಾಗುತ್ತದೆ. ಅಲ್ಲದೆ precautionary measures ತೆಗೆದುಕೊಳ್ಳುವಂಥದ್ದು ಸಹ ಅಗತ್ಯವಾಗಿರುತ್ತದೆ. ಇದರಲ್ಲಿ health education ಕೊಡುವಂಥದ್ದು ಸಹ ಬರುತ್ತದೆ. ನಮ್ಮಲ್ಲಿ ಬೇಕಾದಷ್ಟು Primary Health Centres ಇವೆ. ಅದು ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವಂತೆ ನೋಡಿಕೊಳ್ಳಬೇಕು. Secondary care, ಸಹ ಆಗಬೇಕಾಗುತ್ತದೆ. ಅದು tertiary treatment ಇದೆಯಲ್ಲಾ, ಅದು ಜನರಿಗೆ ಬಹಳ ಅವಶ್ಯಕತೆ ಇರುವಂಥದ್ದು. emergency treatment ಇರಬಹುದು, tertiary treatment ಇರಬಹುದು ಈ ಮಟ್ಟದಲ್ಲಿ ಹಿಂದಿನ ಸರ್ಕಾರ ಏನು ಒಂದು ಕಾಯ್ದೆಯನ್ನು ತಂದಿತ್ತು, 'ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ ವಿಧೇಯಕ, 2017' ಅದರ ಪ್ರಕಾರ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಇನ್ನು ಆನ್‌ಲೈನ್ ನೋಂದಣಿ/ನವೀಕರಣ ಮಾಡುವುದು ಇದೆ. ಈಗ ಚಿಕಿತ್ಸಾ ದರವನ್ನು ನಿಗದಿಪಡಿಸಲು ತಜ್ಞರ ಸಮಿತಿ ರಚಿಸಲು ಕ್ರಮ ವಹಿಸಲಾಗುತ್ತಿದೆ. ಸಮಿತಿ ರಚನೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಆದರೆ, ಇನ್ನೂ ಅದರ ದರ ನಿಗದಿಯಾಗಿಲ್ಲ. ಅದು ಆಯಾಯ ಜಿಲ್ಲೆಗಳಲ್ಲಿ ಆಗಬೇಕಾಗುತ್ತದೆ. ಆದರೆ, ಇನ್ನು ಸಮಿತಿಯನ್ನೇ ರಚನೆ ಮಾಡಿಲ್ಲ. ಸಮಿತಿಯನ್ನು ರಚನೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ. ಇದು ದಿನಾಂಕ:01.03.2018ರಿಂದ ಜಾರಿಗೆ ಬರಬೇಕಾಗಿತ್ತು. ಇವತ್ತು ಆಗಲೇ ಡಿಸೆಂಬರ್ ತಿಂಗಳು ಕಳೆದು, ಇನ್ನು ಮೂರು ತಿಂಗಳು ಹೋದರೆ, ಒಂದು ಆರ್ಥಿಕ ವರ್ಷ ಮುಗಿಯುತ್ತದೆ. ಆದರೆ, ಆರೋಗ್ಯದ ಒಂದು ವಿಚಾರದಲ್ಲಿ especially tertiary treatment ಗೆ ಸರ್ಕಾರದಿಂದ B.P.L. (Below Poverty Line) ನಲ್ಲಿ ಇರುವವರಿಗೆ ಕೊಡುತ್ತಿದ್ದಾರೆಂದು ಇಟ್ಟುಕೊಂಡಿದ್ದಾರೆ. ಆದರೆ, A.P.L. (Above Poverty Line) ನಲ್ಲಿ ಇರುವಂತಹವರು ಸಹ ಬಡವರಿದ್ದಾರೆ. ಸರ್ಕಾರ ಆ ಬಡವರಿಗೆ ಯಾವ ರೀತಿಯಲ್ಲಿ ಸ್ಪಂದಿಸುತ್ತಿದೆ, ಈ ಒಂದು ಬದಲಾವಣೆಯ ಕಾಲದಲ್ಲಿ ಯಾವ ರೀತಿ ಮಾಡುತ್ತಿದ್ದಾರೆ ಎಂಬುದು ಬಹಳ ಮುಖ್ಯವಾಗಿದೆ. ಹಾಗಾಗಿ ಸರ್ಕಾರ ಅಂದಾಜು ಒಂದು ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದೆ. ಇದರ ಉದ್ದೇಶ ಏನು? Universal health care ಆಗಬೇಕು ಮತ್ತು quality health care for all, ಇದು ಬಹಳ ಮುಖ್ಯವಾದುದು. ಈ ವಿಚಾರದಲ್ಲಿ ದೇಶದಲ್ಲಿ ಕರ್ನಾಟಕ Number One ಎಂದು ನಾವು ಬಿಂಬಿಸಿಕೊಳ್ಳುತ್ತಿದ್ದೇವೆ. ಆದರೆ ನಾವು ground work ನಲ್ಲಿ ಎಲ್ಲಿ ಕೆಲಸ ಮಾಡುತ್ತಿದ್ದೇವೆ. ಅದು ಯಾವ ರೀತಿ ಜನರಿಗೆ ತಲುಪುತ್ತಿದೆ. ಬರೀ B.P.L. Card holders ಗೆ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತ್ರ ಈ ಒಂದು ಸೌಕರ್ಯ ಸಿಗುತ್ತಿದೆ. ಆದರೆ, A.P.L. ನವರಿಗೆ ಈಗಾಗಲೇ ಇರುವಂತಹ "ರಾಜೀವ್ ಆರೋಗ್ಯ ಭಾಗ್ಯ ಯೋಜನೆ" ಅದು ರಸ್ತೆ ಅಪಘಾತದಲ್ಲಿ ಗಾಯಗೊಂಡವರ ಚಿಕಿತ್ಸೆಗಾಗಿ ಎಂದು ಕೊಟ್ಟಿದ್ದಾರೆ. ಈಗ 'ಯಶಸ್ವಿನಿ' ಯೋಜನೆ ಅದನ್ನು ಸಹ A.P.L. ಕುಟುಂಬದವರಿಗೆ ಕೊಡುತ್ತೇವೆಂದು ಹೇಳುತ್ತಾರೆ. ಈ 'ಯಶಸ್ವಿನಿ' ಯೋಜನೆ ಇರುವುದು 'ಆರೋಗ್ಯ ಕರ್ನಾಟಕ' ಯೋಜನೆಗೆ. ಅದು ಎಷ್ಟರ ಮಟ್ಟಿಗೆ ಅನುಷ್ಠಾನದಲ್ಲಿ ಇದೆ. ಇವತ್ತು ನಾನು ನಾಲ್ಕೈದು ಜನರಿಗೆ ಪತ್ರವನ್ನು ಬರೆದಿದ್ದೇನೆ. ಅದನ್ನು ಏತಕ್ಕೆ ಹೇಳುತ್ತೇನೆಂದು ಕೇಳಿ.

**ಸಭಾಪತಿಯವರು:-** ಈಗ ನಿಮ್ಮ ಪ್ರಶ್ನೆಯೇ ಐದು ನಿಮಿಷವಾದರೆ ಹೇಗೆ?

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೆ, ದಯವಿಟ್ಟು ಹೊಸಬರಿಗೆ ತಾವು ಅವಕಾಶ ಮಾಡಿಕೊಡಬೇಕು. ನಾವು ಏನು ಪತ್ರವನ್ನು ಕೊಡುತ್ತೇವೆ ಮತ್ತು ಜನರು ಏನು ನಮ್ಮಲ್ಲಿಗೆ ಬಂದು ಸ್ಪಂದಿಸುತ್ತಾರೆ. ಆಗ ಸರ್ಕಾರ ಸ್ಪಂದಿಸದೇ ಇದ್ದರೆ, ನಾವು ಈ ಕಾರ್ಯಕ್ರಮಗಳ ಬಗ್ಗೆ ಇಲ್ಲಿ ಮಾತನಾಡಿದರೆ, ಅದರ ಪ್ರಯೋಜನ ಏನಾಗುತ್ತದೆ? ನಾನು ಇಲಾಖೆಯವರಿಗೆ ಸುಮಾರು ಬಾರಿ ದೂರವಾಣಿಯಲ್ಲಿ ಮಾತನಾಡಿದ್ದೇನೆ. ಒಂದು ವರ್ಷವಾದರೂ ಇನ್ನು ನಾಲ್ಕೈದು ಪ್ರಕರಣಗಳಲ್ಲಿ ಇವತ್ತಿಗೂ ಸಹ ಅದಕ್ಕೆ ಪರಿಹಾರವೇ ಸಿಕ್ಕಿಲ್ಲ.

**ಶ್ರೀ ಶಿವಾನಂದ ಎಸ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಹಿರಿಯ ಸದಸ್ಯರಾದ ಮಾನ್ಯ ಪಿ.ಆರ್.ರಮೇಶ್‌ರವರು ಎತ್ತಿರುವಂತಹ ಪ್ರಶ್ನೆ ಬಹಳ ಸೂಕ್ತವಾಗಿದೆ. ಈಗಾಗಲೇ ಆರೋಗ್ಯ ಕರ್ನಾಟಕ ಯೋಜನೆಗಳಲ್ಲಿ ಮೊದಲು ಇದ್ದಂತಹ ಯೋಜನೆಗಳಾದ R.S.B.Y. (Rashtriya Swasthya Bima Yojna), R.B.S.K. (Rashtriya Bal Swasthya Karyakram) ಮತ್ತು ಇಂದಿರಾ ಸುರಕ್ಷಾ ಯೋಜನೆ, ಈ ಎಲ್ಲಾ ಯೋಜನೆಗಳನ್ನು ಆರೋಗ್ಯ ಕರ್ನಾಟಕದಲ್ಲಿ ವಿಲೀನಗೊಳಿಸಿದ್ದೇವೆ. 'ಆರೋಗ್ಯ ಕರ್ನಾಟಕ' ಮತ್ತು 'ಆಯುಷ್ಮಾನ್ ಭಾರತ'. ಅದು ತಮಗೆ ಗೊತ್ತಿದೆ. ಆಯುಷ್ಮಾನ್ ಭಾರತ ಎನ್ನುವುದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದ. ಅದರ ಜೊತೆಗೆ ಕರ್ನಾಟಕದ ಯೋಜನೆಯನ್ನು amalgamate ಮಾಡಿ 'ಆರೋಗ್ಯ ಕರ್ನಾಟಕ' ಎನ್ನುವಂತಹ ಯೋಜನೆಯನ್ನು ನಾವು ರೂಪಿಸಿದ್ದೇವೆ. ಈ ಸಂದರ್ಭದಲ್ಲಿ ಅವರಲ್ಲಿ ಇರುವಂತಹ 1300 procedures ಮತ್ತು ನಮ್ಮಲ್ಲಿ ಇರುವಂತಹ 1500ಕ್ಕಿಂತಲೂ ಹೆಚ್ಚಿನ procedures ಅನ್ನು ವಿಲೀನಗೊಳಿಸಿ, ಸುಮಾರು 1600 procedure ಗಳಿಗೆ ನಾವು ಚಿಕಿತ್ಸೆಯನ್ನು ಕೊಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರಲ್ಲಿ emergency and tertiary care ಗೆ ಯಾವುದೇ ಬಾಧ್ಯತೆ ಇಲ್ಲ. ಅವರು ಅವಕಾಶವಿದ್ದರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯಬಹುದು. ಅಲ್ಲಿ ಪಡೆದುಕೊಳ್ಳಬಹುದು. ಅಕಸ್ಮಾತ್ ಅಲ್ಲಿ ಇಲ್ಲದೇ ಹೋದರೆ, referral system ಮೇಲೆ ಅವರು ಚಿಕಿತ್ಸೆ ಪಡೆದುಕೊಳ್ಳಬಹುದು. ತಾಲ್ಲೂಕು ಅಧಿಕಾರಿಯೂ ಅವರಿಗೆ referral ಚೀಟಿ ಕೊಡುತ್ತಾರೆ ಮತ್ತು ಜಿಲ್ಲಾಧಿಕಾರಿಯವರು ಸಹ referral system ನಲ್ಲಿ ಅವರಿಗೆ ಶಿಫಾರಸು ಮಾಡಿ, ಅವರಿಗೆ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದಕ್ಕೆ ಅವಶ್ಯಕತೆ ಇರುತ್ತದೆ, ಅಲ್ಲಿಗೆ refer ಮಾಡುತ್ತೇವೆ. ಅಲ್ಲಿಗೆ ಕಳುಹಿಸುವಂತಹ ಸಂದರ್ಭದಲ್ಲಿ ಅವರು B.P.L. Card holder ಇದ್ದರೆ, ಸಂಪೂರ್ಣ ವೆಚ್ಚವನ್ನು ಸರ್ಕಾರ ಭರಿಸುತ್ತದೆ. A.P.L. Card ನವರಿಗೆ ಶೇಕಡಾ 30ರವರೆಗೆ ಕೊಡುತ್ತೇವೆ. ಅವರಿಗೆ ಶೇಕಡಾ 30ರಷ್ಟು ಕೊಡುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ಬಿ.ಪಿ.ಎಲ್. ಕಾರ್ಡ್‌ದಾರರಿಗೆ ಈ ಹಿಂದೆ ಯಶಸ್ವಿನಿ ಯೋಜನೆ ಇದ್ದಾಗ, ಕೇವಲ ನಲವತ್ತು ಲಕ್ಷ ಕುಟುಂಬಗಳಿಗೆ ಮಾತ್ರ ಆ ಯೋಜನೆ ದೊರೆಯುತ್ತಿತ್ತು. ಇವತ್ತು 1.15 ಕೋಟಿ ಕುಟುಂಬಗಳನ್ನು ನಾವು ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಕವರ್ ಮಾಡುತ್ತಿದ್ದೇವೆ. ಹೆಚ್ಚು ಕಡಿಮೆ ರಾಜ್ಯದ ನಾಲ್ಕೂವರೆ ಕೋಟಿ ಜನಸಂಖೆಗೆ ಇದರ ಲಾಭ ದೊರೆಯುತ್ತದೆ. ಜೊತೆಗೆ ಎ.ಪಿ.ಎಲ್. ಕಾರ್ಡ್‌ದಾರರು ಯಾರಾದರೂ ಇದ್ದರೆ, ಅವರಿಗೂ ಸಹ ಇದರ ಲಾಭ ದೊರೆಯುತ್ತದೆಂದು ಈ ಸಂದರ್ಭದಲ್ಲಿ ತಮಗೆ ಮನವರಿಕೆ ಮಾಡಿಕೊಡುವುದಕ್ಕೆ ಇಚ್ಛೆಪಡುತ್ತೇನೆ.

**(ಮುಂದು...)**

(512)18-12-2018(12-10)ಎಲ್‌ಎಲ್-ಕೆಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಶಿವಾನಂದ ಎಸ್. ಪಾಟೀಲ್**(ಮುಂದುವರೆದಿದ್ದು...):-

ಇನ್ನು ಸಮಿತಿ ರಚನೆ ಮಾಡುವ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಮೂರು ಪರಿಣಿತರ ಸಮಿತಿ ರಚನೆ ಆಗಬೇಕಾಗಿರುವಂತಹ ವಿಷಯದಲ್ಲಿ ವಿಳಂಬವಾಗಿರುವುದು ನಿಜ. ಹೊಸ ಸರ್ಕಾರ ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಈ ಬಗ್ಗೆ ಆದೇಶವಾಗಿತ್ತು. ಆ ಮೂರು ಪರಿಣಿತರ ಸಮಿತಿ ಯಾವುವೆಂದರೆ, ಅವುಗಳಿಗೆ ಕೆಲವೊಂದು ಮಾನದಂಡಗಳಿವೆ. Based on the treatment procedure, staffing pattern and staff qualification in hospitals, ಈ ಸಮಿತಿ ಶಿಫಾರಸ್ಸು ಮಾಡಿ, ಆ ಆಸ್ಪತ್ರೆಯಲ್ಲಿ ಚಿಕಿತ್ಸೆಗಳಿಗೆ ಇಷ್ಟೇ ದರ ನಿಗದಿ ಮಾಡಬೇಕೆಂದು ಸಮಿತಿ ಶಿಫಾರಸ್ಸು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ ಮೇಲೆ ಆ ದರದ ಬೋರ್ಡ್‌ನ್ನು ಖಾಸಗಿ ಆಸ್ಪತ್ರೆಗಳಲ್ಲಿ display ಮಾಡಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಸಮಸ್ಯೆಯೇ ಬರುವುದಿಲ್ಲ. ಅವುಗಳನ್ನು ನಾವೇ ಮಾಡುತ್ತೇವೆ. ಜೊತೆಗೆ, District Registration Committee ಎಂದಿತ್ತು. ನಂತರ ಅದನ್ನು amend ಮಾಡಿ District Registration and Grievance Redressal Committee ಎಂದು ಮಾಡಿದ್ದೇವೆ. ಜಿಲ್ಲೆಯಲ್ಲಿರುವಂತಹ ದೂರುಗಳನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಬಗೆಹರಿಸುವುದಕ್ಕಾಗಿ ಉಪ ಸಮಿತಿಗಳನ್ನು ರಚಿಸಿದ್ದೇವೆ. ಆದಷ್ಟು ಶೀಘ್ರವಾಗಿ ಎಲ್ಲಾ ಸಮಿತಿಗಳು ರಚನೆಯಾಗಲಿವೆ. ಆದರೆ, ಮೂರು ಸಮಿತಿಗೂ ಸಹ National Council for Clinical Establishment ಹಾಗೂ IMA (Indian Medical Association) ಇಂತಹ ಅನೇಕ ಪರಿಣಿತರ ಸಮಿತಿಗೆ nomination ಕೊಡುವುದು ಮಾತ್ರ ಬಾಕಿ ಇದೆ. ಅವರು ಕೊಟ್ಟ ನಂತರ ಈ ಮೂರು ಸಮಿತಿಗಳನ್ನು ತಕ್ಷಣ ರಚನೆ ಮಾಡಿ, ಈ ಯೋಜನೆಯನ್ನು ಜಾರಿಗೆ ತರುವಂತಹ ಪ್ರಾಮಾಣಿಕ ಪ್ರಯತ್ನ ಸರ್ಕಾರ ಮಾಡುತ್ತದೆ ಎಂದು ಹೇಳಿ ಮಾನ್ಯ ಸದಸ್ಯರಿಗೆ ನಾನು ಭರವಸೆ ನೀಡುತ್ತೇನೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಶೇಕಡ 30ರಷ್ಟು APL (Above Poverty Line) card holders ಗೆ ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಇದನ್ನು ಕೊಡುತ್ತಿದ್ದಾರೆಯೇ? ಇವೊತ್ತಿನ ದಿವಸ ಇದು ನಡೆಯುತ್ತಿದೆಯೇ? ಎರಡನೆಯದಾಗಿ, ಹೊಸದಾಗಿ ಬಂದಿರತಕ್ಕಂತಹ ವಿಧೇಯಕದ ಒಂದು ಯೋಜನೆಯಡಿಯಲ್ಲಿ ಅದು ಶೇಕಡ 30ರಷ್ಟು ಉಳಿಯುತ್ತದೆಯೇ ಅಥವಾ ಅದು ಇನ್ನೂ ಜಾಸ್ತಿಯಾಗುತ್ತದೆಯೇ?

**ಶ್ರೀ ಶಿವಾನಂದ ಎಸ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಯೋಜನೆಯನ್ನು ಈಗಾಗಲೇ ನಾವು ಎ.ಪಿ.ಎಲ್. ಕಾರ್ಡ್‌ದಾರರಿಗೆ ಕೊಡುತ್ತಿದ್ದೇವೆ. ಇದರಲ್ಲಿ ಎರಡು ಮಾತಿಲ್ಲ. ಇದೇ ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಎ.ಪಿ.ಎಲ್. ಕಾರ್ಡ್‌ದಾರರಿಗೆ ಚಿಕಿತ್ಸೆ ನೀಡಿರುವಂತಹ ಉದಾಹರಣೆ ಇದೆ. ಅವರು ಸುಮಾರು 37 ಲಕ್ಷ ರೂಪಾಯಿಯವರೆಗೆ *'ಆರೋಗ್ಯ ಕರ್ನಾಟಕ-ಆಯುಷ್ಮಾನ್ ಭಾರತ್ ಯೋಜನೆ'* ಯಡಿಯಲ್ಲಿ ಸರ್ಕಾರದಿಂದ ಹಣದ ಉಪಯೋಗ ಪಡೆದುಕೊಂಡಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದು ಒಳ್ಳೆಯ ಕೆಲಸ ಅದನ್ನು ನಾವು ಒಪ್ಪುತ್ತೇವೆ. ಹಿಂದಿನ Yeshasvini Health Scheme, Vajpayee Arogyashree Scheme, Mukhyamantri Santwana Harish Scheme

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ ಇತರೆ ಎಲ್ಲಾ ಯೋಜನೆಗಳನ್ನು ಒಟ್ಟುಗೂಡಿಸಿ ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ ಮತ್ತು ಕರ್ನಾಟಕ ಸರ್ಕಾರದ ಒಟ್ಟು ಆರೋಗ್ಯ ಇಲಾಖೆಗಳನ್ನು ಸೇರಿಸಿ ಆರೋಗ್ಯ ಕರ್ನಾಟಕ ಕಾರ್ಡ್ ಎಂದು ಮಾಡಿದ್ದಾರೆ. ನಮ್ಮಲ್ಲಿರುವ ಪ್ರಶ್ನೆ ಏನೆಂದರೆ, ಮಾನ್ಯ ಸಚಿವರು ಸದನದಲ್ಲಿ ಉತ್ತರ ನೀಡುವಾಗ ಅದು ಬಹಳ ಸರಳವಾಗಿದೆ, ಸತ್ಯ ಇದೆ. ಆದರೆ, ತಳಮಟ್ಟದಲ್ಲಿ ತುರ್ತು ಆರೋಗ್ಯ ಕೆಟ್ಟರೆ ಖಾಸಗಿ ಆಸ್ಪತ್ರೆಗೆ ಸೇರಿಸಿದರೂ ಕೂಡ ಈ ಯೋಜನೆಯನ್ನು ಕೊಡುತ್ತೇವೆಂದು ಕಳೆದ ಸಾರಿ ಅವರು ಉತ್ತರ ನೀಡಿದ್ದಾರೆ. ಈಗ ಹೃದಯಾಘಾತ ಆದರೆ, ಹಾವು ಕಚ್ಚಿದರೆ ಇವೆಲ್ಲವನ್ನೂ ತುರ್ತು ಎಂದು ಪರಿಗಣಿಸಬಹುದೆಂದು ಸರ್ಕಾರದ ಯೋಜನೆಯಾಗಿದೆ. ಆದರೆ, ಇದು ಅನುಷ್ಠಾನವಾಗುತ್ತಿಲ್ಲ. ಒಂದು ಮಗುವಿಗೆ ಉಸಿರಾಟದ ತೊಂದರೆ ಇದ್ದ ಕಾರಣಕ್ಕಾಗಿ ತುರ್ತಾಗಿ ಕೆ.ಎಂ.ಸಿ. ಆಸ್ಪತ್ರೆಗೆ ಸೇರಿಸಿದ್ದಾರೆ. ಈಗ ಆರೋಗ್ಯ ಕಾರ್ಡ್‌ನ್ನು ಅನುಷ್ಠಾನ ಮಾಡಬೇಕಾದರೆ, ಆ ಮಗುವನ್ನು ಸದರಿ ಆಸ್ಪತ್ರೆಯಿಂದ discharge ಮಾಡಿ ಜಿಲ್ಲಾ ಆಸ್ಪತ್ರೆಗೆ ಸೇರಿಸಿ ಅಲ್ಲಿ ವೈದ್ಯರು ಪರಿಶೀಲನೆ ಮಾಡಿ, ನಂತರ ಮುಂದೆ refer ಮಾಡಿದರೆ ಮಾತ್ರ ಆಗುತ್ತದೆ ಎಂದು ಹೇಳುವುದು ಈಗಿರುವಂತಹ ಸಮಸ್ಯೆ. ದಯಮಾಡಿ ಇದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಈ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡುವುದು ಒಂದು ಭಾಗ. ಆದರೆ, ನಾವು ಯೋಚನೆ ಮಾಡುವುದು ಬೇರೆ. ಆದರೆ, ತಾಲ್ಲೂಕು ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿಗಳು ಇದಕ್ಕೆ ಸ್ಪಂದನೆ ಕೊಡುವಾಗ ಅನೇಕ ಷರತ್ತುಗಳನ್ನು ಹಾಕಿದರೆ ಬಡವರು ಈ ಸೌಲಭ್ಯದಿಂದ ವಂಚಿತರಾಗುತ್ತಾರೆ. ಅದಕ್ಕೆ ಏನು ಮಾಡಬೇಕೆಂದು ಮಾನ್ಯ ಸಚಿವರು ಉತ್ತರ ನೀಡಬೇಕು.

ಮತ್ತೊಂದು ವಿಷಯವೇನೆಂದರೆ, ಆರೋಗ್ಯ ಇಲಾಖೆ ಬಗ್ಗೆ ಪೂರಕವಾಗಿ ಒಂದು ಮಾತನ್ನು ಕೇಳಬೇಕು. ಸರ್ಕಾರದವರು 100 ಕೋಟಿ ರೂಪಾಯಿ ವೆಚ್ಚದಲ್ಲಿ ಕರ್ನಾಟಕದ ಮಾಗಡಿ ರಸ್ತೆಯಲ್ಲಿ 'ಆರೋಗ್ಯ ಭವನ' ನಿರ್ಮಾಣ ಮಾಡಿದ್ದಾರೆ. ಈ ಯೋಜನೆಯ ಅವಧಿಯಲ್ಲಿ ಇಬ್ಬರೂ ಮಂತ್ರಿಗಳು ಬದಲಾವಣೆಯಾದರು. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಬೇಕು. 2018 ನೇ ಇಸವಿಯ ಮಾರ್ಚ್ ತಿಂಗಳ ಒಳಗೆ ಅಧಿಕೃತವಾಗಿ ಆ ಸೇವೆ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಇಡೀ ಕರ್ನಾಟಕ ರಾಜ್ಯದ ಆರೋಗ್ಯ ಇಲಾಖೆಯ ಪೂರ್ಣ ವ್ಯವಸ್ಥೆಗಳು ಕೂಡ ಏಕ ಕಿಂಡಿ ಯೋಜನೆಯಡಿ ಆರೋಗ್ಯ ಭವನದ ಮೂಲಕ ಆಗಬೇಕು. ಅದಕೋಸ್ಕರ ಸರ್ಕಾರ 100 ಕೋಟಿ ರೂಪಾಯಿ ವೆಚ್ಚ ಮಾಡಿದ್ದಾರೆ. ಆದರೆ, ಆ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತಾರೆಂದು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶಿವಾನಂದ ಎಸ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ತುರ್ತು ಪರಿಸ್ಥಿತಿ ಬಂದಾಗ ಯಾವುದೇ ಆಸ್ಪತ್ರೆಗೆ ಹೋಗಿ referral ತೆಗೆದುಕೊಳ್ಳುವಂತಹ ಅವಶ್ಯಕತೆ ಇಲ್ಲ. ಇದು procedure ಪ್ರಕಾರ transit period ನಲ್ಲಿ ಇರುವುದರಿಂದ ಕೆಲವೊಬ್ಬರಿಗೆ ಇದರಿಂದ ತೊಂದರೆಯಾಗುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ತುರ್ತು ಎಂದರೆ ಯಾವುದು? ತುರ್ತು ಇಲ್ಲದಿರುವುದು ಯಾವುದು?

**ಶ್ರೀ ಶಿವಾನಂದ ಎಸ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಪಘಾತವಾಗಲಿ ಅಥವಾ ಹೃದಯಾಘಾತವಾಗಲಿ, ಎರಡನ್ನು ಸಹ emergency ಎಂದೇ ಪರಿಗಣಿಸಲಾಗುವುದು. ಆ ಸಂದರ್ಭದಲ್ಲಿ ಯಾವುದೇ referral ಅವಶ್ಯಕತೆ ಇರುವುದಿಲ್ಲ. ಯಾವುದೇ ಸಮೀಪದ ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆ ಪಡೆದುಕೊಳ್ಳಬಹುದು ಹಾಗೂ ಪಡೆದುಕೊಂಡ ನಂತರ ತಾಲ್ಲೂಕು ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿಗಳು referral ಅನ್ನು accept ಮಾಡುತ್ತಾರೆ. ಅದನ್ನು ನಾವು ಮಾಡಿಕೊಡುತ್ತಿದ್ದೇವೆ. ಆದರೆ, ಇದರಲ್ಲಿ ಒಂದು ಸಮಸ್ಯೆ ಏನಾಗುತ್ತಿದೆಯೆಂದರೆ, ಕೆಲವು ಖಾಸಗಿ ಆಸ್ಪತ್ರೆಗಳು ಇದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅದು ನನ್ನ ಗಮನಕ್ಕೆ ಬಂದಿದೆ. ಉದಾಹರಣೆಗೆ, ನನ್ನ ಬಿಜಾಪುರ ಜಿಲ್ಲೆಯಲ್ಲಿ referral ನಲ್ಲಿ ಕೆಲವು ಖಾಸಗಿ ಆಸ್ಪತ್ರೆಗಳು ಒಂದೂವರೆ ತಿಂಗಳಿನಲ್ಲಿ 60 ಲಕ್ಷ ರೂಪಾಯಿಯವರೆಗೆ claim ತೆಗೆದುಕೊಂಡಿದ್ದಾರೆ. ಈ ಬಗ್ಗೆ ಇವೊತ್ತಿನ ದಿವಸ ತನಿಖೆ ಕೂಡ ಮಾಡುತ್ತಿದ್ದೇವೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅಲ್ಲಿಯೂ ಕೂಡ ದುರುಪಯೋಗವಾಗಬಾರದೆಂಬ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದೇವೆ. ಚಿಕಿತ್ಸೆ ಕೊಡುವುದರಲ್ಲಿ ಎರಡನೇ ಮಾತಿಲ್ಲ. ಆರೋಗ್ಯ ಭವನದ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಅದು ಕಟ್ಟಡಕ್ಕೆ ಸಂಬಂಧಪಟ್ಟಿರುವ ವಿಚಾರ. ಹಿಂದಿನ ಸಚಿವರು ಅದನ್ನು ಪ್ರಾರಂಭ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹಣ ಕೂಡ ಕೇಳಿದ್ದೇನೆ. ಅವರು ಹಣ ಕೊಟ್ಟ ಕೂಡಲೇ ಆರೋಗ್ಯ ಭವನ ಕೂಡ ಪೂರ್ಣಗೊಳಿಸುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಮಗಿರುವ ಮಾಹಿತಿ ಪ್ರಕಾರ ಸದರಿ ಕಟ್ಟಡ ಕಾಮಗಾರಿ ಪೂರ್ಣಗೊಂಡಿದೆ. ಈ ಬಗ್ಗೆ ಮಾನ್ಯ ಸಚಿವರು ಪರಿಶೀಲನೆ ಮಾಡುವುದಕ್ಕೆ ಹೇಳುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಶಿವಾನಂದ ಎಸ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ಕಟ್ಟಡ ಕಾಮಗಾರಿ ಇನ್ನೂ ಪೂರ್ಣಗೊಂಡಿರುವುದಿಲ್ಲ.

**ಪ್ರಶ್ನೆ ಸಂಖ್ಯೆ: 913**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತಮವಾದ ಉತ್ತರವನ್ನು ಕೊಟ್ಟಿದ್ದಾರೆ ಹಾಗೂ ಇದು ಈಗಾಗಲೇ ಅನುಷ್ಠಾನಗೊಂಡಿದೆ. ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಹಾಳಾದ ಗ್ರಾಮೀಣ ರಸ್ತೆಗಳಿಗೆ ಕಂದಾಯ ಇಲಾಖೆಯಿಂದ 33.15 ಕೋಟಿ ರೂಪಾಯಿ ಹಣ ಬಿಡುಗಡೆಯಾಗಿದೆ. ಅದರಂತೆ, ನಮ್ಮ ಪಂಚಾಯತ್ ರಾಜ್ ಇಲಾಖೆಯಿಂದ ಸುಮಾರು 821.66 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ, ತಾತ್ಕಾಲಿಕವಾಗಿ ರಸ್ತೆಯನ್ನು ನಿರ್ಮಾಣ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಆದರೆ, ಈ ಗ್ರಾಮೀಣ ರಸ್ತೆಗಳು ಸದ್ಯಕ್ಕಂತೂ ಸರಿಯಾಗುವಂತಹ ರೀತಿಯಲ್ಲಿ, ಅಂದರೆ, ಮಳೆ ಹಾನಿಯಿಂದ ಕುಸಿತಗೊಂಡಿರುವುದನ್ನು ತೆರವು ಮಾಡಿಕೊಟ್ಟಿದ್ದಾರೆ. ಅದೇ ರೀತಿ ಅದನ್ನು ದುರಸ್ತಿ ಸಹ ಮಾಡಿದ್ದಾರೆ. ಈಗಾಗಲೇ ಮಳೆ ಹಾನಿ ದುರಸ್ತಿ ಯೋಜನೆಯಡಿಯಲ್ಲಿ ಕೊಡಗು ಜಿಲ್ಲೆಗೆ ವಿಶೇಷ ಪ್ಯಾಕೇಜ್‌ನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ.

ನನ್ನಲ್ಲಿ ಒಂದು ಪ್ರಶ್ನೆ ಇರುವುದೇನೆಂದರೆ, ನಮ್ಮಲ್ಲಿ ಎಲ್ಲಾ ಪ್ಲಾಂಟರ್ಸ್‌ಗಳ ಮನೆ ಎಸ್ಟೇಟ್‌ಗಳ ಒಳಗಡೆ ತುಂಬಾ ದೂರದಲ್ಲಿವೆ. ಆ ಪ್ಲಾಂಟರ್ಸ್‌ಗಳು ಈ ಮೊದಲು ತಾವೇ ತಮ್ಮ ಸ್ವಂತ ಖರ್ಚಿನಿಂದ ರಸ್ತೆಗಳನ್ನು ಮಾಡಿಕೊಳ್ಳುತ್ತಿದ್ದರು. ಆದರೆ, ಅತಿವೃಷ್ಟಿಯಾದಂತಹ ಸಂದರ್ಭದಲ್ಲಿ ಎಲ್ಲಾ ತೋಟದ ಮಾಲೀಕರ ಸ್ವಂತ ರಸ್ತೆಗಳು ಮುಚ್ಚಿ ಹೋಗಿವೆ. ಪುನಃ ಅವರು ಆ ರಸ್ತೆಗಳನ್ನು ದುರಸ್ತಿ ಮಾಡಲು ಅವರಿಗೆ ಖಂಡಿತವಾಗಿಯೂ ಸಾಧ್ಯವಿಲ್ಲ. ಏಕೆಂದರೆ, ಆರು ಪಂಚಾಯತಿಗಳಲ್ಲಿ ಎಲ್ಲಾ ಕಾಫಿ ತೋಟಗಳು ಕೊಚ್ಚಿ ಹೋಗಿವೆ. ಹಾಗಾಗಿ, ಮಾನ್ಯ ಮಂತ್ರಿಗಳಲ್ಲಿ ನನ್ನದೊಂದು ವಿನಂತಿ ಏನೆಂದರೆ, ಈ ರಸ್ತೆಗಳ ಬಗ್ಗೆ ಮುತುವರ್ಜಿ ಇಟ್ಟು, ಹೆಚ್ಚಿನ ಅನುದಾನವನ್ನು ನಮ್ಮ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಬೇಕು. ಅದೇ ರೀತಿ ಅನುಬಂಧದಲ್ಲಿ ಕೊಟ್ಟಂತಹ ಎಲ್ಲಾ ರಸ್ತೆಗಳನ್ನು ಕೂಡ ಪಕ್ಕಾ ರಸ್ತೆಯನ್ನಾಗಿ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಗೆ ಅತಿವೃಷ್ಟಿಯಿಂದ ತೊಂದರೆಯಾಗಿದೆ ಎಂದು SDRF (State Disaster Response Fund) ನಲ್ಲಿ 8 ಕೋಟಿ 45 ಲಕ್ಷ ರೂಪಾಯಿಗಳು, 3054 ರಲ್ಲಿ 8 ಕೋಟಿ 21 ಲಕ್ಷ, NABARD (National Bank

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

for Agriculture and Rural Development) ವತಿಯಿಂದ ಸುಮಾರು 10 ಕೋಟಿ ರೂಪಾಯಿ ಹಾಗೂ ವಿಶೇಷ ಸರ್ಕಾರದ ಅನುದಾನದಡಿಯಲ್ಲಿ 33 ಕೋಟಿ 15 ಲಕ್ಷ ರೂಪಾಯಿಗಳು. ಈಗ ಇಷ್ಟು ಹಣವನ್ನು ನಾವು ಮಂಜೂರು ಮಾಡಿಕೊಟ್ಟಿದ್ದೇವೆ. ಇನ್ನು ಕೆಲವೇ ದಿನಗಳಲ್ಲಿ NDRF (National Disaster Response Fund) ನಲ್ಲಿ ಬಂದಿದೆ. ಅದರಲ್ಲಿ 17 ಕೋಟಿ 61 ಲಕ್ಷ ಒಟ್ಟು ಸುಮಾರು 77 ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಡಗು ಜಿಲ್ಲೆಗೆ ಎಲ್ಲಾ ಮೂಲಗಳಿಂದ ಅನುದಾನವನ್ನು ಈ ವರ್ಷ ಒದಗಿಸಿಕೊಡುತ್ತಿದ್ದೇವೆ. ಇನ್ನೂ ತೋಟಗಳ ಮಾಲೀಕರ ರಸ್ತೆಗಳು ಬಹಳ ಹಾಳಾಗಿವೆ, ಅವು ಕೂಡ ಸಣ್ಣ-ಪುಟ್ಟ ರಸ್ತೆಗಳೆಂದು ಹೇಳಿದ್ದಾರೆ. ನನಗೂ ಅವರ ಸಮಸ್ಯೆ ಮನವರಿಕೆಯಾಗಿದೆ. ಅವರಿಗೆ ಸಹಾಯ ಮಾಡಬೇಕಾಗಿರುವುದು ನಮ್ಮ ಕರ್ತವ್ಯ. ಅವರ ಸಮಸ್ಯೆಯನ್ನು ಪರಿಹರಿಸುವುದಕ್ಕೆ ನಾನು ಖಂಡಿತವಾಗಿ ಪ್ರಯತ್ನಪಡುತ್ತೇನೆ. ಈ 77 ಕೋಟಿ ರೂಪಾಯಿ ಅಲ್ಲದೇ, ಇನ್ನೂ ಹೆಚ್ಚಿಗೆ ಮಾಡಬೇಕೆಂದು ಅವರ ಮನವಿ ಏನಿದೆ, ನಾನು ಅದನ್ನು ಆದಷ್ಟು ಪರಿಶೀಲನೆ ಮಾಡುತ್ತೇನೆ. ನಮ್ಮ ಹಂತದಲ್ಲಿ ಅವಕಾಶ ಇದ್ದರೆ ಇನ್ನು ಸ್ವಲ್ಪ ಹೆಚ್ಚು ಮಾಡಿಕೊಡುತ್ತೇನೆ.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ತಮ್ಮ ಮನೆಯ ಸುತ್ತ-ಮುತ್ತ ಬರ ಕುಸಿತದಿಂದ ಹಲವಾರು ಪ್ಲಾಂಟರ್ಸ್‌ಗಳ ಮನೆಯ ಹತ್ತಿರ ಬರೆ ಬಂದು ಜರಿದು ನಿಂತಿದೆ. ಅಂದರೆ, ಗುಡ್ಡ ಕುಸಿತದಿಂದ ದೊಡ್ಡ ಪ್ರಮಾಣದಲ್ಲಿ ಮಣ್ಣು ಬಂದು ಅವರ ಮನೆಯ ಮುಂದೆ ನಿಂತಿದೆ. ಅದನ್ನು ಕೂಡ ತೆಗೆಯುವಂತಹ ಪರಿಸ್ಥಿತಿಯಲ್ಲಿ ಅವರು ಇಲ್ಲ. ಅದನ್ನೂ ಕೂಡ ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ತಾವು ತೆಗೆಸಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

(ಮುಂದುವರೆದಿದೆ...)

(513) 18-12-2018 (12.20) ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 905 ಪ್ರಕಟವಾಗಿದ್ದು, ಅದು ಸದನದ ಸ್ವತ್ತಾಗಿರುವುದರಿಂದ ಪ್ರಶ್ನೆಯನ್ನು ಕೇಳುವವರು ಉನ್ನತ ಮಟ್ಟದ ಹುದ್ದೆಗೆ ಹೋಗಿದ್ದರಿಂದ ಉಪ ಪ್ರಶ್ನೆಯಾಗಿ ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಇದು ತಾಂತ್ರಿಕವಾಗಿರುವ ಪ್ರಶ್ನೆಯಾಗಿದ್ದು, ಸಾರ್ವಜನಿಕರ ಹಿತಾಸಕ್ತಿಗೆ ಸಂಬಂಧಿಸಿದ್ದು ತಮ್ಮ ಹೆಸರಿಗೆ ಈ ಪ್ರಶ್ನೆ ದಾಖಲಾಗಿದೆ. ತಾವು ಪೀಠದಲ್ಲಿ ಕುಳಿತು ಹೇಳುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೂ ಈ ಪ್ರಶ್ನೆ ಸದನದ ಸ್ವತ್ತಾಗಿರುವುದರಿಂದ ಪೂರಕ ಪ್ರಶ್ನೆಯಾಗಿ ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಹಾಗೆಯೇ ತಾವು ಏನು ಹೇಳುತ್ತೀರೋ ಅದನ್ನು ಅನುಸರಿಸುತ್ತೇವೆ. ಆದರೆ, ಈ ಪ್ರಶ್ನೆ ಸಾರ್ವಜನಿಕರ ಹಿತಾಸಕ್ತಿಗೆ ಸಂಬಂಧಿಸಿರುವುದಾಗಿರುತ್ತದೆ.

**ಸಭಾಪತಿಯವರು:–** ಮೊದಲನೆಯದಾಗಿ, ಯಾವುದೇ ಪ್ರಶ್ನೆಯನ್ನು ಕೇಳದಿದ್ದರೂ ಪ್ರಶ್ನೆಯನ್ನು ಕೇಳಿದ್ದೇವೆ ಎಂದು ಭಾವಿಸುವಂಥ ವ್ಯವಸ್ಥೆಯು ಇಲ್ಲ. ಎರಡನೆಯದಾಗಿ, ನೀವು ಪ್ರಶ್ನೆ ಕೇಳಿದಾಗ ಸಚಿವರು ಉತ್ತರ ಕೊಡುವುದಾದರೆ ಅದಕ್ಕೆ ನಮ್ಮ ಆಕ್ಷೇಪಣೆ ಏನೂ ಇಲ್ಲ. ಆದರೆ, ಕೇಳದೆ ಇರುವ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಮುಂದಿನ ಪ್ರಶ್ನೆಯನ್ನು ಕೈಗೊಳ್ಳಲಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ಪರಂಪರೆಯಾಗಿರುವಂಥ ವಿಚಾರ.

**ಸಭಾಪತಿಯವರು:–** ನಾನು ಹೇಳಿದ ಮಾತು ಸಹ ಪರಂಪರೆಯ ವಿಚಾರವೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳಿದಂಥ ಸಂದರ್ಭದಲ್ಲಿ ಲಿಖಿತವಾಗಿ ಪ್ರಶ್ನೆಯನ್ನು ಕೇಳಿದರೆ ಮಾತ್ರ ಸಚಿವರು ಉತ್ತರ ಕೊಡುತ್ತಾರೆ ಎಂಬ ಸಂಪ್ರದಾಯ ಇತ್ತು. ಆದರೆ, ಇವತ್ತಿನ ಸ್ಥಿತಿಯಲ್ಲಿ ತಾವು ಸಭಾಪತಿಗಳಾಗಿ ಉನ್ನತ ಮಟ್ಟದ ಹುದ್ದೆಗೆ ಆಯ್ಕೆಯಾಗಿರುವುದರಿಂದ ಬೇರೆಯವರಿಗೆ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ನೀಡುವ ಆಗಿಲ್ಲ. ಇಂತಹ ಕಾರಣದಿಂದ ಪ್ರಶ್ನೆಯು ಸದನದ ಸ್ವತ್ತಾಗಿರುವ ಹಿನ್ನೆಲೆಯಲ್ಲಿ ಪೂರಕ ಪ್ರಶ್ನೆಯಾಗಿ ಕೇಳುವುದಕ್ಕೆ ಅವಕಾಶ ಮಾಡಿಕೊಡುವುದು ಸತ್ಸಂಪ್ರದಾಯವಾಗುತ್ತದೆ ಎಂದು ಭಾವಿಸುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ವಿಶ್ಲೇಷಣೆ ಸರಿಯಾಗಿಯೇ ಇದೆ. ಆದರೆ, ಮೂಲ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳದೇ ಉಪ ಪ್ರಶ್ನೆಯನ್ನು ಕೇಳುವುದು ಸೂಕ್ತ ಅಲ್ಲ. ಇದೇ ಪ್ರಶ್ನೆಯನ್ನು ಬೇರೆ ರೂಪದಲ್ಲಿ ತರಲಿ ಚರ್ಚೆ ಮಾಡೋಣ. ಅದಕ್ಕೆ ಬೇಕಾದರೆ ಅವಕಾಶ ಕಲ್ಪಿಸಲಾಗುತ್ತದೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 871**
**(ಉತ್ತರವನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಸುದೀರ್ಘವಾಗಿ ಉತ್ತರವನ್ನು ನೀಡಿದ್ದಾರೆ. ರಾಜ್ಯದಲ್ಲಿ ಸ್ವಚ್ಛ ಭಾರತ ಅಭಿಯಾನದಡಿ ಎಷ್ಟು ಶೌಚಾಲಯಗಳನ್ನು ನಿರ್ಮಿಸಲಾಗಿದೆ ಎಂದು ಕೇಳಿರುವ ಪ್ರಶ್ನೆಗೆ 2012ನೇ ಸಾಲಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ನಡೆಸಿದ ಬೇಸ್‌ಲೈನ್ ಸಮೀಕ್ಷೆಯಂತೆ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಒಟ್ಟು 70.26 ಲಕ್ಷ ಕುಟುಂಬಗಳಿದ್ದು, ಈ ಪೈಕಿ 24.83 ಲಕ್ಷ ಕುಟುಂಬಗಳು ಶೌಚಾಲಯ ಹೊಂದಿದ್ದು, 45.42 ಲಕ್ಷ ಕುಟುಂಬಗಳು ಶೌಚಾಲಯ ರಹಿತ ಕುಟುಂಬಗಳಾಗಿವೆ ಎಂದು ಉತ್ತರವನ್ನು ನೀಡಿದ್ದಾರೆ. ಹಾಗೆಯೇ ಯಾವಾಗ ಈ ಕಾರ್ಯಕ್ರಮವನ್ನು ಸ್ವಚ್ಛ ಭಾರತ ಅಭಿಯಾನದಡಿ ಪೂರ್ಣಗೊಳಿಸಲಾಗುತ್ತದೆ ಎಂದು ಇನ್ನೊಂದು ಉಪ ಪ್ರಶ್ನೆಯನ್ನು ಕೇಳಿದ್ದು, ಅಕ್ಟೋಬರ್ 2019 ರಂದು ಪೂರ್ಣಗೊಳಿಸಲಾಗುತ್ತದೆ ಎಂದು ಹೇಳಿದ್ದಾರೆ. 2019ನೇ ಸಾಲಿನೊಳಗೆ ರಾಜ್ಯ ಸರ್ಕಾರ ಶೌಚಾಲಯ ನಿರ್ಮಾಣಗಳ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ. ಬಹುಶಃ ನಾವೆಲ್ಲರೂ ಹಳ್ಳಿಗಾಡಿನಿಂದ ಬಂದವರು ಹಾಗಾಗಿ 8 ಸಾವಿರದಿಂದ 12 ಸಾವಿರದವರೆಗೂ ಶೌಚಾಲಯಗಳನ್ನು ನಿರ್ಮಿಸಲು ಭರಿಸುತ್ತಿರುವ ಅನುದಾನ ಬಹಳ ಕಡಿಮೆಯಾಗಿದ್ದು, ಕಡಿಮೆ ಗುಣಮಟ್ಟದಿಂದ ಶೌಚಾಲಯಗಳನ್ನು ನಿರ್ಮಿಸುತ್ತಿರುವುದರಿಂದ ಇನ್ನೂ ಹೆಚ್ಚಿನ ಅನುದಾನ ಒದಗಿಸಬೇಕು. ಎಲ್ಲಾ ಮೂಲಭೂತ ಸೌಲಭ್ಯವನ್ನು ಒದಗಿಸುವುದಕ್ಕೆ ಕನಿಷ್ಠ ಪಕ್ಷ ಒಂದು ಶೌಚಾಲಯಕ್ಕೆ 20,000 ರೂಪಾಯಿಗಳ ಅಗತ್ಯ ಇದ್ದು, ಅದರ ಬೆನ್ನೆಲುಬು ಏನೆಂಬುದನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, 2012-13ನೇ ಸಾಲಿನಲ್ಲಿ ಸ್ವಚ್ಛ ಭಾರತ ಅಭಿಯಾನದಡಿ 'Baseline Survey' ಯನ್ನು ಮಾಡಲಾಗಿದ್ದು, ಆ ಸಮೀಕ್ಷೆ ಪ್ರಕಾರ ಕರ್ನಾಟಕದಲ್ಲಿ 24.83 ಲಕ್ಷ ಕುಟುಂಬಗಳು ಶೌಚಾಲಯ ಹೊಂದಿದ್ದು, 45.42 ಲಕ್ಷ ಕುಟುಂಬಗಳು ಶೌಚಾಲಯ ಹೊಂದಿರುವುದಿಲ್ಲ ಎಂದು ಗುರುತಿಸಲಾಗಿದೆ. "ಬಯಲು ಬಹಿರ್ದೆಸೆ ಮುಕ್ತ" ಮಾಡಲು ಏನಾದರೂ ಒಂದು ಗುರಿ ಇರಬೇಕಲ್ಲವೇ, ಹಾಗಾಗಿ measurable target ಆದಂತಹ 45.42 ಲಕ್ಷ ಕುಟುಂಬಗಳಿಗೆ ಶೌಚಾಲಯ ನಿರ್ಮಿಸಿದರೆ ಗುರಿ ಮುಟ್ಟಿದಂತಾಗುತ್ತದೆ ಎಂದು ಕೇಂದ್ರ ಸರ್ಕಾರ ಸ್ವಚ್ಛ ಭಾರತ ನಿಯಮಾವಳಿಯಲ್ಲಿ ಅಳವಡಿಸಿಕೊಂಡಿದೆ. ಅದರ ಪ್ರಕಾರ ಕೇಂದ್ರ ಸರ್ಕಾರದ ಅಡಿಯಲ್ಲಿ ಕಳೆದ 4-5 ವರ್ಷದಿಂದ ನಿರಂತರ ಕಾರ್ಯಕ್ರಮವನ್ನು ಹಮ್ಮಿಕೊಂಡು ಕೇಂದ್ರ ಸರ್ಕಾರದಿಂದ ಶೇಕಡ 60 ರಷ್ಟು ಮತ್ತು ರಾಜ್ಯ ಸರ್ಕಾರದಿಂದ ಶೇಕಡ 40 ರಷ್ಟು ಒಟ್ಟು ರೂ.4207.65 ಕೋಟಿಗಳನ್ನು ಖರ್ಚು ಮಾಡಿ, ಈಗಾಗಲೇ 45.42 ಲಕ್ಷ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಅಕ್ಟೋಬರ್ 2,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2019ರವರೆಗೆ ಈ ಶೌಚಾಲಯಗಳನ್ನು ನಿರ್ಮಿಸಲು ಗುರಿ ಇದ್ದು, 15ನೇ ನವೆಂಬರ್ 2018ರೊಳಗೆ ಶೌಚಾಲಯಗಳನ್ನು ನಿರ್ಮಿಸಿ ಗುರಿ ತಲುಪಲಾಗಿದೆ. ಅದರ ಆಧಾರದ ಮೇಲೆ ಗ್ರಾಮೀಣ ಕರ್ನಾಟಕದಲ್ಲಿ "ಬಯಲು ಬಹಿರ್ದೆಸೆ ಮುಕ್ತ" ರಾಜ್ಯ ಎಂದು ಘೋಷಣೆ ಮಾಡಲಾಗಿದೆ. ಇವತ್ತಿಗೂ ಸಹ ಕೆಲವು ಜನ ಬಯಲಿಗೆ ಹೋಗುತ್ತಿದ್ದಾರೆ ಎಂದು ನಾನಾ ರೀತಿಯ ಟೀಕೆ–ಟಿಪ್ಪಣಿಗಳು ಬಂದಿದೆ. ನಿಜ ಬಯಲಿಗೆ ಹೋಗುತ್ತಿದ್ದಾರೆ ಇಲ್ಲವೆಂದು ಹೇಳುವುದಿಲ್ಲ. ಒಂದು measurable parameter ಬೇಕಲ್ಲವೇ? Measurable parameter ಪ್ರಕಾರ 'ಬೇಸ್‌ಲೈನ್ ಸಮೀಕ್ಷೆ' ಪ್ರಕಾರ ಇಷ್ಟು ಶೌಚಾಲಯಗಳನ್ನು ನಿರ್ಮಿಸಲು ಮಾನ್ಯ ಸದಸ್ಯರು ಹೇಳಿದ ಹಾಗೆ 12,000 ರೂಪಾಯಿಗಳವರೆಗೂ ಜನರಿಗೆ ಸಹಾಯಧನವನ್ನು ಒದಗಿಸಲಾಗಿದೆ. ಒಟ್ಟಾರೆಯಾಗಿ ರಾಜ್ಯದಲ್ಲಿ ಸುಮಾರು 70.26 ಲಕ್ಷ ಶೌಚಾಲಯಗಳನ್ನು ಸರ್ಕಾರದ ಸಹಾಯಧನ ಅಡಿಯಲ್ಲಿ ನಿರ್ಮಲ ಭಾರತ ಮತ್ತು ಸ್ವಚ್ಛ ಭಾರತ ಅಭಿಯಾನದಡಿ ನಿರ್ಮಿಸಲಾಗಿದೆ. ಇದರ ಆಧಾರದ ಮೇಲೆ "ಬಯಲು ಬಹಿರ್ದೆಸೆ ಮುಕ್ತ" ಎಂದು ಘೋಷಣೆ ಮಾಡಲಾಗಿದೆ. ಶೌಚಾಲಯ ಬಳಕೆ ಮಾಡುವುದರ ಬಗ್ಗೆ ಜನರಿಗೆ ಜವಾಬ್ದಾರಿ ಇರುತ್ತದೆ. ಆದರೆ, ಜನರು ಅದನ್ನು ಗೋದಾಮ್ ಆಗಿ ಪರಿವರ್ತನೆ ಮಾಡಿದರೆ, ಅದಕ್ಕೆ ಸರ್ಕಾರವೇ ಜವಾಬ್ದಾರಿ ಎಂದರೆ ಎಷ್ಟರ ಮಟ್ಟಿಗೆ ಸೂಕ್ತವಾಗುತ್ತದೆ. ನಾನಾ ಮಾಧ್ಯಮಗಳಲ್ಲಿಯೂ ಸಹ ಹಲವಾರು ಟೀಕೆ–ಟಿಪ್ಪಣಿಗಳನ್ನು ಮಾಡಿದ್ದಾರೆ. ಶೌಚಾಲಯ ನಿರ್ಮಿಸಿಕೊಳ್ಳಲು ಆರ್ಥಿಕ ಶಕ್ತಿ ಇಲ್ಲವೆಂದು ಸರ್ಕಾರ ಜನರ ನೆರವಿಗೆ ಬಂದು ಶೌಚಾಲಯಗಳನ್ನು ನಿರ್ಮಿಸಬಹುದು, ಶೌಚಾಲಯವನ್ನು ಬಳಸಿ ಎಂದು ಅರಿವು ಮೂಡಿಸುವ ಕಾರ್ಯಕ್ರಮವನ್ನು ಮಾಡಬಹುದು. ಹೇಗೆ ಶೌಚಾಲಯವನ್ನು ಬಳಕೆ ಮಾಡಬೇಕೆಂಬುದು ಅವರ ಮೇಲೆಯೂ ಅವಲಂಬಿತವಾಗಿರುತ್ತದೆ. ಹಾಗಾಗಿ ಟೀಕೆ–ಟಿಪ್ಪಣಿ ಮಾಡುವವರು ಅದನ್ನೂ ಸಹ ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತಾ, 'ಬೇಸ್‌ಲೈನ್ ಸಮೀಕ್ಷೆ' ಪ್ರಕಾರ 45.42 ಲಕ್ಷ ಕುಟುಂಬಗಳಿಗೆ ಶೌಚಾಲಯಗಳಿರುವುದಿಲ್ಲ ಎಂಬುದು ಗೊತ್ತಾದ ನಂತರ 45.42 ಲಕ್ಷ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಿಸಿದ ಮೇಲೆಯೂ 4 ಲಕ್ಷ 60 ಸಾವಿರ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ. ಜನವರಿ ಅಂತ್ಯದೊಳಗೆ ಅವರಿಗೂ ಸಹ ಶೌಚಾಲಯಗಳನ್ನು ನಿರ್ಮಿಸಲಾಗುತ್ತದೆ. ಅದರ ಜೊತೆಗೆ awareness programme ಅನ್ನು ಹಮ್ಮಿಕೊಂಡು ಶೌಚಾಲಯಗಳನ್ನೇ ಬಳಕೆ ಮಾಡಬೇಕೆಂಬುದರ ಕಡೆಗೆ ಹೆಚ್ಚು ಒತ್ತು ನೀಡುತ್ತೇವೆ. ಹಾಗೆಯೇ 12,000 ರೂಪಾಯಿಗಳನ್ನು ಕೇಂದ್ರ ಸರ್ಕಾರ ನಿಗದಿಪಡಿಸಿರುತ್ತದೆ. ಈಗಾಗಲೇ 70.26 ಲಕ್ಷ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಅದಕ್ಕೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾದರೂ ವಿಚಾರ ಬಂದರೆ ನೋಡೋಣ. ನಗರಗಳಲ್ಲಿ ಬಿಟ್ಟು ಗ್ರಾಮೀಣ ಭಾಗದಲ್ಲಿ ಸುಮಾರು 70.26 ಲಕ್ಷ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಿಸಲಾಗಿದೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೇಂದ್ರ ಸರ್ಕಾರ ಶೌಚಾಲಯಗಳನ್ನು ನಿರ್ಮಿಸಲು 12,000 ರೂಪಾಯಿಗಳನ್ನು ನಿಗದಿಪಡಿಸಿದೆ ಎಂದು ಹೇಳುತ್ತಿದ್ದಾರೆ. ಆದರೆ, ಇವತ್ತಿನ ದುಂದು ವೆಚ್ಚದಲ್ಲಿ cement, steel, sand and labour cost ಗಳನ್ನು ಲೆಕ್ಕಕ್ಕೆ ತೆಗೆದುಕೊಂಡಾಗ 12,000 ರೂಪಾಯಿಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುವುದು ಬಹಳ ಕಷ್ಟದ ಕೆಲಸ. ಶೌಚಾಲಯವನ್ನು ನಿರ್ಮಿಸಬೇಕೆಂದು ನಿರ್ಮಿಸಬಹುದೇ ವಿನಾ ನಿಜವಾಗಿಯೂ ಮೂಲಭೂತ ಸೌಲಭ್ಯಗಳನ್ನು ಒದಗಿಸಿ, ಶೌಚಾಲಯಗಳನ್ನು ನಿರ್ಮಿಸುವುದು ಕಷ್ಟವಾಗುತ್ತದೆ. ನಾವುಗಳೆಲ್ಲರೂ ಸ್ವಂತ ಮನೆಗಳನ್ನು ಹಾಗೂ ಬೇರೆ ರೀತಿಯ ಕಟ್ಟಡಗಳನ್ನು ನಿರ್ಮಿಸಿರುವುದರಿಂದ ಸಿವಿಲ್ ಇಂಜಿನಿಯರ್‌ಗೆ ಎಷ್ಟಾಗುತ್ತದೆ ಎಂಬುದು ಗೊತ್ತಿದೆ. ಆದ್ದರಿಂದ 12,000 ರೂಪಾಯಿಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುವುದು ಕಳಪೆ ಕಾಮಗಾರಿಯಾಗಿದ್ದು, ಎರಡು-ಮೂರು ವರ್ಷಗಳಲ್ಲಿ ಹಾಳಾಗುತ್ತದೆ. ಆದ್ದರಿಂದ 20,000 ರೂಪಾಯಿಗಳಾದರೂ ಭರಿಸಿ ಶೌಚಾಲಯವನ್ನು ನಿರ್ಮಿಸಿದರೆ ಅದಕ್ಕೆ ಒಂದು ಬೆಲೆ ಬರುತ್ತದೆ ಹಾಗೂ ಉಪಯೋಗಿಸುವುದಕ್ಕೂ ಅನುಕೂಲವಾಗುತ್ತದೆ ಎಂಬುದು ನನ್ನ ಮನವಿ ಮಾಡುತ್ತೇವೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆ ಸರಿಯಾಗಿಯೇ ಇದೆ. ಇವತ್ತಿನ ದಿವಸ 12,000 ರೂಪಾಯಿಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಸಾಧ್ಯವೇ ಇಲ್ಲ. ಹಾಗಾಗಿ ಇದರ ಬಗ್ಗೆ ಮಾನ್ಯ ಸಚಿವರು ಯೋಚನೆ ಮಾಡಬೇಕು. ಜೊತೆಗೆ ಶೌಚಾಲಯಗಳನ್ನು ಕಟ್ಟಿಸಬಹುದು. ಆದರೆ, ಆ ಊರಿನಲ್ಲಿ ನೀರು ದೊರಕದೆ ಇದ್ದಾಗ ಸಮಸ್ಯೆಯಾಗುತ್ತದೆ. ಅದರಿಂದಾಗಿ ಜನರು ಬಯಲು ಬಹಿರ್ದೆಸೆ ಕಡೆಗೆ ಹೋಗುತ್ತಾರೆ. ಆದ್ದರಿಂದ ಶೌಚಾಲಯಗಳನ್ನು ನಿರ್ಮಿಸುವುದರ ಜೊತೆಗೆ ನೀರಿನ ಲಭ್ಯತೆಯನ್ನು ಕಲ್ಪಿಸಬೇಕು. ಬಹಳಷ್ಟು ಜನ ನೀರಿನ ಲಭ್ಯತೆ ಇಲ್ಲದೇ ಇರುವುದರಿಂದ ಶೌಚಾಲಯಗಳನ್ನು ಉಪಯೋಗಿಸುವುದಿಲ್ಲ. ಇದರಿಂದಾಗಿ ಈ ಸಮಸ್ಯೆ ನಿರ್ಮಾಣವಾಗುತ್ತಿದೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇತ್ತೀಚಿನ ದಿವಸಗಳಲ್ಲಿ ಮರಳಿನ ಬೆಲೆಯೂ ಸಹ ಜಾಸ್ತಿಯಾಗಿದೆ. ಅದಕ್ಕಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

revive ಮಾಡುವುದಕ್ಕೆ ಹೆಚ್ಚು ಅನುದಾನವನ್ನು ಭರಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ 70.26 ಲಕ್ಷ ಕುಟುಂಬಗಳಿಗೆ ಶೌಚಾಲಯಗಳನ್ನು ಪೂರ್ಣಗೊಳಿಸಲಾಗಿದೆ. ಇನ್ನೂ ಬೇಸ್‌ಲೈನ್ ಸಮೀಕ್ಷೆಯಿಂದ ಹೊರಗೆ ಉಳಿದಿರುವುದು 4.6 ಲಕ್ಷ ಕುಟುಂಬಗಳು ಮಾತ್ರ. ಈಗಾಗಲೇ ಅವರಿಗೂ ಸಹ work order ಅನ್ನು ನೀಡಲಾಗಿದೆ. ಅದರಲ್ಲಿ ಶೇಕಡ 50ರಷ್ಟು ಕೆಲಸ ಆಗಿದೆ. ಜನವರಿ ಅಂತ್ಯದೊಳಗೆ ಶೇಕಡ 99ರಷ್ಟು demand saturate ಆಗುತ್ತದೆ. ಬಹುಶಃ ಈ ಸಮಯದಲ್ಲಿ revise ಮಾಡುವುದರಿಂದ ಯಾವುದೇ ರೀತಿಯ ಅನುಕೂಲವಾಗುವುದಿಲ್ಲ.

(ಮುಂದು) . . .

(514)12-30 18-12-2018 ಎಸ್‌ಕೆ - ಜಿಆರ್

**(ಸಭಾಪತಿಯವರ ಉಪಸ್ಥಿತಿ )**

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು (ಮುಂದು):-** ನಾವು ಮುಂದೆ ಮಾಡುವಂತಹ ಕೆಲಸಗಳಿಗೆ ಕೇಂದ್ರ ಸರ್ಕಾರಕ್ಕೆ convince ಮಾಡಿ, ವ್ಯವಹಾರ ಮಾಡುತ್ತೇವೆ. ಆದರೆ ಈ ಜನವರಿ ತಿಂಗಳ ಕೊನೆ ಬಂದರೆ, ಬಹುಶಃ ರೂರಲ್ ಕರ್ನಾಟಕ ಶೇಕಡಾ 99 ರಷ್ಟು ಪೂರ್ತಿಯಾಗಿಯೇ ಹೋಗುತ್ತದೆ. ಮೊದಲೇ revision ಮಾಡಿದ್ದರೆ ಅನುಕೂಲವಾಗುತ್ತಿತ್ತೋ ಏನೋ? ಈಗ ಬರೀ paper ಮೇಲೆ ಆಗುತ್ತದೆಯೇ ಹೊರತು ಬೇರೆ ಏನೂ ಆಗುವುದಿಲ್ಲ. ಆದರೂ ಸಹ ಭಾರತ ಸರ್ಕಾರದವರು ಜೊತೆ ಮಾತನಾಡುತ್ತೇವೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಪಂಚಾಯಿತಿಯನ್ನು Action Planನಲ್ಲಿ ಸೇರಿಸಿದರೆ, ನರೇಗಾ ಯೋಜನೆ ಅಡಿಯಲ್ಲಿ ಶೌಚಾಲಯಗಳನ್ನು ಕಟ್ಟುವುದಕ್ಕೆ ಎಲ್ಲಾ ಅವಕಾಶ ಇದೆ. ಹೆಚ್ಚು ಕಡಿಮೆ ಸುಮಾರು ಆರೇಳು ಸಾವಿರ ರೂಪಾಯಿಯವರೆಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

componentಯನ್ನು ಸೇರಿಸಬಹುದು. ಸುಮಾರು ಹನ್ನೆರಡು ಸಾವಿರ plus ಅದನ್ನು ಸೇರಿಸಿದರೆ, ಹಾಗೆ ಆಗುತ್ತದೆ.

**ಸಭಾಪತಿಯವರು:–** ಮಾನ್ಯ ಸುನೀಲ್ ಸುಬ್ರಮಣಿಯವರ ಪ್ರಶ್ನೆ ಸಂಖ್ಯೆ 948 ಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

**ಪ್ರಶ್ನೆ: 914**
**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಸರ್ಕಾರದಿಂದ ಸ್ಥಾಪಿತವಾಗಿರುವ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ 2006 ರ ನಂತರ ನೇಮಕಗೊಂಡಿರುವ ಪ್ರಾಧ್ಯಾಪಕರು ಹಾಗೂ ಇತರೆ ಸಿಬ್ಬಂದಿಗೆ ಪಿಂಚಣಿ ಸೌಲಭ್ಯ ನೀಡಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದೆ. ಸಚಿವರು ನೀಡಿರುವ ಲಿಖಿತ ಉತ್ತರದಲ್ಲಿ 2006 ರ ನಂತರ ನೇಮಕಗೊಂಡ ಸಿಬ್ಬಂದಿಗಳಿಗೆ ಎನ್‌ಪಿಎಸ್ ಯೋಜನೆಯಲ್ಲಿ ಜಾರಿಗೊಳಿಸಬೇಕಾಗಿದ್ದು, ಈ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಹೆಚ್ಚುವರಿ ಅನುದಾನವನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು, ಸಹಮತಿಯನ್ನು ನಿರೀಕ್ಷಿಸಲಾಗಿದೆಂದು ತಿಳಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಮೂರು ಉಪ ಪ್ರಶ್ನೆಗಳಿವೆ. ಮೊದಲನೆಯದಾಗಿ ನೂತನ ಪಿಂಚಣಿ ಯೋಜನೆ ಜಾರಿಗೆ ಬಂದು ಸುಮಾರು ಹದಿಮೂರು ವರ್ಷಗಳಾಯಿತು. ಈ ಯೋಜನೆಯನ್ನು ಜಾರಿಗೊಳಿಸುವಂತಹ ಸಂದರ್ಭದಲ್ಲಿ, ಇದನ್ನು mandatory ಎಂದು ಹೇಳಿದ್ದಾರೆ. Compulsory ಆಗಿ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತರಲೇಬೇಕು. Government Employees ಇರಬಹುದು, autonomous ಸಂಸ್ಥೆಯಲ್ಲಿ ಕೆಲಸ ಮಾಡುವಂತಹ ಸಿಬ್ಬಂದಿ ಇರಬಹುದು, Local Body Employees ಇರಬಹುದು, University Employees ಇರಬಹುದು – ಈ ಎಲ್ಲಾ ಸಿಬ್ಬಂದಿಗಳಿಗೂ compulsory ಆಗಿ ಜಾರಿಗೆ ತರಬೇಕೆಂದು ಹೇಳಿದ್ದಾಗಿಯೂ ಕೂಡ, ಹದಿಮೂರು ವರ್ಷಗಳು ಏಕೆ ವಿಳಂಬವಾಯಿತು? ಎರಡನೆಯದಾಗಿ ಬಹಳ ಮಹತ್ವವಾಗಿರುವಂಥದ್ದನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, Government Medical colleges are autonomous institutions ಇವತ್ತು ಬೆಂಗಳೂರಿನಲ್ಲಿ ಇರುವಂತಹ ಜಯದೇವ ಹೃದ್ರೋಗ ಸಂಸ್ಥೆಯೂ ಕೂಡ autonomous institution ಮತ್ತು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

autonomous institution. Institute of Nephro-Urology is also an autonomous institution. ಈ ಮೂರು ಸಂಸ್ಥೆಗಳು ಕೂಡ ರಾಜ್ಯ ಸರ್ಕಾರದ ಅಡಿಯಲ್ಲಿವೆ. ಈಗಾಗಲೇ ಈ ಮೂರು ಸಂಸ್ಥೆಗಳಿಗೂ ಕೂಡ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಆದರೆ ಈ ಸರ್ಕಾರಿ ವೈದ್ಯಕೀಯ ಸಂಸ್ಥೆಗಳನ್ನೂ ಕೂಡ autonomous institution ಆಗಿ ಮಾಡಿದ್ದಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯಡಿಯಲ್ಲಿ ಇರುವಂತಹ ಹದಿನಾರು ವೈದ್ಯಕೀಯ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ಏಕೆ ನೂತನ ಪಿಂಚಣಿ ಯೋಜನೆಯನ್ನು ಅನ್ವಯಿಸಿಲ್ಲ? ಈ ತಾರತಮ್ಯವನ್ನು ಏಕೆ ಮಾಡುತ್ತಿದ್ದೀರಿ? ಇದರ ಜೊತೆಗೆ ಆರ್ಥಿಕ ಇಲಾಖೆಯವರಿಗೆ ಕಳುಹಿಸಿದ್ದಾರೆ. ಈ ಹಿಂದೆ ಇದ್ದಂತಹ ಮಾನ್ಯ ಮಾಲಕರೆಡ್ಡಿಯವರು ಕೆಳಮನೆಯಲ್ಲಿ ಮತ್ತು ವಿಧಾನ ಪರಿಷತ್ತಿನ ಸದಸ್ಯರಾದಂತಹ ಮಾನ್ಯ ಬಸವರಾಜ ಹೊರಟ್ಟಿಯವರು ಮೇಲ್ಮನೆಯಲ್ಲಿ ಇದೇ ಪ್ರಶ್ನೆಯನ್ನು ಕೇಳಿದಾಗಲೂ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳುಹಿಸಿದ್ದೇವೆ. ಅದನ್ನು ಪರಿಶೀಲಿಸಲಾಗುತ್ತದೆ ಎಂದು ಉತ್ತರವನ್ನು ನೀಡಿದ್ದಾರೆ. ಇದನ್ನು ಪರಿಶೀಲನೆ ಮಾಡುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆ? ಎಲ್ಲಾ ಪ್ರಶ್ನೆಗಳಿಗೂ ಆರ್ಥಿಕ ಇಲಾಖೆಯೊಳಗೆ ಕಳುಹಿಸಿದ್ದಾರೆ ಎಂದು ಉತ್ತರದಲ್ಲಿ ಹೇಳುತ್ತಾರೆ. ನಮ್ಮ ಸರ್ಕಾರದ ಒಳಗೆ ಆರ್ಥಿಕ ಇಲಾಖೆ ಬರುತ್ತದೆ. ಮಾನ್ಯ ಡಿ.ಕೆ ಶಿವಕುಮಾರ್ ಮನಸ್ಸು ಮಾಡಿದರೆ, ಈ ಕೆಲಸವನ್ನು ಒಂದು ದಿನದಲ್ಲಿ ಮಾಡಬಹುದು. ಇದಕ್ಕೆ ಆರ್ಥಿಕ ಹೊರೆ ಬಹಳ ಬೀಳುವುದಿಲ್ಲ. ಹಾಗಾದರೂ ಹದಿಮೂರು ವರ್ಷಗಳಾಯಿತು. ಏಕೆ ಇನ್ನು ಮಾಡಿಲ್ಲ ಎಂದು ಸರ್ಕಾರಕ್ಕೆ ಪ್ರಶ್ನೆ ಮಾಡುತ್ತೇನೆ. ಒಂದು ವೇಳೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ಕೊಟ್ಟರೆವೆಂದರೆ, ಎಷ್ಟು ಆರ್ಥಿಕ ಹೊರೆ ಬೀಳುತ್ತದೆ ಎಂಬುದನ್ನು ಲೆಕ್ಕವನ್ನು ಮಾಡಿದರೆ? ಆರ್ಥಿಕ ಇಲಾಖೆ ಉತ್ತರವನ್ನು ಏನು ಕೊಡುತ್ತದೆ ಎಂದರೆ, internal resources ನ್ನು ನೀವು mobilise ಮಾಡುವುದರಿಂದ ಅದನ್ನೇ ನೀವೇ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಇದು ಆಗಲಾರದು ಕೆಲಸ ಏಕೆಂದರೆ, ಸರ್ಕಾರಿ ವೈದ್ಯಕೀಯ ಕಾಲೇಜುಗಳಗೆ ಬಡವರು ಇರುತ್ತಾರೆ. BPL cardholders ಬರುತ್ತಾರೆ. Internal resources ನ್ನು mobilise ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲಾ ಸಿಬ್ಬಂದಿಯ ಪರವಾಗಿ ನಾನು ಮಾನ್ಯ ಸಚಿವರಿಗೆ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗಾಗಲೇ ಎಲ್ಲಾ ಸಿಬ್ಬಂದಿಯವರು ಮಾನ್ಯ ಸಚಿವರನ್ನು ಭೇಟಿಯಾಗಿದ್ದಾರೆ. ಇದು ಗಂಭೀರವಾದಂತಹ ಪ್ರಶ್ನೆಯಾಗಿದೆ. ಅವರು internal resources ನ್ನು mobilise ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಮಾನ್ಯ ಸಚಿವರಿಗೆ ಇದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೆ ಸಾಮರ್ಥ್ಯವನ್ನು ಹೊಂದಿದ್ದಾರೆ. ಎಲ್ಲಾ ಸಿಬ್ಬಂದಿಗಳು ಮಾನ್ಯ ಸಚಿವರ ಮೇಲೆ ಭರವಸೆಯನ್ನು ಇಟ್ಟುಕೊಂಡಿದ್ದಾರೆ. ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುವುದೇನೆಂದರೆ, ನೂತನ ಪಿಂಚಣಿ ಯೋಜನೆ ಜಾರಿ ಮಾಡುವುದಕ್ಕೆ, ಎಷ್ಟು ಆರ್ಥಿಕ ಹೊರೆ ಬರುತ್ತದೆ. ಅದನ್ನು ಸರ್ಕಾರದಿಂದಲೇ ಭರಿಸಬೇಕು. ಇದು ಆಗದಿದ್ದರೆ ಈ ವೈದ್ಯಕೀಯ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತೆಗೆದುಕೊಂಡು ಬರುವುದು ಆಸಾಧ್ಯದ ಮಾತು.

**ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೂತನ ಪಿಂಚಣಿ ಯೋಜನೆಯೂ 2006 ನೇ ಇಸವಿಯಲ್ಲಿ ಜಾರಿಗೆ ಬಂದಿರುವುದು. ಈಗ ನಾವೆಲ್ಲರೂ 2018ನೇ ಇಸವಿಯಲ್ಲಿ ಇದ್ದೇವೆ. ಈಗಾಗಲೇ ಸುಮಾರು ಹನ್ನೆರಡು ವರ್ಷಗಳಿಂದ ಯಾರೂ ಗಮನಹರಿಸಿಲ್ಲ. ಆಗ ನಿಮ್ಮ ಪಕ್ಷದ ಮಂತ್ರಿಗಳು ಇದ್ದರು. ಇದರ ಬಗ್ಗೆ ಹಲವು ಬಾರಿ ಪ್ರಶ್ನೆ ಕೇಳಿದರೂ, ಅದರ ಬಗ್ಗೆ ಚರ್ಚೆಯಾಗಲಿಲ್ಲ. ದಯವಿಟ್ಟು, ತಕ್ಷಣ ಮಾಡುವುದಕ್ಕೆ ವ್ಯವಸ್ಥೆಯಾಗಬೇಕು. ಇನ್ನೂ ಇದರ ಬಗ್ಗೆ ಹೇಳಿದರೆ, ನಿಜವಾಗಲೂ ಆ sector ಬಗ್ಗೆ ನಮಗೆ ಯಾರಿಗೂ ಕಾಳಜಿ ಇಲ್ಲ ಎನ್ನುವ message ಹೋಗುತ್ತದೆ. ದಯವಿಟ್ಟು, ಇದನ್ನು ಬೇಗ ಮಾಡಬೇಕೆಂದು ನಾನು ಅಗ್ರಹ ಮಾಡುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಅರ್ಥ ಪೂರ್ಣವಾಗಿದೆ. ಇಲ್ಲವೆಂದು ನಾನು ಹೇಳುವುದಿಲ್ಲ. 2006 ರಲ್ಲಿ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಾಗ, ಅವತ್ತಿನ ಸರ್ಕಾರ ಅದರಲ್ಲಿ ಸರಿಯಾಗಿ foundationನ್ನು ಹಾಕಿಸಿ ಬಿಟ್ಟಿದ್ದರೆ, ಈ ಸಮಸ್ಯೆ ಬರುತ್ತಿರಲಿಲ್ಲ. ಆ foundation ಕೈಯಲ್ಲಿಯೇ ಇತ್ತು ಅಲ್ಲವೇ? ಆಗ ಮಾಡಿದರೆ ಸಮಸ್ಯೆ ಇರುತ್ತಿರಲಿಲ್ಲ. I fully agree with the Hon'ble Member. ಇದೊಂದು ತಾರತಮ್ಯ ಕಾಣುತ್ತಿದೆ. ಬೇರೆ ಕಡೆ ಸ್ವಲ್ಪ financially sound ಇರುವ ಕಡೆ ಇದನ್ನು ಕೊಡುತ್ತಿದ್ದಾರೆ. Sri *Jayadeva Institute of Cardiovascular* Sciences and Research ನಲ್ಲಿ ಮತ್ತು *Kidwai* Memorial Institute of Oncology (KMIO) ನಲ್ಲಿ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯವರು ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ನಾವು ಇದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿಲ್ಲ. ನಾನು ಇದನ್ನು ಹೇಗೆ ಮಾಡಬಹುದು ಎಂದು ಲೆಕ್ಕಚಾರವನ್ನು ಹಾಕುತ್ತಿದ್ದೇನೆ ಮತ್ತು ಎಲ್ಲಾ ಕಡೆಯಿಂದಲೂ ಬಹಳ ಒತ್ತಡ ಇದೆ. ಇದಲ್ಲದೇ ಬೇರೆ staff nurse, ಸಣ್ಣ ಸಣ್ಣ ಕೆಲಸ ಮಾಡುವಂತಹವರು, ಇವತ್ತು ಸುಮಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹತ್ತು ಸಾವಿರ ರೂಪಾಯಿಗಳವರೆಗೂ ಕೆಲಸ ಮಾಡುತ್ತಿದ್ದಾರೆ. Cleaners ಎಲ್ಲಾ ಸುಮಾರು ಏಳೆಂಟು ಸಾವಿರ ರೂಪಾಯಿಗಳವರೆಗೆ ಕೆಲಸ ಮಾಡುತ್ತಿದ್ದಾರೆ. Scavengers ನವರಿಗೆ ಒಳ್ಳೆಯ ಸಂಬಳವನ್ನು ಕೊಡಬೇಕಾಗುತ್ತದೆ. Autonomous institutionsಗಳನ್ನು ಸೇರಿಸಿಬಿಟ್ಟಿದ್ದರೆ, ಕೆಲವೆಲ್ಲಾ ನಾವು contract basis ನಲ್ಲಿ ತೆಗೆದುಕೊಳ್ಳುವುದಕ್ಕಾಗದೇ ಹೊರಗಡೆ ಏನೊಂದು understanding ಮಾಡಿಕೊಂಡು, ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಲ್ಲಿಯೇ ಉತ್ತರ ಬಂತು. ಈ ಎಲ್ಲಾ ಸಂಸ್ಥೆಗಳಲ್ಲಿ ನಾವು ಉಚಿತವಾಗಿ ಕೊಡುತ್ತಿದ್ದೇವೆ. ಹಣ ಬರುವುದಕ್ಕೆ ಆಗುತ್ತಿಲ್ಲ. ಸುಮಾರು ಒಂದು ಕೋಟಿ ಐವತ್ತು ಸಾವಿರ ರೂಪಾಯಿಗಳು ಬರಬಹುದು. ನಾನು major decision ತೆಗೆದುಕೊಳ್ಳುವುದರ ಬಗ್ಗೆ ಚಿಂತನೆ ಮಾಡುತ್ತಿದ್ದೇನೆ. ಎಲ್ಲಾ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ financial resource ಏನೂ ಇಲ್ಲ. ಈ ಮೆಡಿಕಲ್ ಕಾಲೇಜಿಗಳಲ್ಲಿ ಸುಮಾರು ಹದಿನೇಳು ಸಾವಿರ ರೂಪಾಯಿಗಳಿಗೆ ಮೆಡಿಕಲ್ ಸೀಟನ್ನು ಕೊಡುತ್ತಿದ್ದಾರೆ. ಸುಮಾರು ಐವತ್ತು ಸಾವಿರ ರೂಪಾಯಿಗಳವರೆಗೆ ಪಿ.ಜಿ., ಸೀಟನ್ನು ಕೊಡುತ್ತಿದ್ದೇವೆ. ಖಾಸಗಿ ಮೆಡಿಕಲ್ ಕಾಲೇಜಗಳಲ್ಲಿ ಆ ಸೀಟ್‌ಗೆ ಸುಮಾರು ಮೂರು ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ನಮ್ಮಲ್ಲಿ ಪಿ.ಜಿ. ಸೀಟ್‌ಗೆ ಎಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಈಗ ಎಂ.ಬಿ.ಬಿ.ಎಸ್., ಸೀಟನ್ನು ಸುಮಾರು ಐವತ್ತು ಸಾವಿರ ರೂಪಾಯಿಗಳಿಗೆ enhance ಮಾಡಿದೆ. ಶಾಲೆಗೆ ಹೋಗುವ ಮಕ್ಕಳ ಒಂದು ಸೀಟಿಗೆ ಒಂದು ಲಕ್ಷ ರೂಪಾಯಿಗಳವರೆಗೆ ಕೊಡುತ್ತಾರೆ. ಈಗ ಪಿ.ಜಿ., ಸೀಟ್‌ನ್ನು ಮೂರು ಲಕ್ಷ ರೂಪಾಯಿಗಳಿಗೆ ಏರಿಸಬೇಕೆಂದು ಮಾಡಿದ್ದೇವೆ. ಜೊತೆಗೆ major decision ತೆಗೆದುಕೊಳ್ಳಲು discussion ಗೆ ಈಗಾಗಲೇ ನಮ್ಮ ಅಧಿಕಾರಿಯವರಿಗೆ ಫೈಲ್ putup ಮಾಡುವುದಕ್ಕೆ ಹೇಳಿದ್ದೇನೆ. ಈಗ ಏನೆಂದು ಹೇಳಿದರೆ ಕೆಲವು ಸಂಸ್ಥೆಗಳಲ್ಲಿ ಸುಮಾರು 150 ಸೀಟುಗಳಿವೆ. ದೊಡ್ಡ ದೊಡ್ಡ ಸಂಸ್ಥೆಯಲ್ಲಿ ಸುಮಾರು 250 ಸೀಟುಗಳನ್ನು raise ಮಾಡುವಂಥ ಇದೆ. ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಈ ವರ್ಷ NRI seats ನ್ನು ಕೂಡ ಏಕೆ ಮಾಡಬಾರದು ಎಂಬ ಚಿಂತನೆಯೂ ಕೂಡ ಇದೆ. Atleast ಆ ಹಣದಿಂದಲಾದರೂ, ಇವರಿಗೆ ಸಂಬಳ ಕೊಡುವುದಕ್ಕೆ ಮತ್ತು pension ಕೊಡದೇ ಇರುವುದು ತಪ್ಪು. I fully agree. ಆರೋಗ್ಯ ಇಲಾಖೆಯ ಸರ್ಕಾರಿ ನೌಕರರನ್ನು ತಂದು ಬಿಟ್ಟು, ಇದ್ದಕ್ಕಿದ್ದ ಹಾಗೇ autonomous institution ಎಂದು ಹೇಳಿ, ಅವರು ಮಾಡಿರುವುದು ತಪ್ಪು ಇದೆ ಎಂದು ಹೇಳಿ, ಅದಕ್ಕೆ financial viability create ಮಾಡುವುದಕ್ಕೆ ಒಂದು ಪ್ರಯತ್ನವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಿದ್ದೇನೆ. Definitely, Finance Departmentನವರಿಗೆ ಕಳುಹಿಸಿದ್ದೇವೆ. Finance Department ನವರು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎಂಬುದು ಕೂಡ ಗೊತ್ತಿದೆ. I know that. ನಮ್ಮಲ್ಲಿ ಅಷ್ಟೋ ಇಷ್ಟೋ ಹಣ ಇದೆ ಎಂದು ತೋರಿಸಬೇಕಾಗಿದೆ. ಅದಕ್ಕೆ ಮಾಡುತ್ತಿದ್ದೇವೆ. ಅದಕ್ಕೆ ಇನ್ನೂ ಏನಾದರೂ ವ್ಯಾಪಕವಾಗಿ, ಒಂದು ಸಂಸ್ಥೆಯನ್ನು ಪ್ರಾರಂಭ ಮಾಡಬೇಕಾದರೆ, ಸುಮಾರು 610 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಹಿಂದೆ ಇದ್ದಂತಹ ಮೆಡಿಕಲ್ ಕಾಲೇಜುಗಳು Director of Health Services ನಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ನಮ್ಮಲ್ಲಿ ಬಂದು ಸೇರಿಕೊಂಡು ಬಿಟ್ಟಿದ್ದಾರೆ. ಇಲ್ಲಿ ಅವರು transfer ಆಗುವುದಿಲ್ಲವೆಂದು ಸೇರಿಕೊಂಡು ಬಿಟ್ಟಿದ್ದಾರೆ. ಈಗ ಹೊರಗಡೆಯೂ ಹೋಗುವುದಕ್ಕೂ ಆಗುತ್ತಿಲ್ಲ. ಇಲ್ಲಿಯೂ ಇರುವುದಕ್ಕೆ ಆಗುತ್ತಿಲ್ಲದಂತಹ ಪರಿಸ್ಥಿತಿ ಬಂದಿದೆ. Financial resources build-up ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತಿದ್ದೇನೆ. Secondly, the Government is very positive on the request of the Hon'ble Member.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಇಲ್ಲಿ ಏನೂ ಸಿಬ್ಬಂದಿ ಇದ್ದಾರೆ. ಅವರಿಗೆ Provident Fund, G.P.F., D.C.R.G., K.G.I.D., facilities ಇಲ್ಲ. ಅಕಸ್ಮಾತ್ ಸಿಬ್ಬಂದಿ ಏನಾದರೂ ಮರಣ ಹೊಂದಿದ್ದರೆ ಅವರ ಕುಟುಂಬ ಬೀದಿ ಪಾಲಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರಿಗೆ ಗೊತ್ತಿದೆ. ಅದಕ್ಕೆ ಏನಾದರೂ ಒಂದು facility ಬೇಕೇ ಬೇಕು. ಈಗಾಗಲೇ ಬೇರೆ ರಾಜ್ಯಗಳಿರುವಂತಹ ಆಂಧ್ರ ಪ್ರದೇಶ, ಕೇರಳ, ಒರಿಸ್ಸಾ, ಮಹಾರಾಷ್ಟ್ರ ರಾಜ್ಯಗಳಲ್ಲಿರುವ autonomous ಸಂಸ್ಥೆಗಳಲ್ಲಿ ಪಿಂಚಣಿ ಯೋಜನೆಯನ್ನು ಮಾಡಿ ಬಿಟ್ಟಿದ್ದಾರೆ. ನಮ್ಮ ರಾಜ್ಯದೊಳಗೆ ಕೂಡ ಆದಷ್ಟು ಬೇಗನೆ ಅದನ್ನು ಜಾರಿ ತರಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಇದನ್ನು 2006 ನೇ ಇಸವಿಯಲ್ಲಿ ಪ್ರಾರಂಭ ಮಾಡಿದಾಗ, ಆ ದಿನವೇ ಅದಕ್ಕೆ ಏನಾದರೂ financial support ಮಾಡಿಬಿಟ್ಟಿದ್ದರೆ, ಈ ಸಮಸ್ಯೆ ಬರುತ್ತಿರಲಿಲ್ಲ. ಈಗಾಗಲೇ ಸುಮಾರು ಹನ್ನೆರಡು ವರ್ಷಗಳು ಕಳೆದಿದೆ. ಆ ದಿನ ಯಾವ ಮುಖ್ಯಮಂತ್ರಿಯವರು ಇದ್ದರೋ ಗೊತ್ತಿಲ್ಲ.

**ಡಾ. ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಏನೂ ಸರ್ಕಾರವಿದೆಯೋ, ಈ ಹಿಂದೆಯೂ ಅದೇ ಸರ್ಕಾರವಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು..)

(515)18.12.2018,12.40, ಟಿಸಿಹೆಚ್-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಪಿ.ಎಫ್., ಬಗ್ಗೆ ಕೇಳಿದಾಗ, ಇಲ್ಲವೆಂದು ಹೇಳಿದ್ದಾರೆ. ಕಾನೂನಿನ ಪ್ರಕಾರ ಪಿ.ಎಫ್., ಕವರೇಜ್ ಆಗಲೇಬೇಕು. ಸರ್ಕಾರಿ ಸಂಸ್ಥೆಗಳಲ್ಲಿ ಪಿ.ಎಫ್., ಅನ್ನು ಕೊಡುವುದಿಲ್ಲ ಎನ್ನುವುದಾದರೆ, ಅಲ್ಲಿನ ಸಿಬ್ಬಂದಿಯವರು ಇನ್ಯಾರ ಬಳಿ ಕೇಳಬೇಕು? ಸರ್ಕಾರದ ನಿಯಮಾವಳಿಗಳು ಹಾಗೂ ಕಾನೂನನ್ನು ಸರ್ಕಾರವೇ ಪಾಲನೆ ಮಾಡದಿದ್ದರೆ ಹೇಗೆ? ಆ ಕಾರಣಕ್ಕಾಗಿ ಅವರಿಗೆ ಸರ್ಕಾರ ತುರ್ತಾಗಿ ಕೊಡತಕ್ಕಂಥದ್ದು ಕಡ್ಡಾಯ. ಅವರ ಹಕ್ಕನ್ನು ಸರ್ಕಾರಿ ಸಂಸ್ಥೆಗಳು ಕಸಿದುಕೊಳ್ಳಬಾರದು. ಹಾಗಾಗಿ, ದಯಮಾಡಿ ರಾಜ್ಯದಲ್ಲಿ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ ಪಿ.ಎಫ್., ಅನ್ನು ಕೊಡಿಸಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಸಿಬ್ಬಂದಿಗಳು, ಈ ಸ್ವಾಯತ್ತ ಸಂಸ್ಥೆಗಳಲ್ಲಿ ಸೌಲಭ್ಯಗಳು ಚೆನ್ನಾಗಿದ್ದು, ನಾವು ಒಂದೇ ಕಡೆ ಕರ್ತವ್ಯ ನಿರ್ವಹಿಸುತ್ತೇವೆ, ನಮ್ಮನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಅಲ್ಲಿಗೆ ಕೆಲಸಕ್ಕೆ ಬಂದು ಸೇರಿಕೊಳ್ಳುತ್ತಾರೆ. ಆ ಸ್ವಾಯತ್ತ ಸಂಸ್ಥೆಗಳಿಂದಲೂ ಕೆಲವರು ಬಂದು ಬಿಟ್ಟಿದ್ದಾರೆ, ಅವರನ್ನು ನೀವು ಎಲ್ಲಿ ಕರ್ತವ್ಯ ನಿರ್ವಹಿಸುತ್ತೀರಿ ಎಂದು option ಕೇಳಿದಾಗಲೂ ಕೂಡ ಅವರು ಅಲ್ಲಿಯೇ ಇರುತ್ತಾರೆ. ಈಗ ಅವರು ಅಲ್ಲಿಂದಲೂ ಹೋಗುವುದಿಲ್ಲ, ನಮ್ಮ ಇಲಾಖೆಗೆ ಬರುವುದಕ್ಕೂ ಆಗುವುದಿಲ್ಲ. ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ಅಂತಿಮವಾಗಿ ನಾವು financial viability ಮಾಡಿಕೊಳ್ಳಲೇಬೇಕು. ನಾವು financial viability ಯನ್ನು ಮಾಡಿಕೊಳ್ಳದಿದ್ದರೆ ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಯಾವುದೋ ಒಂದು ಇನ್ಸ್ಟಿಟ್ಯೂಷನ್‌ಗೆ 39 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆಗೊಳಿಸುವಂತೆ ಕೇಳುತ್ತಿದ್ದಾರೆ. Rs.39 Crore is not a big thing. ಆದರೆ, ಇನ್ನು ಮುಂದೆ ಏನು ಮಾಡುವುದು? That is why, I am working out the financial viability.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 886**

**(ಉತ್ತರ ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರವಿ, ಸ್ಥಳೀಯ ಸಂಸ್ಥೆಗಳ ಕ್ಷೇತ್ರ (ಶ್ರೀ ಹೆಚ್.ಎಂ.ರೇವಣ್ಣನವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಸುದೀರ್ಘವಾದ ಉತ್ತರವನ್ನು ಕೊಟಿದ್ದಾರೆ. 2014-2015, 2015-16 ಹಾಗೂ 2016-17ನೇ ಸಾಲಿನಲ್ಲಿ ಕೈಗೊಂಡಿರತಕ್ಕಂಥ ಕಾಮಗಾರಿಗಳು ಮತ್ತು ಅವುಗಳಿಗೆ ಬಿಡುಗಡೆಯಾಗಿರತಕ್ಕಂಥ ಅನುದಾನ ಮತ್ತು ವೆಚ್ಚಗಳ ಬಗ್ಗೆ ಜಿಲ್ಲಾವಾರು ಉತ್ತರವನ್ನು ನೀಡಿದ್ದಾರೆ. ಅವರು ಕೊಟ್ಟಿರತಕ್ಕಂಥ ಉತ್ತರವನ್ನು ಪರಿಶೀಲನೆ ಮಾಡಿದಾಗ, ಕೈಗೊಂಡಿರುವಂತಹ ಕಾಮಗಾರಿಗಳಿಗೂ ಅಂದಾಜು ವೆಚ್ಚಕ್ಕೂ ಮತ್ತು ಬಿಡುಗಡೆಯಾಗಿರುವಂತಹ ಅನುದಾನಕ್ಕೂ ಅಜಗಜಾಂತರ ವ್ಯತ್ಯಾಸವನ್ನು ಕಾಣಬಹುದಾಗಿದೆ. ನಾನು ಎಲ್ಲಾ ವಿಷಯಗಳ ಬಗ್ಗೆ ಕೇಳದೆ, ಕೇವಲ ರಾಮನಗರ ಜಿಲ್ಲೆಗೆ ಸೀಮಿತವಾಗಿ ಹೇಳುವುದಾದರೆ, ರಾಮನಗರ ಜಿಲ್ಲೆಗೆ ಅನುಬಂಧ-1ರಲ್ಲಿ ಪುಟ ಸಂಖ್ಯೆ.10ರಲ್ಲಿ ನೀಡಿರುವಂತಹ ಉತ್ತರ ಏನೆಂದರೆ, ಅನುಷ್ಠಾನಗೊಳಿಸಬೇಕಾಗಿರತಕ್ಕಂಥ ಕಾಮಗಾರಿಗಳ ಸರಣಿ ಚೆಕ್‌ಡ್ಯಾಂಗಳಿಗೆ ಸಂಬಂಧಪಟ್ಟಂತೆ, 2000 ಲಕ್ಷ ರೂಪಾಯಿಗಳ ಅಂದಾಜುಪಟ್ಟಿಗೆ ಅನುಮೋದನೆಯಾಗಿರುತ್ತದೆ. ಆದರೆ, ಇದಕ್ಕೆ ಕೇವಲ 581 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆಗೊಳಿಸಲಾಗಿದೆ. ಈ ಕಾಮಗಾರಿ ಇನ್ನು ಮುಕ್ತಾಯವಾಗಿಲ್ಲ. ಅದೇ ರೀತಿ 2016-17ನೇ ಸಾಲಿನಲ್ಲಿ ಕೆರೆಗಳ ಆಧುನೀಕರಣಕ್ಕೆ ಒಟ್ಟು 25 ಕಾಮಗಾರಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ರಾಮನಗರ ಜಿಲ್ಲೆಯಲ್ಲಿ 11 ಕಾಮಗಾರಿಗಳು ಅಪೂರ್ಣಗೊಂಡಿರುತ್ತವೆ. ಇನ್ನೂ 14 ಕಾಮಗಾರಿಗಳು ಬಾಕಿ ಇವೆ. ಸದರಿ 25 ಕಾಮಗಾರಿಗಳಿಗೆ 802 ಲಕ್ಷ ರೂಪಾಯಿಗಳ ಪೈಕಿ, 109 ಲಕ್ಷ ರೂಪಾಯಿಗಳನ್ನು ಬಿಡುಗಡೆಗೊಳಿಸಲಾಗಿದೆ. ಅದೇ ರೀತಿಯಾಗಿ ಪಿಕ್‌ಅಪ್‌ಗಳಲ್ಲೂ 3 ಕಾಮಗಾರಿಗಳು ಮುಕ್ತಾಯವಾಗಿವೆ, 8 ಕಾಮಗಾರಿಗಳು ಬಾಕಿ ಇವೆ. ಬಿಡುಗಡೆಗೊಳಿಸಬೇಕಾಗಿರುವ 446 ಲಕ್ಷಗಳ ಪೈಕಿ, ಕೇವಲ 151 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಬರೀ ರಾಮನಗರಕ್ಕೆ ಸಂಬಂಧಪಟ್ಟಂತೆ ಕೇಳುವುದಾದರೆ, ಅಲ್ಲಿಗೆ ಹಣವನ್ನು ಬಿಡುಗಡೆ ಮಾಡಿಲ್ಲ. ನಾವು ಈಗಾಗಲೇ ಡಿಸೆಂಬರ್ ತಿಂಗಳಿನಲ್ಲಿ ಇದ್ದೇವೆ, ಈ ಸಾಲಿನ ಮಾರ್ಚ್ ಅಂತ್ಯಕ್ಕೆ ಕೇವಲ 3 ತಿಂಗಳು ಬಾಕಿ ಇರುತ್ತದೆ. ಹಾಗಾಗಿ, ಯಾವಾಗ ಹಣ ಬಿಡುಗಡೆ ಮಾಡಿ ಕಾಮಗಾರಿ ಪೂರ್ಣಗೊಳಿಸುತ್ತಾರೋ ಅದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ಕೊಡಬೇಕು.

ಇನ್ನು ನೀರು ಬಳಕೆದಾರರ ಸಹಕಾರ ಸಂಘವು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಬರುತ್ತದೆ. ಇದು ಬಹಳ ಮಹತ್ವವಾಗಿರುವಂತಹ ಒಂದು ಯೋಜನೆಯಾಗಿದೆ. ಈ ಬಾರಿ ನೀರು ಬಳಕೆದಾರರ ಸಂಘದ ಪುನಶ್ಚೇತನದ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆಯೇ? ಅವುಗಳನ್ನು ಸದೃಢಗೊಳಿಸತಕ್ಕಂಥ ವಿಚಾರದಲ್ಲಿ ಅವರ ಬಳಿ ಆ ಯೋಜನೆಗಳು ಇದ್ದಲ್ಲಿ, ಈ ಬಗ್ಗೆಯೂ ಕೂಡ ಸ್ಪಷ್ಟಪಡಿಸಬೇಕಾಗುತ್ತದೆ. ಇದರ ಜೊತೆಗೆ ಇನ್ನೂ 91

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆರೆಗಳು ಒತ್ತುವರಿಯಾಗಿರುವುದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ ಮತ್ತು ಅವುಗಳ ಸರ್ವೆ ಕಾರ್ಯ ಕೂಡ ನಡೆದಿರುತ್ತದೆ. ತೆರವುಗೊಳಿಸಬೇಕಾಗಿರತಕ್ಕಂಥ ಕೆರೆಗಳ ಸಂಖ್ಯೆ 91 ಇದೆ ಎಂದು ಹೇಳಿದ್ದಾರೆ. ಕೆರೆಗಳನ್ನು ತೆರವುಗೊಳಿಸುವುದಕ್ಕೆ ಮಾನ್ಯ ಸಚಿವರಿಗೆ ಅಥವಾ ಸರ್ಕಾರಕ್ಕೆ ಇರತಕ್ಕಂಥ ಅಡಚಣೆಯಾದರೂ ಏನು ಎಂದು ತಮ್ಮ ಮುಖೇನ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

**ಶ್ರೀ ಸಿ.ಎಸ್.ಪುಟ್ಟರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುವಂತೆ, ಈ ಸಾಲಿನಲ್ಲಿ ಈಗಾಗಲೇ 1211 ಕೋಟಿ ರೂಪಾಯಿಗಳಷ್ಟು ವೆಚ್ಚ ಮಾಡಲಾಗುವುದು. ಡಿಸೆಂಬರ್ ತಿಂಗಳು ಸೇರಿದಂತೆ, ಇನ್ನು ಉಳಿದಂತಹ 1000 ಕೋಟಿ ರೂಪಾಯಿಗಳಷ್ಟು ಹಣವನ್ನು ಜನವರಿ, ಫೆಬ್ರವರಿ ಹಾಗೂ ಮಾರ್ಚ್ ತಿಂಗಳಿನಲ್ಲಿ ಸಂಪೂರ್ಣವಾಗಿ ಕೊಡಲು ಕಾರ್ಯಕ್ರಮವನ್ನು ರೂಪಿಸಿದ್ದೇವೆ. 2018–19ನೇ ಸಾಲಿನ ಬಜೆಟ್‌ನಲ್ಲಿ ನಮಗೆ ಏನು ಅನುದಾನವನ್ನು ಕೊಟ್ಟಿದ್ದಾರೆ, ಆ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡಿ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕೆ ಈಗಾಗಲೇ ನಮ್ಮ ಇಲಾಖೆಯಲ್ಲಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಈ ನಿಟ್ಟಿನಲ್ಲಿ ವಿಶೇಷವಾಗಿ ರಾಮನಗರ ಜಿಲ್ಲೆಗೆ ಸಂಬಂಧಪಟ್ಟಂತೆ, ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ. ಯಾವ್ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕೆಂದು ಈಗಾಗಲೇ ತೀರ್ಮಾನ ಮಾಡಿ, ಟೆಂಡರ್ ಕರೆದು ಆ ಕಾಮಗಾರಿಗಳನ್ನು ತಕ್ಷಣ ಕೈಗೊಳ್ಳಲು ಅವರ ಸಹಕಾರ ಕೂಡ ಬೇಕಾಗುತ್ತದೆ. ಅವರು ಕಾಮಗಾರಿಗಳಿಗೆ ಹೆಚ್ಚಿನ ಒತ್ತುಕೊಟ್ಟು, ಬೇಗನೆ ಮುಗಿಸಿ, ಬಿಲ್‌ನ್ನು ಸಲ್ಲಿಸಿದರೆ, ನಾವು ಆ ಬಿಲ್‌ಗೆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಯಾವುದೇ ರೀತಿಯ ತೊಂದರೆ ಇಲ್ಲ. ತಕ್ಷಣವೇ ಹಣವನ್ನು ಬಿಡುಗಡೆ ಮಾಡತಕ್ಕಂಥ ಕೆಲಸವನ್ನು ನಮ್ಮ ಇಲಾಖೆ ವತಿಯಿಂದ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಬಹುಮುಖ್ಯವಾಗಿ, ಕೆರೆ ಅಭಿವೃದ್ಧಿ ಪ್ರಾಧಿಕಾರ ಈ ಸಾಲಿನಲ್ಲಿಯೇ ಅಸ್ತಿತ್ವಕ್ಕೆ ಬಂದಿದ್ದು, ಅದರಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ. ಈ ಇಲಾಖೆಯ ಸಚಿವನಾದ ನಾನು ಕೂಡ ಉಪಾಧ್ಯಕ್ಷನಾಗಿರುತ್ತೇನೆ. ರಾಜ್ಯದಲ್ಲಿ ಒಂದು ರೀತಿಯ ಬಿರುಸಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಯಾವುದೇ ಮುಲಾಜಿಲ್ಲದೇ, ಯಾವ ದೊಡ್ಡ ವ್ಯಕ್ತಿಯೇ ಇದರಲ್ಲಿ ಭಾಗಿಯಾಗಿರಲಿ, ಕೆರಗಳ ಒತ್ತುವರಿಯನ್ನು ತೆರವುಗೊಳಿಸತಕ್ಕಂಥ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈಗಾಗಲೇ ಆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು, ಎರಡು–ಮೂರು ತಿಂಗಳಿನಿಂದ ಮೂರು ಸಭೆಗಳನ್ನು ಮಾಡಿದ್ದೇವೆ. ಈ ಅಧಿವೇಶನ ಮುಗಿದ ಕೂಡಲೇ ಬಹುತೇಕ ಒತ್ತುವರಿ ಕಾರ್ಯವನ್ನು ಬಹಳ ತ್ವರಿತವಾಗಿ ಅನುಷ್ಠಾನಗೊಳಿಸತಕ್ಕಂಥ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಕೆರೆ ಬಳಕೆದಾರರ ಸಹಕಾರ ಸಂಘ ನಿರ್ವಹಣೆಗಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಈ ಸಾಲಿನಲ್ಲಿ ನಾವು ಸುಮಾರು 8 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡುವುದಕ್ಕೆ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ. ಅದನ್ನು ಈ ತಿಂಗಳ ಅಂತ್ಯದೊಳಗೆ ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮ ಮಾಡಿ, ಆ ಸಹಕಾರ ಸಂಘಗಳಿಗೆ ಚೆಕ್‌ನ್ನು ವಿತರಣೆ ಮಾಡತಕ್ಕಂಥ ಕಾರ್ಯಕ್ರಮಗಳನ್ನು ನಾವು ಮಾಡಿಕೊಂಡಿದ್ದೇವೆ. ಮುಖ್ಯವಾಗಿ, ಈಗಾಗಲೇ 100 ಕೆರೆಗಳಿಗೆ ಹೆಚ್ಚಿನ ರೀತಿಯಲ್ಲಿ ನಮ್ಮ ಇಲಾಖೆ ಸಹಕಾರ ಕೊಟ್ಟು, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಹಭಾಗಿತ್ವದಲ್ಲಿ ಈ ಸಾಲಿನಲ್ಲಿ ಕೆರೆಗಳನ್ನು ಅಭಿವೃದ್ಧಿಪಡಿಸಬೇಕು ಎನ್ನತಕ್ಕಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೆಲಸ ಮಾಡುತ್ತಿದ್ದೇವೆ. ರಾಮನಗರ ಜಿಲ್ಲೆಯಲ್ಲಿ ಮಂಜೂರು ಮಾಡಿಕೊಟ್ಟಿರತಕ್ಕಂಥ ಕಾಮಗಾರಿಗಳು ತ್ವರಿತಗತಿಯಲ್ಲಿ ಆಗುತ್ತಿಲ್ಲ ಎನ್ನತಕ್ಕಂಥದ್ದರ ಬಗ್ಗೆ ಮಾನ್ಯ ಸದಸ್ಯರು ಏನು ನಮ್ಮ ಗಮನಕ್ಕೆ ಸೆಳೆದಿದ್ದಾರೆ, ಅದಕ್ಕೆ ಇವತ್ತೇ ಸ್ಪಷ್ಟವಾಗಿ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟು, ಮಾರ್ಚ್ ತಿಂಗಳಿನೊಳಗೆ ಎಲ್ಲಾ ಕಾಮಗಾರಿಗಳನ್ನು ಮುಗಿಸಿ, ಅದಕ್ಕೆ ಅನುದಾನವನ್ನು ಬಿಡುಗಡೆ ಮಾಡತಕ್ಕಂಥ ಕೆಲಸವನ್ನು ಸಚಿವನಾಗಿ ನಾನು ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 894**

**(ಉತ್ತರ ಲಗತ್ತಿಸಿದೆ)**

**ಶ್ರೀ ಕಾಂತರಾಜು (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ಎಷ್ಟು ಅನುದಾನವನ್ನು ಕೊಟ್ಟಿದ್ದೀರಿ ಎಂದು ಪ್ರಶ್ನೆ ಕೇಳಿದ್ದೆನು, ಅದಕ್ಕೆ 2018-19ನೇ ಸಾಲಿನಲ್ಲಿ ತುಮಕೂರು ಜಿಲ್ಲೆಗೆ ರೂ. 127.14 ಕೋಟಿ ರೂಪಾಯಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಮಾನ್ಯ ಸಚಿವರು ಬಹಳ ದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಈ ಸಂದರ್ಭದಲ್ಲಿ ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಒಂದು ವರ್ಷದಿಂದೀಚೆಗೆ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವಂತಹ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಸೇರಿಸಿದ್ದಾರೆ. ಹಾಗಾಗಿ, ದಯಮಾಡಿ ನಾನು ಮಾನ್ಯ ಸಚಿವರಲ್ಲಿ ಹಾಗೂ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಸಣ್ಣ ನೀರಾವರಿ ಇಲಾಖೆಗೆ ಇನ್ನೂ ಹೆಚ್ಚಿನ ಅನುದಾನವನ್ನು ಕೊಟ್ಟು, ಈ ಕೆರೆಗಳನ್ನು ಅಭಿವೃದ್ಧಿಪಡಿಸಬೇಕು. ಏಕೆಂದರೆ, ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವಂತಹ ಕೆರೆಗಳಿಗೆ ನಾಲ್ಕೈದು ವರ್ಷದಿಂದ ಯಾವುದೇ ರೀತಿಯ ಅನುದಾನವನ್ನು ಜಿಲ್ಲಾ ಪಂಚಾಯತ್ ಸದಸ್ಯರು ಬಿಡುಗಡೆಗೊಳಿಸಿಲ್ಲ. ಏಕೆಂದರೆ, ಅವರಿಗೆ ತುಂಬಾ ಕಡಿಮೆ ಅನುದಾನ ಬಂದಿರುವುದರಿಂದ, ಕೆರೆ ಅಭಿವೃದ್ಧಿಗೆ ಒಂದು ರೂಪಾಯಿ ಹಣವನ್ನು ಕೂಡ ಮೀಸಲಿಟ್ಟಿಲ್ಲ. ಈಗ ಹೊಸದಾಗಿ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿನ ಕೆರೆಗಳು ಕೂಡ ಈ ಸಣ್ಣ ನೀರಾವರಿ ಇಲಾಖೆಗೆ ಸೇರುವುದರಿಂದ ತುಂಬಾ ಅವ್ಯವಸ್ಥೆ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿದ್ದು, ದಯಮಾಡಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಇಲ್ಲೇ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಇದ್ದಾರೆ, ಅವರಿಗೆ ಎಷ್ಟು ಅನುದಾನ ಕೊಡುತ್ತಾರೆಯೋ ಅಷ್ಟೇ ಅನುದಾನವನ್ನು ಈ ಸಣ್ಣ ನೀರಾವರಿ ಇಲಾಖೆಗೆ ಕೊಟ್ಟು, ಕೆರೆಗಳನ್ನು ಅಭಿವೃದ್ಧಿಪಡಿಸಬೇಕೆಂದು ನಾನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಕಾಂಕ್ರೀಟ್ ಕಾಮಗಾರಿಗಳಿಗೆ ಮತ್ತು ಬೋರ್‌ವೆಲ್‌ಗಳಿಗೆ ಏನು ಅನುದಾನವನ್ನು ಕೊಡುತ್ತಿದ್ದೀರಿ, ಇದನ್ನು ಬೇರೆ ಇಲಾಖೆಯವರು ಮಾಡುತ್ತಿದ್ದಾರೆ. ಅದಕ್ಕೆ ದಯಮಾಡಿ ಆ ಅನುದಾನವನ್ನು ಚೆಕ್‌ಡ್ಯಾಂಗಳು ಮತ್ತು ಕೆರೆ ಅಭಿವೃದ್ಧಿಗಾಗಿಯೇ ಉಪಯೋಗ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**(ಮುಂದು...)**

(516)18-12-2018(12-50)mm-md

(ಸಭಾಪತಿಯವರ ಉಪಸ್ಥಿತಿ)

**ಚುಕ್ಕೆ ಪ್ರಶ್ನೆ ಸಂಖ್ಯೆ: 894 (ಮುಂದು)**

**ಶ್ರೀ ಕಾಂತರಾಜ್ (ಬಿಎಂಎಲ್) (ಮುಂದು) :-**

ನಗರಗಳ ವ್ಯಾಪ್ತಿಯಲ್ಲಿರುವ ಕೆರೆಗಳು ಅವರಿಗೇ ಬರುವುದರಿಂದ Planning Authorities ಇಂತಿಷ್ಟು ಹಣವನ್ನು ಕಟ್ಟಿಸಿಕೊಂಡು ಕೆರೆಗಳ ಅಭಿವೃದ್ಧಿಗೆ ಹಣ ಕೊಡುತ್ತಾರೆ. ಅದನ್ನು ಆ ವ್ಯಾಪ್ತಿಗೇ ಉಪಯೋಗಿಸಬೇಕು. ರಸ್ತೆ ಕೆಲಸಗಳು ಮತ್ತು ಕಾಂಕ್ರೀಟ್ ಕೆಲಸಗಳಿಗೆ ಆ ಹಣವನ್ನು ಉಪಯೋಗಿಸಬಹುದು ಎಂಬ ಕಾನೂನಿದೆ. ದಯಮಾಡಿ ಆ ಕಾನೂನನ್ನು ಬದಲಾವಣೆ ಮಾಡಿ purely ಕೆರೆ ಅಭಿವೃದ್ಧಿ ಮತ್ತು ಚೆಕ್ ಡ್ಯಾಂಗಳಿಗೆ ಆ ಹಣವನ್ನು ಉಪಯೋಗಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ತುಮಕೂರು ಜಿಲ್ಲೆಯಲ್ಲಿ 11 ತಾಲ್ಲೂಕುಗಳಿವೆ. ನಾಲ್ಕೈದು ತಾಲ್ಲೂಕುಗಳಿಗೆ ಹೇಮಾವತಿ ನೀರು ಬರುತ್ತದೆ. ಸುಮಾರು 120 ರಿಂದ 300 ಎಕರೆ ಇರುವಂತಹ ಕೆರೆಗಳು ಇವೆ. ಆದ್ದರಿಂದ ಈ ಜಿಲ್ಲೆಗೆ ಇನ್ನೂ ಹೆಚ್ಚಿನ ಅನುದಾನ ಕೊಡಲಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿ.ಎಸ್. ಪುಟ್ಟರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ ರೀತಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಬರುವ ಗ್ರಾಮ ಪಂಚಾಯಿತಿಯಿಂದ ಹಿಡಿದು ಬಿ.ಬಿ.ಎಂ.ಪಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತನಕ ಆ ಹಂತದ ಇಲಾಖೆಗಳೇ ಅನುದಾನವನ್ನು ಕ್ರೋಢೀಕರಿಸಿಕೊಂಡು ಕೆರೆಗಳನ್ನು ಅಭಿವೃದ್ಧಿ ಮಾಡುವುದು ಆ ಇಲಾಖೆಯ ಜವಾಬ್ದಾರಿಯಾಗಿದೆ. ಆದರೆ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಕೆರೆ ಅಭಿವೃದ್ಧಿ ಪ್ರಾಧಿಕಾರವು ಆ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಕೆರೆಗಳನ್ನು ಸಂರಕ್ಷಣೆ ಮಾಡುವ, ಒತ್ತುವರಿಗಳನ್ನು ತೆರವುಗೊಳಿಸುವ, ಹೂಳನ್ನು ಎತ್ತಿಸುವಂತಹ, jungle clearance ಮಾಡಿಸುವಂತಹ ಜವಾಬ್ದಾರಿಯೂ ಇರುತ್ತದೆ. ಮುಂದಿನ ದಿನಗಳಲ್ಲಿ ಗೌರವಾನ್ವಿತ ಸದಸ್ಯರು ಯ್ಯಾವ ಕೆರೆಗಳನ್ನು ಅಭಿವೃದ್ಧಿ ಮಾಡಬೇಕೆಂದು ಸೂಚನೆ ಕೊಡುತ್ತಾರೋ ಆ ಎಲ್ಲಾ ಕೆರೆಗಳನ್ನು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ರೂಪಿಸಿ ಅಭಿವೃದ್ಧಿ ಮಾಡುವಂತಹ ಜವಾಬ್ದಾರಿಯನ್ನು ನಿರ್ವಹಿಸುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಣ್ಣ ನೀರಾವರಿ ಕೆರೆಗಳಲ್ಲಿ ಜಾಲಿ ಮರಗಳನ್ನು ಬೆಳೆಸಿ ಕೆರೆಗಳ ತುಂಬಾ ಮುಳ್ಳುಗಳು ತುಂಬಿ ಹೋಗಿವೆ. ಇದರಿಂದಾಗಿ ದನಕರುಗಳು ನೀರನ್ನು ಕುಡಿಯದಿರುವ ಮಟ್ಟಕ್ಕೆ ಬಂದಿದೆ, ದಯವಿಟ್ಟು ಅದನ್ನು clear ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬೆಂಗಳೂರು ನಗರದಲ್ಲಿ ಈ ಸರ್ಕಾರವು ಕೊನೆಯ ಭಾಗದಲ್ಲಿ ಒಂದು ಕಾನೂನನ್ನು ತಂದಿತ್ತು. ಬೆಂಗಳೂರು ನಗರದಲ್ಲಿರುವ ಕೆರೆಗಳ ವ್ಯಾಪ್ತಿಯನ್ನು ಅರಣ್ಯ ಇಲಾಖೆಯಿಂದ ತಮ್ಮ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ. ಈ ಇಲಾಖೆಗೆ ವರ್ಗಾವಣೆ ಮಾಡಿದ ಮೇಲೆ ಕೆರೆಗಳನ್ನು ಭೂಗಳ್ಳರು ಒತ್ತುವರಿ ಮಾಡಿಕೊಳ್ಳುವ ಎಷ್ಟೋ ಉದಾಹರಣೆಗಳು ಬೆಂಗಳೂರು ನಗರದಲ್ಲಿ ನಡೆಯುತ್ತಿದೆ. ದಯವಿಟ್ಟು ನಿಮ್ಮ ಇಲಾಖೆಗೆ ನಿರ್ದೇಶನ ಕೊಟ್ಟು, ಯಾವುದೇ ಭೂ ಕಬಳಿಕೆ ಮತ್ತು ಕೆರೆಗಳನ್ನು ಕಬಳಿಸಲು ಯಾರಿಗೂ ಬಿಟ್ಟುಕೊಡಬಾರದು ಎಂದು ಕಟ್ಟುನಿಟ್ಟಾಗಿ ಒಂದು ಕಾನೂನನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕಾಂತರಾಜ್ (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ನನ್ನ ಮನವಿಯೇನೆಂದರೆ, ತುಮಕೂರು ಜಿಲ್ಲೆಗೆ ಹೇಮಾವತಿ ನೀರು ಬರುತ್ತದೆ, 24 ಟಿ.ಎಂ.ಸಿ ನೀರು ನಮಗೆ ಏನು allocation ಆಗಿದೆ ಅಷ್ಟು ನೀರು ಬರುತ್ತಾ ಇಲ್ಲ. ತಿಪಟೂರು, ಗುಬ್ಬಿ, ತುರುವೇಕೆರೆ, ಕುಣಿಗಲ್ ಭಾಗದಲ್ಲಿ ಮತ್ತು ತುಮಕೂರು ಗ್ರಾಮಾಂತರ ಭಾಗದಲ್ಲಿ ನೀರನ್ನು ತುಂಬಿಕೊಳ್ಳಬೇಕಾದರೆ, ಅಷ್ಟು ನೀರನ್ನು ಶೇಖರಣೆ ಮಾಡಲು ನಮಗೆ ಅನಾನುಕೂಲವಾಗುತ್ತಿದೆ. ಹಾಗೂ ಅಷ್ಟು ನೀರನ್ನು ಡ್ರಾ ಮಾಡುವುದಕ್ಕೂ ಅನಾನುಕೂಲವಾಗುತ್ತಿದೆ. ದಯಮಾಡಿ, ಈ ಕೂಡಲೇ ಹೇಮಾವತಿ ಭಾಗಕ್ಕೆ ಬರುವಂತಹ ಕೆರೆಗಳಿಗೆ ನೀರು ಸರಬರಾಜಾಗುವಂತೆ ಮಾಡಬೇಕು ಮತ್ತು ಹೂಳೆತ್ತುವ ಕೆಲಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು. ಹೇಮಾವತಿ ನೀರು ಬಿಡುವ ಕೆರೆಗಳಿಗೆ ಮೀನುಗಾರಿಕೆ ಇಲಾಖೆಯಿಂದ ಟೆಂಡರ್ ಕರೆದು ಮೀನುಗಳನ್ನು ಸಾಕುವುದಕ್ಕೆ ಅವಕಾಶ ಕೊಡುತ್ತಾರೆ. ಮೀನು ಸಾಕಾಣಿಕೆಯ ಭರದಲ್ಲಿ ಸತ್ತಿರುವ ಕೋಳಿ ಕಸಗಳನ್ನು ಹಾಕುತ್ತಿದ್ದಾರೆ ಹಾಗೂ ಕೆರೆಗಳಿಗೆ ರಾಸಾಯನಿಕ ವಸ್ತುಗಳನ್ನು ಹಾಕಬಾರದು ಎಂದಿದ್ದರೂ ರಾಸಾಯನಿಕ ವಸ್ತುಗಳನ್ನು ಹಾಕಿ ಕೆರೆಗಳನ್ನು ಕಲುಷಿತಗೊಳಿಸುತ್ತಿದ್ದಾರೆ. ಇದರಿಂದಾಗಿ ಜಾನುವಾರುಗಳಿಗೆ ನೀರು ಕುಡಿಯುವುದಕ್ಕೆ ಆಗುತ್ತಿಲ್ಲ ಮತ್ತು ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದೆ ಹಾಗೂ ದುರ್ವಾಸನೆ ಕೂಡ ಬರುತ್ತಿದೆ. ನೀರು ಹಸಿರು ಬಣ್ಣಕ್ಕೆ ತಿರುಗುತ್ತಿದ್ದು, ತುಂಬಾ ಕಲುಷಿತಗೊಳ್ಳುತ್ತಿದೆ. ದಯಮಾಡಿ ಸಣ್ಣ ನೀರಾವರಿ ಸಚಿವರು ಇದರ ಬಗ್ಗೆ ವಿಶೇಷವಾಗಿ ಗಮನ ಹರಿಸಿ ಮೀನುಗಾರಿಕೆ ಇಲಾಖೆಯವರಿಗೆ ಹರಾಜು ಕರೆದು ಯಾರಿಗೆ ಮೀನುಗಾರಿಕೆಗೆ ಅವಕಾಶ ಮಾಡಿಕೊಡುತ್ತೀರೋ ಅವರಿಗೆ ಮೀನುಗಳಿಗೆ ಇಂತಿಂತಹ ಆಹಾರವನ್ನು ಇಷ್ಟು ಪ್ರಮಾಣದಲ್ಲಿಯೇ ಹಾಕಬೇಕು ಎಂದು ತಾಕೀತು ಮಾಡಿ ಹೇಳಬೇಕು, ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯಲ್ಲಿ major problem ಇದೆ. ಹೇಮಾವತಿ ನೀರು ಬರುತ್ತಿಲ್ಲ ಎಂದು ಎಲ್ಲರೂ ಗಲಾಟೆ ಮಾಡುತ್ತಿದ್ದಾರೆ. ಅಧಿವೇಶನ ಮುಗಿದ ಮೇಲೆ ಅವರನ್ನೆಲ್ಲಾ ಕರೆದು ಸಭೆ ನಡೆಸಿ ಸೂಕ್ತವಾದ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಸಿ.ಎಸ್. ಪುಟ್ಟರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಬೆಂಗಳೂರು ವ್ಯಾಪ್ತಿಯ ಅಗರ, ಮಡಿವಾಳ, ಹೆಬ್ಬಾಳ ಮತ್ತು ನಾಗವಾರ ಕೆರೆಗಳು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿದೆ. ಇನ್ನುಳಿದ ಕೆರೆಗಳು ಸರೋವರ ಸಂರಕ್ಷಣಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುತ್ತವೆ. ಈ ಕೆರೆಗಳನ್ನು ಈಗಾಗಲೇ ನಮ್ಮ ಜವಾಬ್ದಾರಿಗೆ ಕೊಡಬೇಕೆಂಬ ನಿಟ್ಟಿನಲ್ಲಿ ಪ್ರಕ್ರಿಯೆ ಪ್ರಾರಂಭವಾಗಿದೆ. ಅದನ್ನು ನಮ್ಮ ಸುಪರ್ದಿಗೆ ತೆಗೆದುಕೊಳ್ಳುತ್ತೇವೆ. ನಿರ್ದಿಷ್ಟವಾಗಿ ನಿಮಗೆ ತಿಳಿದ ಹಾಗೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಯಾವುದಾದರೂ ಪ್ರಕರಣಗಳಿದ್ದರೆ ಅದನ್ನು ನಮಗೆ ತಿಳಿಸಿದರೆ ತಕ್ಷಣವೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಈಗಲೇ ಸೂಚನೆ ಕೊಡುತ್ತೇನೆ. ವಿಶೇಷವಾಗಿ ಜಾಲಿಮರದ್ದು ಮತ್ತು ಹೂಳೆತ್ತುವ ಎಲ್ಲಾ ಕಾಮಗಾರಿಗಳನ್ನು ಅನುಷ್ಠಾನ ಮಾಡುವುದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ನಮ್ಮ ಇಲಾಖೆ ಸಿದ್ಧವಾಗಿದೆ. ಅಧಿವೇಶನ ಮುಗಿದ ಮೇಲೆ ಇಡೀ ರಾಜ್ಯಾದ್ಯಂತ ಹೊಸ ರೀತಿಯಲ್ಲಿ jungle clearance ಮತ್ತು ಕೆರೆಯ ಹೂಳೆತ್ತುವ ಕ್ರಮಗಳನ್ನು ಮಾಡುತ್ತೇವೆ. ಹಾಗೆಯೇ ಮಾನ್ಯ ಸದಸ್ಯರು ಹೇಳಿದ ರೀತಿ ಮುಂದಿನ ದಿನಗಳಲ್ಲಿ ಹೆಚ್ಚಿನ ರೀತಿ ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯಾಪ್ತಿಗೆ ಬರುವಂತಹ ಕೆರೆಗಳನ್ನು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಅದರಲ್ಲಿಯೂ ತುಮಕೂರು ಜಿಲ್ಲೆಗೆ ಒತ್ತು ಕೊಟ್ಟು ಕೆಲಸ ಮಾಡುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 877**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೆ. ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬಹುಶಃ ಅಧಿಕಾರಿಗಳು ತಮ್ಮ ಕಡತದಲ್ಲಿರುವ ಉತ್ತರಗಳನ್ನು ಕೊಟ್ಟಿದ್ದಾರೆಂದು ಕಾಣುತ್ತದೆ. ಬೆಳ್ತಂಗಡಿ ತಾಲ್ಲೂಕಿನ ತೆಂಕಕಾರಂದೂರು ಗ್ರಾಮದ ಗಿಳಿಕಾಪು ಎಂಬಲ್ಲಿ ಕಿಂಡಿ ಅಣೆಕಟ್ಟು ಕಾಮಗಾರಿ ಪೂರ್ಣಗೊಂಡಿದೆ ಎಂದು ಹೇಳಿದ್ದಾರೆ. ಇದು 2005-06ರಲ್ಲಿ ಪ್ರಾರಂಭವಾದ ಕಾಮಗಾರಿಯಾಗಿದೆ. ಅಂದಿನಿಂದ ಇಂದಿನವರೆಗೂ ಅದು ಸಂಪೂರ್ಣವಾಗಿಲ್ಲ, ಹಲಗೆಯನ್ನು ಕೂಡ ಹಾಕಿಲ್ಲ. ಅದರಿಂದ ಒಂದು ತೊಟ್ಟು ನೀರು ಕೂಡ ಯಾವುದೇ ರೈತರಿಗೆ ಹರಿದಿಲ್ಲ. ಬೆಳ್ತಂಗಡಿ ತಾಲ್ಲೂಕು ಕಸಬಾ ಗ್ರಾಮದ ಬೆಳ್ತಂಗಡಿ ಪಟ್ಟಣ ಪಂಚಾಯತ್‌ನಲ್ಲಿರುವಂತಹ ಒಂದು ಕಿಂಡಿ ಅಣೆಕಟ್ಟು, ಇಲ್ಲಿ ಈಗ ಲ್ಯಾಲ ಗ್ರಾಮದ ರಾಘವೇಂದ್ರ ಮಠದ ಬಳಿ ಸೋಮಾವತಿ ನದಿಗೆ ಕಿಂಡಿ ಅಣೆಕಟ್ಟು ನಿರ್ಮಾಣ ಎಂದು ಒಂದು ಕಾಮಗಾರಿಯನ್ನು ಮಾಡಿದ್ದಾರೆ, ಅದನ್ನು ಇನ್ನೂ ಪ್ರಾರಂಭಿಸಿಲ್ಲ. ಅದಕ್ಕಿಂತ ನೂರು ಮೀಟರ್ ಕೆಳಗಡೆ ಒಂದು ಕಿಂಡಿ ಅಣೆಕಟ್ಟನ್ನು ರಚನೆ ಮಾಡಿದ್ದಾರೆ. ಬಹುಶಃ ಈ ಪಟ್ಟಿಯಲ್ಲಿ ಅದು ಕಾಣುತ್ತಿಲ್ಲ. ಅದು ಕೂಡ 2005-06ನೇ ಸಾಲಿನ ಕಿಂಡಿ ಅಣೆಕಟ್ಟಾಗಿದ್ದು ಕಾಮಗಾರಿ ಪ್ರಾರಂಭವಾಗಿದೆ. ಅದು ಕೂಡ ಇವತ್ತಿನವರೆಗೆ ಪೂರ್ಣವಾಗಿಲ್ಲ ಮತ್ತು ಅದರಿಂದ ಯಾವ ರೈತರಿಗೂ ಯಾವುದೇ ಪ್ರಯೋಜನವಾಗಿಲ್ಲ. ಈ ಬಗ್ಗೆ ಗುತ್ತಿಗೆದಾರರ ಮೇಲೆ ಏನಾದರೂ ತನಿಖೆ ನಡೆದಿದೆಯೇ? ಇಲ್ಲದಿದ್ದರೆ ಕೂಡಲೇ ತನಿಖೆ ನಡೆಸಬೇಕು ಮತ್ತು ಅದು ಇನ್ನೂ ಏಕೆ ಸಂಪೂರ್ಣಗೊಂಡಿಲ್ಲ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಸಿ.ಎಸ್. ಪುಟ್ಟರಾಜು:-** ಮಾನ್ಯ ಸಭಾಪತಿಯವರೇ, ಪಶ್ಚಿಮವಾಹಿನಿ ಯೋಜನೆಯು ಬಹು ಮುಖ್ಯವಾಗಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಗೆ ಸರಣಿ ಕಿಂಡಿ ಅಣೆಕಟ್ಟನ್ನು ನಿರ್ಮಿಸುವುದು, ಕುಡಿಯುವ ನೀರು ಮತ್ತು ಕೃಷಿಗೆ ಹೆಚ್ಚಿನ ಸೌಲಭ್ಯ ಒದಗಿಸುವಂತಹ ಜವಾಬ್ದಾರಿಯನ್ನು ನಿರ್ವಹಣೆ ಮಾಡುವುದಕ್ಕೆ ಸರ್ಕಾರ ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ಬಹಳ ವಿಶೇಷವಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ 2001 ರಿಂದ ಇಲ್ಲಿಯವರೆಗೆ 43 ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಅದರಲ್ಲಿ ಈಗಾಗಲೇ 41

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಿಂಡಿ ಅಣೆಕಟ್ಟುಗಳು ಪೂರ್ಣಗೊಂಡಿರುತ್ತದೆ. ಮಾನ್ಯ ಸದಸ್ಯರು ಹೇಳಿದ ರೀತಿ ಕಾಶಿಪಟ್ನ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 2015-16ರಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಈ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದು, ನೀರು ಕಡಿಮೆಯಾಗುತ್ತಿದ್ದ ಹಾಗೆ ಡಿಸೆಂಬರ್ ತಿಂಗಳಿನ ಕೊನೆಯ ಭಾಗಕ್ಕೆ ಅದನ್ನು ಪ್ರಾರಂಭ ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ಇಲಾಖೆಯ ವತಿಯಿಂದ ಇಟ್ಟುಕೊಂಡಿದ್ದೇವೆ. ಅದೇ ರೀತಿ ಲ್ಯಾಲ ಗ್ರಾಮದ ಹತ್ತಿರ 2016-17ರಲ್ಲಿ 85 ಲಕ್ಷ ರೂಪಾಯಿ ಅನುದಾನದಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದು ಮೇಲ್ಕಂಡ ಎರಡು ಕಾಮಗಾರಿಗಳನ್ನೂ ಕೂಡ ಡಿಸೆಂಬರ್ ಅಂತ್ಯಕ್ಕೆ ಪ್ರಾರಂಭ ಮಾಡಬೇಕೆಂಬ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ನೀರು ಕಡಿಮೆಯಾಗುತ್ತಿದ್ದ ಹಾಗೆ ಎರಡೂ ಕಾಮಗಾರಿಗಳನ್ನು ಮುಗಿಸಿಕೊಡುವ ಜವಾಬ್ದಾರಿಯನ್ನು ನಿರ್ವಹಿಸುತ್ತೇವೆ ಎಂಬ ಮಾತನ್ನು ಹೇಳುತ್ತಾ, ಇಲ್ಲಿಯವರೆಗೆ ಬೆಳ್ತಂಗಡಿ ತಾಲ್ಲೂಕಿಗೆ ಈ ಕಾಮಗಾರಿಗಳಿಗೆ ಒಟ್ಟು 21 ಕೋಟಿ 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಹಿಂದೆ ಕಟ್ಟಿರುವ ಅಣೆಕಟ್ಟಿಗೆ ಗೇಟ್ ಇಲ್ಲ ಎಂಬುದನ್ನು ನಮ್ಮ ಗಮನಕ್ಕೆ ತಂದಿದ್ದೀರಿ, ನಿರ್ದಿಷ್ಟವಾಗಿ ಆ ಗೇಟನ್ನು ಅಳವಡಿಸಿಕೊಡುವ ಕಾಮಗಾರಿಗೆ ಇಂದೇ ಹಣವನ್ನು ಬಿಡುಗಡೆ ಮಾಡಿ ಅದನ್ನು ಕೈಗೆತ್ತಿಕೊಳ್ಳುವಂತೆ ಸೂಚನೆ ಕೊಡುತ್ತೇನೆ.

**ಶ್ರೀ ಕೆ. ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಇನ್ನೊಂದು ತೆಂಕಕಾರಂದೂರು ಗ್ರಾಮದ ಗಿಳಿಕಾಪು ಕಿಂಡಿ ಅಣೆಕಟ್ಟು ಕೂಡ 2005-06ನೇ ಸಾಲಿನ ಕಾಮಗಾರಿಯಾಗಿದೆ, ಅದು ಕೂಡ ಪೂರ್ಣಗೊಂಡಿಲ್ಲ ಹಾಗೂ ಅದರಿಂದ ರೈತರಿಗೆ ಯಾವುದೇ ಪ್ರಯೋಜನವಾಗಿಲ್ಲ. ಅದನ್ನು ಕೂಡ ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಎಸ್.ಪುಟ್ಟರಾಜು:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ತನಿಖೆ ಮಾಡಿ ತಕ್ಷಣವೇ ಕ್ರಮ ಕೈಗೊಳ್ಳುವಂತಹ ಕೆಲಸವನ್ನು ಮಾಡುತ್ತೇನೆ.

(ಮುಂದು. . .

(517) 18-12-2018/01-00/ಕೆಹೆಚ್-ಎಂಡಿ

(ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 900**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಉತ್ತರವನ್ನು ಲಗತ್ತಿಲಾಗಿದೆ)

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿ 1136 ತಜ್ಞ ವೈದ್ಯರುಗಳ ಹುದ್ದೆ ಖಾಲಿ ಇದೆ ಎಂದು ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ ಕೊಟ್ಟಿದ್ದಾರೆ. 134 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಇಷ್ಟು ಖಾಲಿ ಹುದ್ದೆಗಳು ಇದ್ದರೂ ಕೂಡ ಯಾವ ರೀತಿಯಲ್ಲಿ ಇಲಾಖೆಯನ್ನು ನಡೆಸುತ್ತಾರೆ ಎಂಬುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಮೊನ್ನೆಯ ದಿವಸ ನಡೆದಂತಹ ಘಟನೆಯಲ್ಲಿ ವೈದ್ಯರ ಕೊರತೆ ಎಷ್ಟಿದೆ ಎಂಬುದರ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ಬಂದಿರುತ್ತದೆ. On-call basis ಮೇಲೆ ಎಷ್ಟು ಜನ ತಜ್ಞ ವೈದ್ಯರನ್ನು ತುಂಬಿಕೊಳ್ಳಲಾಗಿದೆ. ಏಕೆಂದರೆ, ಇದರ ಬಗ್ಗೆ ದಿನಾಂಕ: 20-05-2016 ರಲ್ಲಿ On-call basis ಮೇಲೆ ತಜ್ಞ ವೈದ್ಯರನ್ನು ತುಂಬಿಕೊಳ್ಳುತ್ತೇವೆ ಎಂದು ಒಂದು ಆದೇಶವನ್ನು ಮಾಡಲಾಗಿದೆ. ಅದರಲ್ಲಿ ಎಷ್ಟು ಜನರನ್ನು ತುಂಬಿಕೊಳ್ಳಲಾಗಿದೆ ಮತ್ತು ಆಯಾಯ ಜಿಲ್ಲಾಧಿಕಾರಿಗಳಿಗೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಯವರಿಗೆ ಸಾಮಾನ್ಯ ವೈದ್ಯಾಧಿಕಾರಿಗಳನ್ನು ತುಂಬಿಕೊಳ್ಳುವುದಕ್ಕೆ ಮಾನ್ಯ ಸಚಿವರು ಏನು ಅಧಿಕಾರವನ್ನು ಕೊಟ್ಟಿದ್ದಾರೆ? ಅದರಲ್ಲಿ ಎಷ್ಟು ಜನ ವೈದ್ಯಾಧಿಕಾರಿಯನ್ನು ತುಂಬಿಕೊಳ್ಳಲಾಗಿದೆ? ಜೊತೆಗೆ ದಿನಾಂಕ: 01-12-2018 ರಂದು ಇದರ ಬಗ್ಗೆ ಹೆಚ್ಚುವರಿ ಪಟ್ಟಿಯನ್ನು ಕೊಡಬೇಕೆಂಬುದರ ಬಗ್ಗೆ ಕೆ.ಪಿ.ಎಸ್.ಸಿ.,ಯವರಿಗೆ ಪತ್ರವನ್ನು ಕೊಡಲಾಗಿದೆ. ಅವರು ಹೆಚ್ಚುವರಿ ಪಟ್ಟಿಯನ್ನು ಕೊಟ್ಟರೆ, ನೇಮಕಾತಿಯನ್ನು ಮಾಡಿಕೊಳ್ಳುತ್ತೀರಾ, ಏಕೆಂದರೆ, ಇದುವರೆಗೂ ಕೆ.ಪಿ.ಎಸ್.ಸಿ., ಮತ್ತು ಕೆ.ಇ.ಎ., ರವರು ಕೊಟ್ಟಿರುವಂತಹ ಹೆಚ್ಚುವರಿ ಪಟ್ಟಿಯನ್ನು ತೆಗೆದುಕೊಂಡು ಯಾವ ಇಲಾಖೆಯಲ್ಲಿಯೂ ಕೂಡ ಹುದ್ದೆಗಳನ್ನು ತುಂಬಿಕೊಂಡಿಲ್ಲ. ಸುಮ್ಮನೆ ಇದು ಕಣ್ಣು ಒರೆಸುವ ತಂತ್ರವಾಗಿದೆ. ಇದಕ್ಕೆ ಮಾನ್ಯ ಸಚಿವರು ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು.

**ಶ್ರೀ ಶಿವಾನಂದ ಪಾಟೀಲ:-** ಮಾನ್ಯ ಸಭಾಪತಿಯವರೇ, "ಯಾವ ಕಾಲಮಿತಿಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ನೇಮಕ ಮಾಡಲಾಗುವುದು" ಎಂದು ಮಾನ್ಯ ಪುಟ್ಟಣ್ಣನವರು ಗಂಭೀರವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಪ್ರಾಯಶಃ ಇಲ್ಲಿಯವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು ಯಾರಾಗಿದ್ದಾರೋ, ಕಾಲಮಿತಿಯೊಳಗೆ ವೈದ್ಯರ ಹುದ್ದೆಗಳನ್ನು ತುಂಬುವುದಕ್ಕೆ ಅವರಿಂದ ಆಗಿರುವುದಿಲ್ಲ ಮತ್ತು ಮುಂದೆಯೂ ಸಹ ವೈದ್ಯರ ಹುದ್ದೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತುಂಬುವುದಕ್ಕೆ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ಇದಕ್ಕೆ ಕಾರಣವೇನೆಂದರೆ, ವೈದ್ಯರ ಕೊರತೆ ಇದು ಕೇವಲ ರಾಜ್ಯದಲ್ಲಿಲ್ಲ, ಇಡೀ ದೇಶದಲ್ಲಿಯೇ ಇದೆ. ಜೊತೆಗೆ ಬಹಳಷ್ಟು ಪ್ರಯತ್ನ ಮಾಡಿ, ಈ ಬಾರಿ 2003ನೇ ಸಾಲಿನಿಂದ ತಜ್ಞ ವೈದ್ಯರು ಮತ್ತು ಸಾಮಾನ್ಯ ವೈದ್ಯರ ಹುದ್ದೆಗೆ ಎಷ್ಟು ಜನರನ್ನು ಕರೆಯಲಾಗುತ್ತದೆ, ಅದಕ್ಕೆ ನೂರಕ್ಕೆ ನೂರರಷ್ಟು ನೇಮಕಾತಿಯಾಗುವುದಿಲ್ಲ. ಶೇಕಡಾ 100 ರಲ್ಲಿ 25 ರಷ್ಟು ಜನರು ನೇಮಕಾತಿ ಹೊಂದಿದರೆ, ಅದು ನಮ್ಮ ದೊಡ್ಡ ಪುಣ್ಯ ಎಂದು ಭಾವಿಸುತ್ತೇವೆ. ಈ ಬಾರಿ 382 ತಜ್ಞ ವೈದ್ಯರ ಹುದ್ದೆಗೆ ಕರೆಯಲಾಗಿತ್ತು. ಅದರಲ್ಲಿ ವೈದ್ಯರ ಹುದ್ದೆಗೆ ಸೇರುತ್ತೇವೆಂದು 250 ಜನ willingness express ಮಾಡಿದ್ದರು. ಅದರಲ್ಲಿ 136 ಜನರು ವೈದ್ಯರ ಹುದ್ದೆಗೆ ಬಂದು ಸೇರಿದರು. ಈ ರೀತಿಯ ಸಮಸ್ಯೆ ನಿರಂತರವಾಗಿ ಇರುತ್ತದೆ. ಇದನ್ನು ಮಾನ್ಯ ಸದಸ್ಯರು ತಲೆಯಿಂದ ತೆಗೆಯಬೇಕು. ಇದರ ಬಗ್ಗೆ ಪ್ರಯತ್ನ ಏನು ಮಾಡಿದ್ದೇವೆ ಎಂಬುದನ್ನು ಮಾನ್ಯ ಸದಸ್ಯರಿಗೆ ಹೇಳಬೇಕಾಗುತ್ತದೆ? ಈಗ On-call basis ಮೇಲೆ ತುರ್ತಾದ ಸಂದರ್ಭದಲ್ಲಿ ಜಿಲ್ಲಾ ಕೇಂದ್ರದಲ್ಲಿ ತಜ್ಞ ವೈದ್ಯರುಗಳು ಇರುತ್ತಾರೆ. ಅಲ್ಲಿ DHO (District Health Officer) or District Surgeon ರನ್ನು ಕರೆಸಿಕೊಂಡು ಉಪಯೋಗ ಮಾಡಿಕೊಳ್ಳುವಂತಹದ್ದು ಒಂದು ಅವಕಾಶ ಮತ್ತು ಕೆಲವು ವೈದ್ಯರು ತಮ್ಮ ಜಿಲ್ಲೆಯಲ್ಲಿ ಮಾತ್ರ ಸೇವೆ ಮಾಡುತ್ತೇವೆ ಎನ್ನುವಂತಹ ಮನೋವೃತ್ತಿಯನ್ನು ಹೊಂದಿರುತ್ತಾರೆ. ಅವರು ಬೇರೆ ಜಿಲ್ಲೆಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಅದರಲ್ಲಿಯೂ ಕೂಡ ಜಿಲ್ಲಾಧಿಕಾರಿಗಳು ಅಂತಹವರಿಗೆ ಒಂದು ಅವಕಾಶ ಕೊಟ್ಟು ನೇಮಕಾತಿ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತದೆ. ಇದಲ್ಲದೆ, ಎನ್.ಹೆಚ್.ಎಂ., ಅಡಿಯಲ್ಲಿ ನೇಮಕಾತಿಯನ್ನು ಮಾಡುತ್ತೇವೆ. ಇದರ ಬಗ್ಗೆ ನಿರ್ದಿಷ್ಟವಾದ ಸಂಖ್ಯೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ವೈದ್ಯರ ಹುದ್ದೆಗೆ ನಿನ್ನೆಯ ದಿವಸ ಒಬ್ಬ ಸೇರಿರುತ್ತಾನೆ. ಇನ್ನೊಬ್ಬ ರಾಜೀನಾಮೆ ಕೊಟ್ಟು ಹೋಗುತ್ತಾನೆ. ಕೊನೆಗೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ? ಇಂತಹ ಸಂದರ್ಭಗಳು ಉದ್ಭವಿಸಿದಾಗ, ಇದರ ಬಗ್ಗೆ ಮಾನ್ಯ ಡಿ.ಕೆ.ಶಿವಕುಮಾರ್‌ರವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ನಮ್ಮ ಇಲಾಖೆಯಿಂದ 14 ವೈದ್ಯಕೀಯ ಕಾಲೇಜುಗಳಿಗೆ ಕೆಲವು ವೈದ್ಯರುಗಳು ಹೋಗಿದ್ದಾರೆ. ಇವತ್ತಿನ ದಿವಸ 159 ಜನ ವೈದ್ಯರು absorb ಆಗಿದ್ದಾರೆ. ಇನ್ನೂ 153 ಜನ ವೈದ್ಯರು ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರನ್ನು ಇಲ್ಲಿಗೆ ಬನ್ನಿ ಎಂದು ಹೇಳಿದರೆ ಇವತ್ತಿನ ದಿವಸ ವೈದ್ಯಕೀಯ ಕಾಲೇಜುಗಳನ್ನು ಮುಚ್ಚಿ ಹಾಕಬೇಕಾಗುತ್ತದೆ. ಏಕೆಂದರೆ, MCI (Medical Council of India) inspectionಗೆ ಅವರಿಗೂ ಕೂಡ ಅನಿವಾರ್ಯವಿರುತ್ತದೆ. ಇಂತಹ ಅನೇಕ ಸಮಸ್ಯೆ ಇರುವುದರಿಂದ, ಮಾನ್ಯ ಸದಸ್ಯರು ಹೇಳಿದ ಹಾಗೆ ಈ ತಜ್ಞರ ನೇಮಕಾತಿಗೆ ಕೆ.ಪಿ.ಎಸ್.ಸಿ., ಯಲ್ಲಿ ಮೊದಲ ಬಾರಿಗೆ 2003ನೇ ಸಾಲಿನಿಂದ ಇಲ್ಲಿಯವರೆಗೆ reserve list ಅನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

operate ಮಾಡಿರಲಿಲ್ಲ. ಇದರ ಬಗ್ಗೆ ಮೊದಲ ಬಾರಿಗೆ ಕೇಳುತ್ತಿದ್ದೇವೆ. ಅವರ formalities ಸಿಕ್ಕಾಪಟ್ಟೆ ಇದೆ. ಫಾರಂ-7ನ್ನು ತುಂಬಿಕೊಡುವುದು, ಅದು roster violation ಆಗಬಾರದು. ಈ ಎರಡು ಷರತ್ತುಗಳನ್ನು meet out ಮಾಡಿ ಇನ್ನು merit list ನಲ್ಲಿ ಕೆಳಗಿದ್ದಾರೆ, cut-off list ನಲ್ಲಿ ಶೇಕಡ 80ಕ್ಕೆ ನಿಂತಿದ್ದರೆ, ಅದರಲ್ಲಿ ಯಾರಾದರೂ ಶೇಕಡಾ 75 ಮತ್ತು 76 ರಷ್ಟು ಅಂಕಗಳನ್ನು ತೆಗೆದಿರುವ ಹುಡುಗ ಬರುವುದಕ್ಕೆ ತಯಾರಿದ್ದರೆ, ಅವನಿಗೆ ಒಂದು ಅವಕಾಶವನ್ನು ಕೊಡಿ ಎಂದು ವಿನಂತಿ ಮಾಡಿಕೊಂಡಿದ್ದೇವೆ. ಇದಕ್ಕೆ ಕೆ.ಪಿ.ಎಸ್.ಸಿ., ಯವರು ಒಪ್ಪಿಕೊಂಡಿದ್ದಾರೆ. ಈ ಸ್ತರವನ್ನು ಶೇಕಡಾ 50 ರಷ್ಟು operate ಮಾಡುತ್ತೇವೆಂದು ಮೊದಲ ಬಾರಿಗೆ ಒಪ್ಪಿಕೊಂಡಿದ್ದಾರೆ. ಇದು ಅದಷ್ಟು ಬೇಗ ಆಗುತ್ತದೆ. ಇದಾದ ಮೇಲೆ ನೇಮಕಾತಿಯನ್ನು ಕೂಡ ಮಾಡುತ್ತೇವೆ ಎನ್ನುವಂತಹ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಬಿಟ್ಟು DNB (Diplomate National Board) courses ಗಳನ್ನು ಸಹ ಪ್ರಾರಂಭ ಮಾಡಿದ್ದು, ಇದನ್ನು ಕಲಿಯುವುದಕ್ಕೆ ಎಂ.ಬಿ.ಬಿ.ಎಸ್., ತೇರ್ಗಡೆ ಹೊಂದಿರುವಂತಹ 60 ಜನ ಹುಡುಗರು ಬರುತ್ತಾರೆ. ಇದು Post Graducation course. ನಮ್ಮಲ್ಲಿ 3 ವರ್ಷಗಳ ಕಾಲ ನಿರಂತರ ಸೇವೆಯನ್ನು ಒದಗಿಸುತ್ತಾರೆ. ಅವರಿಗೆ 30,000 ರೂಪಾಯಿಗಳನ್ನು ಕೊಡುತ್ತೇವೆ. ಇದರಲ್ಲಿ remuneration ಬಹಳ ಕಡಿಮೆ ಇರುತ್ತದೆ. ಆ 30,000 ರೂಪಾಯಿಗೆ ಒಬ್ಬ ಎಂ.ಬಿ.ಬಿ.ಎಸ್., ವೈದ್ಯರು ಬರುತ್ತಾರೆ. ಇವತ್ತಿನ ದಿವಸ 60 ಜನ ಹುಡುಗರನ್ನು ಕರೆಯಲಾಗಿತ್ತು. ಅದರಲ್ಲಿ ಈಗಾಗಲೇ 51 ಜನ ಹುಡುಗರು ಸೇರಿದ್ದು, ಇವರು ಹೊಸಪೇಟೆ, ಬಳ್ಳಾರಿ, ಬಿಜಾಪುರ ಮತ್ತು ಬೇರೆ ಬೇರೆ ಜಿಲ್ಲೆಗಳ 6 ಕೇಂದ್ರಗಳಲ್ಲಿ DNB courses ನ್ನು ಪ್ರಾರಂಭ ಮಾಡಿದ್ದೇವೆ. ಅಲ್ಲಿಯೂ ಕೂಡ ಹುಡುಗರು ನೇಮಕಾತಿಯನ್ನು ಹೊಂದಿ 3 ವರ್ಷಗಳ ಕಾಲ ನಮಗೆ ಸೇವೆಯನ್ನು ಒದಗಿಸುತ್ತಿದ್ದಾರೆ. ಜೊತೆಗೆ CPSC courses ನ್ನು ಮಾಡುತ್ತಿದ್ದೇವೆ. ಅಲ್ಲಿಯೂ ಕೂಡ 37 ಸೀಟ್‌ಗಳು ಭರ್ತಿಯಾಗಿದ್ದು, ಅಲ್ಲೂ ಕೂಡ ವೈದ್ಯರ ಕೊರತೆಯನ್ನು ನೀಗಿಸುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಿಗೆ ಹೇಳಬೇಕೆಂದರೆ, ಇಷ್ಟು ವೈದ್ಯರ ಕೊರತೆ ಇದ್ದರೂ ಕೂಡ ಸರ್ಕಾರಿ ಆಸ್ಪತ್ರೆಯಲ್ಲಿ IPD (Inpatient Department) and OPD (Out Patient Department) rate ಚೆನ್ನಾಗಿದೆ. ಮಾನ್ಯ ಸದಸ್ಯರಿಗೆ ಒಂದು ವರ್ಷದ ಅಂಕಿ-ಅಂಶವನ್ನು ಕೊಡುತ್ತೇನೆ. 2016-17ನೇ ಸಾಲಿನಲ್ಲಿ 4.99 ಕೋಟಿ ರೋಗಿಗಳು ಆಸ್ಪತ್ರೆಗೆ ಬಂದಿದ್ದರೆ, ಅದೇ 2017-18ನೇ ಸಾಲಿನಲ್ಲಿ 6.55 ಕೋಟಿ ಒಳ ರೋಗಿಗಳು ಜಾಸ್ತಿಯಾಗಿದ್ದಾರೆ. ಅದೇ ರೀತಿ 2016-17ನೇ ಸಾಲಿನಲ್ಲಿ 7.94 ಕೋಟಿ ಹೊರ ರೋಗಿಗಳಿದ್ದರೆ, 2017-18ನೇ ಸಾಲಿನಲ್ಲಿ 9.44 ಕೋಟಿ ಹೊರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೋಗಿಗಳು ಜಾಸ್ತಿಯಾಗಿದ್ದಾರೆ. ಇಷ್ಟು ಕೆಲಸದ ಒತ್ತಡ ಇದ್ದರೂ ಕೂಡ ನಮ್ಮ ವೈದ್ಯರು ಸೇವೆಯನ್ನು ಒದಗಿಸುತ್ತಿದ್ದಾರೆ. ನಾವು ನಿಜವಾಗಿಯೂ ಅವರನ್ನು ಶ್ಲಾಘಿಸಬೇಕು. ಖಂಡಿತವಾಗಿಯೂ, ಈ ವೈದ್ಯರ ಕೊರತೆಯನ್ನು ನೀಗಿಸುವಂತಹ ಪ್ರಾಮಾಣಿಕ ಪ್ರಯತ್ನ ಸರ್ಕಾರ ಭವಿಷ್ಯದಲ್ಲಿ ಮಾಡುತ್ತದೆ ಎಂಬ ಭರವಸೆಯನ್ನು ನಾನು ಕೊಡುತ್ತೇನೆ. ಆದರೆ ಇದು ನಿರಂತರ ಪ್ರಕ್ರಿಯೆಯಾಗಿದ್ದು, ನಾನು ಶೇಕಡಾ 100 ರಷ್ಟು ಭರವಸೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ವೈದ್ಯಕೀಯ ಕಾಲೇಜುಗಳು ಎಷ್ಟು ಜಾಸ್ತಿಯಾಗುತ್ತವೆ. ಅಷ್ಟು ಜನ ವೈದ್ಯರುಗಳು ಬರುತ್ತಾರೆ? ಇನ್ನು ಒಂದು ವಿಚಾರವೇನೆಂದರೆ, ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಸರ್ಕಾರಿ ಕೋಟಾದಲ್ಲಿ ವೈದ್ಯರು ಯಾರು ತೇರ್ಗಡೆ ಹೊಂದುತ್ತಾರೆ. ಅವರಿಗೆ ಗ್ರಾಮೀಣ ಸೇವೆಯನ್ನು ಕಡ್ಡಾಯ ಮಾಡಿದರೆ, ಇದಕ್ಕೆ President's accent ಸಿಕ್ಕಿದರೆ, ಖಂಡಿತವಾಗಿಯೂ ಈ ದೇಶದಲ್ಲಿ ವೈದ್ಯರ ಕೊರತೆ ನೀಗುತ್ತದೆ. ಆ ರೀತಿಯ ಪ್ರಯತ್ನ ಮಾಡೋಣವೆಂದು ಹೇಳಿ ತಮಗೆ ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ವೈದ್ಯರಿಗೆ 30,000 ರೂಪಾಯಿಗಳ ಸಂಬಳವನ್ನು ಕೊಡುತ್ತೇವೆಂದು ಹೇಳುತ್ತಾರೆ. ಯಾರು 30,000 ರೂಪಾಯಿಗಳಿಗೆ ಬರುತ್ತಾರೆ.?

**ಶ್ರೀ ಶಿವಾನಂದ ಪಾಟೀಲ:–** ಮಾನ್ಯ ಸಭಾಪತಿಯವರೇ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ 64,000 ರೂಪಾಯಿಗಳ ಸಂಬಳವನ್ನು ಕೊಡುತ್ತೇವೆ. DNB courses ನ್ನು ಕಲಿಯುವಂತಹ ಹುಡುಗರು ಎಂ.ಬಿ.ಬಿ.ಎಸ್., ತೇರ್ಗಡೆ ಹೊಂದಿ, ಬೇರೆ ರಾಜ್ಯದಿಂದ ಇಲ್ಲಿಗೆ ಬಂದು ಕೋರ್ಸ್‌ಗಳನ್ನು ಕಲಿಯುತ್ತಿದ್ದಾರೆ. ಅಂತಹ ವಿದ್ಯಾರ್ಥಿಗಳಿಗೆ 30,000 ರೂಪಾಯಿಗಳ ಸಂಬಳವನ್ನು ಕೊಡಲಾಗುತ್ತದೆ ಎಂದು ಹೇಳಿದ್ದೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಹೊರ ರಾಜ್ಯದಿಂದ ತಜ್ಞ ವೈದ್ಯರುಗಳಿಗೆ Flight Ticket ಗಳನ್ನು ಮಾಡಿಸಿ, ವಾರಕ್ಕೆ 2 ದಿವಸಗಳು ಬಂದು ಹೋಗುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ನಾನು ಮಾನ್ಯ ಸಚಿವರಿಗೆ ಕೊಡುವಂತಹ ಸಲಹೆಯೇನೆಂದರೆ, ಸುಮಾರು 134 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ನಮ್ಮ ವೈದ್ಯಕೀಯ ಕಾಲೇಜುಗಳು ಉಳಿಯಬೇಕು. MCI ಯಿಂದ ಅವರಿಗೆ ಮಾನ್ಯತೆ ಉಳಿದುಕೊಳ್ಳಬೇಕು. ಇದರ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ಇಲ್ಲಿಂದ ನಿಯೋಜನೆ ಮೇಲೆ ಕಳುಹಿಸಿದರೆ, ಅಲ್ಲಿ ಕೆಲಸ ಮಾಡುತ್ತಿರುತ್ತಾರೆ. ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆಗಳು ಖಾಲಿ ಬಿದ್ದಿರುತ್ತದೆ. ಇದನ್ನು ವೈದ್ಯಕೀಯ ಕಾಲೇಜುಗಳಿಗೆ ಕೊಟ್ಟು merge ಮಾಡಿ, ಇದರ ಬಗ್ಗೆ ನನ್ನ ಆಕ್ಷೇಪಣೆ ಮತ್ತು ತಕರಾರು ಇಲ್ಲ. ಕನಿಷ್ಠ ಪಕ್ಷ ಅದರಲ್ಲಿ merge ಮಾಡಿ, ಇಲ್ಲಿ ಹುದ್ದೆಗಳನ್ನು ತುಂಬಿಕೊಳ್ಳಿ. ತಾವು ನಿಯೋಜನೆ ಕೊಟ್ಟರೆ ಏನಾಗುತ್ತದೆ ಎಂದರೆ, ಅಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ, ಇಲ್ಲಿ ಹುದ್ದೆಗಳು ಖಾಲಿ ಇರುತ್ತದೆ. ಅದಕ್ಕೆ ದಯವಿಟ್ಟು, ನನ್ನ ಸಲಹೆಯೇನೆಂದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಎರಡು ಒಂದೇ.

(ಮುಂದು)

**(518) 18–12–2018 (1–10) ಎಸ್‌ಪಿಆರ್–ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪುಟ್ಟಣ್ಣ(ಮುಂದು):–**

ಆದ್ದರಿಂದ ದಯವಿಟ್ಟು ಆಯಾಯಾ ಜಿಲ್ಲೆಗಳಲ್ಲಿ ಯಾರ್ಯಾರು ಕೆಲಸ ಮಾಡಲು ಇಚ್ಛೆವ್ಯಕ್ತಪಡಿಸುತ್ತಾರೋ ಅಂತಹವರುಗಳಿಗೆ ಅಲ್ಲಿಯೇ ನೇಮಕಾತಿ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಆಗ ರಿಕ್ತ ಸ್ಥಾನಗಳು ಭರ್ತಿಯಾಗುತ್ತವೆ. ಗುತ್ತಿಗೆ ಆಧಾರದ ಮೇಲೆ ರಿಕ್ತ ಸ್ಥಾನಗಳನ್ನು ತುಂಬುವಂತಹ ವ್ಯವಸ್ಥೆಯನ್ನು ಮಾಡುತ್ತಿರುವುದು ಒಳ್ಳೆಯ ಹೆಜ್ಜೆಯಾಗಿದೆ. ಇದರ ಜೊತೆಗೆ ನನ್ನ ಸಲಹೆ ಏನೆಂದರೆ, ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುವವರಿಗೆ ಹೆಚ್ಚಿನ ವೇತನವನ್ನು ನೀಡುವಂತೆ ಮಾಡಿ. ಅವರುಗಳೆಲ್ಲರೂ ಎಂ.ಬಿ.ಬಿ.ಎಸ್. ಮತ್ತು ಸ್ನಾತಕೋತ್ತರ ಪದವಿಗಳನ್ನು ಮಾಡಿದ್ದಾರೆ. ಎಂ.ಬಿ.ಬಿ.ಎಸ್. ಪದವಿಯನ್ನು ಪೂರ್ಣಗೊಳಿಸಲು 5½ ವರ್ಷಗಳು ಬೇಕಾಗುತ್ತದೆ. ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಲು ಒಟ್ಟಾರೆಯಾಗಿ 8½ ಅಥವಾ 9 ವರ್ಷಗಳು ಬೇಕಾಗುತ್ತದೆ. ವೈದ್ಯಕೀಯ ಶಿಕ್ಷಣವನ್ನು ಪೂರ್ಣಗೊಳಿಸಲು ಹಲವಾರು ವರ್ಷಗಳು ಬೇಕಾಗುತ್ತದೆ. ಅಂತಹ ವೈದ್ಯರುಗಳಿಗೆ ನೀವು ಕಡಿಮೆ ವೇತನವನ್ನು ನೀಡಿದರೆ ಯಾರು ತಾನೆ ಕೆಲಸಕ್ಕೆ ಬರುತ್ತಾರೆ? ಸದರಿ ವೈದ್ಯರುಗಳು ಸರಿಯಾಗಿ ತಮ್ಮ ಜೀವನವನ್ನು ನಿರ್ವಹಣೆ ಮಾಡುವಂತಹ ಹಾಗೂ ಅವರನ್ನು ಆಕರ್ಷಿಸುವಂತಹ ವೇತನವನ್ನು ದಯಮಾಡಿ ನಿಗದಿ ಮಾಡಿ. ಇದಕ್ಕೆ ಮತ್ತಷ್ಟೂ ಆಕರ್ಷಿತಗೊಂಡು ಅವರುಗಳು ಬರಬಹುದು. ಹೀಗಾಗಿ ಹೆಚ್ಚಿನ ವೇತನವನ್ನು ನಿಗದಿ ಪಡಿಸಲಿಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಿ. ಇಂತಹ ವ್ಯವಸ್ಥೆಯು ನೇರವಾಗಿ ಬಡ ರೋಗಿಗಳಿಗೆ ತಲುಪುತ್ತದೆ. ಈ ನಿಟ್ಟಿನಲ್ಲಿ ಆಲೋಚನೆಯನ್ನು ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ಸಲಹೆಯೊಂದನ್ನು ನೀಡಲು ಬಯಸುತ್ತೇನೆ. ವೈದ್ಯರ ಕೊರತೆ ಇದೆ ಎಂದು ಪ್ರತಿ ಬಾರಿಯೂ ಸಹ ಈ ಸದನದಲ್ಲಿ ಚರ್ಚೆಯಾಗುತ್ತದೆ. ಗ್ರಾಮೀಣ ಭಾಗಗಳಿಂದ ಆಯ್ಕೆಗೊಂಡ ಶಾಸಕರುಗಳು ಈ ವಿಚಾರದಲ್ಲಿ ಒತ್ತಡವನ್ನು ಹಾಕುತ್ತಾರೆ. ಆದರೆ ಆಡಳಿತ ವ್ಯವಸ್ಥೆಯಲ್ಲಿ ಬಹಳಷ್ಟು ತಜ್ಞ ವೈದ್ಯರುಗಳನ್ನು ಅನ್ಯ ಸೇವೆಯ ಆಧಾರದ ಮೇಲೆ ವೈದ್ಯಕೀಯ ಶಿಕ್ಷಣ, ಪೊಲೀಸ್, ನಗರಾಭಿವೃದ್ಧಿ ಹಾಗೂ ಇನ್ನಿತರೆ ಇಲಾಖೆಗಳಿಗೆ ಹೋಗಿದ್ದಾರೆ. ಇಲಾಖೆಯಲ್ಲಿ ಅವರುಗಳ ಅವಶ್ಯಕತೆ ಹೆಚ್ಚಾಗಿ ಇದೆ. ಅವರುಗಳು ತಜ್ಞರೂ ಸಹ ಆಗಿದ್ದಾರೆ. ಅಂತಹ ತಜ್ಞರುಗಳಿಗೆ ವೇತನವನ್ನು ಹೊರತುಪಡಿಸಿ ಮಾಹೆಯಾನ 25,000/- ರೂಪಾಯಿಗಳಷ್ಟು ಭತ್ಯೆಯನ್ನೂ ಸಹ ನೀಡಲಾಗುತ್ತಿದೆ. ಆದರೆ ಅಂತಹ ತಜ್ಞ ವೈದ್ಯರುಗಳ ಸೇವೆಯ ಲಾಭಗಳು ಇಲಾಖೆಗೆ ದೊರೆಯುತ್ತಿಲ್ಲ. ಆಡಳಿತ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾಲ್ಲೂಕು ಅಧಿಕಾರಿ, ಜಿಲ್ಲಾ ಅಧಿಕಾರಿ, ಕಾರ್ಯಕ್ರಮ ಅಧಿಕಾರಿ, ಉಪ ನಿರ್ದೇಶಕ ರವರುಗಳೆಲ್ಲರೂ ಸಹ ತಜ್ಞರು ಆಗಿದ್ದಾರೆ. ಸದರಿ ತಜ್ಞರು ಜನರ ಆರೋಗ್ಯದ ಸೇವೆಗಾಗಿ ಬಂದರೆ ಜನರು ಹೆಚ್ಚು ಆರೋಗ್ಯವಂತರಾಗುತ್ತಾರೆ. ಆಡಳಿತಕ್ಕಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು. ಇದರಿಂದಾಗಿ ತಜ್ಞರ ಸೇವೆಯು ಜನರಿಗೆ ದೊರೆತಂತಾಗುತ್ತದೆ ಹಾಗೂ ಅವರುಗಳಿಗೆ ನೀಡುವ ಭತ್ಯೆಗೂ ಸಹ ನ್ಯಾಯ ದೊರಕಿದಂತಾಗುತ್ತದೆ. ಈ ರೀತಿಯಾಗಿ ಆಡಳಿತ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿಕೊಂಡರೆ ಇಲಾಖೆಗೆ ಹೆಚ್ಚು ಲಾಭ ದೊರೆತು ಜನರಿಗೆ ವೈದ್ಯರ ಸೇವೆ ಸಿಗುತ್ತದೆ.

**ಶ್ರೀ ಶಿವಾನಂದ ಪಾಟೀಲ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣರವರು ಹೇಳಿದಂತೆ ಬೇರೆ ರಾಜ್ಯಗಳಲ್ಲಿ ತಜ್ಞರಿಗೆ ಹೆಚ್ಚಿನ ಭತ್ಯೆಗಳನ್ನು ನೀಡಿ ವಾಯುಯಾನದ ವೆಚ್ಚಗಳನ್ನೂ ಸಹ ಭರಿಸುವ ವಿಷಯವು ನನಗೆ ತಿಳಿದಿಲ್ಲ. ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದರೆ ನಾನು ಖಂಡಿತವಾಗಿಯೂ ಸಹ ಪರಿಶೀಲನೆ ಮಾಡುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಅಂತಹ ಪ್ರೊಫೆಸರ್‌ಗಳ ಕೊರತೆ ಇರುವುದರಿಂದ ಅಂತಹವರುಗಳನ್ನು ಬೇರೆ ರಾಜ್ಯಗಳಿಂದ ಕರೆಸುತ್ತಿದ್ದಾರೆ. ಆದರೆ ಅದೇ ರೀತಿಯಲ್ಲಿ ನೀವೂ ಸಹ ಪ್ರೊಫೆಸರ್‌ಗಳನ್ನು ಕರೆಸಿ ಎಂಬುದಾಗಿ ನಾನು ಹೇಳುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರವಲು ಸೇವೆಯ ಆಧಾರದ ಮೇಲೆ ಬೇರೆ ಇಲಾಖೆಗಳಿಗೆ ಹೋದವರನ್ನು ಅಲ್ಲಿಯೇ ವಿಲೀನಗೊಳಿಸುವಂತೆ ಮಾಡಿ. ಇಲಾಖೆಯಲ್ಲಿರುವ ರಿಕ್ತ ಸ್ಥಾನಗಳನ್ನು ಭರ್ತಿಮಾಡಿ.

**ಶ್ರೀ ಶಿವಾನಂದ ಪಾಟೀಲ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯವು ನನ್ನ ಇಲಾಖಾ ವ್ಯಾಪ್ತಿಗೆ ಒಳಪಡುವುದಿಲ್ಲ. ಆದರೆ ಅವರು ನೀಡಿರುವ ಮತ್ತೊಂದು ಸಲಹೆಯ ಬಗ್ಗೆ ಖಂಡಿತವಾಗಿಯೂ ಪರಿಶೀಲನೆ ಮಾಡಲಾಗುವುದು. ಮಾನ್ಯ ಆಯನೂರು ಮಂಜುನಾಥ್ ರವರು ನೀಡಿರುವ ಸಲಹೆಗೆ ನನ್ನ ಉತ್ತರವೇನೆಂದರೆ, ಕಾರಾಗೃಹ ಇಲಾಖೆಗೆ ಮಂಜೂರಾದ ಹುದ್ದೆಯನ್ನು ಹಿಂಪಡೆದರೆ, ಕಾರಾಗೃಹ ಇಲಾಖೆಯವರು ಅದನ್ನು ಒಪ್ಪಿಕೊಳ್ಳುವುದಿಲ್ಲ. ಅಲ್ಲಿ ತುರ್ತು ಪರಿಸ್ಥಿತಿ ಇದ್ದಾಗ ವೈದ್ಯರುಗಳು ಹೋಗುತ್ತಾರೆ. ಕಾರ್ಪೋರೇಷನ್‌ಗಳಲ್ಲಿ ವೈದ್ಯರ ಅವಶ್ಯಕತೆ ಇದ್ದು, ಅವರುಗಳು ಅಲ್ಲಿಗೆ ಹೋಗಲೇ ಬೇಕಾಗುತ್ತದೆ. Clinical side ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೋಗ್ರಾಂ ಆಫೀಸರ್‌ಗಳ ಸೇವೆಗಳನ್ನು ಅಲ್ಲಿಂದ ಹಿಂಪಡೆಯುವ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆ. ಈ ವಿಚಾರದಲ್ಲಿ ಖಂಡಿತವಾಗಿಯೂ ಅಗತ್ಯ ಕ್ರಮಗಳನ್ನು ತೆಗೆದುಕೊಂಡರೆ, ಸ್ವಲ್ಪ ಮಟ್ಟಿಗಾದರೂ ಸರಿ ವೈದ್ಯರ ಕೊರತೆ ಕಡಿಮೆಯಾಗಬಹುದು. ಇದು ಪರಿಶೀಲನಾ ಹಂತದಲ್ಲಿದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಕಾರಾಗೃಹ, ಮುನಿಸಿಪಾಲಿಟಿ ಕಾರ್ಪೋರೇಷನ್ ಹಾಗೂ ಇತ್ಯಾದಿ ಇಲಾಖೆಗಳಿಗೆ ಪ್ರತ್ಯೇಕವಾಗಿ ನೇಮಕಾತಿ ಮಾಡಿ. ನಮ್ಮ ಊರಿನ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವ್ಯದ್ಯರುಗಳನ್ನು ಬೇರೆ ಇಲಾಖೆಗಳಿಗೆ ಏಕೆ ಕಳುಹಿಸಿ ಕೊಡುತ್ತೀರಿ? ಈ ವಿಷಯದಲ್ಲಿ ಬದಲಾವಣೆಯನ್ನು ತೆಗೆದುಕೊಂಡು ಬನ್ನಿ.

**ಶ್ರೀ ಶಿವಾನಂದ ಪಾಟೀಲ:-** ಮಾನ್ಯ ಸಭಾಪತಿಯವರೇ, ಇದು ಪಾರಂಪರಿಕವಾಗಿ ನಡೆಯುತ್ತಾ ಬಂದ ಪದ್ಧತಿಯಾಗಿದೆ. ಹೀಗಾಗಿ ಈ ವಿಷಯದಲ್ಲಿ ಖಂಡಿತವಾಗಿಯೂ ಸಹ ಪರಿಶೀಲನೆ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 926**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ನಾನು ಬೀದರ್ ಜಿಲ್ಲೆಯಲ್ಲಿನ ಮೆಡಿಕಲ್ ಕಾಲೇಜಿನಲ್ಲಿ ಸುಮಾರು 8 ಕೋಟಿ ರೂಪಾಯಿಗಳಷ್ಟು ಅವ್ಯವಹಾರ ನಡೆದಿರುವ ಬಗ್ಗೆ ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ನೀಡಿರುವ ಉತ್ತರವು ಪೂರಕರವಾಗಿಲ್ಲ. ಆದರೆ ಅವ್ಯವಹಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುರಿತಾದ ವರದಿ ಬಂದಿದೆ ಆದರೆ ಯಾವುದೇ ರೀತಿಯ ಕ್ರಮ ಕೈಗೊಂಡಿರುವ ಬಗ್ಗೆ ಲಿಖಿತ ಉತ್ತರದಲ್ಲಿ ಹೇಳಿಲ್ಲ. ಅವ್ಯವಹಾರದಲ್ಲಿ ಭಾಗಿಯಾಗಿದ್ದ 8-9 ಅಧಿಕಾರಿ/ಸಿಬ್ಬಂದಿಗಳು ಈಗಲೂ ಸಹ ಅದೇ ಸ್ಥಳದಲ್ಲಿಯೇ ಮುಂದುವರೆದಿದ್ದಾರೆ ಹಾಗೂ ಅವರುಗಳ ವಿರುದ್ಧ ಯಾವುದೇ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿಲ್ಲ. ಸದರಿ ಅಧಿಕಾರಿಗಳ ವಿರುದ್ಧ ತನಿಖೆ ಮಾಡುವುದಕ್ಕೆ ಭ್ರಷ್ಟಾಚಾರ ನಿಗ್ರಹ ದಳದವರಿಗೆ ಅನುಮತಿ ನೀಡಲಾಗಿದೆ. ಆದರೆ ಅವರುಗಳೆಲ್ಲರೂ ಸಹ ಉಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿ, ನಾಲ್ಕು ತಿಂಗಳ ಹಿಂದೆ ತನಿಖೆಗೆ ತಡೆಯಾಜ್ಞೆಯನ್ನು ತಂದಿದ್ದಾರೆ. ಸುಮಾರು ನಾಲ್ಕು ತಿಂಗಳುಗಳಾದರೂ ಸಹ ತಡೆಯಾಜ್ಞೆಯು ಮುಂದುವರೆದಿದ್ದು, ಆರೋಪಿತರುಗಳೆಲ್ಲರೂ ಸಹ ಅದೇ ಸ್ಥಳಗಳಲ್ಲಿಯೇ ಕರ್ತವ್ಯ ಮುಂದುವರೆಸಿ, ಆಗಿರುವ ಅವ್ಯವಹಾರಗಳನ್ನು ಮುಚ್ಚುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ನಾನು ಕೇಳಲಿಚ್ಛಿಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಸರ್ಕಾರವು ನೀಡಿರುವ ಉತ್ತರವು ಬಹಳ ಸ್ಪಷ್ಟವಾಗಿದೆ ಹಾಗೂ ವಿವರಗಳಿಂದ ಕೂಡಿದೆ. ಅದು ಮೂರು ಪುಟಗಳಷ್ಟು ಇದೆ. ಬೀದರ್ ಮೆಡಿಕಲ್ ಕಾಲೇಜಿನಲ್ಲಿ ಆಗಿರುವ ಅವ್ಯವಹಾರವು prima facie ಸಾಬೀತಾಗಿದೆ. ಇದರಲ್ಲಿ ಯಾವುದೇ ರೀತಿಯಾದ ಅನುಮಾನವಿಲ್ಲ. ಆರೋಪಿತರುಗಳ ವಿರುದ್ಧ ದೋಷಾರೋಪಣ ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಭ್ರಷ್ಟಾಚಾರ ನಿಗ್ರಹ ದಳವೂ ಸಹ ಈ ವಿಚಾರದಲ್ಲಿ ತನಿಖೆಯನ್ನು ನಡೆಸುತ್ತಿದೆ. ಅವ್ಯವಹಾರದಲ್ಲಿ ಭಾಗಿಯಾಗಿದ್ದ ಆರೋಪಿತರುಗಳೆಲ್ಲರೂ ಸಹ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿದ್ದಾರೆ. ಆದಾಗ್ಯೂ ಕೂಡ ಅವರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಮುಂದುವರೆಸಲಾಗಿದೆ. ತನಿಖೆಗೆ ತಡೆಯಾಜ್ಞೆ ತಂದಿರುವುದರಿಂದ ತಾಂತ್ರಿಕ ಅಂಶಗಳು ಒಳಪಡುತ್ತವೆ. ಅತೀ ಶೀಘ್ರದಲ್ಲಿ ಆರೋಪಿತರುಗಳ ವಿರುದ್ಧ ವಿಚಾರಣೆಯನ್ನು ಮಾಡಲಾಗುವುದು. ಬೀದರ್ ಮೆಡಿಕಲ್ ಕಾಲೇಜಿಗೆ ಕೆಲವರು ಆರೋಗ್ಯ ಇಲಾಖೆಯಿಂದ ನಿಯೋಜನೆ ಮೇರೆಗೆ ಬಂದಿದ್ದಾರೆ. ಸದರಿ ಕಾಲೇಜಿನ ಮುಖ್ಯ ಆಡಳಿತಾಧಿಕಾರಿಯು ಸೇವೆಯಿಂದ ನಿವೃತ್ತರಾಗಿದ್ದಾರೆ. ಇನ್ನುಳಿದ ಆರೋಪಿಗಳ ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿಗಳನ್ನು ಪಡೆದುಕೊಳ್ಳಲಾಗುತ್ತಿದೆ. ಅವರುಗಳ ಇಲಾಖೆಯ ಮುಖ್ಯಸ್ಥರಿಗೆ ಪತ್ರ ವ್ಯವಹಾರ ಮಾಡಿ ನಂತರದಲ್ಲಿ ನಾವು ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆರೋಪಿತರುಗಳ ಪೈಕಿ ಒಬ್ಬರು ಅತಿ ಶೀಘ್ರದಲ್ಲಿ ನಿವೃತ್ತರಾಗುತ್ತಿದ್ದಾರೆ. ಇಂತಹ ಹಲವಾರು ಅಂಶಗಳು ಇದರಲ್ಲಿ ಕೂಡಿವೆ. ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದರಲ್ಲಿ

ಯಾವುದೇ ಎರಡು ಮಾತಿಲ್ಲ. ಸರ್ಕಾರವು ಆರೋಪಿತರುಗಳ ವಿರುದ್ಧ ಸೂಕ್ತ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳುತ್ತದೆ. We are at it. ಅವ್ಯವಹಾರವು prima facie ಸಾಬೀತಾಗಿದ್ದು, ಇದರಲ್ಲಿ ತಾಂತ್ರಿಕ ಅಂಶವು ಕೂಡಿದೆ. ಇದರಲ್ಲಿ ಯಾವುದೇ ರೀತಿಯಾದ ಎಡವಟ್ಟುಗಳಾದಲ್ಲಿ ಆರೋಪಿತರುಗಳು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆಯನ್ನು ತರುತ್ತಾರೆ ಮತ್ತು ಇನ್ನುಳಿದ ಕ್ರಮಗಳನ್ನೂ ಸಹ ತೆಗೆದುಕೊಳ್ಳುತ್ತಾರೆ. ಈ ವಿಷಯದಲ್ಲಿ ಮಾನ್ಯ ಸಚಿವರಿಗೆ ಇರುವ ಚಿಂತನೆ, ಕಳಕಳಿಯು ಸರ್ಕಾರಕ್ಕೆ ಅರ್ಥವಾಗುತ್ತದೆ ಹಾಗೂ ಇದರ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆರೋಪಿಗಳ ಪೈಕಿ ಒಬ್ಬರು ಅತೀ ಶೀಘ್ರದಲ್ಲಿ ಸೇವೆಯಿಂದ ನಿವೃತ್ತರಾಗುತ್ತಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಒಂದು ವೇಳೆ ಅವ್ಯವಹಾರದಲ್ಲಿ ಸದರಿಯವರ ಆರೋಪಗಳು ಸಾಬೀತಾದರೆ, ಅವರ ನಿವೃತ್ತಿಯ ನಂತರವೂ ಅವರ ವಿರುದ್ಧ ಸೂಕ್ತ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸ್ವಲ್ಪ ಪ್ರಮಾಣದಲ್ಲಿ ತಾಪತ್ರಯಗಳುಂಟಾದರೆ ಸದರಿಯವರಿಗೆ ನಿವೃತ್ತಿಯ ನಂತರ ನೀಡುವ ಉಪಲಬ್ಧಗಳನ್ನು ಆ ಸಮಯದಲ್ಲಿ ತಡೆಹಿಡಿಯುವ ಕ್ರಮಗಳನ್ನು ತೆಗೆದುಕೊಂಡರೆ ಅದು ಸೂಕ್ತವೆಂದು ನನಗನ್ನಿಸುತ್ತದೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ಆಡಳಿತ ಪಕ್ಷದ ಸದಸ್ಯರು ಕೇಳಿದ್ದಾರೆ ಎಂದರೆ ಇದರ ಗಂಭೀರತೆ ಎಷ್ಟು ಇದೆ ಎಂದು ಮಾನ್ಯ ಸಚಿವರಿಗೆ ಗೊತ್ತಿದೆ. ಬೀದರ್ ಮೆಡಿಕಲ್ ಕಾಲೇಜು ಒಂದು ರೀತಿಯ ಭ್ರಷ್ಟಾಚಾರದ ಗೂಡಾಗಿದೆ. ಇದೇ ವಿಚಾರವಾಗಿ ಈ ಹಿಂದೆ ಈ ಸದನದಲ್ಲಿ ಹಾಗೂ ಬೇರೆ ಸಮಿತಿಗಳಲ್ಲಿಯೂ ಸಹ ನಾನು ಬಹಳಷ್ಟು ಬಾರಿ ಚರ್ಚೆಯನ್ನು ಮಾಡಿ, ಮಾಡಿ, ಈಗ ಸೋತು ಸುಮ್ಮನಾಗಿದ್ದೇನೆ. ಅವ್ಯವಹಾರ ಪ್ರಕರಣದಲ್ಲಿ ಆರೋಪಿತರುಗಳ ವಿರುದ್ಧ ದೋಷಾರೋಪವಾಗಿದ್ದರೂ ಸಹ ಎಲ್ಲಾ ಆರೋಪಿತರುಗಳು ಈಗಲೂ ಸಹ ಅಲ್ಲಿಯೇ ಕೆಲಸ ನಿರ್ವಹಿಸುತ್ತಿದ್ದಾರೆ. ಮೆಡಿಕಲ್ ಕಾಲೇಜಿನಲ್ಲಿ ಆಗಿರುವ ಅವ್ಯವಹಾರವು prima facie ಸಾಬೀತಾಗಿರುವುದನ್ನು ಸರ್ಕಾರವು ಹಾಗೂ ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಸದರಿ ಆರೋಪಿತರುಗಳೆಲ್ಲರೂ ಸಹ ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಸದರಿ ಕಾಲೇಜಿನಲ್ಲಿ ಕೋಟಿಗಟ್ಟಲೆ ಹಣದ ಅವ್ಯವಹಾರವಾಗಿದ್ದು, ಸರ್ಕಾರವು ಬೇರೆ ಬೇರೆ ರೀತಿಯಾದಂತಹ ಸುಮಾರು 21 ಆರೋಪಗಳನ್ನು ಮಾಡಿದೆ. ಆದರೆ ಯಾವ ಆರೋಪಿತರ ವಿರುದ್ಧ ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಇದೇ ವಿಷಯಕ್ಕೆ ಸಂಬಂಧಪಟ್ಟಂತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರೋಪಿತರುಗಳ ವಿರುದ್ಧ ಇಲಾಖೆ ವಿಚಾರಣೆಯನ್ನು ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ನಾನು ಸಲಹೆಯೊಂದನ್ನು ನೀಡಬಯಸುತ್ತೇನೆ. ಈ ಹಿಂದೆ ನಮ್ಮ ಪಕ್ಷವು ಅಧಿಕಾರದಲ್ಲಿದ್ದಾಗ ಶ್ರೀ ರಾಮದಾಸ್ ರವರು ವೈದ್ಯಕೀಯ ಶಿಕ್ಷಣ ಇಲಾಖೆಯ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿಯೂ ಸಹ ನಾನು ಸಲಹೆಯನ್ನು ನೀಡಿದ್ದೇನು. ಅದನ್ನು ಪರಿಗಣಿಸುವಷ್ಟರಲ್ಲಿ ನಮ್ಮ ಪಕ್ಷದ ಆಡಳಿತಾವಧಿಯು ಪೂರ್ಣಗೊಂಡಿತ್ತು. Governing Council ಎಂಬ ಸಮಿತಿಯು ಇದೆ. ಸದರಿ ಸಮಿತಿಯಲ್ಲಿ ಎಲ್ಲಾ ರೀತಿಯ ಖರೀದಿ ವಿಷಯಗಳ ಬಗ್ಗೆ ಅನುಮೋದನೆಯನ್ನು ಪಡೆದುಕೊಳ್ಳುತ್ತಾರೆ. ಆದರೆ ದುರದೃಷ್ಟವಶಾತ್ ಸದರಿ ಸಮಿತಿಯನ್ನು ರಚಿಸಬೇಕಾದರೆ, Governing Council ನಲ್ಲಿ ಸಂಬಂಧಪಟ್ಟ ಚುನಾಯಿತ ಜನ ಪ್ರತಿನಿಧಿಗಳು ಯಾರೂ ಸಹ ಇಲ್ಲ. ಸದರಿ Governing Council ನಲ್ಲಿ ex-officio members ಮಾತ್ರ ಸದಸ್ಯರುಗಳಾಗಿರುತ್ತಾರೆ. ಭ್ರಷ್ಟಾಚಾರಕ್ಕೆ ಮೊದಲು ಅವಕಾಶ ಮಾಡಿಕೊಟ್ಟು ನಂತರದಲ್ಲಿ ಭ್ರಷ್ಟಾಚಾರವಾಗಿದೆ ಎಂದು ನಾವುಗಳು ಬೊಬ್ಬೆ ಹೊಡೆಯಬೇಕು. ಆ ನಂತರವಷ್ಟೇ ತನಿಖೆಯನ್ನು ಮಾಡಲಾಗುವುದು. ಬೀದರ್ ವೈದ್ಯಕೀಯ ಕಾಲೇಜನ್ನು ನಾನು ಬಹಳ ಹತ್ತಿರದಿಂದ ನೋಡಿದವನಾಗಿರುವುದರಿಂದ ಮಾನ್ಯ ಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ, ಸದರಿ Governing Council ನ್ನು ಮರು ಪರಿಶೀಲನೆ ಮಾಡಿ. ಆ ಭಾಗದ ಜನಪ್ರತಿನಿಧಿಗಳಾದ ಸಂಸದರು, ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳನ್ನು, Governing Council ನಲ್ಲಿ ಸೇರಿಸಿದರೆ, ಭ್ರಷ್ಟಾಚಾರ ಕೆಳಹಂತದಲ್ಲಿಯೇ ನಿಂತು ಹೋಗುತ್ತದೆ ಎನ್ನುವ ಸಂಪೂರ್ಣ ವಿಶ್ವಾಸ ನನಗೆ ಇದೆ. ನನ್ನ ಸಲಹೆಯನ್ನು ಮಾನ್ಯ ಸಚಿವರು ಪರಿಗಣಿಸಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಬೀದರ್ ಮೆಡಿಕಲ್ ಕಾಲೇಜಿನಲ್ಲಿ ನಡೆದ ಅವ್ಯವಹಾರದ ಕುರಿತಾಗಿ ತನಿಖೆಯನ್ನು ಮಾಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಈಗಾಗಲೇ ವರದಿಯನ್ನು ಜೂನ್ ತಿಂಗಳಿನಲ್ಲಿ ನೀಡಿದ್ದಾರೆ. ಅವ್ಯವಹಾರ ಪ್ರಕರಣವು ಭ್ರಷ್ಟಾಚಾರ ನಿಗ್ರಹ ದಳಕ್ಕೆ ವಹಿಸಿದ ಮೇಲೆ ಸದರಿ ತನಿಖಾ ಸಂಸ್ಥೆಯೂ ಸಹ ಅನುಮತಿಯನ್ನು ನೀಡಿದೆ. ಅವ್ಯವಹಾರದಲ್ಲಿ ಭಾಗಿಯಾದ ಆರೋಪಿತರುಗಳು ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿದ್ದಾರೆ. ನಾಲ್ಕು ತಿಂಗಳುಗಳಿಂದ ತಡೆಯಾಜ್ಞೆಯು ತೆರವುಗೊಳ್ಳದೇ ಹಾಗೆಯೇ ಇದೆ. ತಡೆಯಾಜ್ಞೆಯನ್ನು ತೆರವುಗೊಳಿಸುವಂತಹ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಆದರೆ ತಮ್ಮ ಇಲಾಖೆಯಿಂದ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಆರೋಪಿಗಳ ಸೇವೆಗಳನ್ನು ಮಾತ್ರ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗೆ ಹಿಂಪಡೆದು ಸದರಿ ಹುದ್ದೆಗಳಿಗೆ ಬೇರೆ ಸಿಬ್ಬಂದಿಗಳನ್ನು ನಿಯೋಜಿಸುವಂತೆ ದಿನಾಂಕ 07/08/2018 ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪತ್ರ ಬರೆಯಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಎಂಬುದಾಗಿಯೂ ಸಹ ಪತ್ರವನ್ನು ಬರೆಯಲಾಗಿದೆ. ಆದರೆ ಅವ್ಯವಹಾರದಲ್ಲಿ ಭಾಗಿಯಾದ ಆರೋಪಿತರುಗಳ ಸೇವೆಗಳನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಿಲ್ಲ. ಅವರುಗಳು ಅದೇ ಸ್ಥಳದಲ್ಲಿಯೇ ಇನ್ನೂ ಸಹ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಇದಕ್ಕೆ ಕಾರಣವೇನೆಂದು ನಾನು ಕೇಳಬಯಸುತ್ತೇನೆ.

**(ಮುಂದು)**

(519) 18-12-2018 1:20 ಸಿಎಸ್/ಎಕೆ

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೇ, ಈಗಿರುವ ನಿರ್ದೇಶಕರ ನೇಮಕಾತಿ ಅವಧಿಯು ಡಿಸೆಂಬರ್ 20ಕ್ಕೆ ಮುಕ್ತಾಯಗೊಳ್ಳುತ್ತದೆ. ಅವರೇನು ನಿವೃತ್ತಿಯನ್ನು ಹೊಂದುತ್ತಿಲ್ಲ. But we will look into it. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ 8 ಜನರ ರಕ್ಷಣೆ ಮಾಡುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಅದರ ಬಗ್ಗೆ ತಲೆಯೇ ಕೆಡಿಸಿಕೊಳ್ಳಬಾರದು. ನಾನು ಕೂಡ ಬೀದರ್ ಜಿಲ್ಲೆಗೆ ಒಂದು ದಿವಸ ಭೇಟಿ ನೀಡಿದ್ದೆನು. ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಚಾರದ ಬಗ್ಗೆ let us look into it. ಇದರ ಬಗ್ಗೆ ವಿವರವಾಗಿಯೇ ವಿಚಾರಣೆ ನಡೆಸಲಾಗುವುದು. ಏಕೆಂದರೆ ನಾವು ಈ ವಿಚಾರದ ಬಗ್ಗೆ Departmental Enquiry ನಡೆಸುತ್ತಿದೇವೆ ಎಂದರೆ, we are very serious with this issue. ಅದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಮತ್ತು ಮಾನ್ಯ ಸದಸ್ಯರು Governing Council ವಿಚಾರದಲ್ಲಿ ಏನು ಸಲಹೆಯನ್ನು ನೀಡಿದ್ದಾರೆ, ಅದರ ಬಗ್ಗೆ ಒಂದು ಕಾಯಿದೆ. It's a state level policy decision which we have to take. Let me examine this.

**ಶ್ರೀ ಯು.ಬಿ.ವೆಂಕಟೇಶ್:-** ಆದರೆ ಆ 8 ಜನರಿಗೆ ಅಲ್ಲಿಯೇ ಕೆಲಸ ಮಾಡುವುದಕ್ಕೆ ಅವಕಾಶವನ್ನು ನೀಡಬಾರದಿತ್ತು.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೇ, ಈಗ ಬೀದರ್‌ನಲ್ಲಿ ಕೆಲಸ ಮಾಡುವುದಕ್ಕೆ ಯಾರು ಸಹ ತಯಾರಿಲ್ಲ. ಅದೇ ತೊಂದರೆಯಾಗಿರುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಆ 8 ಜನರನ್ನು ಬಿಟ್ಟರೆ ಆ ಸಂಸ್ಥೆಯಲ್ಲಿ ಬೇರೆ ನೌಕರರು ಇಲ್ಲವೇ? Then how is the medical college running? I am extremely sorry, Sir.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೇ, M.C.I. ನವರು inspection ಗೆ ಹೋಗುತ್ತಾರೆ. ಆಗ ಸುಮಾರು 20 ಜನರಿಗೆ ರಜೆ ಹೋಗಿ ಎಂದು ಅಲ್ಲಿನ ಮ್ಯಾನೇಜ್‌ಮೆಂಟ್‌ನವರು ಹೇಳಿ ಕಳುಹಿಸಿ ಬಿಡುತ್ತಾರೆ. We immediately ordered for suspension of 20 persons. M.C.I. ನವರು inspection ಗೆ ಬಂದಾಗ ಅದನ್ನು avoid ಮಾಡುವುದಕೋಸ್ಕರ ಎಲ್ಲರೂ ರಜೆ ಹಾಕಿ, ಒಬ್ಬರು ಸಹ ಕರ್ತವ್ಯಕ್ಕೆ ಹಾಜರಿರಲಿಲ್ಲ. ಆಗ ಅವರೆಲ್ಲರೂ ಬಂದು ನನ್ನನ್ನು ಕೇಳಿದರು, ನಾನು ಯ್ಯಾರ್ಯಾರ ಮೇಲೆ ಬರೆದುಕೊಡುತ್ತೀರೋ ಅವರ ಮೇಲೆ ಬರೆದುಕೊಡಿ ಎಂದು ಕೇಳಿದೆನು. We are taking every action. So there is lot of internal issues. We will sort it out.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಗಳೇ, ನಾನು ಮಾನ್ಯ ಸಚಿವರ ಮಾತನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಅಲ್ಲಿ ಕೆಲಸ ಮಾಡುವವರು ಇಲ್ಲ ಎಂದೇನೂ ಇಲ್ಲ. ಈ 8 ಜನರ ಮೇಲೆ ಏನು charges ಆಗಿದೆ, ಡೀನ್ ಮತ್ತು ಪ್ರಾಂಶುಪಾಲರನ್ನು ಬಿಟ್ಟರೆ ಉಳಿದವರೆಲ್ಲರೂ ಬೋಧಕ ಸಿಬ್ಬಂದಿ ಅಲ್ಲ. ಅವರೆಲ್ಲರೂ clerical post ನವರು. F.D.C., S.D.C., Accounts Superintendent, Store Keeper ಯಾರಿದ್ದಾರೆ ಅವರ್ಯಾರು ಅಲ್ಲಿನ ಸಿಬ್ಬಂದಿ ಅಲ್ಲ. ಬೇರೆ ಬೇರೆ ಕಡೆಗಳಿಂದ ಬಂದಿದ್ದವರು, ಆಸ್ಪತ್ರೆಗಳಲ್ಲಿ, ಜಿಲ್ಲಾ ಆಸ್ಪತ್ರೆಗಳಲ್ಲಿ, ಡಿಹೆಚ್‌ಓ ಕಚೇರಿಗಳಲ್ಲಿ ಕೆಲಸ ಮಾಡಿ ಕೋಟಿಗಟ್ಟಲೆ ಹಣದ ಅವ್ಯವಹಾರವನ್ನು ನಡೆಸಿ, ಒಳ್ಳೆಯ track record ಇರುವ ಹತ್ತಾರು ಆರೋಪಗಳನ್ನು ಹೊಂದಿರುವ ನೌಕರರು. ಅವರನ್ನು ನಿಯೋಜನೆ ಮೇರೆಗೆ ಅಲ್ಲಿ ಹಾಕಲಾಗಿತ್ತು. ಅವರನ್ನು ಅಲ್ಲಿಂದ ತೆಗೆಯಬೇಕೆಂದು ನಾನು ಅನೇಕ ಬಾರಿ ಕೇಳಿಕೊಂಡಿದ್ದೆನು. ಅದರೂ ಸಹ ಮಾಡಿರುವುದಿಲ್ಲ. ದಯಮಾಡಿ ಸಚಿವರು ಇದರ ಬಗ್ಗೆ ಗಮನ ಹರಿಸಬೇಕು.

**ಶ್ರೀ ಶಿವಾನಂದ ಪಾಟೀಲ್:-** ಮಾನ್ಯ ಸಭಾಪತಿಗಳೇ, ಒಂದು ವಿಚಾರವನ್ನು ಎಲ್ಲರ ಗಮನಕ್ಕೆ ತರಬಯಸುವುದೇನೆಂದರೆ ಸರ್ಕಾರಿ ಕಾಲೇಜಿನಲ್ಲಿ ಎನ್‌ಆರ್‌ಐ ಕೋಟವನ್ನು introduce

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೆ ಸದನದ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಏಕೆಂದರೆ ಯಾವುದೇ ಮೆಡಿಕಲ್ ಕಾಲೇಜಿನಲ್ಲಿ ಆಸ್ಪತ್ರೆಗಳನ್ನು ನಡೆಸುವ ಶಕ್ತಿ ಮುಂದಿನ ದಿನಗಳಲ್ಲಿ ಯಾರಿಗೂ ಇರುವುದಿಲ್ಲ. ಹಾಗಾಗಿ ಆ ವಿಧೇಯಕವನ್ನು ತಂದರೆ ತಾವೆಲ್ಲರೂ ಅದಕ್ಕೆ ಸಹಕಾರವನ್ನು ನೀಡಬೇಕು. ಇದು ಅನಿವಾರ್ಯ ಕೂಡ ಆಗಿದೆ. ಈಗ ನಮ್ಮ ಆಸ್ಪತ್ರೆಯ ಸಿಬ್ಬಂದಿಯನ್ನು ಕೊಟ್ಟು ಅಲ್ಲಿ ಮೆಡಿಕಲ್ ಕಾಲೇಜುಗಳನ್ನು ನಡೆಸಲಾಗುತ್ತಿದೆ. ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿ ಮೆಡಿಕಲ್ ಕಾಲೇಜು ಇರಬೇಕೆನ್ನುವ ಬೇಡಿಕೆ ಇದೆ. ಮೆಡಿಕಲ್ ಕಾಲೇಜು ಹಾಗೆಯೇ ಇನ್ನೂ ಹೆಚ್ಚಿನ ವೈದ್ಯರು ಸಿಗಬೇಕೆಂದರೆ ಎನ್‌ಆರ್‌ಐ ಕೋಟ introduce ಆದಾಗ ಆ ವಿಧೇಯಕಕ್ಕೆ ಎಲ್ಲರೂ ಸಹಮತ ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಗಳೇ, ಈ ಹುದ್ದೆಗಳನ್ನು ಸರ್ಕಾರ ತುಂಬಿಲ್ಲ, ಈ ಹುದ್ದೆಗಳನ್ನು ತುಂಬುವುದರಿಂದ ಅಲ್ಲಿನ ಸ್ಥಳೀಯರಿಗೂ ಸಹ ಉದ್ಯೋಗ ದೊರಕುತ್ತದೆ. Those employees are on deputation. ಬೋಧಕೇತರ ಹುದ್ದೆಗಳು ಒಂದನ್ನು ಕೂಡ ನೇಮಕಾತಿ ಮಾಡಿರುವುದಿಲ್ಲ. ಎಲ್ಲರೂ ಅಲ್ಲಿ ನಿಯೋಜನೆ ಮೇಲೆ ಕೆಲಸ ಮಾಡುತ್ತಿದ್ದಾರೆ.

ಪ್ರಶ್ನೆ ಸಂಖ್ಯೆ 6
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಗಳೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸಚಿವರು ನೀಡಿರುವ ಅನುಬಂಧ–1 ರಲ್ಲಿ 1750 ಕೋಟಿ ರೂಪಾಯಿಗಳು ಖರ್ಚಾಗಿದೆ, 197+266=463 ಕೆರೆಗಳನ್ನು ತುಂಬಿಸಿದ್ದೇವೆ ಎಂದು ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಈ ಉತ್ತರ ಅತ್ಯಂತ ಸಮಧಾನಕರವಾಗಿಲ್ಲ. ಏಕೆಂದರೆ ಈಗಾಗಲೇ ಕೆರೆಗಳನ್ನು ತುಂಬಿಸುವ ಪ್ರಕ್ರಿಯೆ ವಿಫಲವಾಗಿದೆ ಎನ್ನುವ ವಿಚಾರ ಅನೇಕ ಪತ್ರಿಕೆಗಳಲ್ಲಿ ವರದಿಯಾಗಿದೆ. ಮಾನ್ಯ ಸಚಿವರು 465 ಕೆರೆಗಳನ್ನು ತುಂಬಿಸಿದ್ದೇವೆ ಎಂದು ಉತ್ತರ ನೀಡಿದ್ದರೂ ಸಹ ಅಲ್ಲಿ ಅಷ್ಟು ಕೆರೆಗಳನ್ನು ತುಂಬಿಸಿರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರ ತನಿಖೆಯನ್ನು ನಡೆಸಬೇಕು. ಇವತ್ತು ಕೃಷ್ಣ ನದಿ, ಕಾವೇರಿ ನದಿ ಹಾಗೂ ಮಳೆ ಆಗಿರುವ ಪ್ರದೇಶಗಳಲ್ಲಿ ಪೈಪ್‌ಲೈನ್ ಹಾಕುವ ಮೂಲಕ ಕೆರೆಗಳನ್ನು ತುಂಬಿಸುವ ಕೆಲಸ ಆಗಿತ್ತು. ಆದರೆ ಮಳೆ ಆಗಿರುವ ಪ್ರದೇಶಗಳಲ್ಲಿ ಕೂಡ ಕೆರೆ ತುಂಬಿಸದೇ ಇರುವುದು ಇದೆ. ಉದಾಹರಣೆಗೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ದೊಡ್ಡದಾಗಿ ಒಂದು ವಿಚಾರ ಪ್ರಕಟವಾಗಿದೆ. ಕಾವೇರಿ, ಕೃಷ್ಣ, ಕಪಿಲೆ, ತುಂಗಭದ್ರಾ ಈ ನದಿಗಳಿಗೆ ಪೈಪ್‌ಲೈನ್ ಹಾಕಿ ಕೆರೆಗಳನ್ನು ತುಂಬಿಸುವ ಯೋಜನೆ ಇವೆ. ಹಾಗೆಯೇ ಅದೇ ಪ್ರದೇಶದಲ್ಲಿ ಕೆರೆಗಳನ್ನು ತುಂಬಿಸದೇ ಇರುವ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದಾಹರಣೆಗಳು ಸಹ ಇದೆ. ಹಾಗಾಗಿ ಇದರ ಬಗ್ಗೆ ಸಚಿವರು ತನಿಖೆಯನ್ನು ನಡೆಸಬೇಕು. ಕೆರೆ ತುಂಬಿಸುವ ಯೋಜನೆಯಿಂದ ರೈತರಿಗೆ, ಬಡವರಿಗೆ ನೀರಾವರಿಯನ್ನು ಒದಗಿಸುವುದು ಮತ್ತು ಕುಡಿಯುವ ನೀರಿನ ಯೋಜನೆ ಕೂಡ ಅದಾಗಿದೆ. ಆದ್ದರಿಂದ ಸಚಿವರು ಇದರ ಬಗ್ಗೆ ಗಮನ ಹರಿಸಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು 5 ವರ್ಷಗಳ ವಿವರಗಳನ್ನು ಕೇಳಿದ್ದಾರೆ. ಒಟ್ಟಾರೆ 8276 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. 28 ಯೋಜನೆಗಳನ್ನು ಪೂರ್ಣಗೊಳಿಸಿ, ಸುಮಾರು 425 ಕೆರೆಗಳನ್ನು ತುಂಬಲು ಈಗಾಗಲೇ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಸದರಿ ಯೋಜನೆಗೆ ಈಗಾಗಲೇ ಸುಮಾರು 2524 ಕೋಟಿ ರೂಪಾಯಿಗಳ ವೆಚ್ಚವನ್ನು ಮಾಡಲಾಗಿದೆ. ಉಳಿದ ಕಾಮಗಾರಿಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು. ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿ ಕಳೆದ 5 ವರ್ಷಗಳಿಂದ ನದಿಗಳಿಂದ ನೀರನ್ನು ಎತ್ತಿ ಕೆರೆಗಳಿಗೆ ತುಂಬಿಸುವ ಕೆಲಸವನ್ನು ಮಾಡಿದ್ದೇವೆ. ಇದರ ಬಗ್ಗೆ ಈಗಾಗಲೇ ನಾನು ಉತ್ತರವನ್ನು ನೀಡಿದ್ದೇನೆ. ಇಡೀ ರಾಜ್ಯದಲ್ಲಿರುವ ನದಿಗಳಿಂದ ಕೆರೆಗಳನ್ನು ತುಂಬಿಸುವ ಕೆಲಸವನ್ನು ನಾವು ಆದ್ಯತೆ ಮೇಲೆ ಮಾಡುತ್ತಿದ್ದೇವೆ. ಈ ನೀರನ್ನು ಲಿಫ್ಟ್ ಮಾಡಬೇಕಾದರೆ ಪವರ್ ಬೇಕಾಗುತ್ತದೆ, ಅದನ್ನು ಜನರೇಟ್ ಮಾಡುವ ಹೊಸ ಸ್ಕೀಮಿನ ಬಗ್ಗೆ ನಾವು ಯೋಚನೆಯನ್ನು ಮಾಡುತ್ತಿದ್ದೇವೆ. ಯಾವ ರೀತಿಯಲ್ಲಿ ಈ ಯೋಜನೆ viable ಮಾಡಬಹುದೆಂದು ಯೋಚನೆಯನ್ನು ಮಾಡಬೇಕಾಗುತ್ತದೆ. ರೈತರಿಗೆ ಈ ಹಣ ಕಟ್ಟಲು ಸಾಧ್ಯವಾಗುವುದಿಲ್ಲ. ಈ ಹಿಂದೆ ನಾನು ಇಂಧನ ಸಚಿವನಾಗಿ ಕೆಲಸ ಮಾಡಿದ ಅನುಭವ ಸಹ ನನಗಿದೆ. ಈ ಹಿಂದೆ ಈ ನೀರನ್ನು ಕೆರೆಗಳಿಗೆ ತುಂಬಿಸಲು ಸಂಘಗಳಿಗೆ ವಹಿಸಿದ್ದರು. ನಾನು ಇದರ ಬಗ್ಗೆ ಗಲಾಟೆ ಮಾಡಿ ಹರಾಜಿನ ಮೂಲಕ ಈ ಕೆಲಸಗಳನ್ನು ಸಂಘಗಳಿಗೆ ವಹಿಸಿ, ಅದರಿಂದ ಸ್ವಲ್ಪ ಹಣ ಬಂದರೆ ಪವರ್ ಬಿಲ್ ಕಟ್ಟಬಹುದೆಂದು ಯೋಚನೆ ಮಾಡಲಾಗಿತ್ತು. ತಮ್ಮ ಸಲಹೆಗಳೇನಾದರೂ ಇದ್ದಲ್ಲಿ ನನಗೆ ಕೊಡಿ, ಮುಂದೆ ಯುಕೆಪಿ ವಿಚಾರದ ಬಗ್ಗೆ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಇದರ ಬಗ್ಗೆ ವಿವರವಾಗಿ ಚರ್ಚೆಯನ್ನು ಮಾಡೋಣ. Let us also reply on this.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಗಳೇ, ಈ ರೀತಿ ಕೆರೆಗಳನ್ನು ತುಂಬಿಸತಕ್ಕ ಯೋಜನೆಯು ಬೆಳಗಾವಿ ಜಿಲ್ಲೆಯಲ್ಲಿ ಬಹಳ ಮಹತ್ವಕಾಂಕ್ಷಿ ಮತ್ತು ನೀರಿನ ಮಟ್ಟವನ್ನು ಎತ್ತರಿಸುವುದಕ್ಕೆ ಬಹಳ ಅವಶ್ಯಕವಾದ ಯೋಜನೆಯಾಗಿದೆ. ಕೃಷ್ಣ ನದಿಯಲ್ಲಿ ಜೂನ್ ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ ಲಕ್ಷಾಂತರ ಕ್ಯೂಸೆಕ್ಸ್ ನೀರು ಹರಿದು ಹೋಗುತ್ತದೆ. ಈ ನೀರನ್ನು ಸದ್ಬಳಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡತಕ್ಕ ನಿಟ್ಟಿನಲ್ಲಿ ಸರ್ಕಾರ ಅಲ್ಲಿನ ಕೆರೆಗಳನ್ನು ತುಂಬಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ. ಆದರೆ ಮಾಡತಕ್ಕ ಯೋಜನೆಗಳು ಸಂಪೂರ್ಣವಾಗಿ ಆಗಿದೆಯೇ ಇಲ್ಲವೇ ಎನ್ನುವುದನ್ನು ನೋಡುವಂತಹ ಕೆಲಸ ಆಗಬೇಕಾಗಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಶಿರಗಾವ ಕೆರೆ, ಖಾನಾಪುರ ಕೆರೆ, ಮಲ್ಲಿಕವಾಡ ಕೆರೆಗಳಲ್ಲಿ ಕಾಮಗಾರಿ ಆಗಿದ್ದರೂ ಸಹ ಕೆರೆ ತುಂಬಿರುವುದಿಲ್ಲ. ಕಾರಣ ಕೇಳಿದರೆ ಅದಕ್ಕೆ ಏನಾದರೂ ಒಂದು ವಿವರಣೆಯನ್ನು ನೀಡುತ್ತಾರೆ. ಹಲವಾರು ಬಾರಿ ನಾನು ಕೂಡ ಇದರ ಬಗ್ಗೆ ಚರ್ಚೆಯನ್ನು ಮಾಡಿದ್ದೇನೆ. ದಯವಿಟ್ಟು ಮಾನ್ಯ ಸಚಿವರು ತಮ್ಮ ಅಧಿಕಾರಿಗಳನ್ನು ಕಳುಹಿಸಿ ಸ್ಥಳ ವೀಕ್ಷಣೆಯನ್ನು ನಡೆಸಿ, ಸಚಿವರಿಗೆ ವರದಿಯನ್ನು ಸಲ್ಲಿಸಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಏಕೆಂದರೆ ಇದು ಬಹಳ ಪ್ರಮುಖವಾದ ಯೋಜನೆಯಾಗಿದ್ದು ಸರ್ಕಾರ ಇಷ್ಟು ಹಣ ಖರ್ಚು ಮಾಡಿದರೂ ಸಹ ಏಕೆ ಈ ಯೋಜನೆಗಳು ಪೂರ್ಣಗೊಳ್ಳುತ್ತಿಲ್ಲ, ಹಾಗೂ ಯಶಸ್ವಿಯಾಗುತ್ತಿಲ್ಲ ಎನ್ನುವುದನ್ನು ಮಾನ್ಯ ಸಚಿವರು ಗಮನಿಸಬೇಕು.

ಹಾಗೆಯೇ ಮಾನ್ಯ ಸಚಿವರು ಪವರ್ ಜನರೇಟ್ ಮಾಡುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಏಕೆಂದರೆ ಯಶಸ್ವಿ ಯೋಜನೆಗಳಿಗೆ ಪವರ್ ನೀಡುವುದು ಸರ್ಕಾರದ ಜವಾಬ್ದಾರಿ ಕೂಡ ಆಗಿರುತ್ತದೆ. ಇಂಧನ ಇಲಾಖೆಯಿಂದ ಇಂತಹ ಯೋಜನೆಗಳಿಗೆ ಇನ್ನೂ ಹೆಚ್ಚಿನ ಮಹತ್ವವನ್ನು ನೀಡಬೇಕು.

(ಮುಂದು)

(520) 18-12-2018 (1-30) ಎಲ್‌ಎಚ್/ಆರ್‌ಎನ್ ಎಸ್‌ಪಿ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಮುಂದು):-** ಉತ್ತರ ಕರ್ನಾಟಕದಲ್ಲಿ ಬರುವಂತಹ ಬೆಳಗಾವಿ, ಬಾಗಲಕೋಟೆ, ವಿಜಯಪೂರ ಜಿಲ್ಲೆಗಳಿಗೆ ಏತ ನೀರಾವರಿ ಮೂಲಕ ಜನರಿಗೆ ನೀರು ಕೊಡುವ ಬಗ್ಗೆ ಸರ್ಕಾರ ಹೆಚ್ಚು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಕೃಷ್ಣಾ ನದಿಯಿಂದ ಧೂದಗಂಗಾ, ಕೃಷ್ಣಾ, ಹಿರಣ್ಯಕೇಶಿ, ವೇದಗಂಗಾ, ಕೃಷ್ಣಾ, ಧೂದಗಂಗಾ. ಇದೆ ರೀತಿ ಹಾವೇರಿ ಮತ್ತು ದಾವಣಗೆರೆ ಜಿಲ್ಲೆಗೆ ವರದಾ. ಬೇಡ್ತಿ, ತುಂಗಭದ್ರಾ. ಅದೇ ರೀತಿ ಉತ್ತರ ಕನ್ನಡ, ಬಳ್ಳಾರಿ, ಶಿವಮೊಗ್ಗ ಜಿಲ್ಲೆಯಲ್ಲಿ ಕಾಳಿನದಿ, ತುಂಗಭದ್ರಾ, ತುಂಗಾ ಈ ನದಿಗಳಿಂದ ಕೆರೆ ತುಂಬಿಸುವಂತಹ ಯೋಜನೆಗಳನ್ನು ಸರ್ಕಾರ ಮಾಡಿದೆ. ಮತ್ತು ಇದಕ್ಕೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ. ಆದರೆ ಅಲ್ಲಿ ಬಹಳಷ್ಟು ಕೆರೆಗಳು ತುಂಬಿರುವುದಿಲ್ಲ ಮತ್ತು ಮಾಡಿರುವ ಕಾಲುವೆಗಳು ಒಣಗಿವೆ. ಆದರೆ ನದಿಗಳು ತುಂಬಿವೆ ಎಂದು ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸರ್ವೆ ವರದಿಯಲ್ಲಿ ಹೇಳಿದ್ದಾರೆ. ನದಿಗಳು ತುಂಬಿದ ಮೇಲೆ ಕಾಲುವೆ ಮುಖಾಂತರ ನೀರು ಬರಬೇಕಾಗಿತ್ತು. ಆದರೆ ಕಾಲುವೆಗಳು ಒಣಗಿವೆ. ಪೈಪಲೈನ್ ಹಾಕಿದ್ದರೂ ಕೂಡಾ ಪೈಪ್‌ನಲ್ಲಿ ನೀರು ಹರಿದು ಬರಲಿಲ್ಲ ಕೆರೆಗಳು ತುಂಬಲಿಲ್ಲ. ಮಾನ್ಯ ಸಚಿವರು ಇದರ ಕಡೆಗೆ ಗಮನ ಹರಿಸಬೇಕು. ಮತ್ತು ಪತ್ರಿಕೆಗಳಲ್ಲಿ "ಬರಿ ಪೇಪರ್‌ನಲ್ಲಿ ಕೆರೆ ತುಂಬಿಸಿದ್ದಾರೆ" ಎಂದು ಸುದ್ದಿ ಬರುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಸಚಿವರು ಎನ್ನುವುದನ್ನು ತಮ್ಮ ಮುಖಾಂತರ ಸಚಿವರನ್ನು ಕೇಳಬಯಸುತ್ತೇನೆ. ಕೆರೆ ತುಂಬಿಸಲು 13,000 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ ಎಂದು ಸಿಎಜಿ ವರದಿಯಲ್ಲಿ ಇದೆ. Spot examination ಮಾಡಿಯು ಸಿಎಜಿ ವರದಿಯಲ್ಲಿ ಇದನ್ನು ಬರೆದಿದ್ದಾರೆ ಇದರ ಬಗ್ಗೆಯು ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ್ ಪೂಜಾರಿ:-** ಮಾನ್ಯ ಸಭಾಪತಿಗಳೆ, ಹಿಂದೇ ಮಾನ್ಯ ಶಿವಕುಮಾರ್‌ರವರು ಜಲಸಂಪನ್ಮೂಲ ಸಚಿವರಾಗಿರಲಿಲ್ಲ. ಈಗ ಅವರು ಜಲ ಸಚಿವರಾಗಿದ್ದಾರೆ. 12000 ಕೋಟಿ ರೂ.ಗಳನ್ನು ಖರ್ಚು ಮಾಡಿ 400 ಕೆರೆಗಳನ್ನು ತುಂಬಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ವಾಸ್ತವಿಕವಾಗಿ ಕೆರೆ ತುಂಬಿರುವುದಿಲ್ಲ. ಶೇಕಡಾ 75ರಷ್ಟು ಕೆರೆಗಳು ತುಂಬಿರುವುದಿಲ್ಲ ಎಂದು ಮಾಧ್ಯಮದಲ್ಲಿಯು ಬಂದಿದೆ. ಹೀಗಾಗಿ ಇದರ ಬಗ್ಗೆ ಸತ್ಯ ಪರಿಶೀಲನೆ ಮಾಡುವ ಯೋಚನೆ ಸರ್ಕಾರದ ಗಮನದಲ್ಲಿ ಇದೆಯೇ ಎನ್ನುವುದನ್ನು ಮಂತ್ರಿಗಳು ತಿಳಿಸಬೇಕು.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಗಳೆ, ಕೆರೆ ತುಂಬಿಸುವುದು ಒಳ್ಳೆಯ ಯೋಜನೆ. ವಿಶೇಷವಾಗಿ ಹೂಳೆತ್ತುವ ಕೆಲಸಕ್ಕೆ ಆದ್ಯತೆ ಕೊಡದೆ ಹೋದರೆ.. ಮಳೆ ಯಾವಾಗಲೂ ಒಂದೇ ರೀತಿ ಬರುವುದಿಲ್ಲ. ಕೆಲವೊಮ್ಮೆ ಅತಿವೃಷ್ಟಿಯಾಗುತ್ತದೆ, ಕೆಲವೊಮ್ಮೆ ಅನಾವೃಷ್ಟಿಯಾಗುತ್ತದೆ. ಅತಿವೃಷ್ಟಿಯಾದ ಸಂದರ್ಭದಲ್ಲಿ ಎರಡು ರೀತಿಯಲ್ಲಿ ಒಳ್ಳೆಯದಾಗುತ್ತದೆ. ಹೆಚ್ಚು ನೀರು ಸಂಗ್ರಹವಾಗುತ್ತದೆ, ಅಂತರ್ಜಲ ವೃದ್ಧಿಯಾಗುತ್ತದೆ ಮತ್ತು ಅನಾಹುತಗಳು ತಪ್ಪುತ್ತವೆ. ಹೀಗಾಗಿ ಬೃಹತ್ ಕೆರೆಗಳಲ್ಲಿ ಹೂಳೆತ್ತುವ ಕಾರ್ಯವನ್ನು ಆದ್ಯತೆ ಮೇಲೆ ಕೈಗೆತ್ತಿಕೊಂಡರೆ ಒಳ್ಳೆಯದಾಗುತ್ತದೆ ಅದರ ಕಡೆಗೆ ಸರ್ಕಾರ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರ ಭಾವನೆ, ಕಳಕಳಿ ನನಗೆ ಅರ್ಥವಾಗುತ್ತದೆ. ಇದರ ಬಗ್ಗೆ ಎಲ್ಲಾ ನಾಯಕರು ಮಾತನಾಡಿದ್ದಾರೆ. ಈ ಇಲಾಖೆಯ ಜವಾಬ್ದಾರಿಯನ್ನು ನಾನು ತೆಗೆದುಕೊಂಡ ಮೇಲೆ ನನಗೆ ಅನುಭವವಾಗಿದೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಿಂದ ಕೆರೆಗಳನ್ನು ತುಂಬಿಸುವ ಕೆಲಸದಲ್ಲಿ ನಾನು ವೈಯಕ್ತಿಕವಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾಗವಹಿಸಿದ್ದೇನೆ. ನಾನು ಇಡೀ ರಾಜ್ಯದ ವರದಿಯನ್ನು ತರಿಸುತ್ತೇನೆ. ನಾವು ಹೂಡಿಕೆ ಮಾಡಿದ್ದೇವೆ, ಎಷ್ಟು ಕೆಲಸ ನಡೆಯುತ್ತಿದೆ, ಎಷ್ಟು ಕೆಲಸ ನಿಂತಿದೆ ಎನ್ನುವುದನ್ನು ನೋಡುತ್ತೇವೆ. ನಾನು ಈ ಇಲಾಖೆಯ ಅಧಿಕಾರವನ್ನು ವಹಿಸಿಕೊಂಡ ಮೇಲೆ ನಮ್ಮ ಅಧಿಕಾರಿಗಳಿಗೆ ಈ ಪುಸ್ತಕ, ಬಿಲ್ ಇವೆಲ್ಲವುಗಳನ್ನು ಸೈಡ್‌ನಲ್ಲಿ ಇಟ್ಟುಬಿಡಿ ಕೆಲಸ ಮಾಡುವುದಕ್ಕಿಂತ ಮುಂಚೆ ಯಾವ ಹಂತದಲ್ಲಿತ್ತು, ಪ್ರತಿ ಬಿಲ್ ಕೊಡುವಾಗ ಕಾಮಗಾರಿ ಯಾವ ಹಂತದಲ್ಲಿದೆ, ಇನ್ನೊಂದು ಪ್ರತಿಯೊಂದು ಕಾಮಗಾರಿ ಬಗ್ಗೆ ಫೋಟೋ ತೆಗೆಯಬೇಕು ಮತ್ತು ವಿಡಿಯೋ ತೆಗೆಯಬೇಕು ಎಂದು ಹೇಳಿದ್ದೇನೆ. ಪ್ರತಿಯೊಂದು ಕೆಲಸವಾಗಬೇಕಾದರೆ ಫೋಟೋ ತೆಗೆಯಬೇಕು ಮತ್ತು ವಿಡಿಯೋ ತೆಗೆಯಬೇಕು ಎಂದು ಹೇಳಿದ್ದೇನೆ. ಎಲ್ಲ ಅಧಿಕಾರಿಗಳಿಗೆ ಜಿಪಿಎಸ್ ಆಗಬೇಕು ಎಂದು ಹೇಳಿದ್ದೇನೆ. Including Chief Engineer, ನಾನು ಫೋನ್ ಮಾಡಿದ ತಕ್ಷಣ ಇವತ್ತು ಅವರು ಎಲ್ಲಿ ಹೋಗಿದ್ದರು, ಏನು ಕೆಲಸವಾಗಿದೆ ಎನ್ನುವ ವರದಿ ಕೊಡಬೇಕು ಎಂದು ಹೇಳಿದ್ದೇನೆ. Executive Engineer level ನಿಂದ ಹಿಡಿದು ಎಲ್ಲ ವರದಿ ನನಗೆ ಬರಬೇಕು. ಉಳಿದಿರುವುದೆಲ್ಲ ವರದಿ ನಮ್ಮ ಎಂಡಿ ಯವರಿಗೆ ಹೋಗಬೇಕು ಎಂದು ಹೇಳಿದ್ದೇನೆ. ಎಲ್ಲ ಕೆಲಸ ಬಿಟ್ಟು ಎಲ್ಲರೂ ವೈನ್‌ಶಾಪ್, ಬಾರ್, ರೆಸಾರ್ಟ್ ಹಾಲಿಡೇ ಎಂದು ಕುಳಿತಿರುತ್ತಾರೆ. ಇದರ ಎಲ್ಲ ಅನುಭವಗಳು ನಮಗೆ ಆಗಿವೆ. ಅದಕ್ಕಾಗಿ ಒಂದು streamline ಮಾಡುತ್ತಿದ್ದೇವೆ. ಈಗ ಪ್ರತಿಯೊಬ್ಬ ಅಧಿಕಾರಿ ಎಲ್ಲಿ ಹೋಗುತ್ತಾರೆ, ಏನು ಮಾಡುತ್ತಾರೆ, ಕೆಲಸದ ಗುಣಮಟ್ಟ ಏನು ಎನ್ನುವುದೆಲ್ಲವು ಈಗ ಗೊತ್ತಾಗುತ್ತದೆ. ಈಗ ತಾಂತ್ರಿಕತೆ ಬೆಳೆದಿರುವುದರಿಂದ ಎಲ್ಲವನ್ನು ಗಮನಿಸಬಹುದಾಗಿದೆ. ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳನ್ನು ಖಂಡಿತವಾಗಿ ಪರಿಗಣಿಸುತ್ತೇನೆ. ಎಲ್ಲೇಲಿ ಯಾವ-ಯಾವ ಕೆರೆಗೆಗಳನ್ನು ತುಂಬಿಸಲಾಗಿದೆ, ಕಾರ್ಯ ನಡೆಯುತ್ತಿದೆಯೇ ಇಲ್ಲವೆ, ಉಪಯೋಗವಾಗುತ್ತಿದೆಯೇ ಇಲ್ಲವೆ ಎನ್ನುವುದನ್ನು ಸಂಪೂರ್ಣವಾಗಿ ತನಿಖೆ ಮಾಡಿ ಅದರ ಬಗ್ಗೆ ಸದನದಲ್ಲಿ ಒಂದು ವರದಿಯನ್ನು ಕೊಡುತ್ತೇನೆ.

**ಸಭಾಪತಿಯವರು:-** ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಕ್ತಾಯವಾಯಿತು.

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ: ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ: 18ನೇ ಡಿಸೆಂಬರ್ 2018ರ ಸಮೂರ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 117 ಪ್ರಶ್ನೆಗಳ ಪೈಕಿ 100 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:-** ಮಂಡಿಸಲಾಯಿತು.

**2. ಸಭಾಪತಿಯವರ ಅನುಮತಿಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ವಿಷಯ:- **ಹಾನಗಲ್ ತಾಲ್ಲೂಕಿನ ರೈತರಿಗೆ ಬ್ಯಾಂಕ್ ಮೂಲಕ ವಿಮೆ ವಿತರಣೆಯಲ್ಲಿ ತಾರತಮ್ಯವಾಗಿರುವ ಬಗ್ಗೆ.**

---------

**ಶ್ರೀ ಶ್ರೀನಿವಾಸ ವಿ.ಮಾನೆ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಹಾನಗಲ್ ತಾಲ್ಲೂಕಿನ ರಾಷ್ಟ್ರೀಕೃತ ಬ್ಯಾಂಕುಗಳ ನಿಷ್ಕಾಳಜಿಯಿಂದಾಗಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ರೈತರಿಗೆ ನೀಡಲಾಗುತ್ತಿರುವ ವಿಮೆಯಲ್ಲಿ ತಾರತಮ್ಯ ಉಂಟಾಗಿದೆ ಎಂದು ಖಂಡಿಸಿ, ಹಾಗೂ ಸರಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ರೈತರ ಸಾಲಮನ್ನಾ ಯೋಜನೆಯಡಿ ಹಾನಗಲ್ ತಾಲ್ಲೂಕಿನ ರೈತರಿಗೆ ಋಣಮುಕ್ತ ಪತ್ರವನ್ನು ನೀಡುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹಾನಗಲ್ ತಾಲ್ಲೂಕು ಘಟಕ ಇವರ ನೇತೃತ್ವದಲ್ಲಿ ಹಾನಗಲ್ ತಹಶೀಲ್ದಾರ ಕಛೇರಿ ಮುಂದೆ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಪ್ರತಿಭಟನೆಯಲ್ಲಿ ರಾಜ್ಯಾದ್ಯಂತ ಉಂಟಾಗಿರುವ ಬೆಳೆ ವಿಮೆಯ ಗೊಂದಲಕ್ಕೆ ಬ್ಯಾಂಕುಗಳೇ ನೇರ ಹೊಣೆ ಎಂದು ಆರೋಪಿಸಲಾಗಿದೆ. ಹಾಗೂ ಬೆಳೆ ವಿಮೆಯಲ್ಲಿ ಉಂಟಾದ ತಾರತಮ್ಯಕ್ಕೆ ಸಂಬಂಧಪಟಟ ಬ್ಯಾಂಕುಗಳನ್ನು ಹೊಣೆಗಾರರನ್ನಾಗಿಸಿ ರೈತರಿಗೆ ನೀಡಬೇಕಾಗಿರುವ ವಿಮೆಯ ಹಣವನ್ನು ಬ್ಯಾಂಕಿನವರೇ ಭರ್ತಿ ಮಾಡಬೇಕು ಹಾಗೂ ಸರಕಾರದ ಮಹಾತ್ವಾಕಾಂಕ್ಷಿ ಯೋಜನೆಯಾದ ರೈತರ ಸಾಲಮನ್ನಾ ಯೋಜನೆಯಡಿ ಹಾನಗಲ್ ತಾಲ್ಲೂಕಿನ ರೈತರಿಗೆ ಋಣಮುಕ್ತ ಪತ್ರವನ್ನು ನೀಡುವಂತೆ ಒತ್ತಾಯಿಸಿ ಪ್ರತಿಭಟನೆಯನ್ನು ಕೈಗೊಳ್ಳಲಾಗಿರುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್(ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಗಳೆ, we will do it on priority basis. ಬೇರೆ ಸಂಘಟನೆಗಳವರು ಕೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು general reply ಕೊಡುವಾಗ ಇದಕ್ಕೂ ಉತ್ತರವನ್ನು ಕೊಡುತ್ತಾರೆ.

ಆ) **ವಿಷಯ:- ಬೆಳಗಾವಿ ಸುವರ್ಣ ವಿಧಾನಸೌಧಕ್ಕೆ ಕೆಲವು ಕಛೇರಿಗಳನ್ನು ಸ್ಥಳಾಂತರಿಸುವ ಬಗ್ಗೆ.**

------

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-**ಮಾನ್ಯ ಸಭಾಪತಿಗಳೆ. ಬೆಳಗಾವಿ ಸುವರ್ಣ ಸೌಧದಲ್ಲಿ ಈ ಬಾರಿ ನಡೆದ ಚಳಿಗಾಲದ ಅಧಿವೇಶನದ ಆರಂಭದ ದಿನವೇ ಉನ್ನತ ಮಟ್ಟದ ಸಭೆ ನಡೆದು ಬೆಂಗಳೂರಿನಲ್ಲಿಯ ಕೆಲವೊಂದು ಕಛೇರಿಗಳ ಸ್ಥಳಾಂತರದ ತೀರ್ಮಾನವಾಗಲಿದೆ ಎಂದು ಈ ಭಾಗದ ಜನರ ಅಭಿಪ್ರಾಯವಾಗಿತ್ತು. ಆದರೆ ಇಲ್ಲಿಯವರೆಗೆ ಸರಕಾರ ಈ ಬಗ್ಗೆ ಸ್ಪಷ್ಟವಾದ ನಿರ್ಧಾರವನ್ನು ಪ್ರಕಟಿಸದೇ ಇರುವುದು ಈ ಭಾಗದ ಜನರಿಗೆ ಬಹಳಷ್ಟು ನಿರಾಶೆ ಉಂಟು ಮಾಡಿದೆ. ಈ ವಿಷಯವಾಗಿ ಈ ಹಿಂದೆ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿ 2013ರ ನವೆಂಬರ 11ರಂದು ಸಭೆ ನಡೆಸಿ, ಯಾವ ಕಚೇರಿಗಳನ್ನು ಸುವರ್ಣ ಸೌಧಕ್ಕೆ ಸ್ಥಳಾಂತರಿಸಬಹುದು ಎಂದು ಶಿಫಾರಸ್ಸು ಮಾಡಿತ್ತು. ಅಂತಿಮ ತೀರ್ಮಾನ ಕೈಗೊಳ್ಳುವ ಜವಾಬ್ದಾರಿಯನ್ನು ಮುಖ್ಯ ಕಾರ್ಯದರ್ಶಿಯವರಿಗೆ ಬಿಡಲಾಗಿತ್ತು. ಆದರೆ ಈ ರೀತಿ ವರ್ಗಾವಣೆ ಮಾಡಿದರೆ ಅಧಿವೇಶನದ ಸಂದರ್ಭದಲ್ಲಿ ತೊಂದರೆ ಆದೀತು ಎಂಬ ನೆಪ ಹುಡುಕಿದ ಐ.ಎ.ಎಸ್ ಅಧಿಕಾರಿಗಳು ಕಚೇರಿ ಸ್ಥಳಾಂತರ ಸೂಕ್ತವಲ್ಲವೆಂದು ಷರಾ ಬರೆದಿರುವುದು ಬೆಳಕಿಗೆ ಬಂದಿದೆ. ಈ ಹಿನ್ನಲೆಯಲ್ಲಿ ಈಗಲಾದರೂ ಬೆಳಗಾವಿ ಸುವರ್ಣಸೌಧಕ್ಕೆ ಕೆಲವೊಂದು ಮಹತ್ವದ ಕಚೇರಿಗಳನ್ನು ಆದಷ್ಟು ಬೇಗ ವರ್ಗಾಯಿಸಲು ಕ್ರಮ ಕೈಗೊಳ್ಳಬೇಕು ಮತ್ತು ಇದೇ ದಿನಾಂಕ: 21-12-2018ರ ಒಳಗಾಗಿ ಅಧಿಕೃತ ಘೋಷಣೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್(ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಗಳೆ, ಸರ್ಕಾರ ಇದರ ಬಗ್ಗೆ ಈಗಾಗಲೇ ಘೋಷಣೆ ಮಾಡಿದೆ. ಇದರ ಬಗ್ಗೆ ಈಗಾಗಲೇ Cabinet Sub-committee ಕೂಡಾ ರಚನೆಯಾಗಿದೆ. ಅಧಿಕಾರಿಗಳಲ್ಲದೆ, ಸರ್ಕಾರದ ಮಟ್ಟದಲ್ಲಿ ಒಂದು ಕ್ಯಾಬಿನೆಟ್ ಸಬ್-ಕಮಿಟಿ ಮಾಡಿ priority ಕೊಡುತ್ತಿದ್ದಾರೆ. ಆದಷ್ಟು ಯಾವ ಕಚೇರಿಗಳನ್ನು ಸ್ಥಳಾಂತರಿಸಬೇಕು ಎನ್ನುವುದನ್ನು ತೀರ್ಮಾನ ಮಾಡಿ ಆ ಕೆಲಸವನ್ನು ಮಾಡುತ್ತೇವೆ. ಕೆಲವು technical issues ಏನೇನೊ ಬರುತ್ತಿವೆ. Government has committed to shift. ಯಾವ-ಯಾವ ಕಛೇರಿಗಳನ್ನು ಸ್ಥಳಾಂತರಿಸಬೇಕು ಎನ್ನುವುದನ್ನು ತೀರ್ಮಾನ ಮಾಡುತ್ತೇವೆ. ನನ್ನ ಇಲಾಖೆಯ ಕೆಲವೊಂದು ಕಛೇರಿಗಳನ್ನು ಇಲ್ಲಿಗೆ ಸ್ಥಳಾಂತರಿಸಲಾಗುತ್ತದೆ. Upper Krishna Project concerned ಅಲ್ಲೇ ಇರಬೇಕು ಎಂದು ಇದೆ. ಮಾನ್ಯ ಸದಸ್ಯರ ಚಿಂತನೆ ಏನು ಇದೆ, ಅದೇ ಕಾಳಜಿಯು ನಮಗೆ ಇದೆ.

ಇ) ವಿಷಯ:- **ಕೈಗಾ ಪರಮಾಣ ವಿದ್ಯುತ್ ಸ್ಥಾವರದ 5 ಮತ್ತು 6ನೇ ಘಟಕ ನಿರ್ಮಾಣಕ್ಕೆ ಸಾರ್ವಜನಿಕರ ವಿರೋಧದ ಬಗ್ಗೆ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

-----

**ಶ್ರೀ ಶ್ರೀಕಾಂತ ಎಲ್, ಘೋಟ್ನೆಕರ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕಾರವಾರ ಜಿಲ್ಲೆಯ ಕೈಗಾ ಪರಮಾಣು ವಿದ್ಯುತ್ ಸ್ಥಾವರದ ಉದ್ದೇಶಿತ 5 ಮತ್ತು 6ನೇ ಘಟಕದ ನಿರ್ಮಾಣ ಸಂಬಂಧ ಸಾರ್ವಜನಿಕರಲ್ಲಿ ತೀವ್ರ ವಿರೋಧ ವ್ಯಕ್ತವಾಗಿರುತ್ತದೆ. ಉದ್ದೇಶಿತ ಘಟಕದ ಬಗ್ಗೆ ಸರಕಾರ ಯಾವ ತೀರ್ಮಾನ ಕೈಗೊಳ್ಳಲಿದೆ ಎನ್ನುವುದು ಸಾರ್ವಜನಿಕರು ಕಾದು ನೋಡುವಂತಾಗಿದೆ. ಈಗಾಗಲೇ ಸಾರ್ವಜನಿಕ ಅಹವಾಲು ಆಲಿಕೆ ಸಭೆಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಬಹುತೇಕ ಮಂದಿ ಉದ್ದೇಶಿತ 700 ಮೆ.ವ್ಯಾಟ್ ಸಾಮರ್ಥ್ಯಗಳ 5 ಹಾಗೂ 6ನೇ ಘಟಕ ನಿರ್ಮಾಣವನ್ನು ಕೈಬಿಡುವಂತೆ ಒತ್ತಾಯಿಸುತ್ತಿದ್ದಾರೆ. ಕೈಗಾ ಸುತ್ತಮುತ್ತ ಮೂಲಭೂತ ಸೌಲಭ್ಯ ಕಲ್ಪಸಲು ಕೂಡಾ ಒತ್ತಾಯಿಸಿದ್ದಾರೆ. ಈಗಾಗಲೇ ಸ್ಥಾಪನೆಯಾಗಿರುವ ನಾಲ್ಕು ಘಟಕಗಳು ಇಲ್ಲಿನ ಜನರ ಆರೋಗ್ಯ, ನೀರು ಹಾಗೂ ಪರಿಸರದ ಮೇಲೆ ವ್ಯಾಪಕ ದುಷ್ಪರಿಣಾಮ ಬೀರುತ್ತಿದೆ. ಇದರಿಂದಾಗಿ ಯಾವುದೇ ಕಾರಣಕ್ಕೂ 5 ಮತ್ತು6ನೇ ಘಟಕ ಸ್ಥಾಪನೆಗೆ ಅವಕಾಶ ಮಾಡಿಕೊಡಬಾರದು ಅಣು ವಿದ್ಯುತ್ ಘಟಕಗಳಿಂದ ಕ್ಯಾನ್ಸರ್ ಸೇರಿದಂತೆ ಮಾರಕ ಕಾಯಿಲೆಗಳು ಹೆಚ್ಚುತ್ತಿವೆ ಕಾಳಿ ನದಿಗೆ ನಿಕಿರಣಯುಕ್ತ ನೀರನ್ನು ಬಿಡುವುದರಿಂದ ಜಲಚರಗಳ ಮೇಲೆ ದುಷ್ಪರಿಣಾಮವಾಗಿದೆ. ಕೈಗಾ ಪರಿಸರ ಸೂಕ್ಷ್ಮ ಪ್ರದೇಶ, ಹುಲಿ ರಕ್ಷಿತ ಪ್ರದೇಶ ಹಾಗೂ ದಾಂಡೇಲಿ ಅಭಯಾರಣ್ಯ ಸಮೀಪದಲ್ಲಿದೆ. ಅಣು ವಿದ್ಯುತ್ ಯೋಜನೆಯಿಂದ ಸಂತ್ರಸ್ತ ಜನರಿಗೆ ನ್ಯಾಯಯುತ ಪುನರ್ವಸತಿ ಆಗಿಲ್ಲ. ಹೀಗಾಗಿ ಮತ್ತೆ ಘಟಕಗಳ ಸ್ಥಾಪನೆ ಯಾವುದೇ ಕಾರಣಕ್ಕೂ ತಾಲ್ಲೂಕಿನ ಸಮಸ್ತ ಗ್ರಾಮಸ್ಥರು ಸಾರ್ವಜನಿಕ ಹಿತದೃಷ್ಟಿಯಿಂದ ಬೇಡವೆಂದು ಪ್ರತಿಭಟನೆ ಮಾಡುತ್ತೀರುವುದರ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

(ಮುಂದು)

(521)18-12-2018(01-40)ಬಿಎಸ್‌ಡಿ-ಆರ್‌ಎನ್

**ಶ್ರೀ ಡಿ.ಕೆ. ಶಿವಕುಮಾರ್ (ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಸೂಕ್ತವಾದ ಒಂದು ಉತ್ತರವನ್ನು ಕೊಡಿಸುತ್ತೇನೆ.

**ಈ) ವಿಷಯ: ರಾಜ್ಯ ಸರ್ಕಾರಿ ನೌಕರರಿಗೆ ಪರಿಮಿತಿ ರಜಾ ಪಟ್ಟಿಯಲ್ಲಿ ಕ್ರೈಸ್ತ ಸಮುದಾಯದವರಿಗೆ ಪವಿತ್ರ ಹಬ್ಬವಾದ ಕನ್ಯಾಮರಿಯಮ್ಮ ಜಯಂತಿ ಹಬ್ಬವನ್ನು ಸೇರಿಸುವ ಬಗ್ಗೆ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ,

"ಕ್ರೈಸ್ತ ಸಮುದಾಯ ಆಚರಿಸುತ್ತಿರುವ ಹಬ್ಬಗಳಲ್ಲಿ ಕನ್ಯಾಮರಿಯಮ್ಮನವರ ಹಬ್ಬ ಸೆಪ್ಟೆಂಬರ್ 8 ರಂದು ಕರಾವಳ ಭಾಗಗಳಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು, ರಾಜ್ಯ ಮತ್ತು ವಿದೇಶದಲ್ಲಿರುವ ಕ್ರೈಸ್ತ ಸಮುದಾಯದವರಿಗೆ ಈ ಹಬ್ಬವು ಅತ್ಯಂತ ಪ್ರಮುಖ ಹಬ್ಬವಾಗಿರುತ್ತದೆ. ಈ ಹಬ್ಬಕ್ಕೆ ಕರಾವಳಿ ಭಾಗದ ಜಿಲ್ಲೆಗಳಗೆ ಸೆಪ್ಟೆಂಬರ್ 8ರಂದು ರಜೆ ಘೋಷಿಸಿಬೇಕೆಂದು ಸರ್ಕಾರ ಬೇಡಿಕೆ ಸಲ್ಲಿಸಲಾಗಿತ್ತು, ಇದೇ ರೀತಿ ಕೊಡಗು ಜಿಲ್ಲೆಯಲ್ಲಿ ಹುತ್ತರಿ ಹಬ್ಬಕ್ಕೆ ರಜೆ ಘೋಷಿಸಲು ಸರಕಾರ ಕೊಡಗು ಜಿಲ್ಲೆಗೆ ಸೀಮಿತವಾಗಿ ಅವಕಾಶ ಕಲ್ಪಿಸಿದೆ.

ರಾಜ್ಯದಲ್ಲಿ ಸನ್ಮಾನ್ಯ ಮುಖ್ಯಮಂತಿಗಳಾಗಿದ್ದ ಶ್ರೀ ಸಿದ್ದರಾಮಯ್ಯನವರು 28-11-2016ರಂದು ಅಧಿಸೂಚನೆ ಮೂಲಕ **2017ನೇ ವರ್ಷಕ್ಕೆ ರಾಜ್ಯ ಸರ್ಕಾರಿ ನೌಕರರಿಗೆ ಇರುವ ಪರಿಮಿತಿ ರಜಾದಿನಗಳ ಪಟ್ಟಿಯಲ್ಲಿ ಕ್ರಮ ಸಂ.14ರಲ್ಲಿ 08-09-2016 ಶುಕ್ರವಾರ ಕನ್ಯಾಮರಿಯಮ್ಮ ಜಯಂತಿಯನ್ನು ಪರಿಮಿತ ರಜಾದಿನವಾಗಿ ಘೋಷಣೆ ಮಾಡಲಾಗಿತ್ತು**. ಅದೇ ರೀತಿ 2018ನೇ ರಾಜ್ಯ ಸರ್ಕಾರಿ ನೌಕರರಿಗೆ ಇರುವ ಪರಿಮಿತ ರಜಾದಿನಗಳಲ್ಲಿ 08-09-2018 2ನೇ ಶನಿವಾರ ಬರುವ ದಿನಗಳು ಎಂದು ಘೋಷಿಸಲಾಗಿತ್ತು. ಆದರೆ ದಿನಾಂಕ 23-11-2018ರಂದು ನೀಡಿದ ಪರಿಮಿತ ರಜಾ ದಿನಗಳ (Restricted Holiday for the State Govt Employees for the year 2019) ಇದರಲ್ಲಿ ಕನ್ಯಾಮರಿಯಮ್ಮ ಜಯಂತಿಯ ರಜೆಯನ್ನು ಪರಿಮಿತ ರಜೆಯನ್ನಾಗಿ ಘೋಷಿಸಿರುವುದಿಲ್ಲ.

ಕ್ರೈಸ್ತ ಸಮುದಾಯದ ಬಹುನಿರೀಕ್ಷಿತ ಮತ್ತು ಪವಿತ್ರವಾದ ಈ ಹಬ್ಬಕ್ಕೆ ದೇಶ ವಿದೇಶಗಳಲ್ಲಿ ಪವಿತ್ರ ದಿನವನ್ನಾಗಿ ಆಚರಿಸುವ ಈ ಹಬ್ಬವನ್ನು ಏಕಾಏಕಿ ಕೈಬಿಡಲು ಕಾರಣವೇನು? ಅಥವಾ ಕಣ್‌ತಪ್ಪಿನಿಂದ ಸಂಭವಿಸಿದೆಯೇ? ಈ ಬಗ್ಗೆ ಸೂಕ್ತ ವಿವರಣೆಯನ್ನು ಮತ್ತು ಕಾರಣವನ್ನು ನೀಡುವುದು ಜೊತೆಗೆ ದಿನಾಂಕ: 08-09-2018ನ್ನು ಪರಿಮಿತ ರಜೆ (Restricted Holiday) ಯನ್ನಾಗಿ ಘೋಷಿಸಬೇಕೆಂದು ರಾಜ್ಯದ ಮುಖ್ಯಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ".

ಎರಡು-ಮೂರು ವರ್ಷಗಳಂದ ಇರುವುದನ್ನು ಈ ವರ್ಷ ತೆಗೆದುಹಾಕಿದ್ದಾರೆ. ಈ ರೀತಿ ಕಣ್ತಪ್ಪಿನಿಂದ ತೆಗೆದುಹಾಕಿದ್ದಾರೋ ಅಥವಾ ಯಾವ ಕಾರಣದಿಂದ ಆಗಿದೆ ಎಂಬುದು ನನಗೆ ಗೊತ್ತಿಲ್ಲ. ಹಾಗಾಗಿ ಪುನ: ಹಿಂದೆ ಇದ್ದಂತೆ ಘೋಷಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಡಿ.ಕೆ. ಶಿವಕುಮಾರ್ (ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ರಜೆ ವಿಚಾರದಲ್ಲಿ ಮಾನ್ಯ ಸದಸ್ಯರ ನಡುವೆ ವಿಭಿನ್ನವಾದ ಚರ್ಚೆ ಇದೆ. ಅನೇಕ ಎಂ.ಎಲ್.ಎ ಗಳು ರಜೆಗಳನ್ನು ನಿಲ್ಲಿಸಿ, ಕಛೇರಿ ಕೆಲಸ ಮಾಡುವಂತೆ ಮಾಡಿ ಎಂದು ಒತ್ತಡ ಮಾಡುತ್ತಿದ್ದಾರೆ. ಇದಲ್ಲದೇ ಸಂಘಟನೆಗಳು ಇಷ್ಟೊಂದು ರಜೆ ಕೊಡಲಾಗುತ್ತಿದೆ ಎಂದು ಟೀಕೆ-ಟಿಪ್ಪಣಿಗಳನ್ನು ಮಾಡುತ್ತಿವೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕಾಗಿದ್ದು, ಇದರ ಬಗ್ಗೆ ಸಂಬಂಧಪಟ್ಟವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಉ. ವಿಷಯ: ಬಾಗಲಕೋಟೆ ಜಿಲ್ಲೆಯಲ್ಲಿ ದಿನಾಂಕ 14-12-2018ರಂದು 13 ಸಹ ಶಿಕ್ಷಕರು ಮತ್ತು 5 ಜನ ಅಂಗನವಾಡಿ ಕಾರ್ಯಕರ್ತೆಯರನ್ನು ಅಮಾನತ್ತು ಮಾಡಿರುವ ಬಗ್ಗೆ.**

**ಶ್ರೀ ಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

" ಬಾಗಲಕೋಟೆ ಜಿಲ್ಲೆಯಲ್ಲಿ ದಿನಾಂಕ 14-12-2018ರಂದು ಒಂದೇ ದಿನ 13 ಜನ ಪ್ರಾಥಮಿಕ ಶಾಲಾ ಸಹ ಶಿಕ್ಷಕರುಗಳನ್ನು ಮತ್ತು 5 ಜನ ಅಂಗನವಾಡಿ ಕಾರ್ಯಕರ್ತೆಯರನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಣಾ ಅಧಿಕಾರಿಗಳು ಸಂಬಂಧಿತ ಶಾಲೆಗಳಿಗೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಅಮಾನತ್ತು ಕ್ರಮವನ್ನು ಜರುಗಿಸಿರುತ್ತಾರೆ. ಇದನ್ನು ವಿರೋಧಿಸಿ ಜಿಲ್ಲೆಯ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಸುಮಾರು 3000 ಜನ ದಿನಾಂಕ 17-12-2018ರಂದು ಜಿಲ್ಲೆಯ ಜಿಲ್ಲಾಡಳಿತದ ಭವನದ ಎದುರು ಪ್ರತಿಭಟನೆ ಕೆಲಸ ಕೈಗೊಂಡಿರುತ್ತಾರೆ. ಇದರಿಂದಾಗಿ ಜಿಲ್ಲೆಯ ಒಂದು ದಿನದ ಪ್ರಾಥಮಿಕ ಶಾಲಾ ವೇಳೆಯ ಕಲಿಕಾವಧಿ ಮತ್ತು ಅಂಗನವಾಡಿ ಕೇಂದ್ರಗಳ ನಿರ್ವಹಣೆ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಇದು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಶಿಕ್ಷಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಆಡಳಿತದಲ್ಲಿನ ಬೇಜವಾಬ್ದಾರಿಯನ್ನು ಎತ್ತಿ ತೋರಿಸುತ್ತದೆ.

ಇದನ್ನು ವಿರೋಧಿಸಿ ಜಿಲ್ಲೆಯ ಎಲ್ಲಾ ಶಿಕ್ಷಣ/ಅಂಗನವಾಡಿ ಸಂಘಟನೆಗಳು ದಿನಾಂಕ 16-12-2018ರಂದು ಪತ್ರಿಕಾಗೋಷ್ಠಿ ಕರೆದು ಅಧಿಕಾರಿಗಳ ನಡೆಯನ್ನು ಖಂಡಿಸಿ ಈ ಕುರಿತು ಪ್ರತಿಭಟನೆಗೆ ಇಳಿಯುವುದಾಗಿ ಹೇಳಿಕೆ ನೀಡಿ, ಆ ಪ್ರಕಾರ ದಿನಾಂಕ 17-12-2018ರಂದು ಪ್ರತಿಭಟನೆ ಕೈಗೊಂಡು ಜಿಲ್ಲೆಯ ಇಡೀ ಪ್ರಾಥಮಿಕ ಶಿಕ್ಷಣ ಕಲಿಕೆ ಮತ್ತು ಅಂಗನವಾಡಿ ಕೇಂದ್ರಗಳ ನಿರ್ವಹಣೆ ಸ್ತಬ್ಧವಾಯಿತು. ಇದರಿಂದ ಶಾಲಾ ಮಕ್ಕಳು/ಅಂಗನವಾಡಿ ಮಕ್ಕಳಿಗಾದ ವೇಳೆಯ ಅಪವ್ಯಯ ಮತ್ತು ಮಾನಸಿಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಣಾಮಕ್ಕೆ ಯಾರು ಹೊಣೆ? ಈ ತರನಾಗಿ ಪ್ರತಿಭಟನೆ ಮಾಡಿದವರನ್ನು ಒಂದೇ ದಿನಕ್ಕೆ ದಿನಾಂಕ 17-12-2018ರ ಸಂಜೆಯ ವೇಳೆಗೆ ಅಮಾನತ್ತು ಆದೇಶ ಹಿಂಪಡೆದಿರುವುದನ್ನು ಸಹ ಅವಲೋಕಿಸಿ ಈ ರೀತಿ ಪ್ರಮಾದ ಜರುಗುವಲ್ಲಿ ಯಾರು ಹೊಣೆ?

ಇದೆಲ್ಲಾ ಘಟನೆ ಜರುಗುವುದರ ಹಿನ್ನೆಲೆಗೆ ಕಾರಣೀಭೂತವಾದ ಮುಖ್ಯ ಅಂಶ ಶಿಕ್ಷಕ ಸಮೂಹದಿಂದ ಕೇಳಿ ಬರುತ್ತಿರುವುದು ಜಿಲ್ಲೆಯಲ್ಲಿ ಬಿಸಿಯೂಟ ಅಡುಗೆ ಸಿಬ್ಬಂದಿಗೆ ಏಪ್ರಾನ್ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಸಂಭವವಿದೆ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಡಿಡಿಪಿಐ ರವರು ತುಮಕೂರಿನ ಮೂಲಕ Perfect Safety ಇವರಿಗೆ 2,000/- ರೂಪಾಯಿಗಳಂತೆ ಒಂದರಂತೆ ಏಪ್ರಾನ್ ಖರೀದಿಸಲು ಶಿಕ್ಷಕರಿಗೆ ಒತ್ತಡ ಹೇರುತ್ತಿದ್ದು, ನೈಜ ಬೆಲೆ ಮಾರುಕಟ್ಟೆಯಲ್ಲಿ ಒಂದಕ್ಕೆ ರೂ.600/- ಇದೆ ಎಂದು ಶಿಕ್ಷಕ ವರ್ಗದವರು ಹೇಳುತ್ತಿರುವುದು. ಇದರಿಂದ ಜಿಲ್ಲೆಯಲ್ಲಿ ಏಪ್ರಾನ್ ಖರೀದಿಯಲ್ಲಿ ಭ್ರಷ್ಟಾಚಾರವಾಗುವ ಲಕ್ಷಣಗಳು ಕಂಡು ಬಂದಿರುತ್ತವೆ.

ಕಾರಣ ಈಗಲಾದರೂ ಸರ್ಕಾರ ಎಚ್ಚೆತ್ತು ಪ್ರಕರಣದ ಹಿಂದಿನ ಸತ್ಯಾಸತ್ಯತೆಯನ್ನು ಕಂಡುಹಿಡಿದು ಮತ್ತು ಈ ಕುರಿತು ಬಾಗಲಕೋಟೆ ಜಿಲ್ಲಾ ಪಂಚಾಯತ್, ಜಿಲ್ಲಾಡಳಿತ ಭ್ರಷ್ಟಾಚಾರ ಮುಕ್ತವಾಗಿ ಸುಗಮ ಆಡಳಿತ ನಡೆಯುವಂತೆ ಕ್ರಮ ಕೈಗೊಳ್ಳಬೇಕೆಂದು ಸರಕಾರಕ್ಕೆ ತಮ್ಮ ಮುಖಾಂತರ ವಿನಂತಿಸುತ್ತೇನೆ."

ಮನಸೋಇಚ್ಛೆ ಶಿಕ್ಷಕರನ್ನು ಹಾಗೂ ಅಂಗನವಾಡಿ ಕಾರ್ಯಕರ್ತೆಯರನ್ನು ಅಮಾನತ್ತು ಮಾಡಿ, ಈ ಅವಾಂತರಕ್ಕೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್ (ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆಯ ವಿಚಾರಗಳಿಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿದ್ದು, ಇಬ್ಬರು ಸಚಿವರ ಜೊತೆ ಮಾತನಾಡಿ ಉತ್ತರವನ್ನು ಕೊಡಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ಬಹಳ ಸೂಕ್ಷ್ಮವಾದ ವಿಚಾರವಾಗಿದ್ದು, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅವರ ಅಧೀನದಲ್ಲಿರುವ ಇಲಾಖೆಯ ಪ್ರಗತಿ ಮತ್ತು ಚಟುವಟಿಕೆಗಳ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಸ್ಥಳ ತನಿಖೆ ಮಾಡುವ ಪ್ರಕ್ರಿಯೆಗಳು ಒಂದು ಕಡೆ ಇದೆ. ಅದರಲ್ಲಿ ಯಾರದ್ದು ತಪ್ಪಾಗಿದೆ ಮತ್ತು ಯಾರದ್ದು ಸರಿ ಎನ್ನುವಂತಹದ್ದನ್ನು ಗಮನಿಸಬೇಕು.

**ಸಭಾಪತಿಯವರು**:– ಇದಕ್ಕೆ ಚರ್ಚೆ ಬೇಕೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:– ಚರ್ಚೆಯನ್ನು ಮಾನ್ಯ ಸದಸ್ಯರು ಮಾಡಬೇಕು. ನಾನು ಏಕೆ ಹೇಳುತ್ತಿದ್ದೇನೆಂದರೆ, ಯಾವುದೇ ಒಬ್ಬ ಅಧಿಕಾರಿ ತಮ್ಮ ಅಧೀನದಲ್ಲಿರುವವರ ಪ್ರಗತಿ ಪರಿಶೀಲನೆ ಮಾಡುವುದು ಒಂದು ಭಾಗ. ಗಲಾಟೆ, ಚರ್ಚೆ, ವಾದ, ಸ್ಟ್ರೈಕ್‌ಗಳೆಲ್ಲವೂ ಇನ್ನೊಂದು ಭಾಗವಾಗಿದೆ. ಮೇಲಾಧಿಕಾರಿ ಕೆಳಗಿನವರನ್ನು ಪರಿಶೀಲನೆ ಮಾಡುವುದು ಸೇರಿದಂತೆ, ಸರ್ಕಾರವು ಇದರ ಬಗ್ಗೆ ಗಮನಿಸಿ, ಸಮಾಜದ ಹಾಗೂ ಇಲಾಖೆಗಳ ಹಿತದೃಷ್ಟಿಯಿಂದ ಕಾರ್ಯವೈಖರಿಯಲ್ಲಿ ಅಧಿಕಾರಿಗಳಿಗೆ ಆಗುವ ಅಡೆ–ತಡೆಗಳನ್ನು ನಿವಾರಣೆ ಮಾಡುವ ಪರಿಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಎರಡು–ಮೂರು ವಿಚಾರಗಳನ್ನು ಕ್ಲಬ್ ಮಾಡುವುದಕ್ಕಿಂತ ನಿರ್ದಿಷ್ಟ ವಿಚಾರದ ಕಡೆ ಬೇರೆ ಬೇರೆಯಾಗಿ ತನಿಖೆ ಮಾಡಬೇಕೆಂದು ಆಗ್ರಹಿಸುತ್ತೇನೆ.

**ಸಭಾಪತಿಯವರು**:– ಅವರುಗಳ ಅಮಾನತ್ತಿನ ಅವಶ್ಯಕತೆ ಇದೆಯೇ?

**ಶ್ರೀ ಎಸ್.ಆರ್. ಪಾಟೀಲ್**:– ಮಾನ್ಯ ಸಭಾಪತಿಯವರೇ, ಅವರುಗಳನ್ನು ಅಮಾನತ್ತು ಮಾಡಿ ಸಂಜೆಗೆ ವಾಪಸ್ಸು ಪಡೆದಿದ್ದಾರೆ. ಬಾಗಲಕೋಟೆ ಜಿಲ್ಲೆಯ ಪ್ರಾಥಮಿಕ ಶಾಲೆಯ ಎಲ್ಲಾ ಶಿಕ್ಷಕರು ಸತ್ಯಾಗ್ರಹ ಮಾಡಿದ್ದಾರೆ. ಮನಸೋಇಚ್ಛೆ ಶಾಲೆಗೆ ವಿಸಿಟ್ ಮಾಡುವುದು, ಶಿಕ್ಷಕರನ್ನು ಸಸ್ಪೆಂಡ್ ಮಾಡುವುದು, ಅಂಗನವಾಡಿಗಳಿಗೆ ವಿಸಿಟ್ ಮಾಡಿ ಕಾರ್ಯಕರ್ತರನ್ನು ಸಸ್ಪೆಂಡ್ ಮಾಡುವುದು ನಡೆದಿದೆ. ಹೀಗಾಗಿ ಅಂಗನವಾಡಿ ಕಾರ್ಯಕರ್ತರು ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರು ಜಿಲ್ಲಾಡಳಿತ ಭವನದ ಮುಂದೆ ಸತ್ಯಾಗ್ರಹ ಮಾಡಿದ್ದಾರೆ. ಇಡೀ ಅಂಗನವಾಡಿ ಹಾಗೂ ಶಾಲೆಗಳು ಕ್ಲೋಸ್ ಆಗಿವೆ. ಸಂಜೆ ಆದೇಶವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿ 'ಅಂಧೇರಿ ನಗರ ಚೌಪಟ್ ರಾಜನ ಆಳ್ವಿಕೆ ಆಗಿದೆ. ಹೇಳುವವರು ಕೇಳುವವರು ಇಲ್ಲದಂತಾಗಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(522)18–12–2018(1–50)ಹೆಚ್‌ವಿಃವಿಕೆ**

(ಸಭಾಪತಿಯವರ ಉಪಸ್ಥಿತಿ)

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾಃಜಯಮಾಲ (ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರ ಸುಮಾರು 2–3 ಇಲಾಖೆಗಳಿಗೆ ಸಂಬಂಧಪಟ್ಟಿರುವುದಾಗಿದೆ. ಆದ್ದರಿಂದ ನಾವು ಎರಡು ಇಲಾಖೆವರು ಕುಳಿತುಕೊಂಡು ಚರ್ಚೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸುವಂತಹ ಪ್ರಯತ್ನವನ್ನು ಮಾಡುತ್ತೇವೆ.

**ಊ) ಉತ್ತರ ಕರ್ನಾಟಕದಲ್ಲಿ ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸುವ ಬಗ್ಗೆ.**

– – –

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಇಲ್ಲಿನ ಜನತೆಗೆ ಉದ್ಯೋಗ, ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಉತ್ತರ ಕರ್ನಾಟಕದ ಪ್ರತಿ ಜಿಲ್ಲೆಗಳಲ್ಲಿ ಕೈಗಾರಿಕಾ ಪಾರ್ಕ್‌ಗಳ ತುರ್ತು ಅಗತ್ಯತೆ ಇದೆ. ಈಗಾಗಲೇ ರಾಜ್ಯದಲ್ಲಿರುವ 162 ಕೈಗಾರಿಕಾ ಪ್ರದೇಶಗಳಲ್ಲಿ ಹೆಚ್ಚಿನ ಕೈಗಾರಿಕಾ ಪ್ರದೇಶಗಳು ಕೆಲವೇ ಕೆಲವು ಜಿಲ್ಲೆಗಳಲ್ಲಿ ಮಾತ್ರವೇ ಕೇಂದ್ರೀಕರಿಸಿ ಸ್ಥಾಪಿಸಿರುವ ಬಗ್ಗೆ ಹಲವಾರು ಪತ್ರಿಕೆಗಳಲ್ಲಿ ವರದಿಯಾಗಿದ್ದರೂ ಸರಕಾರವು ಈ ವಿಷಯದ ಬಗ್ಗೆ ಸಮರ್ಪಕವಾಗಿ ಗಮನ ಹರಿಸದಿರುವುದರಿಂದ ಉತ್ತರ ಕರ್ನಾಟಕದ ಜನತೆಗೆ ಅನ್ಯಾಯ ಮಾಡಿರುವುದಾಗಿದೆ. ಉತ್ತರ ಕರ್ನಾಟಕದ ಕೃಷಿಕರು ಮಳೆ ಆಧಾರಿತ ಕೃಷಿ ಪದ್ಧತಿಯನ್ನು ಅವಲಂಭಿಸಿದ್ದು ಯಾವುದೇ ಸಮರ್ಪಕ ನೀರಾವರಿ ಯೋಜನೆಗಳ ಮೂಲಕ ಕೃಷಿ ಚಟುವಟಿಕೆಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಇದುವರೆವಿಗೂ ಸಾಧ್ಯವಾಗದಿರುವುದರಿಂದ ಉತ್ತರ ಕರ್ನಾಟಕದ ಜನತೆ ಪ್ರತಿ ವರ್ಷವೆಂಬಂತೆ ಬರಗಾಲದ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದು ಉತ್ತರ ಕರ್ನಾಟಕದ ಜನತೆ ಈ ಕಾರಣಕ್ಕಾಗಿ ಗುಳೆ ಹೋಗುತ್ತಿದ್ದಾರೆ. ಇದಕ್ಕೆ ಉತ್ತರ ಕರ್ನಾಟಕದಲ್ಲಿ ಕೈಗಾರಿಕಾ ಪಾರ್ಕ್‌ಗಳ ಸ್ಥಾಪನೆಯೇ ಪರಿಹಾರವಾಗಿದೆ. ಉತ್ತರ ಕರ್ನಾಟಕದಲ್ಲಿ ಕೈಗಾರಿಕಾ ಪಾರ್ಕ್‌ಗಳ ಸ್ಥಾಪನೆ ನಿರ್ವಹಣೆ, ಅದಕ್ಕೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ಕೆಲಸಗಳು ಒಂದು ನಿರಂತರ ಪ್ರಕ್ರಿಯೆಯಾಗಿದ್ದು ಯಾವುದೇ ಸರ್ಕಾರ ಬಂದರೂ ಉತ್ತರ ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಪ್ರತಿಯೊಂದು ಜಿಲ್ಲೆಯಲ್ಲಿ ವಿಶೇಷ ಆಸ್ಥೆ ವಹಿಸಿ ಕೈಗಾರಿಕಾ ಪಾರ್ಕ್ ಸ್ಥಾಪಿಸಿ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಖಾನೆಗಳು, ಕಂಪನಿಗಳು ಬರುವಂತೆ ಪ್ರೋತ್ಸಾಹಿಸುವ ಮೂಲಕ ಈ ಭಾಗದ ಜನರ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವಂತೆ ಹಾಗೂ ವಿದ್ಯಾವಂತರು ಮತ್ತು ವಿಶೇಷ ಪರಿಣಿತಿ ಹೊಂದಿರುವ ತಾಂತ್ರಿಕ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಇದೇ ಭಾಗದಲ್ಲಿ ಉದ್ಯೋಗವನ್ನು ದೊರಕಿಸುವ ಮೂಲಕ ಆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾಗದ ಜನರ ವಲಸೆಯನ್ನು ತಡೆಗಟ್ಟಬೇಕಾಗುತ್ತದೆ. ಇದರಿಂದ ಕೈಗಾರಿಕೆಯಲ್ಲಿ ಉತ್ತರ ಕರ್ನಾಟಕ ಹಿಂದಿದೆ ಎಂಬಂತಾಗಿದೆ. ರಾಜ್ಯದ ಎಲ್ಲಾ ಭಾಗಗಳ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಈ ಭಾಗದಲ್ಲೂ ಕೈಗಾರಿಕಾ ಪಾರ್ಕ್‌ಗಳ ಸ್ಥಾಪನೆ, ಅವುಗಳಿಗೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ವಿಶೇಷ ಅನುದಾನ ಬಿಡುಗಡೆ ಮಾಡಲು ಅನುವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಲು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್( ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನವನ್ನು ಪ್ರಾರಂಭಿಸಿದ್ದು ನಮ್ಮ ಪಕ್ಷದ ಸರ್ಕಾರ. ಈಗಲೂ ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಸಾಕಷ್ಟು ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೆ ಕೈಗಾರಿಕಾ ನೀತಿಯನ್ನು ತಂದಿದ್ದೇವೆ. ಯಾರು ಹೊಸದಾಗಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬರುತ್ತಿದ್ದಾರೆ ಅವರಿಗಾಗಿ ರಾಜ್ಯ ಮಟ್ಟದ ಸಮಿತಿಯನ್ನು ರಚನೆ ಮಾಡಲಾಗಿದೆ.

ಮಾನ್ಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಜನರು ವಲಸೆ ಹೋಗುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಅವರ ಮಾತು ನಿಜ. ಬೆಂಗಳೂರು ಮತ್ತಿತರ ಪ್ರದೇಶಗಳಿಗೆ ಹಾಗೂ ಹೊರ ರಾಜ್ಯಗಳಿಗೆ ಜನರು ವಲಸೆ ಹೋಗುತ್ತಿದ್ದಾರೆ. ಆದರೆ, ಈ ಭಾಗದಲ್ಲಿ ಸಾಕಷ್ಟು ನೀರಾವರಿ ಸೌಲಭ್ಯಗಳಿವೆ. ನಿರುದ್ಯೋಗ ಎನ್ನುವುದು ಇಡೀ ರಾಷ್ಟ್ರದಲ್ಲಿಯೇ ಬಹಳ ದೊಡ್ಡ ಸಮಸ್ಯೆಯಾಗಿದೆ. ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅನೇಕ ಸರ್ಕಾರಗಳು ಹಲವಾರು ಪ್ರಯತ್ನಗಳನ್ನು ಮಾಡಿವೆ. ಆದ್ಯತೆಯ ಮೇರೆಗೆ ನಮ್ಮ ಸರ್ಕಾರ ಈ ವಿಚಾರವನ್ನು ತೆಗೆದುಕೊಳ್ಳುತ್ತದೆ. ಈ ಬಗ್ಗೆ ಮಾನ್ಯ ಕೈಗಾರಿಕಾ ಸಚಿವರಿಂದ ಉತ್ತರ ಕೊಡಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಋ) ಚಿಕ್ಕಮಗಳೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ಮತ್ತು ಕೃಷಿ ಉದ್ದೇಶಕ್ಕಾಗಿ ಬಳಸುವ ನೀರಿಗೆ ನೀಡುವ ನೀರಿನ ಹಕ್ಕುಪತ್ರ ದೃಢೀಕರಣದಲ್ಲಿ ಉಂಟಾಗಿರುವ ಗೊಂದಲದ ಬಗ್ಗೆ.**

– – –

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಮತ್ತು ಕೃಷಿ ಉದ್ದೇಶಗಳಿಗೆ ನೀಡುವ ನೀರಿನ ಹಕ್ಕುಪತ್ರ ದೃಢೀಕರಣವನ್ನು ಕಂದಾಯ ಇಲಾಖೆಯ ಅಧಿಕಾರಿಗಳು ನೀಡಬೇಕೇ ಅಥವಾ ಪಂಚಾಯಿತಿ ಅಧಿಕಾರಿಗಳು ನೀಡಬೇಕೆ ಎಂಬ ಗೊಂದಲದಿಂದ ರೈತರಿಗೆ ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಬಾರಿ ತೊಂದರೆಯಾಗುತ್ತಿದೆ. 'ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನೀಡಲಿ' ಎಂದು ಜಿಲ್ಲಾಧಿಕಾರಿಗಳು ದಿನಾಂಕಃ03.09.2018ರಂದು ಆದೇಶ ನೀಡಿದ್ದಾರೆ. ಆದರೆ, ಅದರಲ್ಲಿ ಸ್ಪಷ್ಟವಾಗಿ ಯಾವುದೇ ಅಂಶವನ್ನು ಹೇಳದೇ ಇರುವುದರಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನೀರಿನ ಹಕ್ಕುಪತ್ರ ನೀಡಲು ತೊಂದರೆಯಾಗುತ್ತಿದೆ ಹಾಗೂ ಈ ಹಿಂದೆ ಕಂದಾಯ ಅಧಿಕಾರಿಗಳು ಅಂದರೆ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರು ನೀರಿನ ಪತ್ರವನ್ನು ನೀಡುತ್ತಿದ್ದರು ಈಗ ಕಂದಾಯ ಅಧಿಕಾರಿಗಳು ನೀಡುತ್ತಿಲ್ಲ ಹಾಗೂ ಪಂಚಾಯಿತಿ ಅಧಿಕಾರಿಗಳು ನೀಡುತ್ತಿಲ್ಲ.

ಆದ್ದರಿಂದ ಚಿಕ್ಕಮಗಳೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಮತ್ತು ಕೃಷಿ ಉದ್ದೇಶಗಳಿಗೆ ನೀಡುವ ನೀರಿನ ಹಕ್ಕುಪತ್ರ ದೃಢೀಕರಣ ನೀಡುವ ಕುರಿತು ಸರ್ಕಾರದ ಆದೇಶವೇನು, ಜಿಲ್ಲೆಯ ಜಿಲ್ಲಾಧಿಕಾರಿಗಳ ಆದೇಶವೇನು, ಕಂದಾಯ ಅಧಿಕಾರಿಗಳು ಅಥವಾ ಪಂಚಾಯಿತಿ ಅಧಿಕಾರಿಗಳ ನಡುವೆ ಇರುವ ಗೊಂದಲಗಳೇನು, ಈ ರೀತಿ ಗೊಂದಲಕ್ಕೆ ಕಾರಣಗಳೇನು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಗೊಂದಲಗಳಿಂದಾಗಿ ರೈತರು ಹಾಗೂ ಗ್ರಾಮೀಣ ಭಾಗದ ಜನರಿಗೆ ತೊಂದರೆಯಾಗುತ್ತಿರುವ ವಿಚಾರವನ್ನು ಶೂನ್ಯವೇಳೆಯಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್( ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಎ) ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮಹಾಲಕ್ಷ್ಮಿ ಏತ ನೀರಾವರಿ ಯೋಜನೆ ನೆನಗುದಿಗೆ ಬಿದ್ದಿರುವ ಬಗ್ಗೆ.**

– – –

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ದಿನಾಂಕಃ18.12.2018ರ 'ತರುಣ್ ಭಾರತ್' ದಿನಪತ್ರಿಕೆಯಲ್ಲಿ ಪ್ರಕಟವಾದಂತೆ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ 2012ರಂದು ಶ್ರೀ ಜಗದೀಶ್ ಶೆಟ್ಟರ್‌ರವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನೀರಿನ ಹಂಚಿಕೆಯೂ ಆಗಿ ಆಡಳಿತಾತ್ಮಕ ಅನುಮೋದನೆ ನೀಡಿದ್ದ ಮಹಾಲಕ್ಷ್ಮಿ ಏತ ನೀರಾವರಿ ಯೋಜನೆಯು ಹಲವಾರು ವರ್ಷಗಳಿಂದ ನೆನಗುದಿಗೆ ಬಿದ್ದಿದೆ. ಈ ಯೋಜನೆಯಿಂದ ಚಿಕ್ಕೋಡಿ ತಾಲ್ಲೂಕಿನ ಸುಮಾರು 14 ಹಳ್ಳಿಗಳ 16 ಸಾವಿರ ಹೆಕ್ಟೇರ್ ಪ್ರದೇಶವು ನೀರಾವರಿ ಯೋಜನೆಗೆ ಒಳಪಡುತ್ತದೆ. ಈ 14 ಹಳ್ಳಿಗಳು ಹಲವು ದಶಕಗಳಿಂದ ನೀರಾವರಿ ವಂಚಿತವಾಗಿವೆ. ಇದಕ್ಕಾಗಿ ಧರಣಿ, ಸತ್ಯಾಗ್ರಹಗಳೂ ಮತ್ತು ಗಂಭೀರ ಹೋರಾಟಗಳು ನಡೆದರೂ ಇವರಿಗೆ ನೀರಾವರಿ ಸೌಲಭ್ಯ ದೊರಕಿಸುವಲ್ಲಿ ಸರ್ಕಾರ ವಿಫಲವಾಗಿದೆ. ಉತ್ತರ ಕರ್ನಾಟಕದ ಆಶೋತ್ತರಗಳಿಗೆ ಸ್ಪಂದಿಸಲು ಬೆಳಗಾವಿಯಲ್ಲಿ ನಡೆಸುತ್ತಿರುವ ಅಧಿವೇಶನದ ಹಿನ್ನೆಲೆಯಲ್ಲಿ ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಈ ಭಾಗದ ಬಹು ನಿರೀಕ್ಷಿತ ಮಹಾಲಕ್ಷ್ಮಿ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲು ಸರ್ಕಾರವನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಯೋಜನೆಗೆ ಸಂಬಂಧಪಟ್ಟಂತೆ ಡಿ.ಪಿ.ಆರ್ ಆಗಿದೆ, ನೀರಿನ ಹಂಚಿಕೆಯಾಗಿದೆ. 2013ರಲ್ಲಿ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ಸಹ ದೊರಕಿದೆ. ಆದ್ದರಿಂದ ಈ ಯೋಜನೆಯನ್ನು ಸರ್ಕಾರ ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್( ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಏ) ಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿನ ಭತ್ತ ಖರೀದಿ ಕೇಂದ್ರದಲ್ಲಿ ನೋಂದಣಿ ಮಾಡಿಸಿಲ್ಲವೆಂಬ ಕಾರಣಕ್ಕೆ ಜ್ಯೋತಿ ತಳಿ ಭತ್ತವನ್ನು ಖರೀದಿಸಲು ನಿರಾಕರಿಸುತ್ತಿರುವ ಬಗ್ಗೆ.**

– – –

**ಶ್ರೀ ಎಸ್.ನಾಗರಾಜು(ಸಂದೇಶ್ ನಾಗರಾಜು)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸ್ಥಾಪಿಸಿರುವ ಭತ್ತ ಖರೀದಿ ಕೇಂದ್ರದಲ್ಲಿ ಎ.ಪಿ.ಎಂ.ಸಿ. ಅಧಿಕಾರಿಗಳು, ರೈತರು ಭಾರಿ ಪ್ರಮಾಣದಲ್ಲಿ ಬೆಳೆದಿರತಕ್ಕಂತಹ ಜ್ಯೋತಿ ತಳಿ ಭತ್ತವನ್ನು ನೋಂದಣಿ ಮಾಡಿಸಿಲ್ಲವೆಂಬ ಕಾರಣದಿಂದ ರೈತರಿಂದ ಖರೀದಿಸಲು ನಿರಾಕರಿಸುತ್ತಿದ್ದಾರೆ. ಇದರಿಂದ ರೈತರು ಅತಂತ್ರ ಸ್ಥಿತಿಯಲ್ಲಿ ಸಿಲುಕಿದ್ದು, ಅವರು ಬೆಳೆದ ಭತ್ತಕ್ಕೆ ಬೆಲೆಯೇ ಇಲ್ಲದಂತಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಬಿನಿ ಎಡದಂಡೆ ನಾಲೆಯ ಮೂರು ಸಾವಿರ ಎಕರೆ ಗದ್ದೆ ಬಯಲಿನ ಪೈಕಿ ಸುಮಾರು ಎರಡೂವರೆ ಸಾವಿರ ಎಕರೆಯಲ್ಲಿ ರೈತರು ಜ್ಯೋತಿ ತಳಿ ಭತ್ತವನ್ನು ಬೆಳೆದಿದ್ದಾರೆ. ಎ.ಪಿ.ಎಂ.ಸಿ. ಖರೀದಿ ಕೇಂದ್ರದಲ್ಲಿ ಐ.ಆರ್–64, ಐ.ಆರ್–20 ಎಂ.ಟಿ.ಯು–1001, ಜಯ, ತನು ಮೊದಲಾದ ಇತರ ತಳಿಯ ಭತ್ತಗಳನ್ನು ಮಾತ್ರ ಖರೀದಿಸುತ್ತಿದ್ದು, ಜ್ಯೋತಿ ತಳಿ ಭತ್ತವನ್ನು ಖರೀದಿಸಲು ಸರ್ಕಾರ ಅನುಮತಿ ನೀಡಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಆದಕಾರಣ ತಕ್ಷಣ ಜ್ಯೋತಿ ತಳಿಯ ಭತ್ತವನ್ನು ಖರೀದಿಸುವಂತೆ ಸರ್ಕಾರ ಎ.ಪಿ.ಎಂ.ಸಿ. ಭತ್ತ ಖರೀದಿ ಕೇಂದ್ರದ ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರೇ ಇದಕ್ಕೆ ಉತ್ತರವನ್ನು ಹೇಳಬಹುದು. ಏಕೆಂದರೆ ಅವರು ಸಹ ಭತ್ತ ಬೆಳೆಗಾರರಾಗಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್( ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)**:– ಸನ್ಮಾನ್ಯ ಸಭಾಪತಿಯವರೇ, ನಾನು ಉತ್ತರ ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಕೃಷಿ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಐ) ಬೆಂಗಳೂರು ಮೆಜೆಸ್ಟಿಕ್ ಪ್ರದೇಶದಲ್ಲಿ ಸುರಕ್ಷತಾ ಕ್ರಮಗಳ ಕೊರತೆ ನಿವಾರಣೆ ಬಗ್ಗೆ.**

– – –

**ಶ್ರೀ ಯು.ಬಿ.ವೆಂಕಟೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:– ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರ ವ್ಯಾಪ್ತಿಯ ಮೆಜೆಸ್ಟಿಕ್ ಪ್ರದೇಶದಲ್ಲಿ ಪ್ರಯಾಣಿಕರ ಮತ್ತು ಸಾರ್ವಜನಿಕರ ಸುಭದ್ರತೆಗಾಗಿ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಬೇಕಾಗಿದೆ. ದಿನವೂ ಪ್ರಯಾಣಿಕರುಗಳು ವಿವಿಧ ರೀತಿಯಲ್ಲಿ ವಂಚನೆಗಳಿಗೆ, ಮೋಸದ ಪ್ರಕರಣಗಳಿಗೆ ಮತ್ತು ದರೋಡೆಗಳಿಗೆ ಈಡಾಗುತ್ತಿರುವುದನ್ನು ಮಾಧ್ಯಮಗಳ ಮೂಲಕ ನೋಡುತ್ತಿದ್ದೇವೆ. ಹೊರ ರಾಜ್ಯಗಳಿಂದ ಮತ್ತು ರಾಜ್ಯದ ವಿವಿದೆಡೆಗಳಿಂದ ಬಂದು ಹೋಗುವ ಪ್ರಯಾಣಿಕರು ಹೆಚ್ಚಿನ ರೀತಿಯಲ್ಲಿ ಅನ್ಯಾಯಕ್ಕೆ ಒಳಗಾಗಿ ಸಂಕಷ್ಟಕ್ಕೀಡಾಗುತ್ತಿರುವುದನ್ನು ತಪ್ಪಿಸಬೇಕಾಗಿದೆ. ಜನಪ್ರಿಯ ಸರಕಾರಗಳು ಸಾಕಷ್ಟು ಕ್ರಮಗಳನ್ನು ಈ ಕುರಿತಾಗಿ ಜರುಗಿಸಿದ್ದರೂ ಕೂಡ ವಂಚಕರು ಅಕ್ರಮ ಅವ್ಯವಹಾರಗಳನ್ನು ನಿರಂತರವಾಗಿ ಮುಂದುವರಿಸಿಕೊಂಡು ಬರುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಅಕ್ರಮ ಅವ್ಯವಹಾರಗಳನ್ನು ಕಟ್ಟುನಿಟ್ಟಾಗಿ ತಡೆಗಟ್ಟುವ ದಿಸೆಯಲ್ಲಿ ಪೊಲೀಸ್ ಇಲಾಖೆಯವರು ಪರಿಣಾಮಕಾರಿಯಾದ ಕ್ರಮಗಳು ಮತ್ತು ವ್ಯವಸ್ಥೆಗಳನ್ನು ಜರುಗಿಸುವ ಮೂಲಕ ಪ್ರಯಾಣಿಕರು ಮತ್ತು ಸಾರ್ವಜನಿಕರ ಸುರಕ್ಷತೆಗೆ ಕ್ರಮ ಜರುಗಿಸಬೇಕೆಂದು ಸನ್ಮಾನ್ಯ ಗೃಹ ಸಚಿವರನ್ನು ಕೋರುತ್ತೇನೆ.

(ಮುಂದುವರಿದಿದೆ)

(523) 18.12.2018 2.00 ಪಿಕೆ:ವಿಕೆ

(ಸಭಾಪತಿಗಳ ಉಪಸ್ಥಿತಿ)

ಶ್ರೀ ಡಿ.ಕೆ.ಶಿವಕುಮಾರ್:-ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಮಗೆ commitment ಇದೆ. ಹೊರ ರಾಜ್ಯದ ಪ್ರಯಾಣಿಕರಾಗಿರಬಹುದು ಅಥವಾ ನಮ್ಮ ರಾಜ್ಯದ ಪ್ರಯಾಣಿಕರಿರಬಹುದು, ಇವರೆಲ್ಲರಿಗೂ ರಕ್ಷಣೆ ಕೊಡಲೇ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಪೊಲೀಸ್ ಇಲಾಖೆಗೆ ತಿಳಿಸಿ, ಇದರ ಬಗ್ಗೆ cause of action ಏನೆಂಬುದನ್ನು ತಿಳಿದುಕೊಂಡು ತಮ್ಮ ಗಮನಕ್ಕೆ ತರುವ ವ್ಯವಸ್ಥೆ ಮಾಡಿಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅಲ್ಲಿ prepaid auto stand ಇತ್ತು. ಈಗ ಅದನ್ನು ತೆಗೆದುಬಿಟ್ಟಿದ್ದಾರೆ. ಈ ಆಧುನಿಕ ಯುಗದಲ್ಲಿ ವ್ಯವಸ್ಥೆಗಳನ್ನು ಸುಧಾರಿಸಬೇಕೇ ಹೊರತು ಇರುವ ವ್ಯವಸ್ಥೆಯನ್ನು ತೆಗೆದು ಹಾಕಬಾರದು.

**3. ಸಚಿವರ ಹೇಳಿಕೆ**

ಅ): ಆರೋಗ್ಯ ಇಲಾಖೆಯಲ್ಲಿನ ಗುತ್ತಿಗೆ ನೌಕರರಿಗೆ ವೇತನದ ಜೊತೆಗೆ ಇತರೆ ಸೌಲಭ್ಯಗಳನ್ನು ನೀಡುವ ಬಗ್ಗೆ.

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ದಿನಾಂಕ 13.12.2018ರಂದು ಶ್ರೀ ಶ್ರೀಕಾಂತ ಎಲ್.ಘೋಟ್ನೇಕರರವರು ಶೂನ್ಯವೇಳೆ ಅಡಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಲಿಖಿತ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿ ಲಗತ್ತಿಸಲಾಗಿದೆ)

ಆ) ವಿಷಯ: ನಾಪೋಕ್ಲು ಹೋಬಳಿಯಲ್ಲಿ ನಡೆದ ಕೃಷಿ ಅಭಿಯಾನ ಕಾರ್ಯಕ್ರಮದಲ್ಲಿ ರೈತರಿಗೆ ನೀಡದ ಫಲಕಗಳ ಬಗ್ಗೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ದಿನಾಂಕ 17.12.2018ರಂದು ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿರವರು ಶೂನ್ಯವೇಳೆ ಅಡಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಲಿಖಿತ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿ ಲಗತ್ತಿಸಲಾಗಿದೆ)

**4. ಪ್ರಕಟಣೆ**

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು ದಿನಾಂಕ 17.12.2018ರ ತಮ್ಮ ಪತ್ರದಲ್ಲಿ ತಿಳಿಸಿರುವ ರೀತ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ವೈ.ಎ.ನಾರಾಯಣಸ್ವಾಮಿ ಅವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಉಪನಾಯಕರನ್ನಾಗಿ ಪರಿಗಣಿಸಲಾಗಿದೆ ಎಂಬುದನ್ನು ಸದನದ ಗಮನಕ್ಕೆ ತರಬಯಸುತ್ತೇನೆ.

**5. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ಶ್ರೀ ಡಿ.ಕೆ.ಶಿವಕುಮಾರ್ (ಬೃಹತ್ ಮತ್ತು ಮಾಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತಿದ್ದೇನೆ.

**ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ;

ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ನಿರ್ವಹಣೆಯ ಮೇಲಿನ ಕಾರ್ಯನಿರ್ವಹಣಾ ವರದಿಯನ್ನು (ಸಂಖ್ಯೆ-4) ಮಂಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲಿಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಸರ್ಕಾರಿ ಭೂಮಿ ಮಂಜೂರಾತಿ, ಗುತ್ತಿಗೆ, ಒತ್ತುವರಿಗಳ ತೆರವುಗೊಳಿಸುವಿಕೆ ಹಾಗೂ ಅಕ್ರಮ ಹಿಡುವಳಿಗಳನ್ನು ಸಕ್ರಮಗೊಳಿಸುವಿಕೆಗಳ ಬಗ್ಗೆ ವರದಿಯನ್ನು (ಸಂಖ್ಯೆ–5) ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**6. ವರದಿಯನ್ನೊಪ್ಪಿಸುವುದು**

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸದಸ್ಯನಾದ ನಾನು 2018–19ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮೊದಲನೇ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಸಭಾಪತಿಯವರು:– ವರದಿಯನ್ನೊಪಿಸಲಾಯಿತು.

( ಭೋಜನ ವಿರಾಮಕ್ಕೆಂದು 2 ಗಂಟೆ 3 ನಿಮಿಷದಿಂದ 3 ಗಂಟೆಯವರೆಗೆ ಸದನವನ್ನು ಮುಂದೂಡಲಾಯಿತು)

(524) 18.12.2018 ಕೆಜಿ.ಕೆಎಸ್ 3.10

**(ಸದನವು ಭೋಜನ ವಿರಾಮದ ನಂತರ ಮಧ್ಯಾಹ್ನ 03 ಗಂಟೆ 36 ನಿಮಿಷಗಳಿಗೆ ಸಮಾವೇಶಗೊಂಡಿತು)**
**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದಲ್ಲಿ ಈ ಅಧಿವೇಶನ ಮಾಡುತ್ತಿದ್ದೇವೆ. ಈ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು ಎನ್ನುವುದು ಸರ್ಕಾರದ ಮತ್ತು ನಮ್ಮ ಆಶಯ ಆಗಿದೆ. ಆದರೆ, ತಾವು ಮೂರು ಗಂಟೆಗೆ ಸದನ ಸೇರಬೇಕೆಂದು ತಿಳಿಸಿದ್ದೀರಿ. ಆದರೆ, 3 ಗಂಟೆ 40 ನಿಮಿಷಗಳಾದರೂ ಸಹ, ಆಡಳಿತ ಪಕ್ಷದಲ್ಲಿ ಇರುವಂತಹ ಯಾವ ಸಚಿವರು ಮತ್ತು ಶಾಸಕರು ಸಹ ಸದನದಲ್ಲಿ ಕಾಣಿಸುತ್ತಿಲ್ಲ. ಬೆಲ್ ಹಾಕಿ ಮುಕ್ಕಾಲು ಗಂಟೆಯಾದರೂ ಸರ್ಕಾರ ನಿರ್ಲಿಪ್ತವಾಗಿರುವಂಥದ್ದು ಮತ್ತು ನಿರ್ಲಕ್ಷ್ಯವಹಿಸಿರುವಂಥದ್ದು ಇದೇ ಪ್ರಥಮ ಎಂದು ನನಗೆ ಅನಿಸುತ್ತದೆ. ಈಗಲೂ ಸಹ ಸದನ ಪ್ರಾರಂಭವಾಗಬೇಕಾದರೆ, ನಮ್ಮದೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದಂತಹ ಸಂಪ್ರದಾಯದ ಪ್ರಕಾರ, ಕನಿಷ್ಠ ಮೂರು ಜನ ಸಚಿವರು ಉಪಸ್ಥಿತರು ಇರಬೇಕು. ಆದರೆ, ಸರ್ಕಾರವೇ ಈ ಕಡೆಗೆ ಗಮನವನ್ನು ಕೊಡದೇ ಇದ್ದರೇ, ಬೆಲ್ ಹಾಕಿ ಮುಕ್ಕಾಲು ಗಂಟೆ ಸರ್ಕಾರ ಬರದಿದ್ದರೆ, Chief Whip ಅಲ್ಲದೇ ಇದ್ದರೂ ಸಹ ಮಾನ್ಯ ಸದಸ್ಯ ಐವನ್ ಡಿ'ಸೋಜಾರವರು ಹೋಗಿ ಒಬ್ಬಬ್ಬರನ್ನು ಎಳೆದುಕೊಂಡು ಬರುವಂತಹ ಪರಿಸ್ಥಿತಿಗಳು ಬಂದರೆ ಈ ಸರ್ಕಾರದ ಸ್ಥಿತಿ ಹೇಗೆ? ಸರ್ಕಾರಕ್ಕೆ ಒಂದು ಗಂಭೀರತೆಯಾದರೂ ಬೇಕಲ್ಲವೇ; ಸರ್ಕಾರಕ್ಕೆ ಒಂದು ಜವಾಬ್ದಾರಿ ಬೇಕು ಅಲ್ಲವೇ;

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು):-** ಮಾನ್ಯ ಸಭಾಪತಿಯವರೇ, ಆ ಜಿಲ್ಲೆಯ ಜವಾಬ್ದಾರಿಯನ್ನು ನಿಮ್ಮ ಪರವಾಗಿ ಅವರು ನಿರ್ವಹಿಸುತ್ತಿದ್ದಾರೆ. ನಿಮ್ಮ ಜವಾಬ್ದಾರಿಯನ್ನು ಅವರು ನಡೆಸುತ್ತಿದ್ದಾರೆ. ಅವರು ನಮಗೆ favour ಮಾಡುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಿಂದ ಈ ನಾಜೂಕಿನ ಮಾತುಗಳನ್ನು ಬಿಟ್ಟರೆ, ಬೇರೆ ಯಾವುದೇ ಗುರುತರವಾದಂತಹ ಜವಾಬ್ದಾರಿಗಳು ನೆನಪು ಆಗುವುದಿಲ್ಲ. ಇದನ್ನು ದಯವಿಟ್ಟು ಕೇಳಿ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಟ್ಟಾರೆ ನನ್ನನ್ನು ಹೊರಗಡೆ ಹಾಕಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮುಕ್ಕಾಲು ಗಂಟೆ ತಡವಾಗಿ ಬಂದಿದ್ದೀರಿ. ಬರುವಾಗಲೂ ಸಹ ಕನಿಷ್ಠ ಮೂರು ಜನ ಸಚಿವರು ಇರಲಿಲ್ಲ. ಟಿಪ್ಪು ಸುಲ್ತಾನ್ ಬಗ್ಗೆ ಮಧ್ಯಾಹ್ನ 12 ಗಂಟೆಯೊಳಗೆ ಅನುಮತಿ ತೆಗೆದುಕೊಂಡು ಬಂದು ಅದಕ್ಕೆ ಎಷ್ಟು ಗಂಟೆಗೆ ಉತ್ತರ ಕೊಡುತ್ತೇನೆಂದು ಸರ್ಕಾರದ ಸಂಸದೀಯ ಸಚಿವರು ಹೇಳಿದ್ದಾರೆ. ಹಾಗಾದರೆ, ಈ ಸರ್ಕಾರದ ಚಟುವಟಿಕೆಗಳ ಅರ್ಥ ಏನು? ಈ ಸದನವನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುತ್ತೀರಾ? ವಿರೋಧ ಪಕ್ಷಕ್ಕೆ ಕೊಟ್ಟಂತಹ ಮಾತನ್ನು ಅನುಷ್ಠಾನ ಮಾಡುತ್ತೀರಾ ಅಥವಾ ಕೇವಲ ನಾಜೂಕಿನ ಮಾತುಗಳನ್ನು ಹೇಳಿಕೊಂಡು ಸದನವನ್ನು ಮುಂದೂಡುತ್ತೀರಾ ಎಂದು ದಯವಿಟ್ಟು ಹೇಳಬೇಕೆಂದು ನನ್ನ ಅಗ್ರಹ ಇದೆ. ಮಾನ್ಯ ಸಭಾಪತಿಯವರೇ, ತಾವು ಸರ್ಕಾರಕ್ಕೆ ಒಂದು ಆದೇಶವನ್ನು ಕೊಡಬೇಕು. ನಾನು ಸಾಮಾನ್ಯವಾಗಿ ಇಷ್ಟೊಂದು ನಿಷ್ಕ್ರಿಯವಾಗಿ ಇರುವಂಥಹ ಉದಾಹರಣೆಗಳನ್ನು ಕಂಡಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಸದನವನ್ನು ನಡೆಸುತ್ತಿದ್ದೇವೆ ಅಲ್ಲವೇ; ಹೀಗೆ ಸುಮ್ಮನೆ ಹೇಳುವುದಕ್ಕೆ ಹೋದರೆ ಹೇಗೆ? 2012ನೇ ಸಾಲಿನಲ್ಲಿ ಸದನ ನಡೆದಿರುವ ಬಗ್ಗೆ ತಮಗೆ ಅಂಕಿ ಸಂಖ್ಯೆಗಳನ್ನು ಕೊಡುತ್ತೇನೆ. 2011 ರಲ್ಲಿ 25 ರಿಂದ 30 ದಿವಸಗಳ ಕಾಲ ಸದನ ನಡೆದಿದೆ.

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಬಾಯಿಯನ್ನು ಮುಚ್ಚಿಸುವಂತಹ ಪ್ರಯತ್ನ ಮಾಡಬಾರದು.

(ಗೊಂದಲ)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡುವಾಗ ಮಾನ್ಯ ಸಚಿವರು ಸಮಾಧಾನದಿಂದ ಕೇಳಿದ್ದಾರೆ. ಈಗ ಅವರು ಮಾತನಾಡುತ್ತಿದ್ದಾರೆ. ತಾವು ದಯವಿಟ್ಟು ಅದನ್ನು ಕೇಳಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಾಯಿ ಮುಚ್ಚಿಸುತ್ತಿದ್ದಾರೆ ಎಂದರೆ ಏನು ಅರ್ಥ? ಜನರು ಅವರಿಗೆ vote ಹಾಕಿದ್ದು ಏಕೆಂದರೆ, ಅವರು ಅತ್ಯಂತ ವ್ಯವಸ್ಥಿತವಾಗಿ ಸದನವನ್ನು ನಡೆಸುತ್ತಾರೆ, ಆಡಳಿತ ನಡೆಸುತ್ತಾರೆ ಎಂದು. ಈಗ ಸದನವನ್ನು ನಡೆಸುವುದಕ್ಕೆ ಆಗದೆ, ಕೇವಲ 2012 ರಲ್ಲಿ ಏನಾಗಿದೆ, 2016 ರಲ್ಲಿ ಏನಾಗಿದೆ ಎಂದು ಹೇಳಿ ಉದಾಹರಣೆಗಳನ್ನು ಕಾನೂನು ಸಂಸದೀಯ ಸಚಿವರು ಉತ್ತರ ಕೊಟ್ಟರೆ, ನಾನು ಬೇರೆಯವರ ಬಗ್ಗೆ ಅಲೋಚನೆ ಮಾಡುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದವರ ಪ್ರಶ್ನೆಗಳಿಗೆ ಉತ್ತರ ಬೇಡವೇ?

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಈಗ ಮಾತನಾಡಬಹುದೇ,

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾಜೂಕಿನ ಮಾತುಗಳನ್ನು ಆಡುವುದನ್ನು ಬಿಟ್ಟರೆ, ಬೇರೆ ಏನು ಮಾತನಾಡುತ್ತಾರೆ ಎಂಬುದನ್ನು ತಾವೇ ನಮಗೆ ಹೇಳಿ.

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, 2010–11ನೇ ಸಾಲಿನಲ್ಲಿ 28 ರಿಂದ 35 ದಿವಸ ಅಧಿವೇಶನ ನಡೆದಿದೆ. ಇದು ಇಡೀ ವರ್ಷದಲ್ಲಿ ನಡೆದಿರುವಂಥದ್ದು. ಅದೇ 2015–2016ನೇ ಸಾಲಿನಲ್ಲಿ 50 ರಿಂದ 58 ದಿವಸ ಅಧಿವೇಶನ ನಡೆದಿದೆ. ಈ ವರ್ಷ ಚುನಾವಣೆ ಬಂದರೂ ಸಹ, 40 ದಿವಸಗಳಿಗಿಂತ ಹೆಚ್ಚಿನ ಅಧಿವೇಶನವನ್ನು ನಡೆಸುತ್ತಿದ್ದೇವೆ. ಅವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಯಾವ ರೀತಿ ನಡೆಯುತ್ತಿತ್ತು ಮತ್ತು ಈಗ ಯಾವ ರೀತಿ ನಡೆಯುತ್ತಿದೆ ಎಂಬುದರ ಅಂಕಿ ಸಂಖ್ಯೆಗಳನ್ನು ಕೊಡುವುದು ನಾಜೂಕಿನ ಮಾತುಗಳೇ? ಇದಕ್ಕೆ ತಾವು ತೀರ್ಪು ಕೊಡಬೇಕು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, 2010–2011 ರಲ್ಲಿ ಏನಾಗಿತ್ತು ಎಂದರೆ, ಅವರು ಹಗಲು ರಾತ್ರಿ ಸದನದಲ್ಲಿ ಧರಣಿ ಮಾಡುವಂತಹ ಒಂದು ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡಿದ್ದರು. ಆ ಕಾರಣಕ್ಕೆ ಸ್ವಾಭಾವಿಕವಾಗಿ ಸಭೆ ನಡೆಸಿರುವುದು ಕುಠಿತವಾಗಿರಬಹುದು. ಅದಕ್ಕೆ ಕಾರಣವೆಂದರೆ, ಅವತ್ತಿನ ವಿರೋಧ ಪಕ್ಷಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸದಿರುವುದೇ ಕಾರಣ. ನಾವು ಅದಕ್ಕೆ ಕಾರಣರಲ್ಲ.

(525)18–12–2018(3–40)ಎಂವಿ–ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಈಗ ಆಡಳಿತ ಪಕ್ಷದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಎಷ್ಟೇ ಸಿಟ್ಟಾದರೂ ಸಹ ನಾವು ತಾಳ್ಮೆ ಇಟ್ಟುಕೊಂಡು ಸದನವನ್ನು ನಡೆಸುತ್ತಿದ್ದೇವೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಸದನವನ್ನು ನಡೆಸುತ್ತಿದ್ದಾರೆ, ಆದರೆ, ಇಲ್ಲಿನ ಸಂಖ್ಯೆ ನೋಡಿದರೆ ಪರಿಸ್ಥಿತಿ ಹೇಗಿದೆ ಎಂದು ಗೊತ್ತಾಗುತ್ತದೆ.

**(ಗೊಂದಲ)**

**ಸಭಾಪತಿಯವರು:-** ಈಗ ಒಬ್ಬರು ಮಾತನಾಡುವಾಗ ಇಷ್ಟು ಜನ ಮೇಲೆ ಎದ್ದು ನಿಂತಿದ್ದೀರಿ.

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಇಷ್ಟು ಜನರಾದರು ಇದ್ದೇವೆ. ಆದರೆ, ಅವರ ಸಮಯದಲ್ಲಿ ಸದನವೇ ನಡೆಯುತ್ತಿರಲಿಲ್ಲ, ಮಾನ್ಯ ವಿರೋಧ ಪಕ್ಷದ ನಾಯಕರು ಅದರ ಬಗ್ಗೆ ಹೇಳಲಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಮ್ಮ ಹಕ್ಕನ್ನು ಕಿತ್ತುಕೊಳ್ಳಬಾರದು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಮೊನ್ನೆಯ ದಿವಸ ಏನೆಂದು ಹೇಳಿದ್ದೇವೆಂದರೆ, ಸದನ ಪ್ರಾರಂಭವಾಗುವ ಸಂದರ್ಭದಲ್ಲಿ ಸದನವನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಸರ್ಕಾರಕ್ಕೆ ಪೂರ್ಣ ಸಹಕಾರವನ್ನು ಕೊಡುತ್ತೇವೆಂದು ಹೇಳಿದ್ದೇವೆ. ಮಾನ್ಯ ಸಚಿವರು ಹೇಳಿದರು, ನಮ್ಮ ಸರ್ಕಾರವಿದ್ದಾಗ ಹಗಲು-ರಾತ್ರಿ ಧರಣಿ. ಇಲ್ಲೇ ರಾತ್ರಿಯ ಊಟವೆಂದು.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ರಾಜ್ಯದ ಒಂದು ಲಕ್ಷ ಕೋಟಿ ಹಣ ಲೂಟಿಯಾಗುವಾಗ ನಾವು ಮನೆಯಲ್ಲಿ ಹೋಗಿ ನಿದ್ರೆ ಮಾಡುವುದಕ್ಕೆ ಆಗುತ್ತದೆಯೇ? ರಾಜ್ಯದ ಸಂಪತ್ತನ್ನು ಉಳಿಸುವುದಕ್ಕೋಸ್ಕರ ನಾವು ಈ ಸದನದಲ್ಲಿ ಧರಣಿ ಮಾಡಿರುವುದು ನಿಜ. ಒಂದು ಲಕ್ಷ ಕೋಟಿ ಲೂಟಿಯಾಗಿರುವುದು ನಿಜ. ಹಾಗಾಗಿ ನಾವು ಮನೆಯನ್ನು ಬಿಟ್ಟು ಉಪವಾಸ ಮಾಡುವಂತಹ ಪರಿಸ್ಥಿತಿ ಬಂತು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ಲಕ್ಷ ಕೋಟಿಯಲ್ಲಿ ಎಷ್ಟು ವಸೂಲು ಮಾಡಿದ್ದಾರೆ?

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ಲಕ್ಷ ಕೋಟಿ ಅನ್ಯಾಯ ಮಾಡಿದ್ದಾರೆ. ನಾವು ಅದಕ್ಕೋಸ್ಕರ ಹೋರಾಟ ಮಾಡಿರುವುದು.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಮರೆತ್ತಿದ್ದಾರೆ. ಬಳ್ಳಾರಿಗೆ ಬನ್ನಿ ನೋಡಿಕೊಳ್ಳುತ್ತೇವೆ ಎಂದಿದ್ದರು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಮೂವತ್ತೈದು ಸಾವಿರ ಕೋಟಿ ರೂಪಾಯಿಗಳಿಗೆ ಉತ್ತರ ನೀಡಲಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು. ಅವರು ಇದಕ್ಕೆ ಉತ್ತರ ನೀಡಲಿ.

**ಸಭಾಪತಿಯವರು:–** ಈಗ ಬರಗಾಲಕ್ಕೆ ಸಂಬಂಧಪಟ್ಟಂತೆ ಚರ್ಚೆ ನಡೆಯಲಿ. ಡಾ॥ ವೈ.ಎ.ನಾರಾಯಣಸ್ವಾಮಿಯವರು ಬರಗಾಲಕ್ಕೆ ಸಂಬಂಧಪಟ್ಟಂತೆ ಮಾತನಾಡುವುದು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಮ್ಮ ಊರಿನಲ್ಲಿ ಮರಳಿಗೆ ಸಂಬಂಧಿಸಿದಂತೆ ಜ್ವಲಂತ ಸಮಸ್ಯೆಗಳಿವೆ. ಈಗ ತಾವು ಇದರ ವಿಚಾರದಲ್ಲಿ ಏನಾದರೂ ಇತ್ಯರ್ಥ ಮಾಡದೇ ಇದ್ದರೆ, ಅಲ್ಲಿನ ಜನರು ನಮಗೆ ಶಾಪ ಹಾಕುತ್ತಾರೆ. ನಾನು ಕಳೆದ ಎಂಟು ದಿವಸಗಳಿಂದ ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಫೈಲ್ ಅನ್ನು ಇಟ್ಟುಕೊಂಡು ಬರುತ್ತಿದ್ದೇನೆ. ಇದನ್ನು ಚರ್ಚೆಗೆ ತೆಗೆದುಕೊಳ್ಳದಿದ್ದರೆ ನಾನು ಹೇಗೆ ಕುಳಿತುಕೊಳ್ಳುವುದು. ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆಂದು ತಾವು ಆಶ್ವಾಸನೆ ನೀಡಿ.

**ಸಭಾಪತಿಯವರು:–** ಬರಗಾಲದ ಮೇಲಿನ ಚರ್ಚೆ ಆದ ತಕ್ಷಣ ನಿಮ್ಮ ವಿಷಯವನ್ನು ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**7. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಮುಂದುವರೆದ ಚರ್ಚೆ.**

**ವಿಷಯ:- ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ.**

****

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ. ಕರ್ನಾಟಕ ರಾಜ್ಯ ಎದುರಿಸುತ್ತಿರುವ ಭೀಕರ ಬರಗಾಲ ಪರಿಸ್ಥಿಯ ಬಗ್ಗೆ ಸದನದಲ್ಲಿ ಬಹಳ ದೊಡ್ಡ ಚರ್ಚೆ ಆಗಬೇಕಾಗಿತ್ತು. ಆದರೆ, ನಿರೀಕ್ಷಿತ ಮಟ್ಟದಲ್ಲಿ ಚರ್ಚೆಯಾಗಿಲ್ಲ. ಕರ್ನಾಟಕ ರಾಜ್ಯಕ್ಕೆ ಏಕೋ ಏನೋ ಒಂದು ದೊಡ್ಡ ಶಾಪ. ಏಕೆಂದರೆ, ಒಂದು ಕಡೆ ನೆರೆ ಮತ್ತೊಂದು ಕಡೆ ಬರ. ನೆರೆಗಿಂತ ಬರಗಾಲದ ತೀವ್ರತೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಕರ್ನಾಟಕ ರಾಜ್ಯವನ್ನು ಕಾಡುತ್ತಿದೆ. ಕರ್ನಾಟಕ ರಾಜ್ಯದಲ್ಲಿರುವ 176 ತಾಲ್ಲೂಕುಗಳಲ್ಲಿ 100 ತಾಲ್ಲೂಕುಗಳು ಬರಪೀಡಿತ ಎಂದು ಸರ್ಕಾರ ಅಧಿಕೃತವಾಗಿ ಘೋಷಣೆ ಮಾಡಿದೆ. 30 ಜಿಲ್ಲೆಗಳಲ್ಲಿ 17 ಜಿಲ್ಲೆಗಳು ಬರಗಾಲಕ್ಕೆ ತುತ್ತಾಗಿ ತತ್ತರಿಸುತ್ತಿವೆ. ಅಧಿಕಾರಿಗಳ ಸಮೀಕ್ಷೆಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಸುಮಾರು 16,500 ಕೋಟಿ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ. ಇವತ್ತು ರೈತರು ತೀವ್ರವಾದ ಸಂಕಷ್ಟದಲ್ಲಿದ್ದಾರೆ ಮತ್ತು ಆತಂಕದಲ್ಲಿ ಬದುಕುತ್ತಿದ್ದಾರೆ. ನಾವು ಹಿಂದಕ್ಕೆ ತಿರುಗಿ ಈ ಬರಗಾಲದ ಇತಿಹಾಸವನ್ನು ನೋಡಿದಾಗ, ಸುಮಾರು 18 ವರ್ಷಗಳಲ್ಲಿ 16 ವರ್ಷಗಳಷ್ಟು ಸಮಯ ಬರಗಾಲ ನಮ್ಮನ್ನು ಕಾಡಿಕೊಂಡು ಬರುತ್ತಿದೆ ಮತ್ತು ನಮ್ಮನ್ನು ಕಾಡುತ್ತಿದೆ.

ಬಹುಶಃ ನಮ್ಮ ರಾಜ್ಯದಲ್ಲಿ 2003ನೇ ಇಸವಿಯಲ್ಲಿ 162 ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿದ್ದವು. ಆಗ ಮಾನ್ಯ ಮಂತ್ರಿಗಳು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಎಸ್.ಎಂ.ಕೃಷ್ಣರವರ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿದ್ದರು ಎಂದುಕೊಂಡಿದ್ದೇನೆ. 2002, 2003, 2006, 2011, 2015ನೇ ಸಾಲಿನ ಬಹುತೇಕ 18 ವರ್ಷಗಳ ಸರಾಸರಿಯನ್ನು ತೆಗೆದುಕೊಂಡರೆ, 16 ವರ್ಷಗಳ ಕಾಲ ಬರಗಾಲ ನಮ್ಮನ್ನು ಕಾಡುತ್ತಿದೆ. ಆದರೆ, ಈ ಬರಗಾಲ ನಮಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ತೊಂದರೆ ಕೊಡುತ್ತಿದ್ದರೂ ನಾವುಗಳು ಯಾರು ಸಹ ಇದರ ಬಗ್ಗೆ ಗಂಭೀರವಾಗಿ ಚಿಂತನೆಯನ್ನೇ ಮಾಡಿಲ್ಲ. ಈಗ ನಾವು ಏನು ಮಾಡುತ್ತಿದ್ದೇವೆಂದರೆ, ನಾವು ಕೆಲವು ಮಾನದಂಡಗಳನ್ನು ಇಟ್ಟುಕೊಂಡಿದ್ದೇವೆ. ಒಣಹವೆ ಯಾವಾಗ ಇರುತ್ತದೆ, ತೇವಾಂಶ ಎಷ್ಟು ಕಡಿಮೆ ಇರಬೇಕು, ಮಳೆ ಪ್ರಮಾಣ ಎಷ್ಟು ಕಡಿಮೆ ಇರಬೇಕು, ಇವುಗಳೆಲ್ಲವನ್ನು ಆಧಾರ ಮಾಡಿ, ಅಧಿಕಾರಿಗಳು ಏನು ಉತ್ತರ ಕೊಡುತ್ತಾರೋ ಮತ್ತು ಐ.ಎಂ.ಡಿ.ಯವರ ಒಂದು ಅಂಕಿ-ಅಂಶವನ್ನು ನೋಡಿಕೊಂಡು, ಬರಗಾಲವನ್ನು ಘೋಷಣೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಾರೆ. ಬರಗಾಲವನ್ನು ಘೋಷಣೆ ಮಾಡಿದ ಮೇಲೆ, ನಾವು ಬರಗಾಲದ ನಿರ್ವಹಣೆಯ ಬಗ್ಗೆ ಜಾಗೃತವಾಗಿ ಕೆಲಸ ಮಾಡಿಕೊಂಡು ಬರುವಂತಹ ವ್ಯವಸ್ಥೆಯನ್ನು ಮಾಡಿಕೊಂಡು ಬರುತ್ತಿದ್ದೇವೆ. ಆದರೆ, ಎರಡು ವಿಚಾರಕ್ಕೆ ನನ್ನ ಮೂಲಭೂತವಾದ ಪ್ರಶ್ನೆ ಎಂದರೆ, ಬರಗಾಲ 18 ವರ್ಷಗಳ ಸಮಯದಲ್ಲಿ 16 ವರ್ಷಗಳ ಕಾಲ ನಿರಂತರವಾಗಿ ಬರಬೇಕಾದರೆ, ಈ ಬರಗಾಲದ ನಿರೀಕ್ಷೆ ಮತ್ತು ಬರಗಾಲವನ್ನು ಅಂದಾಜು ಮಾಡುವ ತಂತ್ರಗಾರಿಕೆ ನಮ್ಮಲ್ಲಿ ಇಲ್ಲವೆ? ಇಷ್ಟು ದೊಡ್ಡ ಪ್ರಮಾಣದಲ್ಲಿ ತಂತ್ರಜ್ಞಾನ ಬೆಳೆದಿದೆ. ನಮ್ಮಲ್ಲಿ ಇಸ್ರೋ ಮತ್ತು ನಾಸಾ ಇದೆ. ನಾವು ಅಂತರಿಕ್ಷಕ್ಕೆ ಸುಮಾರು ನೂರಾರು ಉಪಗ್ರಹಗಳನ್ನು ಉಡಾವಣೆ ಮಾಡಿಬಿಟ್ಟಿದ್ದೇವೆ. ಇಷ್ಟೆಲ್ಲಾ ನಮ್ಮ ಬಳಿ ಇದ್ದರೂ ಸಹ. ಆ ಬರಗಾಲವನ್ನು ಅಂದಾಜು ಮಾಡುವುದರಲ್ಲಿ ನಾವು ಎಲ್ಲಿ ಎಡವಿದ್ದೇವೆ ಎನ್ನುವುದರ ಬಗ್ಗೆ ಯಾವುದೇ ಸರ್ಕಾರಗಳು ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಿಲ್ಲ ಎನ್ನುವ ವಿಷಯ ನನಗೆ ಬಹಳ ನೋವು ತಂದಿದೆ. ಮಾನ್ಯ ಸಚಿವರೆ, ಆರೋಪ ಮತ್ತು ಪ್ರತ್ಯಾರೋಪಕ್ಕೆ ಮಾತನಾಡುವುದು ಬೇರೆ. ಇಷ್ಟು ಪ್ರಮಾಣದಲ್ಲಿ ತಂತ್ರಜ್ಞಾನ ಬೆಳೆದ ಮೇಲೆ, ಬರಗಾಲವನ್ನು ನಿರೀಕ್ಷೆ ಮಾಡಿ, ಬರಗಾಲದ ಬಗ್ಗೆ ಅಂದಾಜು ಮಾಡಿ, ಬರಗಾಲದ ತೀವ್ರತೆಯನ್ನು ಮೊದಲೇ ಗ್ರಹಿಕೆ ಮಾಡಿಕೊಳ್ಳುವುದಕ್ಕೆ ನಮಗೆ ಇರುವಂತಹ ತೊಂದರೆ ಏನು? ನಮಗೆ ತಂತ್ರ ಜ್ಞಾನವನ್ನು ಉಪಯೋಗಿಸುವುದಕ್ಕೆ ಏಕೆ ಆಗುತ್ತಿಲ್ಲ?

ಇವತ್ತು ಅಲ್ಪಕಾಲದ ಅಂದಾಜು ಅಂದರೆ, ಮಳೆಯ ಪ್ರಮಾಣ ಮತ್ತು ಹವಾಮಾನ ಇವುಗಳ ಬಗ್ಗೆ ಗ್ರಾಮಪಂಚಾಯಿತಿ ಮಟ್ಟದಲ್ಲಿ ಒಂದೆರಡು ದಿವಸದಲ್ಲಿ ನಾವು ನಿರೀಕ್ಷೆ ಮಾಡಿ ಎಲ್ಲರಿಗೂ ಹೇಳುತ್ತಿದ್ದೆವು. ಅದು ಏನೆಂದರೆ, ಇವತ್ತು ಮಳೆ ಬರುತ್ತದೆ. ಇನ್ನು ಎರಡು ದಿನ ಅಥವಾ ಒಂದು ವಾರ ಚಂಡಮಾರುತ ಮುಂದುವರೆಯುತ್ತದೆ ಎಂದು ಹೇಳಬೇಕಾದರೆ, ಇಷ್ಟು ಪ್ರಮಾಣದಲ್ಲಿ ಮಳೆಯ ಪ್ರಮಾಣ ಕಡಿಮೆ ಆಗುವುದಕ್ಕೆ ಮತ್ತು ವಾತಾವರಣದಲ್ಲಿ ಆಗಿರುವಂತಹ ಬದಲಾವಣೆಗಳು ಏನು? ಇವತ್ತು ಒಂದು ಕಡೆ global warming impact ಜಾಸ್ತಿಯಾಗುತ್ತಿದೆ. Wind direction change ಆಗುತ್ತಿದೆ. ಇದರಲ್ಲಿ ನಾನಾ ವಿಚಾರಗಳು ಒಳಗೊಂಡಿರುವಾಗ, ಇದಕ್ಕೆ ಬರಗಾಲವನ್ನು ನಾವು ಮೊದಲೇ ಅಂದಾಜು ಮಾಡಿ predict ಮಾಡಿದರೆ ಇದರ ನಿರ್ವಹಣೆ ಅತ್ಯಂತ ಸುಲಭವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಇದರಲ್ಲಿ ನಾನು ಸರ್ಕಾರಕ್ಕೆ ಒಂದು ಮನವಿ ಮಾಡುತ್ತಿದ್ದೇನೆ. ಹಳೆ ಕಾಲದಲ್ಲಿ Analytical Methods ಇತ್ತು. ಆ ಡೇಟಾಗಳನ್ನು ಸಂಗ್ರಹಿಸಿ, ಐದು, ಹತ್ತು ಮತ್ತು ಇಪ್ಪತ್ತು ವರ್ಷಗಳ ಡೇಟಾವನ್ನು ತೆಗೆದುಕೊಂಡು, ಅದಕ್ಕೆ ಒಂದು ಮಾದರಿಯನ್ನು ರಚನೆ ಮಾಡಿ, ಆ ಮಾದರಿಯ ಮುಖಾಂತರ, ಈ ವರ್ಷ ಇಷ್ಟು ಮಳೆ ಬರಬಹುದು ಎನ್ನುವಂತಹ ಅಂದಾಜು ಮಾಡುತ್ತಿದ್ದೆವು. ನಾನು ಎಂ.ಟೆಕ್., ಮಾಡಬೇಕಾದರೆ, ಕೋಲಾರ ಮತ್ತು ಚಿಕ್ಕಬಳ್ಳಾಪುರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಗಳಲ್ಲಿ, drought forecasting for the next future five years ಬಗ್ಗೆ, ಒಂದು Analytical ಮಾದರಿಯನ್ನು ತಯಾರು ಮಾಡಿದ್ದೆವು. ಆದರೆ, ಈಗಿನ ಕಾಲಕ್ಕೂ ಮತ್ತು ಆಗಿನ ಕಾಲಕ್ಕೂ ಬಹಳ ಹಂತ ಬೆಳೆದಿದೆ. ಇದರಲ್ಲಿ ಐ.ಎಂ.ಡಿ.,ಯವರ ಪಾತ್ರ ಬಹಳ ದೊಡ್ಡದಿದೆ. ಇಸ್ರೋ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ಜೊತೆಗೆ ನಾಸಾ ಮುಂತಾದ ಅಂತರಿಕ್ಷ ಸಂಸ್ಥೆಗಳ ತಂತ್ರಜ್ಞಾನವನ್ನು ಬಳಸಿಕೊಂಡು, ಈ moisture content, wind direction, rainfall frequency and rainfall intensity ಇವುಗಳೆಲ್ಲದರ ಬಗ್ಗೆ ನಾವು ಬಹಳಷ್ಟು ನಿಗಾ ವಹಿಸದೇ ಇದ್ದರೆ, ಬಹುಶಃ ನಮ್ಮ ರಾಜ್ಯಕ್ಕೆ ಈ ಬರಗಾಲದ ಕಂಟಕ ಬಹಳಷ್ಟು ದಿನ ಹೀಗೆಯೇ ಮುಂದುವರೆಯುತ್ತದೆ ಎಂಬುದು ನನ್ನ ಅಭಿಪ್ರಾಯ. ಇದಕ್ಕೆ ಬಹಳಷ್ಟು ಇಲಾಖೆಗಳು ಒಳಗೊಂಡಂತೆ, ಕಂದಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪಶುಸಂಗೋಪನಾ ಇಲಾಖೆ ಮತ್ತು ನೀರಾವರಿ ಇಲಾಖೆ, ಇದರಲ್ಲಿ ಎಲ್ಲಾ ಇಲಾಖೆಗಳು ಬಂದಿವೆ. ಆದರೆ, ಬರಗಾಲವನ್ನು ನಿರೀಕ್ಷೆ ಮತ್ತು ಅಂದಾಜು ಮಾಡಿ ತಿಳಿಸುವಂತಹ, ಹವಾಮಾನ ಇಲಾಖೆಗೆ ಹೆಚ್ಚು ಒತ್ತು ಕೊಟ್ಟಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಯವರೆ, ಹವಾಮಾನ ಇಲಾಖೆಗೆ R & Dಗೆ ಮತ್ತೆ ಅದನ್ನು ಎಲ್ಲೋ ಒಂದು ಕಡೆ ಎಲ್ಲಾ ತಾಂತ್ರಿಕತೆಯ convergence ಮಾಡಿ, ಇಲ್ಲಿ integrate ಮಾಡಿ.

ಇವತ್ತು ಸುಮಾರು 16,500 ಕೋಟಿ ರೂಪಾಯಿಗಳು ನಷ್ಟವಾಗಿದೆ ಮತ್ತು 17 ಜಿಲ್ಲೆಗಳಲ್ಲಿ ಮತ್ತು 100 ತಾಲ್ಲೂಕುಗಳಲ್ಲಿ ಬರಗಾಲ ಬಂದಿದೆ. ಇದರಿಂದ ಎಲ್ಲರೂ ಸಹ ಗುಳೆ ಹೋಗುತ್ತಿದ್ದಾರೆ. ಇಡೀ ಸರ್ಕಾರದ ಯಂತ್ರ ಇನ್ನು ಶುರುವಾಗಿಲ್ಲ. ಈಗ ಶುರು ಮಾಡುತ್ತಾರೆ. ಶುರು ಮಾಡಿದ ಮೇಲೆ ನಾಲ್ಕೈದು ತಿಂಗಳು ಇದೇ ಕೆಲಸವನ್ನು ಮಾಡಿಕೊಂಡು ಇರುತ್ತಾರೆ. ಇದಕ್ಕೆ ಏನಾದರೂ ಸ್ವಲ್ಪ ವೇಗ ಕೊಡುವುದಕ್ಕೆ, ಅದಕ್ಕೆ ಸ್ವಲ್ಪ different outlook ಕೊಡುವುದಕ್ಕೆ, ಒಂದು application of mind ಮಾಡುವುದಕ್ಕೆ ಈ ಐ.ಎಂ.ಡಿ., ಇಲಾಖೆಯನ್ನು, ಹವಾಮಾನ ಇಲಾಖೆಯನ್ನು ಸದೃಢ ಮಾಡುವುದಕ್ಕೆ ನಮ್ಮಲ್ಲಿರುವಂತಹ ತೊಂದರೆ ಏನು?

**(ಮುಂದು...)**

(526)18-12-2018(03-50)ಎಲ್ಎಲ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

ಡಾ: ವೈ.ಎ. ನಾರಾಯಣಸ್ವಾಮಿ(ಮುಂದುವರೆದಿದ್ದು...):-

ಅದರ ಬಗ್ಗೆ ಯೋಚನೆ ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ. ಅದು ಬಹಳ ಸುಲಭವಾದಂತಹ ಕೆಲಸ. ಏಕೆಂದರೆ, ತಾವು ಮಾನ್ಯ ಎಸ್.ಎಂ. ಕೃಷ್ಣಾರವರ ಕಾಲದಲ್ಲಿ ಶಿಕ್ಷಣ ಮಂತ್ರಿಯಾಗಿದ್ದೀರಿ. ಆಗ 157 ತಾಲ್ಲೂಕುಗಳಲ್ಲಿ 4 ವರ್ಷ ಬರ ಪರಿಸ್ಥಿತಿ ಇತ್ತು. ಆಗಿನ ಸರ್ಕಾರ ಬರಗಾಲಕ್ಕೆ ಸಂಪೂರ್ಣ ಸಮಯ ಮೀಸಲಿಟ್ಟಿತ್ತು. ಅದೇ ರೀತಿ ಇವೊತ್ತಿನ ದಿವಸ ಆಗುತ್ತಿದೆ. ಸರ್ಕಾರಕ್ಕೂ ಬರಕ್ಕೂ ಸಂಬಂಧವಿಲ್ಲ. ಬರ ಬರುವುದಕ್ಕೆ ಸರ್ಕಾರ ಸಂಬಂಧ ಅಲ್ಲ. ಆದರೆ, ಬರ ನಿರ್ವಹಣೆ ಸರ್ಕಾರದ ಜವಾಬ್ದಾರಿ. ಆದುದರಿಂದ, ಇದರ ಬಗ್ಗೆ ಹೊಸ ಹೊಸ ಟೆಕ್ನಾಲಜಿಗಳನ್ನು ನಮ್ಮಲ್ಲಿ ಇಲ್ಲದೇ ಇದ್ದರೆ, import or buy ಮಾಡಿಕೊಂಡು ಬೇರೆ ಬೇರೆ ದೇಶಗಳಲ್ಲಿ ಯಾವ ರೀತಿ ಇದೆ. ಇದರ ಬಗ್ಗೆ ನಾವು ಸ್ವಲ್ಪ ಅಪ್‌ಡೇಟ್ ಮಾಡಿಕೊಂಡು, ನಮ್ಮ ರಾಜ್ಯದಲ್ಲಿ ಒಂದು ಸೆಂಟರ್ ಸೆಟ್‌ಅಪ್ ಮಾಡಿಕೊಂಡು, ಒಂದು ಕಮಿಷನ್ ಸೆಟ್‌ಅಪ್ ಮಾಡಿಕೊಳ್ಳಬೇಕು. ಈ ಬರ ಮತ್ತು ನೆರೆ ವಿಚಾರದಲ್ಲಿ ಹೇಳುವುದಾದರೆ, ನೆರೆ ಬಗ್ಗೆ ಈಗ ಅಲ್ಪಾವಧಿ ವ್ಯವಸ್ಥೆಯಲ್ಲಿ ಇಲಾಖೆಯವರು ಹೇಳುತ್ತಿದ್ದಾರೆ ಆದರೆ, ಬರಗಾಲದ ಬಗ್ಗೆ ಯಾರೂ ಕೂಡ ಚರ್ಚೆ ಮಾಡುತ್ತಿಲ್ಲ. ಆದುದರಿಂದ, ಸರ್ಕಾರ ಬರದ ಬಗ್ಗೆ ಬಹಳ ಹೆಚ್ಚಿನ ಒತ್ತು ಕೊಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ಈ ಕೆಲಸ This will take two or three years. ಆದರೆ, ಇದರ ಬಗ್ಗೆ ಸರ್ಕಾರದ ಗಮನ ಇರಲಿ. Permanent system setup ಮಾಡಿ. ಏಕೆಂದರೆ, ಕರ್ನಾಟಕ ರಾಜ್ಯಕ್ಕೂ ಬರಕ್ಕೂ ಬಹಳ ದೊಡ್ಡ ಸಂಬಂಧವಿದೆ. ಅದು ಬಹುಶಃ ಆ ಸಂಬಂಧವನ್ನು ಕಳಚುವುದಕ್ಕೆ ಸಾಧ್ಯವಿಲ್ಲವೆಂದು ಕಾಣುತ್ತಿದೆ. ಆದುದರಿಂದ, ಒಂದು system setup ಮಾಡಿ, ಒಂದು ಕಮಿಷನ್ ಸೆಟ್‌ಅಪ್ ಮಾಡಿ, ಬರಕ್ಕೆ ಮತ್ತು ಬರದ prediction ಜೊತೆಗೆ hint ಕೊಡುವುದು ಮತ್ತು ಈ environmental changes ಏನಿದೆ ಅದರ ಬಗ್ಗೆ ಅಧ್ಯಯನ ಮಾಡುವುದಕ್ಕೆ ಮತ್ತು ರೈತರಿಗೆ ಅದರ ಸಂಬಂಧ ವಿಚಾರಗಳನ್ನು ಮೊದಲೇ ತಿಳಿಸುವುದಕ್ಕೆ ಸರ್ಕಾರ gear up ಆಗುವುದಕ್ಕೆ ಮುನ್ಸೂಚನೆ ಕೊಡುವುದಕ್ಕೆ ಒಂದು ಕಮೀಷನ್ ನ್ನು ನೇಮಕ ಮಾಡಬೇಕು ಮತ್ತು ಅದಕ್ಕೆ ಶಕ್ತಿ ಕೊಡಬೇಕು. ಅದಕ್ಕಾಗಿ research and development ಗೆ ಹೆಚ್ಚು ಒತ್ತು ಕೊಡಬೇಕು. ನಮ್ಮ ರಾಜ್ಯದಲ್ಲಿ ಟೆಕ್ನಾಲಜಿಗೂ ಬರ ಇಲ್ಲ, ಬುದ್ಧಿವಂತರಿಗೂ ಬರ ಇಲ್ಲ ಮತ್ತು ಸರ್ಕಾರದಲ್ಲಿ ದುಡ್ಡಿಗೂ ಬರ ಇಲ್ಲ. ಆದರೆ, ಮಾಡಬೇಕೆನ್ನುವ ಮನಸ್ಸಿಗೆ ಬರ ಇದೆ. ಆ ಬರವನ್ನು ತೆಗೆದುಹಾಕಿ ಮನಸ್ಸು ಅಪ್ಲೈ ಮಾಡಬೇಕು ಎನ್ನುವ ಮನವಿಯನ್ನು ಮಾಡುತ್ತಿದ್ದೇನೆ.

ಬರ ಬಂದ ಮೇಲೆ ನಿರ್ವಹಣೆ ಜವಾಬ್ದಾರಿ ಪ್ರಮುಖವಾಗುತ್ತದೆ. ಸರ್ಕಾರ 25.09.2008 ರಂದು ಮೊದಲನೆ ಬರ ಘೋಷಣೆ ಮಾಡಿತ್ತು. ಆವೊತ್ತಿನ ದಿನ ಸುಮಾರು 86 ತಾಲ್ಲೂಕುಗಳು ಬರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದಾರೆ. ಎರಡನೆ ಬರ ಘೋಷಣೆ ಮಾಡಿದ್ದು, 12ನೇ ಅಕ್ಟೋಬರ್ 2010ರಲ್ಲಿ. ಬರ ಘೋಷಣೆಯಲ್ಲಿಯೂ ಸಹ ಅಂತರ್ಜಲ ವ್ಯವಸ್ಥೆಯನ್ನು ಗಮನಕ್ಕೆ ತೆಗೆದುಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಬರ ಘೋಷಣೆಯೂ ಸಹ ನನ್ನ ಪ್ರಕಾರ ವೈಜ್ಞಾನಿಕವಾಗಿಲ್ಲ. ಏಕೆಂದರೆ, ಇಲಾಖೆಯ ಅಧಿಕಾರಿಗಳು ಮಾಹಿತಿ ಕೊಟ್ಟಿದ್ದಾರೆ, ಅದರಂತೆ ಸರ್ಕಾರ ಅದನ್ನು ಘೋಷಣೆ ಮಾಡಿದೆ. ಆದರೆ, ಅದಕ್ಕೆ ನಾನು ಒಂದು ಉದಾಹರಣೆ ನೀಡುತ್ತೇನೆ. ಉದಾಹರಣೆಗೆ, ಕರ್ನಾಟಕ ರಾಜ್ಯದಲ್ಲಿ ಶೇಕಡ 90ರಷ್ಟು ಯಾವುದಾದರೂ ತಾಲ್ಲೂಕು ನೀರಾವರಿ ಇದ್ದರೆ ಅದು ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕು. ಆದರೆ, ಮೊದಲನೆ ಪಟ್ಟಿಯಲ್ಲಿ ಆ ತಾಲ್ಲೂಕನ್ನು ಬರಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡುತ್ತಾರೆ. ನಂತರ, ಜಗಳೂರು its purely a dry taluk. ಅದು ಕೂಡ ದಾವಣಗೆರೆ ಜಿಲ್ಲೆಗೆ ಸೇರಿದೆ. ಮಾನ್ಯ ಶಾಸಕರು ಮತ್ತು ಅಲ್ಲಿನ ಜನರು ಬಂದು ಗಲಾಟೆ ಮಾಡಿ ಹೋರಾಟ ಮಾಡಿದ ಮೇಲೆ, ಎರಡನೆ ಪಟ್ಟಿಯಲ್ಲಿ ಆ ತಾಲ್ಲೂಕನ್ನು ಬರಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರ ಏತಕ್ಕೆ ಈ ರೀತಿ ಮಾಡುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ.

ಮೂರನೆಯದಾಗಿ, ಈ ಬರ hint ಯಾವಾಗ ಕೊಡುತ್ತದೆಯೆಂದರೆ, in the month of May or June. ಈ ಸಲ ಮಳೆ ಕಡಿಮೆ ಬರುತ್ತದೆ. ಪ್ರಮಾಣ ಕಡಿಮೆ ಇದೆ, ವಿಂಡ್ ಡೈರೆಕ್ಷನ್ ಬದಲಾವಣೆಯಾಗುತ್ತಿದೆ. Dry spell ಜಾಸ್ತಿ ಇದೆ. Moisture content ಕಡಿಮೆ ಇದೆ. ಇದರ ಬಗ್ಗೆ ಮೇ ಮತ್ತು ಜೂನ್ ತಿಂಗಳಿನಲ್ಲಿ ಮೆಸೇಜ್ ಬರುತ್ತದೆ. We are running in the month of December. ಡಿಸೆಂಬರ್ ತಿಂಗಳಿನಲ್ಲಿ ನಾವು ಹೋಗುತ್ತಿದ್ದೇವೆ. ಸರ್ಕಾರ 206 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಆದರೆ, lower level of governance. ಇನ್ನೂ gear up ಆಗಿರುವುದಿಲ್ಲ. ಮಾನ್ಯ ಕೃಷ್ಣಭೈರೇಗೌಡರವರು ಕೋಲಾರ ಜಿಲ್ಲೆಗೆ ಹೋಗಿ 3 ಸಲ ಮೀಟಿಂಗ್ ಮಾಡಿ ಬಂದರು. ಮಾನ್ಯ ಶಿವಶಂಕರರೆಡ್ಡಿಯವರು 2 ಸಲ ಮೀಟಿಂಗ್ ಮಾಡಿ ಬಂದರು. ಮಾನ್ಯ ಕೃಷ್ಣಭೈರೇಗೌಡರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2 ಸಲ ಮೀಟಿಂಗ್ ಮಾಡಿ ಬಂದರು. ಈ ಬಗ್ಗೆ ನಾನು ಎಲ್ಲಾ ಮಾಹಿತಿಗಳನ್ನು ಪಡೆದಕೊಂಡಿದ್ದೇನೆ. ಆದರೆ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಕೇವಲ ಬೆಂಗಳೂರಿನ ಕಛೇರಿಯಲ್ಲಿ ಕುಳಿತುಕೊಂಡು video conference ಮಾಡುತ್ತಾರೆಯೇ ಹೊರತು, ಅವರೂ ಫೀಲ್ಡ್‌ಗೆ ಹೋಗಿರುವುದಿಲ್ಲ. ಯಾವ್ಯಾವ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಯಾವ್ಯಾವ ಜಿಲ್ಲೆಗೆ ಹೋಗಿ ಮುಖತಃ ಭೇಟಿ ಮಾಡಿ, ಅಧಿಕಾರಿಗಳ ಜೊತೆ ಚರ್ಚೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ, ಯಾವ ಗ್ರಾಮಕ್ಕೆ ಭೇಟಿ ಮಾಡಿ ಬಂದಿದ್ದಾರೆಂದು ದಯಮಾಡಿ ತಿಳಿಸಬೇಕು. ದಾವಣಗೆರೆ ಜಿಲ್ಲೆಯಲ್ಲಿ ಉಸ್ತುವಾರಿ ಕಾರ್ಯದರ್ಶಿಗಳು ಎಷ್ಟು ಬಾರಿ ಮೀಟಿಂಗ್ ಮಾಡಿದ್ದಾರೆ? ಹೋಗಿಯೇ ಇಲ್ಲ. ಹೋಗಿದ್ದರೆ ಕೇವಲ ಒಂದು ಸಲ ಹೋಗಿರುತ್ತಾರೆ. ನನ್ನ ಬಳಿ ಪಟ್ಟಿ ಇದೆ. ಗುಲ್ಬರ್ಗಾ ಜಿಲ್ಲೆಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು 2 ಸಲ ಭೇಟಿ ಮಾಡಿದ್ದಾರೆ. ಕಂದಾಯ ಮಂತ್ರಿಗಳು ಒಂದು ಸಲ ಭೇಟಿ ಮಾಡಿದ್ದಾರೆ. ಜಿಲ್ಲಾ ಕಾರ್ಯದರ್ಶಿಗಳ ಬಗ್ಗೆ ಮಾಹಿತಿ ಇರುವುದಿಲ್ಲ.

ಎರಡನೆಯದು, ವಿಜಯಪುರ ಜಿಲ್ಲೆಯಲ್ಲಿ ಒಂದು ಸಲ ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಒಂದು ಸಲ ಕಂದಾಯ ಮಂತ್ರಿಗಳು ಹೋಗಿದ್ದಾರೆ. ರಾಯಚೂರು ಜಿಲ್ಲೆಗೆ ಕಂದಾಯ ಮಂತ್ರಿಗಳು ಹೋಗಿರುವುದಿಲ್ಲ. ಬೀದರ್ ಜಿಲ್ಲೆಗೆ ಕಂದಾಯ ಮಂತ್ರಿಗಳು 3 ಸಲ video conference ಮಾಡಿದ್ದಾರೆ. ಕೊಪ್ಪಳ ಜಿಲ್ಲೆಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಒಂದು ಬಾರಿ ಹೋಗಿದ್ದಾರೆ. ಈ ಬಗ್ಗೆ ನಾನು ಕೇವಲ ಉದಾಹರಣೆ ನೀಡುತ್ತಿದ್ದೇನೆ. ಈ ಬಗ್ಗೆ ಸಂಪೂರ್ಣವಾಗಿ ಹೇಳುತ್ತಿಲ್ಲ. ಈ ಬರದ ಬಗ್ಗೆ ಸರ್ಕಾರಕ್ಕೆ ಇಷ್ಟೊಂದು ಅಸಡ್ಡೆ ಇದ್ದರೆ, ಬರವನ್ನು ನಿರ್ವಹಣೆ ಮಾಡುವಂತಹ ಅಧಿಕಾರಿಗಳಿಗೆ ಎಷ್ಟು ಜವಾಬ್ದಾರಿ ಇರುತ್ತದೆ? ನಾನು ಸರ್ಕಾರವನ್ನು ದೂಷಿಸುತ್ತಿಲ್ಲ. ಸರ್ಕಾರ ಬರ ನಿರ್ವಹಣೆಗೆ 206 ಕೋಟಿ ರೂಪಾಯಿಗಳ ಅನುದಾನವನ್ನು ಪಿ.ಡಿ., ಅಕೌಂಟ್‌ನಲ್ಲಿ ಇಟ್ಟಿದೆ. ಆದರೆ, ಅದನ್ನು ಸದ್ಬಳಕೆ ಮಾಡಿಕೊಂಡು, ಖರ್ಚು ಮಾಡಿ, ಗುಳೆ ಹೋಗುವುದನ್ನು ತಪ್ಪಿಸಬೇಕಲ್ಲವೇ? ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಸರ್ಕಾರ ಏನು ಮಾಡುವುದು ಬೇಡ. ಬದಲಾಗಿ, ಉತ್ತರ ಕರ್ನಾಟಕದ 46 ತಾಲ್ಲೂಕುಗಳಲ್ಲಿ ಬರ ಇದೆ. 46 ತಾಲ್ಲೂಕುಗಳಲ್ಲಿ ಸರ್ಕಾರಕ್ಕೆ ನಿಜವಾಗಲೂ ಬದ್ಧತೆ ಅಥವಾ ಜವಾಬ್ದಾರಿ ಇದ್ದರೆ, ಕೇವಲ ಒಬ್ಬ ವ್ಯಕ್ತಿಯೂ ಕೂಡ ಈ 46 ತಾಲ್ಲೂಕುಗಳಿಂದ ಗುಳೆ ಹೋಗದಿರುವ ರೀತಿ ನೋಡಿಕೊಳ್ಳಬೇಕು. ಅದು ಸರ್ಕಾರದ ಜವಾಬ್ದಾರಿ ಮತ್ತು ನಮ್ಮ ಜವಾಬ್ದಾರಿ ಕೂಡ ಆಗಿದೆ. ಉತ್ತರ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ, ಆಂಧ್ರಪ್ರದೇಶ, ಗೋವಾ, ಈ ರೀತಿ ಬೇರೆ, ಬೇರೆ ರಾಜ್ಯಗಳಿಗೆ ಗುಳೆ ಹೋಗುವುದು ನಮಗೆ ಅವಮಾನವಲ್ಲವೇ? ನಮ್ಮ ರಾಜ್ಯದ ಜನ ಬೇರೆ ರಾಜ್ಯಗಳಿಗೆ ಊಟ, ಕೂಲಿ ಅಥವಾ ಕೆಲಸ ಹುಡುಕಿಕೊಂಡು ಹೋದರೆ ನಮಗೆ ಅದಕ್ಕಿಂತಲೂ ಅವಮಾನ ನಮಗೆ ಬೇಕೇ? ಇದನ್ನು ದಯಮಾಡಿ ತಡೆಯಬೇಕೆಂದು ಮನವಿ ಮಾಡುತ್ತೇನೆ. ಇದನ್ನು ತಡೆದಿದ್ದೇ ಆದರೆ, ಬಹುಶಃ ಬೆಳಗಾವಿಯ ಸುವರ್ಣಸೌಧದಲ್ಲಿ ಅಧಿವೇಶನ ಮಾಡಿದ್ದು ಎಲ್ಲಿಯೋ ಒಂದು ಕಡೆ ಸಾರ್ಥಕವಾಗುತ್ತದೆ ಎನ್ನುವುದನ್ನು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣಾರವರ ಕಾಲದಲ್ಲಿ ಬರ ಬಂದಾಗ ಮಂತ್ರಿಗಳು ಹೋಬಳಿ ಮಟ್ಟಕ್ಕೆ ಹೋಗುತ್ತಿದ್ದನ್ನು ನಾನು ನೋಡಿದ್ದೇನೆ. ಮಂತ್ರಿಗಳೇ ಹೋಬಳಿ ಮಟ್ಟಕ್ಕೆ ಹೋಗಿ ಮೀಟಿಂಗ್ ಮಾಡಿದಾಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿನ ತಹಶೀಲ್ದಾರ್, ಹೋಬಳಿ ಮಟ್ಟದ ಅಧಿಕಾರಿಗಳು, ತಾಲ್ಲೂಕು ಮಟ್ಟದ ಅಧಿಕಾರಿಗಳು ಎಲ್ಲರೂ gear up ಆಗಿ ಫೀಲ್ಡ್‌ನಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದರು. ಇವೊತ್ತಿನ ದಿವಸ ಯಾರು ಆ ಕೆಲಸವನ್ನು ಮಾಡುತ್ತಿದ್ದಾರೆ? ಜಿಲ್ಲೆಗೆ ಹೋಗುತ್ತಾರೆ, ಮೀಟಿಂಗ್ ಮಾಡುತ್ತಾರೆ, ದುಡ್ಡು ಇದೆಯೇ, ರಿಲೀಸ್ ಮಾಡಿ ಎಂದು ಹೇಳಿ ಬಂದುಬಿಡುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಎಷ್ಟು ಮೀಟಿಂಗ್ ಮಾಡಿದ್ದಾರೆ ಅದನ್ನು ದಯಮಾಡಿ ತಿಳಿಸಬೇಕು. ಶ್ರೀ ರಾಜಶೇಖರ ಪಾಟೀಲರವರು ಗುಲ್ಬರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಮೀಟಿಂಗ್ ಮಾಡಿದ್ದಾರೆಯೇ? ಜಿಲ್ಲೆಗೆ ಹೋಗಿ ಮೀಟಿಂಗ್ ಮಾಡಿದ್ದಾರೆ, ವಾಪಸ್ಸು ಬಂದಿದ್ದಾರೆ. ತಾಲ್ಲೂಕು ಮಟ್ಟಕ್ಕೆ ಏತಕ್ಕೆ ಹೋಗಿರುವುದಿಲ್ಲ, ಜವಾಬ್ದಾರಿ ಏನು? ಇಷ್ಟು ದೊಡ್ಡ ಪ್ರಮಾಣದಲ್ಲಿ ಭೀಕರ ಬರಗಾಲ ಇರಬೇಕಾದರೆ ಇದಕ್ಕಿಂತಲೂ ನಮಗೆ ದೊಡ್ಡ ಕೆಲಸ ಏನಿದೆ? ಇದನ್ನು ನಾವು ಕೇಳಬೇಕಲ್ಲವೇ?

ಇವೊತ್ತಿನ ದಿವಸ ಯಾವ ಇಲಾಖೆಗಳು ಬರ ನಿರ್ವಹಣೆ ಮಾಡಬೇಕಾಗಿತ್ತು, ಆ ಇಲಾಖೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆಯೆಂದರೆ, ನಿಜವಾಗಲೂ ಆ ಇಲಾಖೆಗಳು ಕೆಲಸ ಮಾಡುವುದಕ್ಕೆ ಸಾಧ್ಯವೇ ಎಂದು ನನಗನ್ನಿಸುತ್ತಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಸಹಾಯಕ ಕೃಷಿ ಅಧಿಕಾರಿಗಳ 55 ಹುದ್ದೆಗಳು ಖಾಲಿ ಇವೆ. ಕೃಷಿ ಅಧಿಕಾರಿಗಳ 139 ಹುದ್ದೆಗಳು ಖಾಲಿ ಇದ್ದರೆ ಯಾರು ಕೆಲಸ ಮಾಡುತ್ತಾರೆ? ಮಂತ್ರಿಗಳು ಹೋಗಿ ಕೆಲಸ ಮಾಡುತ್ತಾರೆಯೇ? ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಬಹಳಷ್ಟು ಕಡೆ ಕುಡಿಯುವ ನೀರಿಗೆ ಸಮಸ್ಯೆ ಇದೆ. ಅಂತರ್ಜಲ ಪಾತಾಳಕ್ಕೆ ಇಳಿದು ಹೋಗಿದೆ. ಇದುವರೆವಿಗೆ ಗೋ ಶಾಲೆ ಪ್ರಾರಂಭ ಮಾಡಿರುವುದಿಲ್ಲ. ತುಮಕೂರು ಜಿಲ್ಲೆಯ ಸಿದ್ದರಬೆಟ್ಟದ ಹತ್ತಿರ 3 ವರ್ಷದ ಹಿಂದೆ ಗೋಶಾಲೆ ಪ್ರಾರಂಭ ಮಾಡಿದ್ದರು. ಇದೆಲ್ಲಾ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಗೊತ್ತಿದೆ ಎಂದುಕೊಂಡಿದ್ದೇನೆ. ಎಲ್ಲಿಯೂ ಕೂಡ ಗಂಜಿ ಕೇಂದ್ರಗಳನ್ನು ಪ್ರಾರಂಭ ಮಾಡಿರುವುದಿಲ್ಲ. ಎಲ್ಲಾ ಕಡೆಗಳಲ್ಲಿಯೂ ರೈತರು ಆತಂಕದಲ್ಲಿದ್ದಾರೆ. ಬೆಳೆ ನಷ್ಟ 16,500 ಸಾವಿರ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಿದ್ದಾರೆ. ಈ ರೈತರಿಗೆ ಕೊಡಬೇಕಾಗಿರುವ ಪರಿಹಾರ ಮೊತ್ತ ಎಷ್ಟು ಎಂದರೆ ಚಿಕ್ಕಬಳ್ಳಾಪುರ ಜಿಲ್ಲೆಯ ಕೃಷಿ ಇಲಾಖೆಯವರು 52 ಕೋಟಿ 92 ಲಕ್ಷ ರೂಪಾಯಿಗಳೆಂದು ಹೇಳುತ್ತಾರೆ. ರೈತರ ಬೆಳೆ ಹೋಯಿತು, ಜೀವನ ದುಸ್ತರವಾಯಿತು. ಕುಡಿಯುವ ನೀರಿಲ್ಲ. ದನ ಕರುಗಳಿಗೆ ಮೇವಿಲ್ಲ. ಈ ರೀತಿ ರೈತರು ಕಷ್ಟದಲ್ಲಿದ್ದಾರೆ. ಎಲ್ಲಿಯೋ ಒಂದು ಕಡೆ ದಕ್ಷಿಣದಲ್ಲಿ ಮಳೆ, ಉತ್ತರದಲ್ಲಿ ಗುಳೆ. ದಕ್ಷಿಣದಲ್ಲಿ ಮಳೆ ಅಂದರೆ ಕೊಡಗು ಜಿಲ್ಲೆಯಲ್ಲಿ ಮಳೆಯಿಂದ ಬಹಳ ತೊಂದರೆಯಾಗಿದೆ. ಆದರೆ, ಉತ್ತರ ಭಾಗದಲ್ಲಿ ಬರದಿಂದ ಗುಳೆ ಹೋಗುತ್ತಿದ್ದಾರೆ.

(ಮುಂದುವರೆದಿದ್ದಾರೆ...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(527) 18-12-2018 (4.00) ವೈಎಲ್-ಎಂಡಿ (ಸಭಾಪತಿಯವರ ಉಪಸ್ಥಿತಿ)

ಡಾ: ವೈ.ಎ.ನಾರಾಯಣಸ್ವಾಮಿ(ಮುಂದು):-

ಉತ್ತರದಲ್ಲಿ ಗುಳೆ ಹೋಗುತ್ತಿದ್ದಾರೆ. ದಕ್ಷಿಣದಲ್ಲಿ ಮಳೆ, ಉತ್ತರದಲ್ಲಿ ಬರ ಎನ್ನುವ ಹಾಗೆ ಆಗಿದೆ. ಮಳೆ ಇಲ್ಲದೇ 'ಉತ್ತರ ಭಾಗ ತತ್ತರ, ಬದುಕು ದುಸ್ತರ' ಎಂದು ಇಷ್ಟು ದೊಡ್ಡ ಪ್ರಮಾಣದಲ್ಲಿ ಆರ್ಟಿಕಲ್ಸ್ ಬಂದರು ಸಾಲ ಮನ್ನಾ ಮಾಡುತ್ತೇವೆ ಎಂದು ಘೋಷಣೆ ಮಾಡಿ, ದೊಡ್ಡ ಪ್ರಮಾಣದಲ್ಲಿ ಎಲ್ಲಾ ಯೋಜನೆಗಳನ್ನು ಸ್ಥಗಿತಗೊಳಿಸಿ ಸಾಲ ಮನ್ನಾ ಮಾಡಲು ಆದ್ಯತೆ ನೀಡಿ, ಕರ್ನಾಟಕ ರಾಜ್ಯದಲ್ಲಿ 7-7½ ತಿಂಗಳುಗಳಿಂದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇವತ್ತಿನವರೆಗೂ ಸುಮಾರು 800 ಜನರಿಗೆ ಮಾತ್ರ ಸಾಲ ಮನ್ನಾ ಮಾಡಲಾಗಿದೆ ಎಂದು 'Times Now' News Channel ನಲ್ಲಿ ಬಿತ್ತರವಾಗುತ್ತಿತ್ತು. ಮಾನ್ಯ ಮುಖ್ಯಮಂತ್ರಿಗಳು ಪಾಂಡವಪುರ ತಾಲ್ಲೂಕಿನಲ್ಲಿ ಭತ್ತ ನಾಟಿಯನ್ನು ಕಟಾವು ಮಾಡಿಕೊಂಡು ಬಂದಿದ್ದಾರೆಯೋ ಅದೇ ತಾಲ್ಲೂಕಿನಲ್ಲಿ ಒಂದೇ ಕುಟುಂಬದ ನಾಲ್ಕು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದುವರೆಗೂ ನಾವುಗಳು ಯಾರು ರೈತರ ಆತ್ಮಹತ್ಯೆಗೆ ಸಂಬಂಧಿಸಿದಂತೆ ಗಂಭೀರವಾಗಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ನಾವು ಏನು ಮಾಡುತ್ತಿದ್ದೇವೆ ಎಂದರೆ, ವಿರೋಧ ಪಕ್ಷದವರು ಆಡಳಿತ ಪಕ್ಷದ ಮೇಲೆ, ಆಡಳಿತ ಪಕ್ಷದವರು ವಿರೋಧ ಪಕ್ಷದ ಮೇಲೆ ನಿಮ್ಮ ಸರ್ಕಾರದಿಂದ ಇಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ನಾವೇನು ಕಡಿಮೆ ಇದ್ದೇವೆ ಎನ್ನುವ ಹಾಗೆ ಅಂಕಿ-ಅಂಶಗಳ ಮೂಲಕ ಉತ್ತರವನ್ನು ಕೊಡುತ್ತಾ, ನಾವು ಮಾನವೀಯತೆಯನ್ನು ಮರೆತು ಚರ್ಚೆ ಮಾಡುವ ಮಟ್ಟಕ್ಕೆ ಬಂದಿದ್ದೇವೆ. ಇದರಿಂದ ಬಹಳ ನೋವಾಗುತ್ತಿದೆ. ಸಾಲಭಾದೆಗೆ ರೈತ ಕುಟುಂಬ ಆತ್ಮಹತ್ಯೆ ಬಗ್ಗೆ ಜನತಾ ದರ್ಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಅದಕ್ಕಾಗಿ ತೋಟಗಾರಿಕಾ ಸಚಿವರು ಸಾಯುವವರನ್ನು ನಾವು ಹಿಡಿಯುವುದಕ್ಕಾಗುವುದಿಲ್ಲ. ಗೊತ್ತಿಲ್ಲದ ಹಾಗೆ ವಿಷವನ್ನು ಕುಡಿದರೆ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ನಾವುಗಳಾಗಲಿ ಏನು ಮಾಡುವುದಕ್ಕಾಗುತ್ತದೆ ಎಂದು ಹೇಳಿಕೆಯನ್ನು ನೀಡುತ್ತಾರೆ. ನಾನು ಸಹ ಇದರ ಬಗ್ಗೆ ಜಾಸ್ತಿ ಬೆಳೆಸುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ರೈತರ ಬಗ್ಗೆ ಉತ್ತರದಾಯಿತ್ವವನ್ನು ತೆಗೆದುಕೊಂಡು, ರೈತರ ಪರ ಯಾರು ಇಲ್ಲ ನಾವೇ ಇರುವುದು ಎಂಬ ಘೋಷಣೆಯೊಂದಿಗೆ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. Mandate ಅವರ ಪರವಾಗಿ ಇದೆ, ನಮ್ಮ ಪರವಾಗಿ mandate ಇದ್ದರೂ number ಪರವಾಗಿ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಮಾಡಲಿ ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಇಷ್ಟೊಂದು ಅನ್ಯಾಯವನ್ನು ರೈತರಿಗೆ ಮಾಡಬಾರದು. ಇವತ್ತಿನ ದಿವಸ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

the entire governance has come to a standstill. ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಗಳ ಹತ್ತಿರ ಒಂದು ಮಾತನ್ನು ಕೇಳುವುದಕ್ಕೆ ಬಯಸುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಜನತಾ ದರ್ಶನವನ್ನು ಮಾಡುತ್ತಾರೆ. ಜನತಾ ದರ್ಶನಕ್ಕೆ ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನ ಬೆಂಗಳೂರಿಗೆ ಬರುವುದಕ್ಕೆ ಇರುವ ಕಾರಣವೇನು? ಅಂದರೆ, Taluk Administration, ಜಿಲ್ಲಾ ವ್ಯವಸ್ಥೆ ಸತ್ತು ಹೋಗಿದ್ದೆಯೇ? ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿಲ್ಲವೇ? ಜನತಾ ದರ್ಶನದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ದಕ್ಷಿಣ ಕನ್ನಡದಿಂದ ಹಿಡಿದು ಬೆಂಗಳೂರಿಗೆ ಬರಬೇಕಾದರೆ ಮೇಲಿನ ಅಧಿಕಾರಿಗಳಿಂದ ಹಿಡಿದು, ಕೆಳ ಮಟ್ಟದ ಅಧಿಕಾರಿಗಳವರೆಗೂ ಅಲ್ಲಿ ಏನು ಮಾಡುತ್ತಿದ್ದಾರೆ? ತಹಶೀಲ್ದಾರ್‌ರವರು, ಎ.ಸಿ. ರವರು, ಜಿಲ್ಲಾಧಿಕಾರಿಗಳು, ಇಲಾಖಾ ಕಾರ್ಯದರ್ಶಿಯವರುಗಳು ಕರ್ತವ್ಯವನ್ನು ನಿರ್ವಹಿಸದೇ ಇರುವುದರಿಂದ ಅವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಬಂದು ನಮ್ಮ ಕೆಲಸವಾಗುತ್ತಿಲ್ಲ ಹೇಳಿ ಕೊಳ್ಳುತ್ತಿದ್ದಾರೆ. So, I can say that, it is the utter failure of the governance in Karnataka. ಆದ್ದರಿಂದ, ಆಡಳಿತ ವ್ಯವಸ್ಥೆ ಸರಿಯಾಗಿ ಇದ್ದರೆ, ಜನರು ಮಾನ್ಯ ಮುಖ್ಯಮಂತ್ರಿಗಳನ್ನು ಹುಡುಕಿಕೊಂಡು ಬರುವ ಅವಶ್ಯಕತೆ ಇರುವುದಿಲ್ಲ. ಇವತ್ತು ನಾವೆಲ್ಲ ನೋಡುತ್ತಿರುವ ಹಾಗೆ ಅಧಿವೇಶನದ ಸಂದರ್ಭದಲ್ಲಿ ಸುವರ್ಣ ಸೌಧದ ಮುಂದೆ ಸರ್ಕಾರವೇ ಟೆಂಟ್ ಹಾಕಿ ಪ್ರತಿಭಟನೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವ ಹಾಗೆ ಆಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ ಮಾಡುವುದಕ್ಕೆ ಅವರ ಹಕ್ಕು ಇದೆ, ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಟೆಂಟ್ ನಂಬರ್-1, 10, 11 ಎನ್ನುವ ಹಾಗೆ ನಂಬರ್‌ಗಳನ್ನು ಹಾಕಿಕೊಂಡು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಮಾಡುತ್ತಿರುವಾಗ ಇವತ್ತು ಆಡಳಿತ ವ್ಯವಸ್ಥೆ ಎಲ್ಲಿದೆ? ಅದು ಕುಸಿದು ಹೋಗಿದೆ. ಬರಪೀಡಿತ ಪ್ರದೇಶದ ರೈತರು ಏನಾದರೂ ತಾಲ್ಲೂಕು ಕಛೇರಿಗೆ ಭೇಟಿ ನೀಡಿದರೆ, ನನ್ನ ಕ್ಷೇತ್ರದಲ್ಲಿಯೇ ಏನೇನು ಕೆಲಸವೂ ಆಗುತ್ತಿಲ್ಲ. ಅವರೆಲ್ಲರೂ ಸೇರಿ ಮನವಿ ಸಲ್ಲಿಸಿದ ಮೇಲೆ ಮಾವು ಬೆಳೆಗಾರರಿಗೆ 25.00 ಕೋಟಿ ರೂಪಾಯಿಗಳನ್ನು ನೀಡಲಾಗಿತ್ತು. ಆದರೆ, ತಾಲ್ಲೂಕು ಕಛೇರಿಯಲ್ಲಿ ಆ ಹಣವನ್ನು ತೆಗೆದುಕೊಳ್ಳಬೇಕಾದರೆ, ನನ್ನ ಹೆಸರಿನಲ್ಲಿರುವ ತೋಟದಲ್ಲಿ ಬೆಳೆದಂಥ ಬೆಳೆ ಯಾವುದು ಇಲ್ಲ ಎಂದು ಬರೆಯುತ್ತಾರೆ. Computer Operator ಗೆ ಹಣವನ್ನು ನೀಡಿದರೆ ಮಾವು ಬೆಳೆ ಇದೆ ಎಂದು ಬರೆಯುತ್ತಾರೆ. ಈ ರೀತಿ ಇಷ್ಟೊಂದು ಕೆಟ್ಟ ವ್ಯವಸ್ಥೆಯಲ್ಲಿ ಬರ ನಿರ್ವಹಣೆ ಮಾಡುವುದಕ್ಕೆ ಹೇಗೆ ಸಾಧ್ಯ? ಒಂದು ಕಡೆ ನೀರು ಒದಗಿಸುವ ಪ್ರಯತ್ನವನ್ನಾಗಲಿ ಅಥವಾ ಜನರಿಗೆ ಸಾಂತ್ವನ ಹೇಳುವ ಪ್ರಯತ್ನವನ್ನಾಗಲಿ ಸರ್ಕಾರ ಮಾಡಲಿಲ್ಲ. ಬೆಂಗಳೂರಿನಲ್ಲಿ ಎ.ಸಿ. ಕಛೇರಿಯಲ್ಲಿ ಕುಳಿತುಕೊಂಡು Video

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Conference ಮೂಲಕ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಅಷ್ಟೇ; ಅವರ ಸರ್ಕಾರ ಅಧಿಕಾರದಲ್ಲಿರುವಾಗಲೂ ಅಷ್ಟೇ ಆ ಅಧಿಕಾರಿಗಳು ಮುಕ್ಕಾಲು ಭಾಗ ಏನು ಸುಳ್ಳು ಹೇಳುತ್ತಾರೆ ಆ data ವನ್ನು ಹಿಡಿದುಕೊಂಡು ನಾವೆಲ್ಲರೂ ಅದರ ಮೇಲೆ ಚರ್ಚೆ ಮಾಡಿಕೊಂಡು, ರೈತರಿಗೆ ಅನ್ಯಾಯ ಮಾಡುತ್ತಿದ್ದೇವೆ. ಅದಕ್ಕಾಗಿ ದಯವಿಟ್ಟು ಎಲ್ಲರನ್ನೂ ಕೇಳಿಕೊಳ್ಳುವುದೇನೆಂದರೆ, ರೈತರಿಗೆ ಅನ್ಯಾಯ ಮಾಡುವುದಕ್ಕೆ ಹೋಗುವುದು ಬೇಡ. ಕರ್ನಾಟಕ ರಾಜ್ಯದಲ್ಲಿ ಶೇಕಡಾ 59 ರಷ್ಟು ಭಾಗ ಬರದ ಛರಿ ನೆರಳಿನಲ್ಲಿ ಸಿಲುಕಿಕೊಂಡಿದೆ. ದಯವಿಟ್ಟು ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಎಲ್ಲಾ ಸಚಿವರುಗಳು, ಅಧಿಕಾರಿಗಳು field ಗೆ ಹೋಗಬೇಕು. Field ಗೆ ಹೋಗಿ ಕೆಲಸ ಮಾಡಬೇಕು. ಆ field ಗೆ ಇಳಿದು ಅನ್ನದಾತನ ಸಹಾಯಕ್ಕೆ ಬರಬೇಕು. ಇಲ್ಲದೇ ಇದ್ದರೆ ನಿಜವಾಗಿಯೂ ರೈತರು ಅವರನ್ನು ಕ್ಷಮಿಸುವುದಿಲ್ಲ, ಅಲ್ಲದೆ ಇದರಿಂದ ರಾಜ್ಯದ ಬೆಳವಣಿಗೆಗೆ ಬಹಳ ದೊಡ್ಡ ಪ್ರಮಾಣದಲ್ಲಿ ಪೆಟ್ಟು ಬೀಳುತ್ತದೆ. ಮುಂದಿನ ಭವಿಷ್ಯ ನಿಜವಾಗಿಯೂ ನಮ್ಮನ್ನು ಸಹಿಸುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಸರ್ಕಾರದ ವೈಫಲ್ಯ ಎದ್ದು ಕಾಣುತ್ತಿದೆ. ಆಡಳಿತ ಪಕ್ಷದವರೆಲ್ಲರೂ ಬಹಳ ಬುದ್ಧಿವಂತವರಾಗಿದ್ದಾರೆ. You are all highly qualified Ministers. I really appreciate you. ಆದರೆ, ಅವರ ಕಾಲದಲ್ಲಿ ಆದರೂ ಇದರ ಬಗ್ಗೆ ಹೊಸ ಪದ್ಧತಿಯನ್ನು ಅಳವಡಿಸಿಕೊಳ್ಳಲಿ. ಜನರಿಗೆ ಮುಟ್ಟುವಂಥ ಒಂದು ತಂತ್ರಜ್ಞಾನವನ್ನು imbibe ಮಾಡಿಕೊಂಡು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪಶುಸಂಗೋಪನಾ ಇಲಾಖೆ, ನೀರಾವರಿ ಇಲಾಖೆ, ಸಣ್ಣ ನೀರಾವರಿ ಇಲಾಖೆ ಇವುಗಳೆಲ್ಲವನ್ನೂ synchronize ಮಾಡಿ. ನಮ್ಮಲ್ಲಿ ಹೊಂದಾಣಿಕೆಯೇ ಇಲ್ಲ. There is no coordination between each and everything. ಅವರಷ್ಟಕ್ಕೆ ಅವರು, ಇವರಷ್ಟಕ್ಕೆ ಇವರು ಮಾತನಾಡುತ್ತಿರುತ್ತಾರೆ. Synchronize ಮಾಡಬೇಕಾಗಿದೆ. ಒಂದು ತಾಲ್ಲೂಕಿಗೆ ಬರ ನಿರ್ವಹಣೆಗೆ SPV (Special Purpose Vehicle) create ಮಾಡಿ ಅದರ ಮೂಲಕ you reach out to all the farmers and all the beneficiaries. ಅವರಿಗೆ ಅನುಕೂಲವಾಗುತ್ತದೆ. ಆ ರೀತಿ ಮಾಡಬೇಕೆಂದು ವಿನಂತಿಸುತ್ತಾ, ಸಮಯಾವಕಾಶವನ್ನು ಕಲ್ಪಿಸಿದ್ದಕ್ಕೆ ಧನ್ಯವಾದಗಳನ್ನರ್ಪಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ನಾವು ತೀವ್ರ ರೀತಿಯ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ ಇದು ನಮ್ಮ ರಾಜ್ಯಕ್ಕೆ ಎಲ್ಲಿಯೋ ಒಂದು ಕಡೆ ಶಾಪ ಎನ್ನುವ ಭಾವನೆ ಮೂಡುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ರಾಜ್ಯದ ಸುಮಾರು 100 ತಾಲ್ಲೂಕುಗಳಲ್ಲಿ ತೀವ್ರತರವಾದ ಬರಗಾಲವನ್ನು ಎದುರಿಸುತ್ತಿದ್ದೇವೆ. ಇವತ್ತು ಬೆಳೆ ನಾಶವಾಗಿದೆ ಎಂದು ಅಧಿಕಾರಿಗಳು ವರದಿಯನ್ನು ಕೊಟ್ಟಿದ್ದಾರೆ. ಸುಮಾರು 15,000 ಕೋಟಿ ರೂಪಾಯಿಗಳಷ್ಟು ಬೆಳೆ ನಾಶವಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ನಮ್ಮ ರಾಜ್ಯದಲ್ಲಿ ಒಂದು ಕಡೆ ಅತಿವೃಷ್ಟಿ, ಮತ್ತೊಂದು ಕಡೆ ಅತಿವೃಷ್ಟಿ, ಇವೆರಡನ್ನೂ ಎದುರಿಸಬೇಕಾದಂಥ ದುಸ್ಥಿತಿ ಬಂದಿದೆ. ಮಳೆ ಬಂದ ಸಂದರ್ಭದಲ್ಲಿ ನೀರನ್ನು ಶೇಖರಣೆ ಮಾಡುವುದಕ್ಕೆ ಏನಾದರೂ ಮುಂದಾಲೋಚನೆಯನ್ನು ಮಾಡಿದ್ದರೆ ಅಥವಾ ಸುಮಾರು 10 ವರ್ಷಗಳ ಹಿಂದೆ ಹೋದಾಗ ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ ನಾವು ನೀರಾವರಿ ಯೋಜನೆಗೆ ಖರ್ಚು ಮಾಡಿದಂಥ ಹಣವನ್ನು ನೋಡಿದಾಗ ಒಂದೊಂದು ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಸಹ 10,000 ಕೋಟಿ ರೂಪಾಯಿ, 50,000 ಕೋಟಿ ರೂಪಾಯಿ ಈ ರೀತಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಷ್ಟು ಹಣವನ್ನು ಸಹ ಸೂಕ್ತವಾಗಿ ಸಮಯಕ್ಕೆ ಸರಿಯಾಗಿ ಏನಾದರೂ ನೀರಾವರಿ ಯೋಜನೆಗೆ ಉಪಯೋಗಿಸಿದ್ದರೆ ನಮ್ಮ ರಾಜ್ಯದ ಬರಡು ಭೂಮಿ, ಬಯಲುಸೀಮೆ ಪ್ರದೇಶಗಳು ಸಹ ನೀರಾವರಿ ಪ್ರದೇಶವಾಗಿ ಪರಿವರ್ತನೆಯಾಗುತ್ತಿತ್ತು ಎನ್ನುವುದು ನನ್ನ ಭಾವನೆಯಾಗಿದೆ. ಒಂದು ಕಡೆ ಮಳೆ ಕಡಿಮೆಯಾಗುತ್ತಿದೆ. ಏತಕ್ಕೆ ಕಡಿಮೆಯಾಗುತ್ತಿದೆ ಎಂಬುದನ್ನು ನಾವು ಯೋಚನೆ ಮಾಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಇವತ್ತು ಶೇಕಡ 30 ರಷ್ಟು ಜಾಗ ಅರಣ್ಯ ಪ್ರದೇಶವಾಗಿ ಇರಬೇಕಾಗಿತ್ತು. ದುರಾದೃಷ್ಟವಶಾತ್ ಕರ್ನಾಟಕ ರಾಜ್ಯದಲ್ಲಿ ಕೇವಲ ಶೇಕಡಾ 21 ರಷ್ಟು ಭಾಗ ಮಾತ್ರ ಕಾಡು ಇದೆ. ನಾವುಗಳೇ ಒಂದು ಕಡೆ ಮಳೆಯಾಗಿಲ್ಲ ಎಂದು ಹೇಳುತ್ತೇವೆ, ಮತ್ತೊಂದು ಕಡೆ ಕಾಡನ್ನು ನಾಶಗೊಳಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಇವತ್ತಿನ ದಿವಸ ಯಾರ್‍ಯಾರು ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿ ಮನೆಗಳನ್ನು ನಿರ್ಮಿಸಿ ವ್ಯವಸಾಯ ಮಾಡುತ್ತಿದ್ದಾರೆ ಅದನ್ನು ನಾವೇ ಸರ್ಕಾರದ ಗಮನಕ್ಕೆ ತರುತ್ತೇವೆ. ಬಗರ್‌ಹುಕುಂ ಕಾರ್ಯಕ್ರಮದಡಿ 'ಉಳುವವನೆ ಭೂಮಿಯ ಒಡೆಯ' ಎಂದು ಯಾವ ರೈತ ಉಪಯೋಗ ಮಾಡುತ್ತಾನೆ, ಅವರಿಗೆ ಆ ಜಾಗವನ್ನು ಕೊಡಿ ಎಂದು ನಾವು ಒತ್ತಾಯ ಮಾಡುತ್ತೇವೆ. ಒಂದು ಕಡೆ ಕಾಡನ್ನು ನಾಶಗೊಳಿಸುತ್ತೇವೆ, ಮತ್ತೊಂದು ಕಡೆ ಮಳೆ ಇಲ್ಲ ಎಂದು ಹೇಳುತ್ತೇವೆ. ಆದ್ದರಿಂದ ಮರಗಳನ್ನು ಬೆಳೆಸುವುದರ ಕಡೆ ಸರ್ಕಾರ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕು. ಈ ಒಂದು ದುಸ್ಥಿತಿ ಇರುವ ಸಂದರ್ಭದಲ್ಲಿ ಮುಂದಿನ ವರ್ಷಗಳು ಬಹಳಷ್ಟು ಕಠಿಣವಾಗುತ್ತದೆ ಎಂಬ ಭಾವನೆ ಇದೆ. ಬಯಲು ಸೀಮೆಯ ಜಿಲ್ಲೆಗಳಲ್ಲಿರುವ ನಾವುಗಳು ಮಳೆಯನ್ನೇ ಅವಲಂಬಿಸಿ ವ್ಯವಸಾಯ ಮಾಡುವಂಥದ್ದಾಗಿದೆ.

(ಮುಂದು) . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(528) 18. 12. 2018 4.10 ಎಸ್‌ಕೆ(ಪಿಕೆ) ಎಂಡಿ

(ಸಭಾಪತಿಗಳ ಉಪಸ್ಥಿತಿ)

ಶ್ರೀ ಎಂ.ನಾರಾಯಣಸ್ವಾಮಿ(ಮುಂದು)

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ತುಮಕೂರು ಈ ಭಾಗಗಳಲ್ಲಿ 1000–1500 ಅಡಿ ಕೊರೆದು ಆಳಕ್ಕೆ ಹೋದರೂ ನೀರು ಸಿಗುತ್ತಿಲ್ಲ. ಹಾಗಾಗಿ ಕೊಳವೆ ಬಾವಿಯ ನೀರನ್ನು ಬಳಸಿ ವ್ಯವಸಾಯ ಮಾಡುವ ಪ್ರಶ್ನೆಯೇ ಬರುವುದಿಲ್ಲ. ನಮಗೆ ಬೇರೆ ಪರ್ಯಾಯ ವ್ಯವಸ್ಥೆ ಕೂಡ ಇಲ್ಲ. ಇನ್ನೊಂದು ಕಡೆ ನಮಗೆ ನದಿ ಮೂಲಗಳಿಲ್ಲ; ಮಳೆ ಬರುವುದಿಲ್ಲ. ಬೆಂಗಳೂರಿನ ಕೊಳಚೆ ನೀರು ಏನಿದೆ, ಇದರ ಸಂಸ್ಕರಣೆ ಮಾಡಿ ಕೆರೆ ತುಂಬಬೇಕು ಎನ್ನುವ ಯೋಜನೆಯನ್ನು ಹಿಂದಿನ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಮಾಡಿತ್ತು. ಮಾನ್ಯ ಸಭಾಪತಿಯವರೇ, ನಾನು ಒಂದು ಉದಾಹರಣೆ ಕೊಡಬಯಸುತ್ತೇನೆ. ಬೆಂಗಳೂರಿನ ಪೂರ್ವ ಭಾಗದಲ್ಲಿರುವ ವರ್ತೂರು-ಬೆಳ್ಳಂದೂರು ಕೆರೆ ಏನಿದೆ, ಅಲ್ಲಿಗೆ ಬೆಂಗಳೂರಿನ ಅರ್ಧ ತ್ಯಾಜ್ಯ ನೀರು ಬಂದು ಸೇರುತ್ತದೆ. ಆ ನೀರನ್ನು ಸರಿಯಾಗಿ ಉಪಯೋಗಿಸದೇ ಇದ್ದಿದ್ದರಿಂದ, ಆ ನೀರು ತಮಿಳುನಾಡಿನ ಹೊಸೂರಿನ ಹತ್ತಿರ ಇರುವ ಬಾಗಲೂರಿಗೆ ಹರಿದು ಹೋಗುತ್ತದೆ. ಹೀಗೆ ಹರಿದು ಹೋಗುವಾಗ ಆ ನೀರು ನಮ್ಮ ರಾಜ್ಯದ ಜಮೀನಿನ ಮೇಲೆ ಹರಿದು ಹೋಗುತ್ತದೆ. ಆ ನೀರು ಹರಿದು ಹೋಗಬೇಕಾದರೆ ಆ ನೀರಿನಲ್ಲಿರುವ ಕೆಮಿಕಲ್‌ನ ಅಂಶವನ್ನು ನಮ್ಮ ಜಮೀನು ಹೀರುವ ಕಾರಣ ಅಲ್ಲಿ ವ್ಯವಸಾಯ ಮಾಡಲು ಸಾಧ್ಯವಾಗುವುದಿಲ್ಲ. ಆದರೆ, ಬಾಗಲೂರಿಗೆ ಆ ನೀರು ಹೋಗುವಷ್ಟರಲ್ಲಿ ಆ್ಯಸಿಡ್ ಕಂಟೆಂಟ್ 100 ಕ್ಕೆ 70 ಭಾಗದಷ್ಟನ್ನು ನಮ್ಮ ಭೂಮಿ ಹೀರಿಕೊಂಡಿರುತ್ತದೆ. ತಮಿಳುನಾಡಿಗೆ ಹೋಗುವ ಆ ನೀರನ್ನು ಡ್ಯಾಮ್ ಕಟ್ಟಿ ನಿಲ್ಲಿಸಿ, ಅದರಿಂದ ಅಲ್ಲಿನ ರೈತರು ವ್ಯವಸಾಯ ಮಾಡಿ ಅಲ್ಲಿ ಬೆಳೆಯುವ ತರಕಾರಿ ಮತ್ತು ಹಣ್ಣುಗಳನ್ನು ಬೆಂಗಳೂರಿಗೆ ತಂದು ವ್ಯಾಪಾರ ಮಾಡುತ್ತಾರೆ. ಹೋದಸಲ ಇದರ ಬಗ್ಗೆ ಮಾತನಾಡಿದಾಗ ನಮ್ಮ ಸರ್ಕಾರ ಇದರ ಕಡೆ ಗಮನಹರಿಸಿ ಒಂದು ಕಾರ್ಯಕ್ರಮವನ್ನು ಘೋಷಣೆ ಮಾಡಿತ್ತು. ಬೆಂಗಳೂರಿನ ಕಲುಷಿತ ನೀರು ಏನು ಬೇರೆ ರಾಜ್ಯಕ್ಕೆ ವೇಸ್ಟ್ ಆಗಿ ಹೋಗುತ್ತಿದ್ದೆಯೋ ಅದನ್ನು ತಡೆದು, ಶುದ್ಧಿ ಮಾಡಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕಳುಹಿಸಬೇಕೆಂದು ಸುಮಾರು ರೂ. 1500 ಕೋಟಿಗಳನ್ನು ಖರ್ಚು ಮಾಡಿ ಕೋಲಾರದ ಕೆರೆಗಳನ್ನು ತುಂಬುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಇದೇರೀತಿ, ಮೈಸೂರು ರಸ್ತೆಯಲ್ಲಿ ಹೋಗುತ್ತಿರುವ ತ್ಯಾಜ್ಯ ನೀರನ್ನು ಶುದ್ಧೀಕರಣ ಮಾಡಿ ಆನೇಕಲ್ ತಾಲ್ಲೂಕಿನ ಸುಮಾರು 66 ಕೆರೆಗಳನ್ನು ತುಂಬುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಯನ್ನು ನಮ್ಮ ಸರ್ಕಾರ ಮಾಡಿತ್ತು. ಸುಮಾರು ರೂ.250 ಕೋಟಿ ಹಣವನ್ನು ಆನೇಕಲ್ ತಾಲ್ಲೂಕಿಗೆ ಸಂಬಂಧಪಟ್ಟಂತೆ ಈ ಕಾರ್ಯಕ್ರಮಕ್ಕೆಂದು ಇಟ್ಟಿದ್ದಾರೆ. ಮಳೆ ಕೊರತೆ ಉಂಟಾಗುತ್ತಿರುವುದರಿಂದ, ಕೊಳವೆ ಬಾವಿಗಳಲ್ಲಿ ನೀರು ಸಿಗದೇ ಇರುವುದರಿಂದ ರೈತರು ವ್ಯವಸಾಯ ಮಾಡುವುದಕ್ಕಾಗುತ್ತಿಲ್ಲ. ಈ ಏತ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕು. ಇವತ್ತು ರೈತರು ವ್ಯವಸಾಯ ಮಾಡುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಮತ್ತೊಮ್ಮೆ ಅವರ ಜೀವನಕ್ಕೆ ಸುಲಭ ಮಾರ್ಗೋಪಾಯಗಳನ್ನು ಕಲ್ಪಿಸಿಕೊಡಬೇಕಾದರೆ ಈ ಯೋಜನೆಗಳನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಲು ಸರ್ಕಾರ ಗಮನಹರಿಸಬೇಕು. ಈ ಬರಗಾಲದಲ್ಲಿ ವ್ಯವಸಾಯ ಮಾಡುವುದಕ್ಕೆ ಆಗದೇ ಇರುವಂತಹ ರೈತರ ಬವಣೆ ಒಂದು ಕಡೆಯಾದರೆ, ಮಾತು ಬರದೇ ಇರುವ, ಕುಡಿಯುವುದಕ್ಕೆ ನೀರು ಬೇಕು ಎಂದು ಕೇಳುವುದಕ್ಕಾಗದೇ ಇರುವ, ಹೊಟ್ಟೆಗೆ ಊಟ ಬೇಕು ಎಂದು ಕೇಳುವುದಕ್ಕೇ ಆಗದೇ ಇರುವಂತಹ ಜಾನುವಾರುಗಳಿಗೆ ಮೇವಿನ ತೊಂದರೆ ಆಗುತ್ತಿದೆ. ಜಾನುವಾರುಗಳಿಗೆ ಬೇಕಾಗುವ ಮೇವಿನ ಶೇಖರಣೆ ಕಡಿಮೆಯಾಯಿತು ಎಂದು ಹೋದವರ್ಷ ಬೇರೆ ರಾಜ್ಯಗಳಿಂದ ಮೇವು ತರಿಸಿಕೊಂಡೆವು. ಇವತ್ತು ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಎಲ್ಲೆಲ್ಲಿ ಸರ್ಕಾರಿ ಜಾಗಗಳಿವೆಯೋ ಅಲ್ಲಿ ಸರ್ಕಾರವೇ ದುಡ್ಡನ್ನು ಕೊಟ್ಟು ಮೇವು ಬೆಳೆಸುವ ಕಾರ್ಯಕ್ರಮಗಳನ್ನು ರೂಪಿಸಬೇಕು. ಮುಂದಿನ ದಿನಗಳಲ್ಲಿ ಜಾನುವಾರುಗಳಿಗೆ ತೊಂದರೆ ಆಗಬಾರದು. ಮೇವು ಸಿಗುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರಿನ ಸುತ್ತಮುತ್ತ ಮಳೆ ಕಡಿಮೆ ಬರುತ್ತಿರುವುದರಿಂದ ಯಾವುದೇ ರೀತಿಯ ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಈ ಭಾಗಗಳಲ್ಲಿ ಮಳೆಗೆ ಅನುಗುಣವಾಗಿ ರಾಗಿಯನ್ನು ಬೆಳೆಯುತ್ತಾರೆ. ಈ ಸಲ ರಾಗಿ ಬೆಳೆ ಕೂಡ ನಮ್ಮ ಕೈಗೆ ಸಿಗುತ್ತಿಲ್ಲ. ಈಗಾಗಲೇ ನಾವು ಬರಗಾಲವನ್ನು ಅನುಭವಿಸುತ್ತಿದ್ದೇವೆ. ಅದಕ್ಕೋಸ್ಕರ, ರೈತರಿಗೆ ಪರಿಹಾರ ಕೊಡಬೇಕಾಗಿದೆ. ಅವರು ಬೆಳೆ ಬೆಳೆಯಬೇಕಾದರೆ ಬಿತ್ತನೆ ಬೀಜಕ್ಕೆಂದು ಸಾಲ ತೆಗೆದುಕೊಂಡರು. ಗೊಬ್ಬರ ತೆಗೆದುಕೊಳ್ಳುವುದಕ್ಕೆ ಸಾಲ ಮಾಡಿದರು, ಸ್ವಲ್ಪ ಮಳೆಯಾಯಿತು ಎಂದು ಹೊಲ ಉತ್ತಿದರು, ಉಳುಮೆ ಮಾಡಿದರು, ಬಿತ್ತನೆ ಬಿತ್ತಿದರು. ಆದರೆ ಯಾವುದೂ ಕೂಡ ಕೈಗೆ ಬರಲಿಲ್ಲ. ತೆನೆ ಬಂದು ಹಾಲು ತುಂಬಬೇಕಾದ ಸಂದರ್ಭದಲ್ಲಿ ಮಳೆ ಕೈಕೊಟ್ಟಿತು. ಆ ಬೆಳೆ ಇವತ್ತು ಮೇವಾಗಿ ಕೂಡ ಪರಿವರ್ತನೆ ಆಗುತ್ತಿಲ್ಲ. ಅಂತಹ ದುಸ್ಥಿತಿಗೆ ನಾವು ಹೋಗಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಪರಿಹಾರ ಕೊಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಕೊಳವೆ ಬಾವಿಯಲ್ಲೇನು ಅಲ್ಪಸ್ವಲ್ಪ ನೀರು ಸಿಗುತ್ತದೆಯೋ ಅದರಿಂದ ತರಕಾರಿಯನ್ನು ಬೆಳೆಯುತ್ತೇವೆ. ಉದಾಹರಣೆಗೆ, ಇಡೀ ಭಾರತದಲ್ಲೇ ಅತಿ ಹೆಚ್ಚು ಟೊಮೆಟೊ ಬೆಳೆಯನ್ನು ನಮ್ಮ ಕೋಲಾರ ಜಿಲ್ಲೆ ಬೆಳೆಯುತ್ತದೆ. ಎಲ್ಲಾ ರೈತರು ಟೊಮೆಟೊ ಬೆಳೆಯುವುದಕ್ಕೆ ಹೋಗುತ್ತಾರೆ; ಆದರೆ ಅದಕ್ಕೆ ಸರಿಯಾದ ಬೆಲೆ ಸಿಗುವುದಿಲ್ಲ. ಟೊಮಾಟೋವನ್ನು ರಸ್ತೆಗೆ ಸುರಿಯುವುದನ್ನು ನಾವು ನೋಡುತ್ತೇವೆ. ಒಂದು ಕಡೆ, ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ; ವ್ಯವಸಾಯ ಮಾಡುವುದಕ್ಕಾಗುವುದಿಲ್ಲ ಮತ್ತು ಇನ್ನೊಂದು ಕಡೆ, ಬೆಳೆದಿರಬಹುದಾದ ಬೆಳೆಗಳಿಗೆ ಬೆಲೆ ಸಿಗುವುದಿಲ್ಲ. ಇಂತಹ ದುಸ್ಥಿತಿಯಲ್ಲಿ ಇವತ್ತು ರೈತರಿದ್ದಾರೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಪರಿಹಾರವೇನು? ಹೋದ ಸಲ ನಮ್ಮ ಸಿದ್ಧರಾಮಯ್ಯನವರ ಸರ್ಕಾರ ಸಾಲ ಮನ್ನಾ ಮಾಡಿತ್ತು. ಇವತ್ತಿನ ಸಮ್ಮಿಶ್ರ ಸರ್ಕಾರದಲ್ಲಿ ಮಾನ್ಯ ಕುಮಾರಸ್ವಾಮಿಯವರೂ ಸಹ ಸಾಲ ಮನ್ನಾ ಯೋಜನೆಯನ್ನು ಮಾಡಿದ್ದಾರೆ. ನಿಜವಾಗಲೂ ಕೂಡ ಈ ಸದನದ ಪರವಾಗಿ ನಾನು ಹೃದಯಪೂರ್ವಕವಾದ ವಂದನೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ವಿರೋಧ ಪಕ್ಷದ ಉಪನಾಯಕರು ಮಾತನಾಡುತ್ತಾ, ಜೆಡಿ(ಎಸ್)ನವರು ಮತ್ತು ಕಾಂಗ್ರೆಸ್‌ನವರು ರೈತರ ಮಕ್ಕಳು ಎಂದು ಹೇಳುತ್ತಾರೆ; ನಾವ್ಯಾರು ರೈತರ ಮಕ್ಕಳಲ್ಲವೇ, ನಾವು ರೈತರ ಪರವಾಗಿ ಇಲ್ಲವೇ ಎಂದು ಹೇಳಿದರು. ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಸದನದಲ್ಲಿ ಕುಳಿತುಕೊಳ್ಳುವ ಜನ ಒಬ್ಬರ ಮೇಲೆ ಒಬ್ಬರು ಮಾತನಾಡುವುದನ್ನು ಬಿಡಬೇಕು. ಹೊರಗಡೆ ಧರಣಿ ಮಾಡುತ್ತಿರುವ ರೈತರು, ಸದನದಲ್ಲಿ ಏನಾದರೂ ಉತ್ತಮವಾದ ಚರ್ಚೆಯಾಗುತ್ತದೆಯೇ ಎಂಬುದನ್ನು ನೋಡುತ್ತಿರುತ್ತಾರೆ. ನಾವು ಒಬ್ಬರ ಮೇಲೆ ಒಬ್ಬರು ದೂರಿದರೆ ರೈತರ ಹಿತವನ್ನು ಹೇಗೆ ಕಾಪಾಡುವುದಕ್ಕೆ ಆಗುತ್ತದೆ? ವಿರೋಧ ಪಕ್ಷದ ಮುಖಂಡರು ಯಾರಿದ್ದಾರೋ ಅವರು ಆಡಳಿತ ಪಕ್ಷದ ನಾಯಕರ ಜೊತೆ ಕುಳಿತುಕೊಂಡು, ಯಾವರೀತಿ ಪರಿಹಾರ ಮಾಡಬಹುದು ಎಂಬ ಬಗ್ಗೆ ಚರ್ಚೆ ಮಾಡಬೇಕು. ಸಂಕಷ್ಟದಲ್ಲಿರುವ ರೈತನ ಕಣ್ಣೀರನ್ನು ಒರೆಸುವ ಕೆಲಸ ಮಾಡುವುದೇ ನಮ್ಮ ಅಂತಿಮ ಗುರಿಯಾಗಿರಬೇಕು. ಈ ನಿಟ್ಟಿನಲ್ಲಿ ಅವರೂ ಕೂಡ ಸಲಹೆಗಳನ್ನು ಕೊಡಬಹುದು. ವಿರೋಧ ಪಕ್ಷದ ಸದಸ್ಯರಿಗೆ ಕೋಪ ಬಂದರೂ ಪರವಾಗಿಲ್ಲ, ನಾನು ಒಂದು ಮಾತನ್ನು ಹೇಳುತ್ತೇನೆ. ಹಿಂದಿನ ಸರ್ಕಾರ ಸಾಲ ಮನ್ನಾ ಮಾಡಿಲ್ಲ ಎಂದು ಸದನದಲ್ಲಿ ಗಲಾಟೆ ಮಾಡುತ್ತಿದ್ದರು. ಸಾಲ ಮನ್ನಾ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡೆವು. ಅವರು ನಮ್ಮ ಕಡೆ ಗಮನ ಕೊಡಲಿಲ್ಲ. ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ಸರ್ವಪಕ್ಷಗಳ ನಿಯೋಗ ಹೋಯಿತು. ಕರ್ನಾಟಕ ರಾಜ್ಯದ 28 ಜನ ಲೋಕಸಭಾ ಸದಸ್ಯರೂ ಕೂಡ ಹೋದರು. 17 ಜನ ಬಿಜೆಪಿ ಸಂಸದರು ಇದ್ದರು. ನಾಳೆ ಬೆಳಿಗ್ಗೆ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಬೇಕೆಂದು ಹಿಂದಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನ ಕರ್ನಾಟಕ ಭವನದಲ್ಲಿ ಒಂದು ಸಭೆ ಮಾಡಿದಾಗ ಅದರಲ್ಲಿ ಎಲ್ಲಾ ಎಂಪಿಗಳು ಭಾಗವಹಿಸಿ, ಪ್ರಧಾನ ಮಂತ್ರಿಗಳ ಜೊತೆ ಇಂಥಿಂಥ ವಿಷಯಗಳನ್ನು ಮಾತನಾಡಬೇಕು ಎಂದು ತೀರ್ಮಾನಿಸಿದರು. ಆದರೆ, ಮಾರನೆಯ ದಿನ ಬೆಳಿಗ್ಗೆ ಪ್ರಧಾನ ಮಂತ್ರಿಗಳನ್ನು ನೋಡುವುದಕ್ಕೆ ಹೋದಾಗ, ಅಲ್ಲಿ ಬಿಜೆಪಿಯ ಒಬ್ಬ ಸಂಸದ ಕೂಡ ಬಾಯಿ ಬಿಡಲಿಲ್ಲ. ಆವತ್ತು ಬಿಜೆಪಿ ಸಂಸದರು, ನಮ್ಮ ರಾಜ್ಯದ ರೈತರು ಸಂಕಷ್ಟದಲ್ಲಿದ್ದಾರೆ ಎಂದು ಮಾತನಾಡಬಹುದಾಗಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರೇ, ದಯವಿಟ್ಟು ಕುಳಿತುಕೊಳ್ಳಿ. ನಾನು ಮಾತನಾಡಿದ ಮೇಲೆ ನೀವು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಾನು ಎದ್ದು ನಿಂತಾಗ ನೀವು ಯೀಲ್ಡ್ ಆಗುವುದು ಸಂಪ್ರದಾಯ. ಸತ್ಸಂಪ್ರದಾಯದ ಪ್ರಕಾರ ವಿರೋಧ ಪಕ್ಷದ ನಾಯಕರು ಎದ್ದಾಗ ಒಂದು ನಿಮಿಷದ ಕಾಲ ಯೀಲ್ಡ್ ಆಗುವುದು ಸಂಪ್ರದಾಯ. ಮಾನ್ಯ ಸಭಾಪತಿಯವರೇ, ಸರ್ವ ಪಕ್ಷಗಳ ಸದಸ್ಯರು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಮನವಿ ಕೊಡುವುದು ವಾಡಿಕೆ ಹೌದು. ಆದರೆ, ಎರಡು ದಿವಸಗಳ ಮುಂಚೆ ಎರಡೂ ಪಕ್ಷದವರು ಮೆರವಣಿಗೆ ಮಾಡಿ, ಪ್ರಧಾನ ಮಂತ್ರಿಗಳ ಪ್ರತಿಕೃತಿಯನ್ನು ದಹಿಸಿ, ಅವರಿಗೆ ಬೇರೆ ಬೇರೆ ಮಾಲೆಗಳನ್ನು ಹಾಕಿ ಅಪಮಾನ ಮಾಡುವ ಪ್ರಕ್ರಿಯೆಗಳನ್ನು ರಾಜ್ಯದಲ್ಲಿ ಮಾಡುತ್ತಾ, ಮತ್ತೊದು ಕಡೆ, ಬನ್ನಿ ನಾವೆಲ್ಲಾ ಒಟ್ಟಿಗೆ ಹೋಗಿ ಪರಿಹಾರ ಕೇಳೋಣ ಎಂದರೆ ಹೇಗಾಗುತ್ತದೇ? ವಿರೋಧ ಪಕ್ಷದವರಿಗೂ ತಮ್ಮದೇ ಆದಂತಹ ಘನತೆ ಇರುತ್ತದೆ. ಈಕಡೆ ನೀವು ಪ್ರಧಾನ ಮಂತ್ರಿಯವರ ಪ್ರತಿಕೃತಿಯನ್ನು ಸುಟ್ಟು ಅಪಮಾನ ಮಾಡುವಂತಹ ವ್ಯವಸ್ಥೆಗಳನ್ನು ಮಾಡಿದಿರಿ. ಮತ್ತೊಂದು ಕಡೆ, ನಮ್ಮ ಜೊತೆಗೆ ಬನ್ನಿ ಒಟ್ಟಿಗೆ ಹೋಗೋಣ ಎಂದು ಹೇಳಿದಾಗ, ನಾವು ಸಹಕಾರ ಕೊಟ್ಟಿಲ್ಲ ಎನ್ನುವುದನ್ನು ಜ್ಞಾಪಿಸಬಯಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಇದು ಸತ್ಯಕ್ಕೆ ದೂರವಾದ ಮಾತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನೀವೆಲ್ಲರೂ ಸತ್ಯಹರಿಶ್ಚಂದ್ರರ ಮಕ್ಕಳೇ?

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ದಯವಿಟ್ಟು ತಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ಮಾನ್ಯ ಸಭಾಪತಿಯವರೇ, ನಾನು ಮತ್ತೊಂದು ಮಾತನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದ ಬೆಳೆ ನಷ್ಟವಾಗಿರುವ ಸಂಬಂಧ ಇಂತಿಷ್ಟು ಪರಿಹಾರ ಕೊಡಬೇಕೆಂದು ಕೇಂದ್ರಕ್ಕೆ ವರದಿಯನ್ನು ಕೊಟ್ಟೆವು. ಆಗ, ಬಿಜೆಪಿ ಆಡಳಿತ ಇದ್ದಂಥ ರಾಜ್ಯಗಳಿಗೆ ಎಷ್ಟು ಹಣವನ್ನು ಕೊಟ್ಟರು ಮತ್ತು ಕರ್ನಾಟಕ ರಾಜ್ಯಕ್ಕೆ ಎಷ್ಟು ಹಣವನ್ನು ಕೊಟ್ಟರು ಎಂಬುದರ ಬಗ್ಗೆ ತಾವು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆತ್ಮಾವಲೋಕನ ಮಾಡಿಕೊಳ್ಳಿ. ಮೊನ್ನೆ ಟಿವಿಯಲ್ಲಿ, ಉತ್ತರ ಭಾರತದ ಮೂರು ರಾಜ್ಯಗಳಲ್ಲಿ ಚುನಾವಣೆಯಾಗಿ ಅದರ ಫಲಿತಾಂಶ ಬಂದಮೇಲೆ ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು, ರೈತರ ಸಾಲಮನ್ನಾ ಮಾಡುತ್ತೇವೆ ಎಂದು ಹೇಳಿದ್ದನ್ನು ಕೇಳಿದೆವು. ನಾವು ವಿರೋಧ ಪಕ್ಷದವರಿಗೆ ಕೈ ಮುಗಿದು ಕೇಳಿಕೊಳ್ಳುತ್ತೇವೆ. ಯಾವುದೋ ಒಂದು ಕಾರಣದಿಂದ ನಮ್ಮ ರೈತರ ಸಾಲ ಮನ್ನಾ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಹಾಗಾದರೂ ರೈತರ ಸಾಲ ಮನ್ನಾ ಆಗಲಿ. ಈ ನಿಟ್ಟಿನಲ್ಲಿ ನಾವು ಒಗ್ಗಟ್ಟಾಗಬೇಕು. ನಮ್ಮ ರಾಜ್ಯ ಎದುರಿಸುತ್ತಿರುವ ಬರಗಾಲವನ್ನು ನಿಭಾಯಿಸುವಲ್ಲಿ ನಾವು ಯಾವರೀತಿಯ ಸೂಕ್ತ ಕ್ರಮ ಕೈಗೊಳ್ಳಬೇಕು, ಯಾವರೀತಿ ಸರ್ಕಾರದ ಗಮನಸೆಳೆಯಬೇಕು ಎಂದು ಮಾನ್ಯ ವಿರೋಧ ಪಕ್ಷದ ಸದಸ್ಯರು ಬಂದು, ತಮ್ಮ ಅನುಭವ ಹಂಚಿಕೊಂಡು ನಮ್ಮ ರೈತರ ಕಣ್ಣೀರು ಒರೆಸಲು ಕಾರಣೀಭೂತರಾಗಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮುಂದು . . .)

(529)18.12.2018,4.20,ಟಿಸಿಹೆಚ್/ಎಕೆ (ಸಭಾಪತಿಯವರ ಉಪಸ್ಥಿತಿ)

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಮಾನ್ಯ ಸದಸ್ಯರು ಒಂದು ತಪ್ಪು ಮಾಹಿತಿಯನ್ನು ಸದನಕ್ಕೆ ಹೇಳಿದ್ದಾರೆ.

**Mr. CHAIRMAN:** No interference. ಈಗ ಮಾನ್ಯ ಸದಸ್ಯರಾದ ಲಹರ್ ಸಿಂಗ್ ಸಿರೋಯಾ ರವರು ಮಾತನಾಡುತ್ತಾರೆ. ಆದ್ದರಿಂದ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ನಿಮ್ಮಿಂದ ಉತ್ತರ ನಿರೀಕ್ಷೆ ಮಾಡಿಲ್ಲ. ಅವರು ಉತ್ತರ ಕೊಡಬೇಕೆಂದು ನಾನು ಕೇಳುತ್ತಿಲ್ಲ. (ಗೊಂದಲ) ರಾಜ್ಯದ ರೈತರಿಗೆ ಅನ್ಯಾಯ ಆಗಿರುವಂಥದ್ದನ್ನು ಸರಿಪಡಿಸಬೇಕು. ಇದರಲ್ಲಿ ನಿಮ್ಮ ನಡವಳಿಕೆಗಳು ಯಾವ ರೀತಿ ಇದೆಯೆಂದು ತಮಗೂ ಕೂಡ ಗೊತ್ತಿದೆ. ತಮ್ಮಿಂದ ನಾವು ಉತ್ತರವನ್ನು ನಿರೀಕ್ಷೆ ಮಾಡುತ್ತಿಲ್ಲ. ನಾವು ಸಾಲ ಮನ್ನಾ ಮಾಡಲು ಮಾತ್ರ ಕೇಳುತ್ತಿದ್ದೇವೆ ಇದೇ ನಮ್ಮ ಉದ್ದೇಶ.

**(ಗೊಂದಲ)**

**ಶ್ರೀ ಎಂ.ಎ.ಗೋಪಾಲ ಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ಮೊದಲು ಸಾಲ ಮನ್ನಾ ಮಾಡತಕ್ಕಂಥ ಕೆಲಸ ಆಗಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರು ಮಾತನಾಡುತ್ತಾರೆ. ಡಾ|| ತೇಜಸ್ವಿನಿಗೌಡರವರೇ, ತಮಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಡುವುದಕ್ಕಾಗುವುದಿಲ್ಲ, ತಾವು ಈಗಾಗಲೇ ಮಾತನಾಡಿದ್ದೀರಿ. ನಂತರ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ, ತಾವು ಮಾತನಾಡುವಾಗ ಸ್ಪಷ್ಟೀಕರಣವನ್ನು ಕೊಡಿ. ಅವರು ಹೇಳುವುದನ್ನೂ ಕೇಳಿ.

(ಗೊಂದಲ)

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 1500 ಕೋಟಿ ರೂಪಾಯಿಗಳ ರೈತರ ಸಾಲ ಮನ್ನಾ ಮಾಡಲು ಸರ್ಕಾರ ಹಣ ಕೊಡುವಂತಹ ಉದ್ದೇಶ ಒಳ್ಳೆಯದು ಇದೆ. ಚಿಕ್ಕಬಳ್ಳಾಪುರ ಹಾಗೂ ಕೋಲಾರ ಭಾಗಗಳಿಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಆ ಕಲುಷಿತ ನೀರು ಪೂರೈಕೆ ಮಾಡುವ ಬದಲು ಎತ್ತಿನ ಹೊಳೆ ಯೋಜನೆಯನ್ನು ಜಾರಿಗೆ ತಂದು, ಆ ಭಾಗಗಳಿಗೆ ಪರಿಶುದ್ಧವಾದ ನೀರನ್ನು ಪೂರೈಕೆ ಮಾಡಬೇಕು. ಇಲ್ಲವೆಂದರೆ, ಅಂತರ್ಜಲ ಮಲಿನ ಆಗುತ್ತದೆ ಎನ್ನುವಂತಹ ಕಳವಳವನ್ನು ವ್ಯಕ್ತಪಡಿಸಿದ್ದಾರೆ. (ಗೊಂದಲ) ಆ ಕಳವಳವನ್ನು ಸದನವು ಪರಿಗಣಿಸಿ, ಪರಿಶುದ್ಧವಾದ ನೀರನ್ನು ಸರಬರಾಜು ಮಾಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಭೀಕರ ಬರಗಾಲದ ಬಗ್ಗೆ ಮಾನ್ಯ ಎಂ.ನಾರಾಯಣ ಸ್ವಾಮಿಯವರ ಕಳಕಳಿ ಏನಿದೆ, ಅದು ನಮಗೂ ಗೊತ್ತಾಗುತ್ತದೆ. ಒಟ್ಟು 38 ಜನ ಕಾಂಗ್ರೆಸ್‌ನವರು ಇದ್ದಾರೆ, ಅದರಲ್ಲಿ ಬರೀ 10 ಜನ ಮಾತ್ರ ಶಾಸಕರು ಇದ್ದಾರೆ. ಒಬ್ಬರು ಮಾನ್ಯ ಸಚಿವರು ಮಾತ್ರ ಇದ್ದಾರೆ ಇವರನ್ನು ಹೊರತುಪಡಿಸಿ, ಮಾನ್ಯ ಸಭಾನಾಯಕರು ಇನ್ನಿತರೆ ಸದಸ್ಯರು ಈ ಸದನದಲ್ಲಿ ಈಗ ಇರುವುದಿಲ್ಲ. ಶ್ರೀ ಎಂ.ನಾರಾಯಣ ಸ್ವಾಮಿಯವರು ಮಾತನಾಡಿದ್ದಕ್ಕೆ ನಾನು ಕೂಡ ಧನಿಗೂಡಿಸುತ್ತೇನೆ. ನಾನು ಪಕ್ಷಾತೀತವಾಗಿ ಮಾತನಾಡಿ ಈ ಬರಗಾಲದ ಸಮಸ್ಯೆಯನ್ನು ಬಗೆಹರಿಸಬೇಕೆಂದಿರುವ ಕಳಕಳಿ ಸರಿಯಾಗಿದೆ. ಅವರು ಮತ್ತೆ ಮತ್ತೆ ರಾಜಕಾರಣ ಬಗ್ಗೆ ಕೂಡ ಮಾತನಾಡಿದ್ದಾರೆ, ಮಾತನಾಡಲಿ ಪರವಾಗಿಲ್ಲ. ನಾನು ಮೂಲತಃ ರಾಜಸ್ಥಾನದಿಂದ ಬಂದು ಇಲ್ಲಿ ಸದಸ್ಯನಾಗಿದ್ದೇನೆ. ನಾನು ಹುಟ್ಟುವ 5–10 ವರ್ಷಗಳಿಗೆ ಮುಂಚೆ ಭೀಕರ ಬರಗಾಲ ಸಂಭವಿಸಿತ್ತು. ಆ ಸಂದರ್ಭದಲ್ಲಿ ಲಕ್ಷಾಂತರ ಜನ ಸತ್ತುಹೋದರು. ಏಕೆಂದರೆ, ಆಗ ಟ್ರೈನ್ ಇರಲಿಲ್ಲ, ಇನ್ನಿತರೆ ಯಾವುದೇ ರೀತಿಯ ಸಂಪರ್ಕ ಮಾಧ್ಯಮಗಳು ಇರಲಿಲ್ಲ, resources ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಲಿಲ್ಲ. ಅಂತಹ ಸಂದರ್ಭದಲ್ಲಿ ಲಕ್ಷಾಂತರ ಜನ ಸತ್ತಿದ್ದನ್ನು ನಾವು ಇತಿಹಾಸದಲ್ಲಿ ಓದಿ ಬಂದಿದ್ದೇವೆ. ಆ ಕಾರಣದಿಂದಾಗಿ ನಾನು ರೈತನಾಗಿಲ್ಲದಿದ್ದರೂ ರೈತರ ಸಮಸ್ಯೆ ಬಗ್ಗೆ ನನಗೆ ತುಂಬಾ ಕಳಕಳಿಯಿದೆ. ರಾಜ್ಯದಲ್ಲಿ ಮಳೆ ಬರದಿದ್ದರೆ, ಅದಕ್ಕಾಗಿ ನಾವು ಗೌರವಾನ್ವಿತ ಸುಪ್ರೀಂ ಕೋರ್ಟ್‌ನಿಂದ ಯಾವುದೇ ಆದೇಶವನ್ನು ಜಾರಿ ಮಾಡುವುಕ್ಕಾಗುವುದಿಲ್ಲ. ಇಂದ್ರ ದೇವನಿಗೆ ಕೂಡ ನಾವು ಅರ್ಜಿ ಸಲ್ಲಿಸುವಂತಿಲ್ಲ. ಮಳೆ ಯಾವ ರೀತಿ ಬರುತ್ತದೆಯೋ ಅದೇ ರೀತಿಯಲ್ಲಿ ನಾವು ಹೊಂದಿಕೊಂಡು ಹೋಗಬೇಕಾಗುತ್ತದೆ. ಈ ಕಾರಣದಿಂದಾಗಿಯೇ ನಮ್ಮ ಪೂರ್ವಿಕರು ಆ ಕಾಲದಲ್ಲಿಯೇ ಕೆ.ಆರ್.ಎಸ್. ಡ್ಯಾಂನ್ನು ಕಟ್ಟಿಸಿದ್ದಾರೆ. ಬರಗಾಲದ ಸಂದರ್ಭಗಳು ಬಂದಾಗ ಯಾವ ರೀತಿ ಇದನ್ನು ಬಗೆಹರಿಸಬೇಕು ಎಂದು ತಿಳಿದು, ತುಂಗಾ ಭದ್ರಾ ಡ್ಯಾಂ ಅನ್ನು ಕಟ್ಟಿದ್ದಾರೆ. ಅದೇ ರೀತಿಯಲ್ಲಿ ನಮಗೆ ಸ್ವಾತಂತ್ರ್ಯ ಸಿಕ್ಕಿದ ನಂತರ, ಉತ್ತರ ಕರ್ನಾಟಕದಲ್ಲಿ ಆಲಮಟ್ಟಿ ಡ್ಯಾಂ ನಿರ್ಮಿಸಲು ಪ್ರಾಜೆಕ್ಟ್‌ನ್ನು ಪ್ರಾರಂಭ ಮಾಡಿದರು. ಏಕೆಂದರೆ, ಮಳೆ ಬರದಿದ್ದರೆ, irrigation is the only method. ಈ Upper Krishna Project ಸುಮಾರು 35 ವರ್ಷಕ್ಕಿಂತ ಮುಂಚಿತವಾಗಿ ಪ್ರಾರಂಭವಾಗಿದೆ. ಅದಕ್ಕೆ ಲಕ್ಷಾಂತರ ಕೋಟಿ ರೂಪಾಯಿಗಳಷ್ಟು ಹಣ ಖರ್ಚಾಗಿರುತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ಸರ್ಕಾರದಲ್ಲಿಯೂ ಇದು ಸಂಭವಿಸಿದೆ. ಮೇಲಿಂದ ಮೇಲೆ ಹಗರಣಗಳು ಆಗುತ್ತಿವೆ, ಬೇರೆ ಬೇರೆ ಕಾರಣಗಳಿಂದಾಗಿ ಅಧಿಕಾರಕ್ಕೆ ಬಂದಾಗ, ಅವರ ನೆಂಟರು, ಅವರು ನಮ್ಮ ನೆಂಟರು ಮತ್ತು ಅವರು ನಮ್ಮ ಅಧಿಕಾರಿಗಳು, ಅವರು ಆ ಜಾತಿಯವರು, ಈ ಜಾತಿಯವರು ಎಂದು ಹೇಳಿ ಒತ್ತಡ ತಂದು ತಪ್ಪಿಸಿಕೊಳ್ಳುತ್ತಿದ್ದಾರೆ. ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಕಂದಾಯ ಸಚಿವರಾಗಿದ್ದಾಗ ಸದನದಲ್ಲಿ ಒಂದು ಮಾತನ್ನು ಹೇಳಿದ್ದರು, ಅದೇನೆಂದರೆ, ನಾನು ಅಧಿಕಾರಿಗಳ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಲಿ, ಅವರ ಮೇಲೆ ಕ್ರಮ ತೆಗೆದುಕೊಂಡರೆ, ಯಾರೋ ಒಬ್ಬರು ಜಾತಿ ಆಧಾರದ ಮೇಲೆ ಬಂಧುಗಳ ಕಡೆಯಿಂದ ನನಗೆ ಫೋನ್ ಮಾಡಿಸುತ್ತಾರೆ, ಯಾವುದೋ ಒಂದು ಪಕ್ಷದವರಿಂದ ಫೋನ್ ಮಾಡಿಸುತ್ತಾರೆ ಹೀಗೆ ಬೇರೆಯವರ ಕಡೆಯಿಂದ ಫೋನ್ ಮಾಡಿಸುತ್ತಾರೆ, ಈ ರೀತಿಯಾದಲ್ಲಿ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಅದೇ ರೀತಿ ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಗರಣವಾಗಿದೆ. ಈ ಸಮಸ್ಯೆ ಬಗ್ಗೆ ನಾವೆಲ್ಲರೂ ಸೇರಿ ಯೋಚನೆ ಮಾಡಬೇಕಾಗುತ್ತದೆ. ಯಾವಾಗ ಈ ಯೋಜನೆಯನ್ನು ಮುಕ್ತಾಯಗೊಳಿಸಬೇಕಿತ್ತು, ಈ ರೀತಿಯ ಹಗರಣಗಳಲ್ಲಿ ಭಾಗಿಯಾದವರ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳಬೇಕು. ಇನ್ನು ಮುಂದೆ ಹಗರಣಗಳು ನಡೆಯದಂತೆ ಯಾವ ರೀತಿ ಕ್ರಮ ವಹಿಸಬೇಕು ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ಇಲ್ಲವೆಂದರೆ, ಇದನ್ನು ನಾವು ಪರಿಹರಿಸಲು ಆಗುವುದಿಲ್ಲ. ಬರದ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದಿಂದ ಹಣ ಪಡೆದುಕೊಂಡು, ರೈತರಿಗೆ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಹಾರವನ್ನು ಕೊಡಬಹುದು. ಇದೆಲ್ಲವನ್ನು ನಾವು ತಾತ್ಕಾಲಿಕವಾಗಿ ಮಾಡಬಹುದು. ಆದರೆ ಅಂತಿಮವಾಗಿ ಇದಕ್ಕೆ ಪರಿಹಾರವೇನು? ನಿನ್ನೆ ದಿವಸ ಮಾನ್ಯ ಸದಸ್ಯರುಗಳೆಲ್ಲಾ ಮಾತನಾಡಿದ್ದನ್ನು ನೋಡಿದ್ದೇನೆ. ಸರ್ಕಾರ ಕಡುಬಡವರು ಹಾಗೂ ಓ.ಬಿ.ಸಿ. ಮತ್ತು ಎಸ್.ಸಿ/ಎಸ್.ಟಿ ಯವರಿಗೆ ಸರಿಯಾದ ಸಮಯಕ್ಕೆ ನೀರು ಸಿಗಬೇಕೆಂದು ಗಂಗಾ ಕಲ್ಯಾಣ ಯೋಜನೆಯನ್ನು ಜಾರಿಗೆ ತಂದಿದೆ. ಅದನ್ನು ಏಕೆ ಜಾರಿಗೆ ತಂದರು ಎಂದರೆ, ಸಣ್ಣ ಸಣ್ಣ ತೋಟದ ಭೂಮಿಯಲ್ಲಿ ಅವರಿಗೆ ನೀರು ದೊರೆತರೆ ಬರಗಾಲವಿದ್ದರೂ ಕೂಡ ಅವರು ಬೆಳೆಯನ್ನು ಬೆಳೆಯುವಂತಹ ಸೌಕರ್ಯ ಸಿಗುತ್ತದೆ ಎನ್ನುವಂತಹ ಕಾರಣಕ್ಕಾಗಿ ಈ ಯೋಜನೆಯನ್ನು ಜಾರಿಗೆ ತಂದರು.

**ಸಭಾಪತಿಯವರು:-** ಮಾನ್ಯ ಲಹರ್‌ಸಿಂಗ್ ಸಿರೋಯಾ ರವರೇ, ನಾಳೆ ಅದರ ಬಗ್ಗೆ ಸದನದಲ್ಲಿ ಚರ್ಚೆಗೆ ಬರುತ್ತದೆ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನಾನು ಬರಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದೇನೆ. ಏಕೆಂದರೆ, ನನಗೆ ಏನು ಅನ್ನಿಸುತ್ತದೆ ಎಂದರೆ, ಓ.ಬಿ.ಸಿ., ರೈತರ ಬಗ್ಗೆ ಕಾಳಜಿ ಹೊಂದಿದ ಪುಣ್ಯಾತ್ಮರು ಹಣವನ್ನು ಬಿಡುಗಡೆ ಮಾಡಿದ್ದಾರೆ, ಈ ದುಡ್ಡು ತಿಂದವರನ್ನು ರಕ್ಷಣೆ ಮಾಡುವುದು ಎಷ್ಟು ಅಕ್ಷಮ್ಯ ಅಪರಾಧವಾಗುತ್ತದೆಂದು ಮಾನ್ಯ ಎಂ.ನಾರಾಯಣಸ್ವಾಮಿಯವರು ಹೇಳಬೇಕು. ಏಕೆಂದರೆ, ಒಂದು ವೇಳೆ, ಗಂಗಾ ಕಲ್ಯಾಣ ಯೋಜನೆಯಲ್ಲಿ ಫಲಾನುಭವಿಗೆ ಪರಿಹಾರ ದೊರಕಿದರೆ, ನಮಗೆ ಸಮಾಧಾನ ಸಿಕ್ಕಿ, ಸಮಸ್ಯೆ ಕಡಿಮೆ ಆಗತ್ತಿತ್ತು. ಸಾವಿರಾರು ವರ್ಷಗಳಿಂದ ಅವರು ಅತ್ಯಾಚಾರ ಅನುಭವಿಸುತ್ತಾ ಬಂದಿದ್ದಾರೆ. ನಾವು ಸಾವಿರಾರು ಕೋಟಿ ರೂಪಾಯಿಳಷ್ಟು ಹಣವನ್ನು ಅವರ ಅಭಿವೃದ್ಧಿಗಾಗಿ ಬಿಡುಗಡೆ ಮಾಡುತ್ತೇವೆ. ಅವರಲ್ಲಿ ಕೆಲವರು ತೆರಿಗೆ ಕಟ್ಟುವಂತಹವರು ಕೂಡ ಕಟ್ಟುತ್ತಾರೆ. ಓ.ಬಿ.ಸಿ ಮತ್ತು ಎಸ್.ಸಿ/ಎಸ್.ಟಿ ಯವರಿಗೆ ಅದರ ಲಾಭ ದೊರಕಲಿ ಎಂದು ಸರ್ಕಾರ ಕೂಡ ಬಜೆಟ್‌ನಲ್ಲಿ provision ಮಾಡುತ್ತಾರೆ. ನಾವು ಕೂಡ ಅದಕ್ಕೆ ಸಮರ್ಥನೆ ಕೊಡುತ್ತೇವೆ. ಆದರೆ, ಬಡವರಿಗೆ ಸಿಗಬೇಕಾದಂತಹ ದುಡ್ಡನ್ನು ತಿಂದು ಹಾಕುತ್ತಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಯಾರೂ ತಯಾರಿಲ್ಲ. ಏಕೆಂದರೆ, ಅವರು ಬೇರೆ ಬೇರೆ ಕಾರಣಗಳನ್ನು ಕೊಟ್ಟು ತಪ್ಪಿಸಿಕೊಳ್ಳುತ್ತಿದ್ದಾರೆ. ಮಾನ್ಯ ಎಂ.ನಾರಾಯಣಸ್ವಾಮಿಯವರು ಹೇಳಿದಂತೆ, ನಾನೂ ಕೂಡ ಅದನ್ನೇ ಹೇಳುತ್ತೇನೆ, ಇದಕ್ಕೆ ಯಾವುದೇ ಸುರಕ್ಷತೆ ಇಲ್ಲದಿರುವುದರಿಂದ, ಈ ಹಗರಣದಲ್ಲಿ ಭಾಗಿಯಾದವರ ಮೇಲೆ ತನಿಖೆ, ಸದನ ಸಮಿತಿ ಅಥವಾ ಸಿ.ಬಿ.ಐ. ಮುಖಾಂತರವೇ ಆಗಬೇಕು. ಅದಕ್ಕೊಂದು ಕಠಿಣ ಶಿಕ್ಷೆ ಜಾರಿ ಆಗಬೇಕು. ಆಗ ಮಾತ್ರ ಬಡವರ ದುಡ್ಡು ತಿಂದು ಭ್ರಷ್ಟಾಚಾರ ಮಾಡುವುದಕ್ಕೆ ಯಾರಿಗೂ ಧೈರ್ಯ ಬರುವುದಿಲ್ಲ. ಅದೇ ರೀತಿಯಾಗಿ ಬೃಹತ್ ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆಯಲ್ಲಿ ಹಗರಣ ಆಗುತ್ತಿದೆ, ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕಾಗಿ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಆದರೆ, ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಗರಣ ಆಗಿದೆ. ಅದು ಆಗದಿದ್ದಲ್ಲಿ ಬಹುಶಃ ನಾವು ಬರಗಾಲದ ಸಮಸ್ಯೆ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆಯೇ ಇರುತ್ತಿರಲಿಲ್ಲ. ಈಗ ಸದನದಲ್ಲಿ ಮಾನ್ಯ ಕೃಷಿ ಸಚಿವರು ಇಲ್ಲ, ಉಪ ಮುಖ್ಯಮಂತ್ರಿಯವರು ಇಲ್ಲ, ಇತರೆ ಸಚಿವರು ಇಲ್ಲ ಮತ್ತು ಮಾನ್ಯ ಸಭಾನಾಯಕರು ಕೂಡ ಯಾರು ಇಲ್ಲ. ಈ ವಿಷಯವು ಸಂಬಂಧಪಟ್ಟವರಿಗೆ ಹೇಗೆ ತಲುಪುತ್ತದೆ ಎಂದು ನನಗೆ ಗೊತ್ತಿಲ್ಲ. ಬೃಹತ್ ನೀರಾವರಿ ಇಲಾಖೆಯಲ್ಲಿ ಆಗುತ್ತಿರುವ ಹಗರಣ ತಕ್ಷಣವೇ ನಿಲ್ಲಿಸಬೇಕು. ಬಿಡುಗಡೆಯಾದಂತಹ ಹಣ ಫಲಾನುಭವಿಗಳಿಗೆ ಸರಿಯಾದ ರೀತಿಯಲ್ಲಿ ಸದ್ಬಳಕೆ ಆಗುವಂತೆ ನೋಡಿಕೊಳ್ಳಬೇಕು. ನಾನು 1969ರಲ್ಲಿ ಬೆಂಗಳೂರಿಗೆ ಬಂದಂತಹ ಸಂದರ್ಭದಲ್ಲಿ ಈ ರೀತಿಯಾದ ಬರಗಾಲ ಬರುತ್ತದೆ ಅಂದುಕೊಂಡಿರಲಿಲ್ಲ. ಸುಮಾರು 1977-78ರಲ್ಲಿ ಬರ ಬಂದಿದ್ದನ್ನು ನೋಡಿದ್ದೇನೆ. ಬರ ಬರಲು ಕಾರಣವೇನೆಂದರೆ, ಪರಿಸರ ಹಾಳಾಗುತ್ತಿರುವುದು. ಇದನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಇತ್ತೀಚೆಗೆ Western Ghats ನಲ್ಲಿ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಗಣಿಗಾರಿಕೆಯಿಂದ ಪರಿಸರದ ಮೇಲೆ ಆಗುತ್ತಿರುವ ಅನಾಹುತಗಳನ್ನು ನಾವು ನೋಡಿದ್ದೇವೆ. 50 ವರ್ಷಗಳ ನಂತರ, ನಮ್ಮ ಮಕ್ಕಳು ಯಾವ ರೀತಿಯ ಅನಾಹುತಗಳನ್ನು ಎದುರಿಸಬೇಕಾಗುತ್ತದೆ ಎನ್ನುವುದನ್ನೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. 1 ಲಕ್ಷ ಕೋಟಿ ರೂಪಾಯಿಗಳಷ್ಟು ಗಣಿ ಲೂಟಿ ಮಾಡಲಾಗಿದೆ ಎಂದರೆ, ಅವರ ಸರ್ಕಾರ 5 ವರ್ಷ ಆಡಳಿತ ನಡೆಸಿದೆ. ಆಗ ಏನಾದರೂ ಅದನ್ನು recover ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ? ಅವರ ಸರ್ಕಾರದಲ್ಲಿಯೂ ಕೂಡ ಹಗರಣದಲ್ಲಿ ತೊಡಗಿದ್ದರು. ಅವರವರ ಶಿಷ್ಯಂದಿರಿಂದ ಹಗರಣ ಆಗಿದೆ. ಇದಕ್ಕೆ ಮುಖ್ಯ ಕಾರಣ ಪರಿಸರವನ್ನು ಹಾಳು ಮಾಡುತ್ತಿರುವುದು. It is because of this unscientific mining. ಅದಕ್ಕಾಗಿಯೇ ಬೇರೆ ಬೇರೆ ಪ್ರದೇಶಗಳ Western Ghats ನಲ್ಲಿ ಬೇರೆ ಬೇರೆ ಕಡೆಗಳಲ್ಲಿ ಈ ರೀತಿಯಾದರೆ ಮುಂದಿನ ದಿನಗಳಲ್ಲಿ ನಮಗೆ ನೀರು ಕೂಡ ಇರುವುದಿಲ್ಲ. ಸಾವಿರಾರು ವರ್ಷಗಳಿಂದ ನಮ್ಮ ಪೂರ್ವಿಕರು ಬಾಳಿ ಬದುಕಿ ನಮ್ಮನ್ನೆಲ್ಲಾ ಕಾಪಾಡಿದ್ದಾರೆ. ಹಾಗಾಗಿ, ಮುಂದಿನ ಪೀಳಿಗೆಗೆ ನಾವು ಏನನ್ನು ಬಿಟ್ಟು ಹೋಗುವುದು. ಈ ಕಾರಣಕ್ಕಾಗಿ ಪರಿಸರದ ಬಗ್ಗೆಯೂ ಕೂಡ ಚರ್ಚೆ ಮಾಡಬೇಕು. ಇದರ ಕಡೆಗೆ ನಾವು ಹೆಚ್ಚಿನ ಗಮನ ಹರಿಸಬೇಕು. ಪರಿಸರ ಹಾಳಾಗಬಾರದು ಎಂಬುದು ಸರ್ಕಾರಕ್ಕೆ ನನ್ನ ಮನವಿಯಾಗಿದೆ. ನಿನ್ನೆ ದಿವಸ ಸದನದ ಚರ್ಚೆಯಲ್ಲಿ ಭಾಗವಹಿಸಿರಲಿಲ್ಲ. ಏಕೆಂದರೆ, ಅದನ್ನು ನಾನು ನೋಡಿದಾಗ ಏನೆಂದು ಅರ್ಥವಾಗಲಿಲ್ಲ. ಆ ನಂತರ ಅದರ ಬಗ್ಗೆ ತಿಳಿದುಕೊಂಡೆನು. ಎಸ್.ಸಿ/ಎಸ್.ಟಿ ಮತ್ತು ಹಿಂದುಳಿದ ವರ್ಗದ ಬಡ ರೈತರಿಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್ ಕೊರೆಸಲು ಸರ್ಕಾರ ಹಣವನ್ನು ಬಿಡುಗಡೆ ಮಾಡುತ್ತಿದೆ. ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹಣವನ್ನು ತಿಂದವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಅದಕ್ಕಾಗಿ ನಮ್ಮ ನಾಯಕರು, ಎಲ್ಲಾ ಪಕ್ಷಗಳ ಮಾನ್ಯ ಸದಸ್ಯರು ಸೇರಿದಂತೆ ಎಲ್ಲರಿಗೂ ನಾನು ಮನವಿ ಮಾಡುತ್ತೇನೆ, ಬೃಹತ್ ನೀರಾವರಿ ಹಗರಣ, ಯು.ಕೆ.ಪಿ.ಹಗರಣ ಗಂಗಾಕಲ್ಯಾಣ ಯೋಜನೆಯ ತನಿಖೆಯನ್ನು ಪೂರ್ಣಗೊಳಿಸಿ, ಅದರಲ್ಲಿರುವ loopholes, ಅದರಲ್ಲಿ ಆಗುತ್ತಿರುವ leakageನ್ನು ನಿಲ್ಲಿಸಿದರೆ, ಮುಂದಿನ ದಿನಗಳಲ್ಲಿ ಆ ಬಡ ರೈತರಿಗೆಲ್ಲಾ ಅನುಕೂಲವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ. ಧನ್ಯವಾದಗಳು.

(ಮುಂದು..)

(530)18-12-2018(4-30)mm-ak

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಹೇಳತೀರದಷ್ಟು ಬರ ಬಂದಿದೆ. ಹಿಂದೆಂದೂ ನೋಡದಂತಹ ನೆರೆ ಹಾವಳಿ ಒಂದು ಕಡೆ, ಇನ್ನೊಂದು ಕಡೆ ಬರ. ಇದನ್ನು ಸರಿದೂಗಿಸುವುದಕ್ಕೆ ಸರ್ಕಾರ ಬೇಕಾದಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಡಾ:ವೈ.ಎ. ನಾರಾಯಣಸ್ವಾಮಿಯವರು ವಿಸ್ತೃತವಾಗಿ ಹೇಳಿದ್ದಾರೆ. ಆದರೆ ಎಲ್ಲೋ ಒಂದು ಕಡೆ ಸರ್ಕಾರದಲ್ಲಿರುವವರು ರೈತರ ಬಾಳಿಗೆ ಸರಿಯಾದ ದಿಕ್ಸೂಚಿಯನ್ನು ತೋರಿಸುತ್ತಿಲ್ಲ. ಇವತ್ತಿನ ತಂತ್ರಜ್ಞಾನ, ತಿಳುವಳಿಕೆ ಮತ್ತು ಜ್ಞಾನದ ಬುದ್ಧಿವಂತಿಕೆಯಿಂದ ಇದನ್ನು ಮೊದಲೇ ತಡೆಗಟ್ಟಬಹುದಾಗಿತ್ತು. ಇಸ್ರೇಲ್ ಮಾದರಿ ಮಾಡುತ್ತೇವೆಂದು ಕೃಷಿಗೋಸ್ಕರ ಬೇಕಾದಷ್ಟು ಹಣ ಇಡುತ್ತಿದ್ದೇವೆ. ಆದರೆ ಅದೇ ಹಣವನ್ನು ಇಸ್ರೇಲ್‌ನಲ್ಲಾಗಲಿ ಅಥವಾ ರಾಜಸ್ಥಾನದಲ್ಲಾಗಲಿ ಯಾವ ರೀತಿ ಬರ ಪರಿಹಾರ ಮಾಡುತ್ತಿದ್ದಾರೆ ಎಂಬ ಬಗ್ಗೆ ರೈತರಿಗೆ ತಿಳುವಳಿಕೆಯನ್ನು ಕೊಟ್ಟು ಅನಗತ್ಯವಾಗಿ ನೀರು ಪೋಲಾಗುವುದನ್ನು ನಿಲ್ಲಿಸಿ, ಮಳೆಗಾಲದಲ್ಲಿ ಬರುವ ನೀರನ್ನು ಶೇಖರಣೆ ಮಾಡಿಟ್ಟುಕೊಂಡು ಬರ ಬಂದಾಗ ಅದನ್ನು ಉಪಯೋಗಿಸುವಂತಹ ಪರಿಸ್ಥಿತಿ ಆಗಬೇಕು. ಆದರೆ ನಮ್ಮಲ್ಲಿ ಆಗುತ್ತಿರುವುದೇ ಒಂದು. ಆದ್ದರಿಂದ ಸರ್ಕಾರ ದಯವಿಟ್ಟು ಮುಂದಿನ ದಿನಗಳಲ್ಲಾದರೂ ಇದಕ್ಕೆ ಸಕಾರಾತ್ಮಕವಾಗಿ ಸ್ಪಂದನೆ ಮಾಡಿ ರೈತರಿಗೆ ಬೇಕಾದ ತಿಳುವಳಿಕೆ ಕೊಡುವಂತಹ ಕೇಂದ್ರಗಳನ್ನು ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕು ಮಟ್ಟದಲ್ಲಿ ಇಟ್ಟು ರೈತರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ. ಕೊಡಗು ಜಿಲ್ಲೆಯಲ್ಲಿ ಈ ಬಾರಿ ಜೂನ್ ತಿಂಗಳಿನಲ್ಲಿ ವಿಪರೀತ ಮಳೆ ಬಿದ್ದು ಮಳೆಯಿಂದ ಕೇರಳ ಹಾಗೂ ಕರ್ನಾಟಕದ ರಸ್ತೆಯ ಸಂಪರ್ಕವೇ ಕಡಿದುಹೋಯಿತು. ಮುಂದುವರಿದು, ಆಗಸ್ಟ್ ತಿಂಗಳಿನಲ್ಲಿ ಬಿದ್ದಂತಹ ವಿಪರೀತ ಮಳೆಯಿಂದ ಸುಮಾರು ಆರು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ತೋಟಗಳಿರಬಹುದು, ಮನೆಗಳಿರಬಹುದು ಎಲ್ಲವೂ ಕೊಚ್ಚಿ ಹೋಗುವಂತಹ ಪರಿಸ್ಥಿತಿ ಬಂತು. ಆ ಸಂದರ್ಭದಲ್ಲಿ ಸರ್ಕಾರ ನಮ್ಮ ಜೊತೆಗೆ ಇತ್ತು. ಆಗ ಕೊಡಗು ಉಸ್ತುವಾರಿ ಸಚಿವರಾಗಿದ್ದ ಶ್ರೀ ಸಾ.ರಾ. ಮಹೇಶ್‌ರವರು ಕೊಡಗಿನ ಮಗನಾಗಿ ಕೆಲಸ ಮಾಡಿದರು. ಜೊತೆಗೆ ಅವರು ಕೊಟ್ಟ ಮಾತಿನಂತೆ ಮುಖ್ಯಮಂತ್ರಿಯವರನ್ನು ಕೊಡಗು ಜಿಲ್ಲೆಗೆ ಕರೆದುಕೊಂಡು ಬರುತ್ತೇನೆ ಎಂಬ ಮಾತನ್ನು ನಡೆಸಿಕೊಟ್ಟರು. ಅದೇ ರೀತಿ ಅವರು ಕೊಡಗು ಪ್ರಾಧಿಕಾರವನ್ನು ಸ್ಥಾಪನೆ ಮಾಡುವುದಕ್ಕೂ ಸಹಾಯ ಮಾಡಿದರು. ಅದಕ್ಕಾಗಿ ಮಾನ್ಯ ಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಯವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಜೊತೆಗೆ ಸರ್ಕಾರ ಕೊಟ್ಟಂತಹ ಉತ್ತರದಲ್ಲಿ ಸುಮಾರು 122 ರಸ್ತೆ ಬ್ಲಾಕ್ ಆಗಿತ್ತು. ಅದಕ್ಕೆ ತಾತ್ಕಾಲಿಕವಾಗಿ ಈ ಕೆಲಸವನ್ನು ಮಾಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರಿಗೆ ಕೊಡಗಿನ ಬಗ್ಗೆ ಚೆನ್ನಾಗಿ ಗೊತ್ತಿರಬಹುದು. ಇನ್ನು ಐದು ತಿಂಗಳಿನಲ್ಲಿ ಪುನಃ ಮಳೆ ಪ್ರಾರಂಭವಾಗುತ್ತದೆ. ಮಳೆ ಪ್ರಾರಂಭವಾದರೆ ಅಲ್ಲಿನ ಪರಿಸ್ಥಿತಿ ಹೇಗಿರುತ್ತದೆ ಎಂದು ಕುಂದಾಪುರ ಭಾಗದವರಾದ ತಮಗೆ ಗೊತ್ತಿರುತ್ತದೆ. ಆ ಭಾಗದಲ್ಲಿ ವಿಪರೀತ ಮಳೆ ಇರುತ್ತದೆ. ಕೊಡಗಿನಲ್ಲಿ ಮಳೆಯಾದರೆ ಕರ್ನಾಟಕ ರಾಜ್ಯ ಸಮೃದ್ಧಿಯಾಗಿರುತ್ತದೆ. ಮಂಡ್ಯದ ಜನತೆ, ಮೈಸೂರಿನ ಜನತೆ ಮತ್ತು ಬೆಂಗಳೂರಿನ ಜನತೆಗೆ ಕುಡಿಯುವ ನೀರಿಗೆ ಏನೂ ಕೊರತೆ ಇರುವುದಿಲ್ಲ. ಆದರೆ ಕೊಡಗಿನಲ್ಲಿ ನಮ್ಮ ಪರಿಸ್ಥಿತಿ ಹೇಗಿರುತ್ತದೆಂದರೆ, ಎಲ್ಲವೂ ಕೊಚ್ಚಿ ಹೋಗಿರುತ್ತದೆ. ಹೂವು ಬಿಟ್ಟಿದ್ದ ಕಾಫಿ ಗಿಡದ ಹಣ್ಣು ಉದುರುತ್ತದೆ. ಒಳ್ಳೆಯ ಮೆಣಸು, ಅಡಿಕೆ ಬೆಳೆ ಕೂಡ ಉದುರುತ್ತದೆ. ಆಗ ತೋಟದ ಕೆಲಸಕ್ಕೆ ಜನರೂ ಸಿಗುವುದಿಲ್ಲ, ಇಂತಹ ಪರಿಸ್ಥಿತಿ ಇರುತ್ತದೆ. ನಮ್ಮ ಅಲ್ಲಿಯ ಜನ ಗುಳೇ ಹೋಗುವಂತಹ ಪರಿಸ್ಥಿತಿ ಬರುತ್ತದೆ. ಏಕೆಂದರೆ, ಪಾಪದ ಜನ ತೋಟವನ್ನು ನಂಬಿಕೊಂಡಿರುತ್ತಾರೆ. ತೋಟವನ್ನು ಮಾಡಬೇಕೆನ್ನುವ ಹೊತ್ತಿಗೆ ಈ ರೀತಿಯ ಪರಿಸ್ಥಿತಿಯನ್ನು ಎದುರಿಸುವಂತಹ ಸಂದರ್ಭದಲ್ಲಿ ಅವರಿಗೆ ಉತ್ಪತ್ತಿ ಇಲ್ಲದಂತಹ ಸಂದರ್ಭದಲ್ಲಿ ಬೆಂಗಳೂರಿಗೆ ಬಂದು ಯಾವುದೋ ಬಾರ್‌ನಲ್ಲಿ, ಚಲನಚಿತ್ರ ಮಂದಿರದಲ್ಲಿ ಅಥವಾ ಬೇರೆ ಕಡೆ ಗನ್‌ಮ್ಯಾನ್ ಆಗಿ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು ಜೀವನ ಮಾಡುತ್ತಾರೆ. ಅಲ್ಲಿ ನಮಗೆ ಯಾವುದೇ ರೀತಿಯ safety ಇಲ್ಲ. ಕೊಡಗಿನವರು ಕೆಳಮನೆಯಲ್ಲಿ ಇಬ್ಬರು, ಮೇಲ್ಮನೆಯಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಬ್ಬರಿದ್ದೇವೆ. ನಮ್ಮ ಅರಣ್ಯ ಸಚಿವರು ಕೊಡಗಿಗೆ ಒಂದೆರಡು ಬಾರಿ ಭೇಟಿ ಮಾಡುತ್ತಾರೆ. ಅವರು ಯಾರಿಗೂ T.P (Tour Programme) ಕಳುಹಿಸುವುದಿಲ್ಲ, ಯಾವ ಶಾಸಕರನ್ನೂ ಭೇಟಿ ಮಾಡುವುದಿಲ್ಲ, ಯಾವ ಅಧಿಕಾರಿಯನ್ನೂ ಭೇಟಿ ಮಾಡುವುದಿಲ್ಲ. ಅತಿಥಿಗೃಹಕ್ಕೆ ಬಂದು plain visit ಕೊಟ್ಟು ಹೋಗುತ್ತಾರೆ. ಈ ರೀತಿ ಮಾಡುವ ಅರಣ್ಯ ಸಚಿವರು ಮತ್ತೇನು ಮಾಡುತ್ತಾರೆಂದರೆ, ಬೆಂಗಳೂರಿನಲ್ಲಿ ಒಂದು ಸಭೆ ಕರೆದು ನಮ್ಮನ್ನು ಬೆಂಗಳೂರಿಗೆ ಬರುವಂತೆ ತಿಳಿಸುತ್ತಾರೆ. ನಾವು ಬೆಂಗಳೂರಿಗೆ ಬಂದು ವಿಕಾಸಸೌಧದಲ್ಲಿ ಅವರನ್ನು ಕಾಯುತ್ತೇವೆ. ಎರಡು ಗಂಟೆಗಳಾದರೂ ಅರಣ್ಯ ಸಚಿವರು ನಮಗೆ ಸಿಗುವುದೇ ಇಲ್ಲ. ಅರಣ್ಯ ಸಚಿವರದ್ದು ಅಂತಹ ಪರಿಸ್ಥಿತಿ ಇದೆ. ಕೊಡಗಿನಲ್ಲಿ ಲೇಬರ್‌ಗಳು ತೋಟದಲ್ಲಿ ಕೆಲಸ ಮಾಡುವ ಹಾಗೆ ಇಲ್ಲ, ಕೆಲಸ ಮಾಡಿ ಮನೆಗೆ ಸೇರುವಂತಿಲ್ಲ, ಏಕೆಂದರೆ, ಆನೆ ಕಾಟ. ಅದರ ಜೊತೆಗೆ ಗದ್ದೆಯಲ್ಲಿ ನಾಟಿ ಮಾಡುವಂತಹ ಪರಿಸ್ಥಿತಿ ಇಲ್ಲ. ಏಕೆಂದರೆ, ನಾಟಿ ಮಾಡಿದರೆ ಆ ನಾಟಿಯನ್ನು ಆನೆ ಬಂದು ಸರ್ವನಾಶ ಮಾಡಿ ಹೋಗುತ್ತದೆ. ಅರಣ್ಯ ಇಲಾಖೆಯವರು ಬಾಕಿ ಎಲ್ಲದಕ್ಕೂ ಕೇಸ್ ಮಾಡುತ್ತಾರೆ, greenery ಬೆಳೆಸಬೇಕೆಂದು ಹೇಳುತ್ತಾರೆ. ಕೊಡಗಿನವರಿಗೆ greenery ಬೆಳೆಸುವುದಕ್ಕೆ ಅರಣ್ಯ ಇಲಾಖೆಯಿಂದ ಕಲಿಯುವ ಅವಶ್ಯಕತೆ ಇಲ್ಲ. ಏಕೆಂದರೆ, ನಾವೇ ಪ್ರತಿ ತೋಟದಲ್ಲಿ ಗಿಡ ಮರ ನೆಟ್ಟು ಹಸಿರಾಗಿಟ್ಟುಕೊಳ್ಳುತ್ತೇವೆ. ಅರಣ್ಯ ಇಲಾಖೆಯವರು ಆನೆ ಓಡಿಸುವುದಕ್ಕೆ ಮೊದಲೇ ಒಂದು ಪ್ಲಾನ್ ಮಾಡಬೇಕಿತ್ತು. ಏಕೆಂದರೆ, ಆ ಕಾಲದಲ್ಲಿ ತುಂಬಾ ಕಾಡು ಇತ್ತು, ಈಗ ಬೆಳೆಯುವುದಕ್ಕೆ ಏನೂ ಇಲ್ಲ. ಬಿದಿರು ಇಲ್ಲ, ಬರೀ teak ನೆಟ್ಟರು. ಆದುದರಿಂದ ಆನೆಗಳಿಗೆ ಕಾಡಿನಲ್ಲಿ ತಿನ್ನುವುದಕ್ಕೆ ಏನೂ ಸಿಗುವುದಿಲ್ಲ. ಆದ್ದರಿಂದ ಆನೆಯು ಹೊಟ್ಟೆ ತುಂಬಿಸಿಕೊಳ್ಳುವುದಕ್ಕೋಸ್ಕರ ತೋಟಕ್ಕೆ ಬರುತ್ತದೆ. ತೋಟಕ್ಕೆ ಬಂದು ಪೂರ್ತಿ ಸರ್ವನಾಶ ಮಾಡಿ ಹೋಗುತ್ತದೆ. ಅಲ್ಲಿಗೆ ನಮ್ಮ ಕಥೆ ಮುಗಿಯಿತು. ಕೊಡಗಿನ ಜನರು ತೋಟವನ್ನೇ ನಂಬಿಕೊಂಡಿರುವವರು. ಮೊದಲು ಕೊಡಗಿನವರು ಬೆಂಗಳೂರಿಗೆ ಬಂದರೆ ಸಾಹುಕಾರ ಎಂದು ಹೇಳುವ ಸ್ಥಿತಿ ಇತ್ತು. ಇವತ್ತು ಇಲ್ಲಿನ ಜನರು, ಮಂತ್ರಿಗಳು ನಮ್ಮದು 60 x 40ರಲ್ಲಿ ಮನೆಗಳನ್ನು ಕಟ್ಟುವಂತಹ ಸ್ಥಿತಿ ನಮ್ಮದು. ಸೈಟುಗಳನ್ನು ಮಾರಿದರೆ, ಅಷ್ಟು ಹಣ ಉತ್ಪತ್ತಿಯಾಗುತ್ತದೆ ಎಂದು ಹೇಳುವ ಸ್ಥಿತಿ ನಮಗೆ ಬಂದಿದೆ. ಏಕೆಂದರೆ, ರಿಯಲ್ ಎಸ್ಟೇಟ್‌ನವರು ಕೊಡಗಿಗೆ ದರ ಎಷ್ಟು ಎಂದು ಕೇಳುತ್ತಾರೆ. ನಮ್ಮಲ್ಲಿ ಇಂತಹ ಪರಿಸ್ಥಿತಿ ಇದೆ. ಇನ್ನೊಂದು ಸಂದರ್ಭ ಬರುತ್ತದೆ. ನವೆಂಬರ್ ತಿಂಗಳು ಬಂದರೆ ನಾವೆಲ್ಲಾ ಹೆದರಿ ಸಾಯಬೇಕಾಗುತ್ತದೆ. ಏಕೆಂದರೆ, ಮಕ್ಕಳು ಶಾಲೆಗೆ ಹೋಗುವಂತಿಲ್ಲ, ಜನರು ಮಾರ್ಕೆಟ್‌ಗೆ ಹೋಗುವಂತಿಲ್ಲ, ಸುಮಾರು 2000 ಜನ ಪೋಲೀಸರು ಬಂದು ಬಿಡುತ್ತಾರೆ. ಈ ರೀತಿಯ ಪರಿಸ್ಥಿತಿ ಇದೆ. ಸರ್ಕಾರ ಏತಕ್ಕಾಗಿ ಇದನ್ನು ಮಾಡಿತೋ ನಮಗೆ ಗೊತ್ತಿಲ್ಲ. ಒಮ್ಮೆ ನಾನು

ಶಾಲೆಯೊಂದರ ಸಮಾರಂಭಕ್ಕೆ ಹೋದ ಸಂದರ್ಭದಲ್ಲಿ ನನಗೆ ಒಬ್ಬ ಮುಸಲ್ಮಾನ ಸ್ನೇಹಿತರೊಬ್ಬರು **'ಕುರಾನ್'** ಅನ್ನು ಓದಲು ಕೊಟ್ಟರು. ನಾನು ಹೇಳಿದೆ, ನಾವು ರಾಜಕಾರಣಿಗಳಿಗೆ ಫೋನ್ ಎತ್ತುವುದರಲ್ಲಿಯೇ ಕಾಲಹರಣವಾಗಿ ಬಿಡುತ್ತದೆ, ನೀವೇ ಸ್ವಲ್ಪ ವಿಷಯ ಹೇಳಿಬಿಡಿ ಎಂದು ಹೇಳಿದೆ. ನಾನು ಜಯಂತಿ ಆಚರಣೆ ಮಾಡುವುದು ಮುಸಲ್ಮಾನರಲ್ಲಿ ಇದೆಯೇ ಎಂದು ಕೇಳಿದೆ. ಅವರು ಏನು ಹೇಳಿದರೆಂದರೆ, **'ಕುರಾನ್'** ಮುಟ್ಟಿ ಯಾವನೋ ಒಬ್ಬ ಮುಸಲ್ಮಾನ್ ನಮ್ಮಲ್ಲಿ ಜಯಂತಿ ಆಚರಣೆ ಮಾಡುವ ಪದ್ಧತಿ ಇದೆಯೆಂದು ಹೇಳಲಿ, 'ನಮಗೆ ಮೆಕ್ಕಾ, ಮದೀನ ಬಿಟ್ಟರೆ ಬೇರೆ ಯಾವುದೂ ಇಲ್ಲ' ಎಂದು ಹೇಳಿದರು. ಏಕೆಂದರೆ, ಜಯಂತಿ ಆಚರಣೆ ಮಾಡುವುದು ಎಷ್ಟು ಕಷ್ಟವಿದೆ ಎಂದರೆ, ಅಲ್ಲಿ ವಾಸ ಮಾಡುವವರಿಗಷ್ಟೇ ಗೊತ್ತು. ಮುಸಲ್ಮಾನರನ್ನು ಕೇಳಲಿಲ್ಲ ಅಥವಾ ಕ್ರಿಶ್ಚಿಯನ್ನರನ್ನು ಕೇಳಲಿಲ್ಲ ಯಾರನ್ನೂ ಕೇಳಲಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಜಯಂತಿ ಆಚರಣೆ ಮಾಡುವುದರಿಂದ ಬರಗಾಲಕ್ಕೇನು ತೊಂದರೆಯಾಯಿತು?

**ಶ್ರೀ ಎಂ. ನಾರಾಯಣಸ್ವಾಮಿ:–** ಬರದ ಬಗ್ಗೆ ಮಾತನಾಡುವಾಗ ಈ ವಿಷಯ ಬೇಕಾಗಿತ್ತಾ?

(ಗೊಂದಲ)

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ವಿರೋಧಪಕ್ಷದವರು ಬರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಟಿಪ್ಪು ಜಯಂತಿ ಬಗ್ಗೆ ಮಾತನಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಟಿಪ್ಪು ಜಯಂತಿ ಬಗ್ಗೆ ಮಾತನಾಡುವುದಕ್ಕೆ ವಿರೋಧಪಕ್ಷದ ನಾಯಕರಿಗೆ ಟೈಂ ಕೊಟ್ಟಿದ್ದೀರಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಬರದ ಬಗ್ಗೆ ಮಾತನಾಡಲಿ, ಈ ವಿಷಯವನ್ನು ಬೇರೆ ಕಡೆ ಮಾತನಾಡಲಿ, ಬೇಡ ಎಂದು ಹೇಳುವುದಿಲ್ಲ.

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:–** ಅದು ನನ್ನ ಹಕ್ಕು.

**ಶ್ರೀ ಯು.ಬಿ. ವೆಂಕಟೇಶ್:–** ಬರದ ಬಗ್ಗೆ ಮಾತನಾಡುವಾಗ ಟಿಪ್ಪು ಸುಲ್ತಾನ್ ಏಕೆ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ. ಪ್ರಾಣೇಶ್:–** ಈ ಜಯಂತಿಗಳ ಅವಶ್ಯಕತೆ ಇದೆಯೇ?

**ಡಾ: ತೇಜಸ್ವಿನಿ ಗೌಡ:–** ಇದರ ಬಗ್ಗೆ ಪೀಠ ಹೇಳುತ್ತದೆ.

**ಸಭಾಪತಿಯವರು:–** ಮಾನ್ಯ ಸುನಿಲ್ ಸುಬ್ರಮಣಿಯವರು ಮಾತನಾಡಲಿ.

ಗೊಂದಲ

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ವೆಂಕಟೇಶ್‌ರವರೇ, ಸುನಿಲ್ ಸುಬ್ರಮಣಿಯವರಿಗೆ ಮಾತನಾಡಲು ಬಿಡಿ.

(ಗೊಂದಲ)

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:–** ಸರ್ಕಾರ ಉತ್ತರ ಕೊಡಲಿ. ನನ್ನ ವಿಚಾರವನ್ನು ಹೇಳುವುದಕ್ಕೆ ಸಭಾಪತಿಯವರು ನನ್ನ ರಕ್ಷಣೆಗೆ ಬರಬೇಕು. ಕೊಡಗಿನ ಜನರ ನೋವನ್ನು ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ನಿಮಗೆ ನೋವು ಮಾಡುವುದಕ್ಕೆ ಹೇಳುತ್ತಿಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ:–** ನಿಮ್ಮ ನೋವು ನಮಗೆ ಅರ್ಥವಾಗುತ್ತದೆ. ಆದರೆ ಅದನ್ನು ಈ ಸಮಯದಲ್ಲಿ ಮಾತನಾಡುವುದಲ್ಲ, ಅದಕ್ಕೆ ಬೇರೆ ಸಮಯ ಇದೆ.

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:–** ಎಲ್ಲಿ ಅರ್ಥವಾಗುತ್ತದೆ?

(ಗೊಂದಲ)

**ಡಾ: ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೊಡಗು ಬಹಳ ವಿಶೇಷವಾದ ನಾಡು. ದಯವಿಟ್ಟು ಕೊಡವರ ವಿಚಾರದಲ್ಲಿ ನಾವು ಪಕ್ಷಭೇದ ಮಾಡುವುದಿಲ್ಲ. ಕೊಡಗಿನಿಂದ ಬಂದ ಯಾವುದೇ ಜನಪ್ರತಿನಿಧಿಗಳು ಮಾತನಾಡುವಾಗ ದಯಮಾಡಿ ಅವರಿಗೆ ಸ್ಪಂದಿಸಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಕೋಮು ವಿಷಯದ ಬಗ್ಗೆ ಮಾತನಾಡುವಾಗ ಯಾವುದೋ ವಿಷಯಕ್ಕೆ ಹೋಗುತ್ತದೆ. ದಯವಿಟ್ಟು ಬರದ ಬಗ್ಗೆ ಮಾತನಾಡಿ. ಈ ವಿಷಯವನ್ನು ಇನ್ನೊಂದು ಸಮಯದಲ್ಲಿ ಮಾತನಾಡಿ, ಬೇಡ ಎಂದು ಹೇಳುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಡಾ: ತೇಜಸ್ವಿನಿ ಗೌಡ:–** ಅವರು ಸರ್ಕಾರದ ಆದ್ಯತೆಗಳ ಬಗ್ಗೆ ಹೇಳಿದರು.

(ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸದನ ಚೆನ್ನಾಗಿ ನಡೆಯುತ್ತಿದೆ, ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಿ. ಅದು ಬಿಟ್ಟು ಬೇರೆ ಕಡೆಗೆ ಎಳೆದುಕೊಂಡು ಹೋಗುವುದು ಬೇಡ.

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿರುವುದು ಕೊಡಗಿನ ಜನರ ನೋವು ಅಷ್ಟೇ.

**ಸಭಾಪತಿಯವರು:–** ರಾಜಕಾರಣದ ಬಗ್ಗೆ ಮಾತನಾಡಬೇಡಿ. ಬರದ ಬಗ್ಗೆ ಮಾತನಾಡಿ.

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ನಾನು ರಾಜಕಾರಣ ಮಾತನಾಡುವುದಕ್ಕೆ ಬರುತ್ತಿಲ್ಲ. ಏಕೆಂದರೆ, ಸುಮಾರು 840 ಮನೆಗಳನ್ನು ಕಳೆದುಕೊಂಡಿದ್ದಾರೆ. ಐದು ಎಕರೆ ತೋಟ ಕಳೆದುಕೊಂಡು, ಮನೆ, ಮಠ ಕಳೆದುಕೊಂಡು ಪರಿಹಾರ ಕೇಂದ್ರಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಎಲ್ಲೋ ಬಾಡಿಗೆ ಮನೆ ಮಾಡಿಕೊಂಡು, ಸಾಲ ಸೋಲ ಮಾಡಿ ಬದುಕುವ ಪರಿಸ್ಥಿತಿ ಬಂದಿದೆ. ಇಂತಹ ಸಂದರ್ಭದಲ್ಲಿ ಇದೆಲ್ಲಾ ಏಕೆ ಎಂಬ ಪ್ರಶ್ನೆ ನನ್ನದು. ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರಿಗೆ ಇದು ಗೊತ್ತಾಗುವುದಿಲ್ಲ. ಏಕೆಂದರೆ, ದೊಡ್ಡ ಮನುಷ್ಯರು, ಅವರು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ ಅವರಿಗೆ ಈ ವಿಚಾರ ಗೊತ್ತಾಗುವುದಿಲ್ಲ. ಆದರೆ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ನೀವು ಹೇಗೆ ಸ್ಥಳೀಯ ಸಂಸ್ಥೆಗಳಿಂದ ಗೆದ್ದು ಬಂದಿದ್ದೀರೋ ಹಾಗೆ ನಾನು ಕೂಡ. ನೀವು ಮಾತನಾಡುವಾಗ ನಾನು ತೊಂದರೆ ಕೊಡಲಿಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸುನೀಲ್ ಸುಬ್ರಮಣಿಯವರೇ, ನೀವು ಚಲೋ ಮಾತನಾಡುತ್ತಿದ್ದೀರಿ. ನಿಮ್ಮ ಜಿಲ್ಲೆಯ ಬಗ್ಗೆ ಉತ್ತಮವಾಗಿ ಪ್ರಸ್ತಾಪ ಮಾಡುತ್ತಿರುವುದಕ್ಕೆ ನಮ್ಮ ಸಹಮತ ಇದೆ. ಆದರೆ ಇದರಲ್ಲಿ ಎಲ್ಲೋ ಒಂದು ಕಡೆ ಜಾತಿ ಎನ್ನುವ ವಿಷಬೀಜ ಬೆರೆಸುವ ಮಾತುಗಳು ಬರುತ್ತಿದೆ.

(ಮುಂದು . . .

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(531) 18–12–2018/04–40/ಕೆಹೆಚ್–ಆರ್‌ಎನ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):–** ಆದರೆ ಇದರಲ್ಲಿ ಎಲ್ಲೋ ಒಂದು ಕಡೆ ಜಾತಿ ಎನ್ನುವ ವಿಷ ಬೀಜವನ್ನು ಬಿತ್ತುವಂತಹ ಮಾತುಗಳು ಕೇಳಿ ಬರುತ್ತಿವೆ. ಮಾನ್ಯ ಸದಸ್ಯರೇ, ಬೇರೆ ವಿಷಯ ಇದ್ದರೆ ಹೇಳಿ, ಬರದ ಬಗ್ಗೆ ಮಾತನಾಡಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಈಗ ಅದರ ಅವಶ್ಯಕತೆ ಇದೆಯೇ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರ ಹೆಸರನ್ನು ಎತ್ತಬಾರದೇ, ಇದರ ಬಗ್ಗೆ ಪೀಠದಿಂದ ತಾವೇ ಹೇಳಿ ಬಿಡಿ.

**ಸಭಾಪತಿಯವರು:–** ಮಾನ್ಯ ಸುನೀಲ್ ಸುಬ್ರಮಣಿಯವರೇ, ತಾವು ಮಾತನಾಡಿ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸುಮಾರು 100 ತಾಲ್ಲೂಕುಗಳಲ್ಲಿ ಬರ ಇದೆ ಎಂದು ಸರ್ಕಾರಕ್ಕೆ ಮಾಹಿತಿ ಇದೆ. ಇದರ ಬಗ್ಗೆ ನಮ್ಮ ಪರಿಸ್ಥಿತಿ ಹೇಗಿದೆಯೆಂದರೆ, ಈ ಜನವರಿ ತಿಂಗಳು ಕಳೆದರೆ ಇನ್ನೂ 5 ತಿಂಗಳಿನಲ್ಲಿ ರಸ್ತೆಗಳು ಸಿದ್ಧಗೊಳ್ಳಬೇಕು. ಏಕೆಂದರೆ, ಮಾನ್ಯ ಐವನ್ ಡಿ'ಸೋಜಾರವರು ಮಂಗಳೂರು ಭಾಗದಿಂದ ಕೊಡಗಿಗೆ ಬರಬೇಕಾದರೆ ಆ ರಸ್ತೆ ಸಂಪರ್ಕವೇ ಇಲ್ಲದಂತಾಗಿದೆ. ಈಗ ತಾತ್ಕಾಲಿಕವಾಗಿ ರಸ್ತೆಯನ್ನು ಮಾಡಿದ್ದಾರೆ. ಜೂನ್ ತಿಂಗಳ ನಂತರ ಪುನಃ ಮಳೆ ಪ್ರಾರಂಭವಾಗುತ್ತದೆ. ಮಳೆ ಪ್ರಾರಂಭವಾದಂತಹ ಸಂದರ್ಭದಲ್ಲಿ ಪುನಃ ಇದೇ ರೀತಿ ಪರಿಸ್ಥಿತಿ ಬರುತ್ತದೆ. ಇದರ ಬಗ್ಗೆ ಸರ್ಕಾರ ವೇಗವಾಗಿ ಕ್ರಮ ತೆಗೆದುಕೊಳ್ಳಬೇಕೆಂಬ ಉದ್ದೇಶ ನಮ್ಮದು. ಸರ್ಕಾರದಿಂದ ಯಾವುದೇ ಹಣ ಲೂಟಿಯಾಗಬಾರದು. ಏಕೆಂದರೆ, ನಾವು ಪ್ರತಿ ಸಂದರ್ಭದಲ್ಲಿ "ಸರ್ಕಾರದ ಕೆಲಸ, ದೇವರ ಕೆಲಸ" ಎಂದು ಹೇಳುತ್ತೇವೆ. ಹಾಗಾಗಿ ನಾವು ಸಹ ಸರ್ಕಾರದ ಭಾಗವಾಗಿದ್ದೇವೆ. ನಾವು ಸರ್ಕಾರದ ಭಾಗವಾಗಿ ಯಾವುದೇ ಸಂದರ್ಭದಲ್ಲಿ ಈ ಸರ್ಕಾರದ ಹಣ ಪೋಲಾಗದಂತಹ ರೀತಿಯಲ್ಲಿ ನೋಡಿಕೊಳ್ಳುವಂತಹ ಕರ್ತವ್ಯ ನಮ್ಮೆಲ್ಲರದ್ದಾಗಿರುತ್ತದೆ. ಹಾಗಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಏಕೆಂದರೆ, ಇದರಿಂದ ಯಾರ ಮನಸ್ಸಿಗೂ ನೋವಾಗಬಾರದು ಎಂಬುದು ನಮಗೂ ಗೊತ್ತಿದೆ. ಅದೇ ರೀತಿ ನಮ್ಮ ಮನಸ್ಸಿಗೂ ನೋವು ಆಗಬಾರದು ಮತ್ತು ನಮ್ಮ ಧಾರ್ಮಿಕ ವಿಚಾರಗಳಿಗೂ ಸಹ ನೋವಾಗಬಾರದಲ್ಲವೇ. ತಾವು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಲಕಾವೇರಿಗೆ ಬಂದರೆ ಮಳೆಗಾಲದಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ ಎಂಬುದನ್ನು ನೋಡಿ. ಅಲ್ಲಿ ಮಳೆಗಾಲ ಬಂದಾಗ ಪೂರ್ತಿ ರಸ್ತೆಗಳು ಮುಚ್ಚಿ ಹೋಗುತ್ತವೆ. ಇನ್ನು 6 ತಿಂಗಳಿನಲ್ಲಿ ಈ ರಸ್ತೆಗಳು ಸಿದ್ಧಗೊಳ್ಳದೆ ಇದ್ದರೆ ನಮ್ಮ ಪರಿಸ್ಥಿತಿ ಅಧೋಗತಿ ಆಗುತ್ತದೆ. ಏಕೆಂದರೆ, ಈ ಪರಿಸ್ಥಿತಿಯನ್ನು ನೋಡಿ ನಾವೆಲ್ಲಾ ಹೆದರಿ ಹೋಗಿದ್ದೇವೆ. ಇದರಿಂದ ಜನರು ಊರು ಬಿಟ್ಟು ಹೋಗುತ್ತಿದ್ದಾರೆ. ಒಂದು ಕಡೆ ಆನೆಗಳ ಕಾಟ ಇದೆ ಮತ್ತು ಈ ರಸ್ತೆಗಳಲ್ಲಿ ಕಾರ್ಮಿಕನಾಗಲಿ, ಮಾಲೀಕನಾಗಲಿ, ಸಂಜೆ 7 ಗಂಟೆಯ ಮೇಲೆ ಪ್ರಯಾಣ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ವೀಣಾ ಅಚ್ಚಯ್ಯನವರು ಕೊಡಗಿನಲ್ಲಿ 10 ಎಕರೆ ತೋಟವನ್ನು ಕಳೆದುಕೊಂಡಿದ್ದಾರೆ. ಪ್ರತಿಯೊಬ್ಬರೂ ಕಟ್ಟಿರುವ ಕೆರೆ ಒಡೆದು ಹೋಗಿದ್ದು, ಅವರೆಲ್ಲಾ ತಮ್ಮ ತೋಟಗಳನ್ನು ಕಳೆದುಕೊಂಡಿದ್ದಾರೆ, ಸುಮಾರು 6 ಗ್ರಾಮ ಪಂಚಾಯಿತಿಯ 40 ಗ್ರಾಮಗಳಲ್ಲಿ ಮಧ್ಯಮ ವರ್ಗದ ಜನರು ಪರಿಹಾರ ಕೇಂದ್ರಕ್ಕೆ ಹೋಗುವುದಕ್ಕೆ ಆಗುತ್ತಿಲ್ಲ. ಉಟ್ಟ ಬಟ್ಟೆಯಲ್ಲಿ ಬಂದಿದ್ದಾರೆ. ಅವರು ಮನೆಯನ್ನು ಕೇಳುವುದಕ್ಕೆ ಆಗುವುದಿಲ್ಲ. ಅವರಿಗೆ ಚಿನ್ನ, ಕಾರು, ಬೈಕ್ ಇರುವುದಿಲ್ಲ. ಯಾರು ಬೈಕ್‌ನ್ನು ಇಟ್ಟುಕೊಂಡಿದ್ದಾರೋ, ಅವರ ಬೈಕ್‌ನ್ನು ಹುಡುಕಿ ತೆಗೆಯುವುದಕ್ಕೆ ಆಗುವುದಿಲ್ಲ. ಏಕೆಂದರೆ, ಕೆಲವು ಜನರು ಪಾಪದವರು, 5 ಮತ್ತು 10 ಎಕರೆ ಇಟ್ಟುಕೊಂಡು ಬದುಕುವವರು, ನೀರಿಗೆ ಆಧಾರವಾಗಿಟ್ಟುಕೊಂಡು ಜೀವನ ಸಾಗಿಸುತ್ತಿದ್ದರು. 'ಕೂಲ್ಲಿ ನೀರು' ಎಂದರೆ ಸ್ವಾಭಾವಿಕವಾಗಿ ಹರಿದು ಬರುವಂತಹ ನೀರು ಎಂದು ಹೇಳುತ್ತೇವೆ. ಆ ಜಲವನ್ನು ಕುಡಿಯುವುದಕ್ಕೆ ಬಳಸುತ್ತಿದ್ದರು. ಈ ನೀರು ಬಹಳ ಚೆನ್ನಾಗಿದ್ದು, ಅದರಿಂದ ಜನರ ಆರೋಗ್ಯದ ಮೇಲೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. ಅಷ್ಟು ಸ್ವಚ್ಛವಾಗಿ ಆ ಕುಡಿಯುವ ನೀರು ಇರುತ್ತದೆ. ಅಂತಹ ನೀರು ಇವತ್ತಿನ ದಿವಸ ಮುಚ್ಚಿ ಹೋಗಿದೆ. ಎಲ್ಲಾ ತೋಟಗಳು ಸರ್ವನಾಶ ಆಗಿವೆ. ಸುಮಾರು 6 ಗ್ರಾಮ ಪಂಚಾಯಿತಿಯಲ್ಲಿ ಒಬ್ಬೊಬ್ಬರಿಗೆ ಐದೈದು ಎಕರೆ ತೋಟಗಳು ಇದ್ದು, ಈಗ ಆ ತೋಟಗಳು ಇಲ್ಲದಂತಾಗಿದೆ. ಉಟ್ಟ ಬಟ್ಟೆಯಲ್ಲಿ ಬಂದಿರುವ ಆ ಜನರ ಸ್ಥಿತಿ ಏನಾಗಬೇಕು? ಊಟ ಮಾಡುವುದಕ್ಕೆ ಗಂಜಿ ಇಲ್ಲ. ಇದು ಅವರ ಮರ್ಯಾದೆ ಪ್ರಶ್ನೆಯಾಗಿದ್ದು, ಪರಿಹಾರ ಕೇಂದ್ರಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಬದುಕುತ್ತಿದ್ದೇವೆ. ಹಾಗಾಗಿ ನಾವು ಸರ್ಕಾರವನ್ನು ಕೇಳಿಕೊಳ್ಳುವುದು ಇಷ್ಟೆ. ಅರಣ್ಯ ಸಚಿವರು ಈ ರಾಜ್ಯದ ಸಚಿವರು, ಅವರು ಒಬ್ಬ ಸಚಿವರಾದ ತಕ್ಷಣ ಜನರ ಕಷ್ಟ-ಸುಖಗಳಿಗೆ ಸ್ಪಂದನೆ ಕೊಡಬೇಕು.

ಆನೆಗಳ ಕಾಟದ ಬಗ್ಗೆ ನಾವು ಯಾರ ಹತ್ತಿರ ಮಾತನಾಡಬೇಕು? ಅವರು ನಮ್ಮನ್ನೇ ಭೇಟಿ ಮಾಡದಿದ್ದರೆ, ನಾವು ಯಾರ ಹತ್ತಿರ ಕಷ್ಟಗಳನ್ನು ಹೇಳಿಕೊಳ್ಳಬೇಕು. ಪ್ರತಿ ದಿವಸ ಕೊಡಗಿನಲ್ಲಿ ಆನೆಗಳ ಕಾಟವಾಗಿದ್ದು, ಇದರಿಂದ ಮಕ್ಕಳು ಶಾಲೆಗೆ ಹೋಗುವುದಕ್ಕೆ ಆಗುವುದಿಲ್ಲ, ತೋಟದಲ್ಲಿ ಕೂಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಮಿಕರು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಜನರು 7 ಗಂಟೆಯ ಮೇಲೆ ಬಸ್ ಇಳಿದು ಮನೆಗೆ ಹೋಗುವುದಕ್ಕೂ ಆಗುವುದಿಲ್ಲ. ಅಂತಹ ಪರಿಸ್ಥಿತಿ ಈ ಕೊಡಗಿನಲ್ಲಿದೆ. ಹಾಗಾಗಿ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ಜನರಿಗೆ ಇರುವಂತಹ ಮನೆ ಮತ್ತು ತೋಟ ಎಷ್ಟೇ ಇರಬಹುದು, ಪೈಸಾರಿ ಜಾಗ ಏನಿದೆ, ಆ 5 ಮತ್ತು 10 ಎಕರೆ ಜಾಗವನ್ನು ಯಾವ ರೀತಿ ಕಳೆದುಕೊಂಡಿದ್ದಾರೆ, ಆ ಜಾಗವನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಸರ್ಕಾರ ತಾತ್ಕಾಲಿಕವಾಗಿ ನಮ್ಮ ಜೊತೆಗೆ ಹೇಗೆ ಗಟ್ಟಿಯಾಗಿ ನಿಂತುಕೊಳ್ಳುತ್ತದೆಯೋ, ಅದೇ ರೀತಿ ನಮ್ಮ ಜೊತೆ ಸದಾ ನಿಂತುಕೊಂಡು ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತಾ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಸ್.ಎಲ್. ಧರ್ಮೇಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮ್ಮ ಬಹಳಷ್ಟು ಸ್ನೇಹಿತರು ಬರಗಾಲದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಬಹುಶಃ ಮಲೆನಾಡು ಭಾಗದಲ್ಲಿ ಮತ್ತು ಬಯಲು ಸೀಮೆ ಭಾಗದಲ್ಲಿ ಬರ ಉಂಟಾಗಿದ್ದು, ಇದ್ದರಿಂದ ಅತಿವೃಷ್ಟಿ–ಅನಾವೃಷ್ಟಿ ಸಮಸ್ಯೆಗಳು ಉದ್ಭವಿಸಿದೆ. ಮೊನ್ನೆಯ ದಿವಸ ಮಲೆನಾಡು ಭಾಗದಲ್ಲಿ ಹೆಚ್ಚು ಮಳೆಯಾಯಿತು. ಆದರೂ ಸಹ ನೀರು ನಿಲ್ಲುತ್ತಿಲ್ಲ. ಅದರ ಜೊತೆಯಲ್ಲಿ ಮೂಲಭೂತವಾಗಿ ಇಲ್ಲಿಯತನಕ ನಿರಂತರವಾಗಿ ಕೆಲಸ ಮಾಡಿದಂತಹ ಸರ್ಕಾರಗಳು ಒಂದಲ್ಲ ಒಂದು ರೀತಿಯಲ್ಲಿ ಬರಗಾಲವನ್ನು ನೀಗಿಸಬೇಕಾದರೆ ಮತ್ತು ರೈತರ ಪರವಾಗಿ ಕೆಲಸ ಮಾಡಬೇಕಾದರೆ ಒಂದು ಸರ್ಕಾರ ಹೆಚ್ಚು ಕೆಲಸ ಮಾಡಿರಬಹುದು, ಮತ್ತೊಂದು ಸರ್ಕಾರ ಕಡಿಮೆ ಕೆಲಸ ಮಾಡಿರಬಹುದು. ಮೂಲಭೂತವಾಗಿ ನಮಗೆ ಬರಗಾಲ ಪರಿಸ್ಥಿತಿ ಬಂದಿದೆ. ಹಿಂದೆಲ್ಲಾ ಕೋಲಾರದ ಕಡೆ ಸುಮಾರು 800 ಅಡಿಯಿಂದ 1000 ಅಡಿ ಆಳದವರೆಗೂ ಬೋರ್‌ವೆಲ್‌ಗಳನ್ನು ಕೊರೆಯುತ್ತಾರೆ ಎಂದು ನಾವು ಕೇಳುತ್ತಿದ್ದೆವು. ಈಗ ಅಲ್ಲಿ 1500 ಅಡಿ ಆಳದವರೆಗೂ ಬೋರ್‌ವೆಲ್‌ಗಳನ್ನು ಕೊರೆಯಬೇಕೆಂದು ಹೇಳುತ್ತಾರೆ. ಚಿಕ್ಕಮಗಳೂರು ಮತ್ತು ಈ ಕಡೆಯ ಭಾಗಗಳಲ್ಲಿ 120 ಅಡಿ ಆಳದಲ್ಲಿಯೇ ನೀರು ಸಿಕ್ಕಿರುವಂತಹದ್ದು, ಎಲ್ಲರೂ ನೋಡಿರುವಂತಹ ವಿಚಾರವಾಗಿದೆ. ಇಷ್ಟೆಲ್ಲಾ ಇದ್ದರೂ ಸಹ ಅಂದು ಸಹ ಸರ್ಕಾರದಲ್ಲಿ ಅಧಿಕಾರವನ್ನು ಮಾಡುತ್ತಿದ್ದರು. ಇದರ ಜೊತೆಯಲ್ಲಿ ಯಾವತ್ತೂ ಸಹ ಮಲೆನಾಡು ಭಾಗದಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಇದೆ ಎಂದು ಯಾರು ಕೂಡ ಮಾತನಾಡುತ್ತಿರಲಿಲ್ಲ.

ನಮ್ಮಲ್ಲಿರುವ ಅಂಕಿ–ಅಂಶಗಳ ಪ್ರಕಾರ ಗಮನಿಸುತ್ತಾ ಹೋದರೆ, ಬರಗಾಲ ಹೆಚ್ಚಾಗುತ್ತಿದೆಯೇ ವಿನಃ ಕಡಿಮೆ ಆಗುತ್ತಿಲ್ಲವೆಂಬುದು ಜನಜನಿತವಾಗಿ ಗೊತ್ತಿರುವಂತಹ ವಿಚಾರವಾಗಿದೆ. ದಯಮಾಡಿ, ನಾನು ಹೇಳುವಂತಹ ವಿಚಾರದಲ್ಲಿ ಯಾವುದೇ ರಾಜಕೀಯ, ಮತ್ತೊಂದು ವಿಚಾರವನ್ನು ಸೇರಿಸಿ ನಾನು ಮಾತನಾಡುತ್ತಿಲ್ಲ. ಇದರಲ್ಲಿ ವಾಸ್ತವಿಕವಾಗಿ ಏನಾಗುತ್ತಿದೆ ಎಂಬುದನ್ನು ನಾವು ಹೇಳಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರಲ್ಲಿ ಯಾವುದೇ ರೀತಿಯ ಕಳಂಕವನ್ನು ಯಾರ ಮೇಲೂ ಎರಚುವಂತಹ ವಿಚಾರವನ್ನು ನಾನು ಮಾಡುವುದಿಲ್ಲ. ಇದರ ಬಗ್ಗೆ ನಮ್ಮ ಸ್ನೇಹಿತರುಗಳೆಲ್ಲಾ ಮಾತನಾಡಿದರು. ಅದರ ಜೊತೆಯಲ್ಲಿ ದಯಮಾಡಿ ತಾವು ಒಂದು ವಿಚಾರವನ್ನು ಗಮನಿಸಬೇಕಾಗುತ್ತದೆ. ಬರಗಾಲ ಬಂದಂತಹ ಸಂದರ್ಭದಲ್ಲಿ ಸರ್ಕಾರವು ಎಲ್ಲಾ ಕಡೆಗೂ ನೂರಾರು ಟ್ಯಾಂಕರ್‌ಗಳ ಮುಖಾಂತರ ನೀರನ್ನು ಕೊಡುವಂತಹದ್ದನ್ನು ನೋಡಿದ್ದೇವೆ. ಈಗಲೂ ಆ ರೀತಿ ನೀರನ್ನು ಕೊಡುತ್ತಲೇ ಇದ್ದಾರೆ. ಬರಗಾಲ ಬರುಬರುತ್ತಾ ಹೆಚ್ಚಾಗುತ್ತಲೇ ಇದೆಯೇ ಹೊರತು, ಕಡಿಮೆಯಾಗುತ್ತಿಲ್ಲ. ಚಿತ್ರದುರ್ಗ ಭಾಗದ ಕಡೆಗಳಲ್ಲಿ ಫ್ಲೋರೈಡ್ ಅಂಶ ನೀರಿನಲ್ಲಿ ಜಾಸ್ತಿ ಇದ್ದು, ಅದನ್ನು ಯಾವ ರೀತಿಯಲ್ಲಿ ನಿವಾರಣೆ ಮಾಡಬೇಕೆಂದು ಹೇಳಿದರು. ಆ ಭಾಗದಲ್ಲಿ 800 ಅಡಿ ಆಳದವರೆಗೆ ಬೋರ್‌ವೆಲ್‌ಗಳನ್ನು ಕೊರೆಯಬೇಕಾಯಿತು. ಅದೇ ರೀತಿ ಈಗ ನಮ್ಮಲ್ಲಿ ಅಂತರ್ಜಲದ ಮಟ್ಟ 600 ರಿಂದ 700 ಅಡಿ ಆಳದವರೆಗೂ ಹೋಗಿದೆ. ಇಷ್ಟೆಲ್ಲಾ ಆಗಬೇಕಾದರೆ ಹಿಂದಿನ ಬೇಸಿಕ್ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಈಗಿನ ಮಕ್ಕಳಿಗೆ ಇದರ ಬಗ್ಗೆ ಗೊತ್ತಾಗುವುದಿಲ್ಲ. ಇದು ಏಕೆ ಎಂಬುದನ್ನು ನಾವು ಹೇಳಬೇಕಾಗುತ್ತದೆ. ಹಿಂದೆ ಟಿ.ಡಿ.ಬಿ. ಎಂದು ತಾಲ್ಲೂಕು ಬೋರ್ಡ್ ಇತ್ತು. ಆ ಸಂದರ್ಭದಲ್ಲಿ ಇಡೀ ತಾಲ್ಲೂಕಿನಲ್ಲಿ ಸರ್ಕಾರದಿಂದ ಬೋರ್‌ವೆಲ್‌ಗಳನ್ನು ಕೊರೆಸಬೇಕೆಂದು ಹೇಳುತ್ತಿದ್ದರು. ಹಿಂದೆ ಅಂತರ್ಜಲದ ಮಟ್ಟ ಸಾಕಷ್ಟಿದ್ದಾಗ ಹಗ್ಗಗಳ ಮುಖಾಂತರ ಬಾವಿಗಳಲ್ಲಿ ನೀರನ್ನು ಸೇದಿ ಎಲ್ಲರೂ ತೆಗೆದುಕೊಂಡು ಹೋಗುವಂತಹದ್ದನ್ನು ನಾವು ನೋಡಿದ್ದೇವೆ. ಅದಕ್ಕಿಂತ ಮುಂಚಿತವಾಗಿ ಪ್ರತಿಯೊಂದು ಕೃಷಿಕರ ಕುಟುಂಬಗಳು ನಮ್ಮ ಭಾರತ ದೇಶದಲ್ಲಿ ಬರುವಂತಹ ಅದರಲ್ಲೂ ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶದ ಒಂದೊಂದು ಊರಿನಲ್ಲಿ ಒಂದು ಕಲ್ಲು ಬಾವಿ ಒಂದು ಇರುತ್ತಿತ್ತು. ಆ ಬಾವಿಗೆ ಇಳಿದು ನೀರನ್ನು ತುಂಬಿಕೊಂಡು ಬರುತ್ತಿದ್ದರು. ಆ ಬಾವಿಯ ಅಡಿಗೆ ನೀರು ಹೋಗುತ್ತಿದ್ದ ಹಾಗೆ ಸೇದುವ ಬಾವಿ ಎಂದು ಬಂದಿತು. ಆ ಸೇದುವ ಬಾವಿಯಲ್ಲಿ ನೀರು ಇಲ್ಲ ಎಂದ ಮೇಲೆ ಕೊನೆಗೆ ಬರಗಾಲ ಹೆಚ್ಚಾಯಿತು. ತದನಂತರ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾದಂತಹ ಸಂದರ್ಭದಲ್ಲಿ ಕೊಳವೆ ಬಾವಿಗಳನ್ನು ನಜೀರ್ ಸಾಬ್‌ರವರು introduce ಮಾಡಿದರು. ಆ ಸಂದರ್ಭದಲ್ಲಿ ನಾನು ಮಂಡಲ್ ಪ್ರಧಾನ್ ಆಗಿದ್ದೆ. ಆ ಸಂದರ್ಭದಲ್ಲಿ ಕೊಳವೆ ಬಾವಿಗಳ ಮುಖಾಂತರ 120 ಅಡಿ ಆಳದಲ್ಲಿ ನೀರು ಸಿಗುತ್ತಿರುವಂತಹದ್ದು, ಎಲ್ಲಾ ಊರುಗಳಲ್ಲಿ ನಜೀರ್ ಸಾಬ್‌ರವರ ಬಗ್ಗೆ ಬೋರ್ಡ್‌ಗಳನ್ನು ಹಾಕಿ ಹೇಳಿದರು. ಕೊಳವೆ ಬಾವಿಗಳನ್ನು ಹಾಕಿದರು. ಅದೆಲ್ಲವನ್ನೂ ನಾವು ನೋಡಿದ್ದೇವೆ. ನಾನು ಸಹ ಎರಡು ಬಾರಿ ಜಿಲ್ಲಾ ಪಂಚಾಯಿತಿ ಸದಸ್ಯನಾಗಿದ್ದೇನೆ. ಅದೆಲ್ಲವನ್ನೂ ಮಾಡಬೇಕಾದರೆ ನೀರಿನ ಮಟ್ಟ ಕೆಳಗೆ ಹೋಗುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಇಷ್ಟೆಲ್ಲಾ ಆದಾಗ್ಯೂ ಸಹ ಸರ್ಕಾರವು ಎಷ್ಟರ ಮಟ್ಟಿಗೆ ಪ್ರಯತ್ನ ಮಾಡಿದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಪೇಟೆಯಲ್ಲಿರುವ ಪ್ರತಿಯೊಬ್ಬ ಜನರು ಸಹ ತಮ್ಮ ಊರಿನ ಕಡೆಗೆ ಹೋಗಿದ್ದಾರೋ, ಇಲ್ಲವೋ ಗೊತ್ತಿಲ್ಲ. ಹಳ್ಳಿಗಳಲ್ಲಿ ಒಂದೊಂದು ಊರಿಗೆ ಒಂದೊಂದು ಅರಳಿ ಮರ ಎಂದು ಇರುತ್ತದೆ. ಅದನ್ನು ನೆಂಟರ ಅರಳಿ ಮರ ಎಂದು ಹೇಳುತ್ತಿದ್ದರು. ಅರಳಿ ಮರವು ನಮಗೆ ಬೇಕಾಗುವಂತಹ ಆಮ್ಲಜನಕವನ್ನು ಕೊಟ್ಟು, ಇಂಗಾಲದ ಡೈ-ಆಕ್ಸೈಡ್ ಅನಿಲವನ್ನು ತೆಗೆದುಕೊಳ್ಳುತ್ತದೆ ಎಂಬುದರ ಬಗ್ಗೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಓದುತ್ತಿದ್ದೆವು. ಈಗ ಪಾಠಗಳು ಬೇರೆ ಆಗಿದೆ. ಅದೊಂದು ಕಡೆ ಇರುವ ವಿಚಾರ. ಮರಗಳ ಮುಖಾಂತರ ನಮಗೆ ಬೇಕಾದಂತಹ ಶುದ್ಧ ಗಾಳಿ ಸಿಗುತ್ತಿತ್ತು. ಅದರ ಬಗ್ಗೆ ಪರಿಜ್ಞಾನ ಎಲ್ಲಿಗೋ ಹೋಯಿತು. ಅದರ ಜೊತೆಯಲ್ಲಿ ಸಾಮಾಜಿಕ ಅರಣ್ಯ ಎನ್ನುವುದನ್ನು introduce ಮಾಡುವುದರ ಮುಖಾಂತರ ಕಾಡು ಬೆಳೆಸಬೇಕೆಂದು ಹೊರಟರು. ಇದು ಎಲ್ಲಿಗೆ ಬಂದಿತೆಂದರೆ, ಅರಣ್ಯ ಇಲಾಖೆಯಲ್ಲಿ ನೌಕರಿ ಮಾಡಬೇಕೆಂದರೆ, Botany & Zoology study ಮಾಡಿರಲೇಬೇಕು. ಅಂತಹ ಅಭ್ಯರ್ಥಿಗೆ ಮಾತ್ರ ಆರ್.ಎಫ್.ಓ., ಡಿ.ಎಫ್.ಓ., ಎ.ಸಿ.ಎಫ್., ಎಂದು ನೌಕರಿಯನ್ನು ಕೊಡುತ್ತಿದ್ದರು. ಇದರಿಂದ ಏನಾಯಿತೆಂದರೆ, ವಿದ್ಯಾವಂತರು ಬಹಳ ಓದಿದವರು, ಹಳ್ಳಿಯಲ್ಲಿ ಎಮ್ಮೆ ಮತ್ತು ದನ ಕಾಯುವವನು ನಮ್ಮ ಊರಿನಲ್ಲಿ ಮರ ಇರಬೇಕೆಂದು ಹೇಳುತ್ತಾನೆ. ಆದರೆ ಇವರು ಬುದ್ಧಿವಂತರು, Botany & Zoology ಓದಿದ್ದಾರೆ, ಇವರಿಂದ ನಮ್ಮ ಸಮಾಜಕ್ಕೆ ಒಳ್ಳೆಯದಾಗಬೇಕೆಂದು ಅವರಿಗೆ ನೌಕರಿ ಕೊಟ್ಟರೆ, ಇವರು ಶಿರಾಡಿ ಘಾಟ್, ಆಗುಂಬೆ ಘಾಟ್ ಮತ್ತು ಶೃಂಗೇರಿ ಈ ರೀತಿ ಒಳ್ಳೆ ಒಳ್ಳೆಯ ಮಳೆಯಾಗುವಂತಹ ಜಾಗಗಳಲ್ಲಿ ಯಾರೋ ಹೆಸರುವಾಸಿಯಾದವರು ಬೀಜಗಳನ್ನು ಕೊಟ್ಟರು ಎಂದು ಅಕೇಶಿಯಾ ಮತ್ತು ನೀಲಗಿರಿ ಗಿಡಗಳನ್ನು ತಂದು ಹಾಕಿದರು. ಕೆಮ್ಮಣ್ಣುಗುಂಡಿಯಲ್ಲಿ ಯಾರಾದರೂ ನೀಲಗಿರಿ ಗಿಡಗಳನ್ನು ಹಾಕುತ್ತಾರೆಯೇ? ಒಂದು ಕಾಲದಲ್ಲಿ ನಾನು ಎಂ.ಎಲ್.ಎ., ಆಗಿದ್ದಾಗ ಕೆಮ್ಮಣ್ಣುಗುಂಡಿ ಹೇಗಿತ್ತು? ಅಂತಹ ಜಾಗದಲ್ಲಿ ಬಂದು ನೀಲಗಿರಿ ಗಿಡಗಳನ್ನು ನೆಟ್ಟರೆ ಪರಿಸರ ಏನಾಗುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಿ. ಪರಿಸರ ಓದದೇ ಇರುವಂತಹ ದಡ್ಡರಿಂದ ಹಾಳಾಗಲಿಲ್ಲ, ಈ ವಿದ್ಯಾವಂತರ ಹಣದ ಆಮಿಷದಿಂದ ಹಾಳಾಗಿದೆ. ಇದನ್ನು ಅಧಿಕಾರಿಗಳಿಗೆ ಕೊಟ್ಟರೆ, ಇವತ್ತಿನ ದಿವಸ ಹಾಕಿರುವಂತಹ ನೀಲಗಿರಿ ಗಿಡಗಳನ್ನು ತೆಗೆಯದೇ ಹೋದರೆ, ದನಗಳಿಗೆ ಹೋಯುವುದಕ್ಕೆ ಮೇವು ಇಲ್ಲದ ಹಾಗಾಗುತ್ತದೆ. ಒಂದು ಕಡೆಯಿಂದ ಈ ಬರಗಾಲ ಹೇಗೆ ಬಂದಿತು ಎನ್ನುವುದರ ಬಗ್ಗೆ ನಾನು ಹೇಳುತ್ತಿರುವುದು. ಇದರ ಬಗ್ಗೆ ಒಬ್ಬರು ಸಹ ಕಾಳಜಿ ವಹಿಸುವುದಕ್ಕೆ ಹೋಗುವುದಿಲ್ಲ.

ಚಿರಾಪುಂಜಿಯನ್ನು ಬಿಟ್ಟರೆ, ಆಗುಂಬೆಯಲ್ಲಿ ಹೆಚ್ಚು ಮಳೆ ಆಗುತ್ತದೆ. ಅಂತಹ ಆಗುಂಬೆಯಲ್ಲಿ ನೀಲಗಿರಿ ಗಿಡಗಳನ್ನು ನೆಡುವಂತಹ ಉದ್ದೇಶ ಏನಿತ್ತು? ಇವರು ವಿದ್ಯಾವಂತರಲ್ಲವೇ ಸ್ವಾಮಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಮ್ಮಣ್ಣುಗುಂಡಿಯಲ್ಲಿ ನೀಲಗಿರಿ ಗಿಡವನ್ನು ನೆಡುವಂತಹ ಉದ್ದೇಶ ಏನಿತ್ತು? ಮಂಗಳೂರಿಗೆ ಹೋಗುವಾಗ ಎಲ್ಲಾ ಕಡೆಯ ರಸ್ತೆ ಬದಿಗಳಲ್ಲಿ ಮತ್ತು ಗೋವಾಗೆ ಹೋಗುವ ರಸ್ತೆಯ ಎಡ ಭಾಗದಲ್ಲಿ ಮತ್ತು ಆ ಕಡೆಯಲ್ಲಿಯೇ ನಮ್ಮ ರಾಜ್ಯದಲ್ಲಿಯೇ ಬರುವಂತಹ ದಾರಿಯಲ್ಲಿ ನೀಲಗಿರಿ ಗಿಡಗಳನ್ನು ನೆಟ್ಟಿದ್ದಾರೆ. ನೀಲಗಿರಿ ಗಿಡಗಳು ಸೂಕ್ತವಲ್ಲ ಎಂದು ಗೊತ್ತಿದ್ದರೂ ಸಹ ಇಷ್ಟು ವರ್ಷಗಳಾದರೂ ಸಹ ಅದನ್ನು ಬ್ಯಾನ್ ಮಾಡಿ ಎಂದು ಇತ್ತೀಚೆಗೆ ಹೇಳಲಾಯಿತು. ಈ ನೀಲಗಿರಿ ಗಿಡಗಳಿಂದ ತೊಂದರೆಗಳು ಬಂದ ಕಾರಣಕ್ಕೆ ಎಷ್ಟೋ ಜನ ಮುಷ್ಕರವನ್ನು ಹೂಡಿದರು. ಏನೇನೋ ಮಾಡಿದರು. ರಸ್ತೆಗಳನ್ನು widen ಮಾಡುವ ವಿಚಾರದಲ್ಲಿ, ಮರಗಳನ್ನು ತೆಗೆಯುವಂತಹದ್ದು, ಅದೆಲ್ಲವುದರ ಜೊತೆಯಲ್ಲಿ ಮರಗಳ ತಳಿಗಳ ಬಗ್ಗೆ ತಾವು ದಯಮಾಡಿ ಗಮನಿಸಬೇಕಾಗುತ್ತದೆ. ಇದು ನಮಗೆ ಮತ್ತು ನಮ್ಮ ಮನುಕುಲಕ್ಕೆ ಶಾಪ ಇದೆ. ಇದನ್ನು ನಾವೆಲ್ಲರೂ ಪಕ್ಷಾತೀತವಾಗಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪಕ್ಷಿಗಳಿಗೆ ಮತ್ತು ಪ್ರಾಣಿಗಳಿಗೆ ಬೇಕಾಗುವಂತಹ ಆಹಾರಕ್ಕೋಸ್ಕರ, ಕಾಡಿನಲ್ಲಿ ಅರಳಿ ಮರ, ಗೋಣಿ ಮರ ಮತ್ತು ಬಸರಿ ಮರ ಎಂದು ಹಾಕುತ್ತಿದ್ದರು. ಇದ್ದರಿಂದ ಕಾಡು ಪಕ್ಷಿಗಳಿಗೆ ಬೇಕಾದಂತಹ ಆಹಾರ ಸಿಗುತ್ತಿತ್ತು. ಅದು ಸರ್ವನಾಶ ಆಗಿಹೋಯಿತು. ಕೊಡಗಿನಲ್ಲಿ ಆನೆಗಳೆಲ್ಲಾ ಬಂದು ಮನೆಗೆ ನುಗ್ಗುತ್ತಿವೆ ಎಂದು ಹೇಳುತ್ತಿದ್ದೇವೆ. ಇದಕ್ಕೆ ಕಾರಣವೇನೆಂದರೆ, ನಾವು ಅವ್ಯಾಹತವಾಗಿ ಕಾಡನ್ನು ಆಕ್ರಮಿಸಿದ್ದೇವೆ.

(ಮುಂದು)

**(532) 18-12-2018 (4-50) ಎಸ್‌ಪಿಆರ್-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಎಲ್.ಧರ್ಮೇಗೌಡ(ಮುಂದು):-**

ಈ ವಿಚಾರಗಳ ಬಗ್ಗೆ ನಾವು ಏಕೆ ಯೋಚನೆಗಳನ್ನು ಮಾಡುತ್ತಿಲ್ಲ. ಇದೇ ರೀತಿಯ ಪರಿಸ್ಥಿತಿ ಮುಂದುವರೆದರೆ, ಮುಂದಿನ ಪೀಳಿಗೆಯ ಮಕ್ಕಳಿಗೆ ಕುಡಿಯಲು ಶುದ್ಧವಾದ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಸರ್ಕಾರ ಬದಲಾವಣೆಯಾದಂತೆ ರಾಜ್ಯದ ಮುಖ್ಯಮಂತ್ರಿಗಳೂ ಸಹ ಬದಲಾಗುತ್ತಾರೆ. ಎಷ್ಟು ಹಳ್ಳಿಗಳಿಗೆ ಎಷ್ಟು ಪ್ರಮಾಣದಲ್ಲಿ ನೀರನ್ನು ಕೊಂಡು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಂತಹ ನೀರಿನ ಬವಣೆಯನ್ನು ನೀಗಬೇಕಾದರೆ, ಸಾಮಾಜಿಕ ಅರಣ್ಯ ಯೋಜನೆಯಡಿ ಹೊಸ ತಳಿಗಳನ್ನು ನೆಡುವುದರ ಜೊತೆಗೆ ಹಳೆಯ ತಳಿಗಳ ಮರಗಳನ್ನು ಸಹ ಬೆಳೆಸಬೇಕು. ಈ ಹಿಂದೆ ಅರಳಿ ಮರಗಳಂತಹ ಇತರೆ ಮರಗಳನ್ನು ಹೇರಳವಾಗಿ ಬೆಳೆಸುತ್ತಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ದಿವಸ ಪರಿಸರ ಸರ್ವನಾಶವಾಗಿರುವುದಕ್ಕೆ ಮರಗಳ ಕಡಿತವೇ ಕಾರಣವಾಗಿದೆ. ಪಾಶ್ಚಿಮಾತ್ಯದ ಯಾವುದೇ ದೇಶಗಳನ್ನು ನೋಡಿದಾಗ ಅಲ್ಲಿ ಮರಗಳನ್ನು ಬೆಳೆಯುವುದಕ್ಕೆ ಒತ್ತನ್ನು ನೀಡುವ ಅಂಶವನ್ನು ನಾವು ಗಮನಿಸಬೇಕು. ನಾನು ಒಟ್ಟಾರೆಯಾಗಿ 33 ದೇಶಗಳ ಪ್ರವಾಸ ಮಾಡಿದ್ದೇನೆ. ಒಂದೊಂದು ದೇಶಗಳಿಗೆ ಐದು ಬಾರಿ ಭೇಟಿ ನೀಡಿದ್ದೇನೆ. ಆ ಸಂದರ್ಭದಲ್ಲಿ ಅಲ್ಲಿನ ಮರಗಳಿಗೆ ಬ್ಯಾಂಡೇಜ್ ಹಾಕಿರುವುದನ್ನು ನಾನು ನೋಡಿದ್ದೇನೆ. ಅದೇ ರೀತಿಯಾಗಿ ಜಪಾನ್ ದೇಶಕ್ಕೆ ಭೇಟಿ ನೀಡಿದಾಗಲೂ ಸಹ ಅಲ್ಲಿನ ಮರವೊಂದಕ್ಕೆ ಬ್ಯಾಂಡೇಜ್ ಹಾಕಿರುವುದನ್ನು ನಾನು ನೋಡಿದ್ದೇನೆ ಹಾಗೂ ಅದರ ಛಾಯಾಚಿತ್ರವನ್ನೂ ಸಹ ತೆಗೆದುಕೊಂಡಿದ್ದೇನೆ. ಹೊರ ದೇಶಗಳಲ್ಲಿ ಮಕ್ಕಳನ್ನು ಸಂರಕ್ಷಿಸಿದಂತೆ ಮರಗಳನ್ನೂ ಸಹ ಸಂರಕ್ಷಣೆ ಮಾಡುತ್ತಾರೆ. ಈ ರೀತಿಯ ವ್ಯವಸ್ಥೆಗಳು ನಮ್ಮಲ್ಲಿ ಆಗುತ್ತಿಲ್ಲ. ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್‌ಗಳನ್ನು ಕೊರೆಯಲಾಗುತ್ತಿದೆ. ಯಾವುದೇ ಪಕ್ಷದ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಈ ಯೋಜನೆಗೆ ಕೋಟ್ಯಾಂತರ ರೂಪಾಯಿಗಳನ್ನು ವಿನಿಯೋಗಿಸುತ್ತಿದೆ. ಗಂಗಾ ಕಲ್ಯಾಣ ಯೋಜನೆಯಡಿ 600 ರಿಂದ 800 ಅಡಿಗಳವರೆಗೆ ಭೂಮಿಯನ್ನು ಕೊರೆಯುತ್ತಾರೆ. ಈ ವಿಚಾರದಲ್ಲಿ ಪಕ್ಷಾತೀತವಾಗಿ ನಾವು ಇಲ್ಲಿ ಮಾತನಾಡಿದರೂ ಸಹ, ಗಂಗಾ ಕಲ್ಯಾಣ ಯೋಜನೆಯಡಿ ಸುಳ್ಳು ಲೆಕ್ಕಗಳನ್ನು ನೀಡಿ, ಅವ್ಯವಹಾರ ಮಾಡುತ್ತಿದ್ದಾರೆ. ಇಂತಹ ಕೆಲವು ಸಂಗತಿಗಳಾಗಿವೆ. ಮುಂದುವರೆದು ಕೆಲವೊಂದು ಬೋರ್‌ಗಳನ್ನು ಕೊರೆದಾಗ ಅಲ್ಲಿ ನೀರು ಸಿಗುವುದೇ ಇಲ್ಲ. ನೀರು ಶೇಖರಣೆಗಾಗಿ ಮಳೆ ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಇವತ್ತಿಗೂ ಸಹ ರಾಜ್ಯದ ಎಲ್ಲಾ ಭಾಗಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದೆ. ಮಳೆಯ ಪ್ರಮಾಣವನ್ನು ನಾವು ಹೇಗಾದರೂ ಜಾಸ್ತಿ ಮಾಡಬೇಕೆಂದರೆ, ಮಳೆ ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಂಡು, ಮಳೆ ನೀರನ್ನು ಸಂಗ್ರಹಿಸುವಂತಹ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು. ಇಂತಹ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ, ಪುನಃ ಬರಗಾಲ ಪರಿಸ್ಥಿತಿಯು ಹೆಚ್ಚಿನ ವಿಕೋಪಕ್ಕೆ ಹೋಗುತ್ತದೆ ಎನ್ನುವುದನ್ನು ನಾವು ಗಮನಿಸಬೇಕು. ಮಳೆ ಕೊಯ್ಲು ಪದ್ಧತಿಯನ್ನು ನಗರ ಪ್ರದೇಶಗಳಲ್ಲಿ ಜಾರಿಗೆ ತರಲಾಗಿದೆ ಎಂಬುದಾಗಿ ನಾವು ಕೇಳಿದ್ದೇವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಹೊಸದಾಗಿ ಮನೆ ನಿರ್ಮಾಣ ಮಾಡುವವರೂ ಸಹ ಮಳೆ ಕೊಯ್ಲು ಪದ್ಧತಿಯನ್ನು ಅಳವಡಿಸುವಂತೆ ಮಾಡಬೇಕು. ಹಾಲಿ ಇರುವ ಮಳೆಗಾಲದಲ್ಲಿ ನಾವು ಸಾಕಷ್ಟು ಬುದ್ಧಿವಂತಿಕೆಯಿಂದ ಅಗತ್ಯ ಕ್ರಮಗಳನ್ನು ತೆಗೆದುಕೊಂಡು ಮಳೆ ನೀರನ್ನು ಸಂಗ್ರಹಿಸಬೇಕು. ಕಾಡಿನಲ್ಲಿ ನೀಲಗಿರಿ ಮತ್ತು ಅಕೇಷಿಯಾ ತಳಿಗಳ ಮರಗಳನ್ನು ಬುಡಸಮೇತ ಕಿತ್ತುಹಾಕುವ ಕ್ರಮಗಳನ್ನು ತೆಗೆದುಕೊಳ್ಳಬೇಕು ಹಾಗೂ ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಗೆ ಬಹಳ ಕಟ್ಟುನಿಟ್ಟಾದ ನಿರ್ದೇಶನಗಳನ್ನು ಕೊಡಬೇಕು. ಇಲ್ಲದೇ ಹೋದರೆ, ಪರಿಸರಕ್ಕೆ ತುಂಬಾ ಹಾನಿಯುಂಟಾಗುತ್ತದೆ. ಹೊಸ ತಳಿಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮರಗಳ ಬದಲಾಗಿ ಹಳೆ ತಳಿಯ ಗೋಣಿ, ಬಸರಿ ಮತ್ತು ಅರಳಿ ಮರಗಳನ್ನು ನಿರ್ಲಕ್ಷ್ಯ ಮಾಡದೇ ಎಲ್ಲಾ ಭಾಗಗಳಲ್ಲಿ ಸರ್ವೇ ಸಾಮಾನ್ಯವಾಗಿ ದಟ್ಟ ಪ್ರಮಾಣದಲ್ಲಿ ಬೆಳೆಸಬೇಕು. ಇಂತಹ ಪರಿಸರ ಪ್ರೇಮವನ್ನು ಹೊಂದದೇ ಹೋದರೆ, ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದು ಕೋಟ್ಯಾಂತರ ರೂಪಾಯಿಗಳನ್ನು ವಿನಿಯೋಗಿಸಿದರೂ ಸಹ ಬರಗಾಲ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೆಚ್ಚು ಮರಗಳು ಇರಬೇಕೆಂದು ವಿಜ್ಞಾನಿಗಳು, ಇತಿಹಾಸಕಾರರು ಹೇಳಿದ್ದಾರೆ. ಹಳ್ಳಿಗಳಲ್ಲಿನ ಅವಿದ್ಯಾವಂತ ದನ ಕಾಯುವವರಿಗೂ ಸಹ ಮರಗಳ ಮಹತ್ವ ತಿಳಿದಿದೆ. ಬರಗಾಲ ಪರಿಸ್ಥಿತಿಯು ಏಕೆ ಆಗಿದೆ ಎಂಬುದರ ಬಗ್ಗೆ ಅವರು ಮನಮುಟ್ಟುವಂತೆ ಬಹಳ ಚೆನ್ನಾಗಿ ಹೇಳುವಂತಹ ಶಕ್ತಿ ಸಾಮರ್ಥ್ಯ ಅವರಿಗಿದೆ. ಈ ಅಂಶವನ್ನು ನಾವು ತಿಳಿದುಕೊಳ್ಳಬೇಕು. ಮನದಾಳದ ನೋವಿನಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಮೂಲತಃ ನಾನು ಒಬ್ಬ ಕೃಷಿಕ. ಕೃಷಿ ವೃತ್ತಿಯನ್ನು ನಾನು ಬಹಳವಾಗಿ ಪ್ರೀತಿಸುತ್ತೇನೆ. ನನ್ನ ಮಕ್ಕಳಿಗಿಂತ ಹೆಚ್ಚು ನಾನು ಮರ, ಗಿಡಗಳನ್ನು ಪ್ರೀತಿಸುತ್ತೇನೆ. ಇದರಲ್ಲಿಯೇ ನನಗೆ ಹೆಚ್ಚು ಆಸಕ್ತಿ ಇದೆ. ರೈತಾಪಿ ವರ್ಗದವರಿಗೆ ಎಷ್ಟು ತೊಂದರೆಯಾಗುತ್ತಿದೆ ಎನ್ನುವುದು ನನಗೆ ಗೊತ್ತಿದೆ. ರೈತರ ಸಾಲ ಮನ್ನಾ ಮಾಡುವ ವಿಚಾರವನ್ನು ನಾವುಗಳೆಲ್ಲರೂ ಮಾತನಾಡುತ್ತೇವೆ. ಹಾಲಿ ಅಧಿಕಾರಕ್ಕೆ ಬಂದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರವೂ ಸಹ ರೈತರ ಸಾಲ ಮನ್ನಾ ಮಾಡಿದೆ. ಇದು ತುಂಬಾ ಒಳ್ಳೆಯ ಹೆಜ್ಜೆ. ಆದರೆ ಎಲ್ಲಿಯವರೆಗೆ ಸಾಲ ಮನ್ನಾ ಪದ್ಧತಿಯನ್ನೇ ಮುಂದುವರೆಸಿಕೊಂಡು ಹೋಗುವುದಕ್ಕಾಗುತ್ತದೆ? ರೈತರ ಬಗ್ಗೆ ನಾವುಗಳು ಮಾತನಾಡುತ್ತೇವೆ. ಸರ್ಕಾರಿ ಅಧಿಕಾರಿಗಳು, ಜನಪ್ರತಿನಿಧಿಗಳು ಎಲ್ಲರೂ ಸಹ ಪ್ರಾಮಾಣಿಕವಾಗಿ ಸರ್ಕಾರ ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಜನಪ್ರದವಾಗುವ ರೀತಿಯಲ್ಲಿ ನೋಡಿಕೊಳ್ಳಬೇಕು. ಇವತ್ತಿನ ದಿವಸ ಜಲಾನಯನ ಇಲಾಖೆಯಲ್ಲಿ ಏನಾಗುತ್ತಿದೆ. ಅವರುಗಳು ಚೆಕ್ ಡ್ಯಾಂಗಳನ್ನು ನಿರ್ಮಿಸಿದರೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತಾರೆ. ಆದರೆ ಅದನ್ನು ಯಾವ ರೀತಿಯಾಗಿ ಮಾಡಲಾಗುತ್ತಿದೆ? ಚೆಕ್ ಡ್ಯಾಂಗಳನ್ನು ನಿರ್ಮಿಸದಿದ್ದರೆ ತುಂಬಾ ಕಷ್ಟವಾಗುತ್ತದೆ. ಇದರ ಬಗ್ಗೆ ಖಂಡಿತವಾಗಿಯೂ ಸಹ ಆಲೋಚನೆಯನ್ನು ಮಾಡಬೇಕು. ಇವತ್ತಿನ ದಿವಸ ಅರಣ್ಯ ಪರಿಸರ ಉಳಿಯುವುದಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳಿಗಿಂತ ಹಳ್ಳಿಗರ ಕೊಡುಗೆ ಹೆಚ್ಚಾಗಿದೆ. ಪ್ರಸ್ತುತ ಅಧಿಕಾರದಲ್ಲಿರುವ ಸರ್ಕಾರ ಮಂಡಿಸಿರುವ ಆಯವ್ಯಯದಲ್ಲಿ ನೈಸರ್ಗಿಕವಾಗಿರುವ ಗುಡ್ಡಗಳಿಗೆ ಬೇಲಿ ಹಾಕಿ, ನೈಸರ್ಗಿಕ ಕಾಡುಗಳನ್ನು ಉಳಿಸುವಂತಹ ಯೋಜನೆಗಳನ್ನು ಘೋಷಿಸಲಾಗಿದೆ. ಇದು ತುಂಬಾ ಒಳ್ಳೆಯ ವಿಚಾರವಾಗಿದೆ. ಇವತ್ತಿನ ದಿವಸ ಅವ್ಯಾಹತವಾಗಿ ಅರಣ್ಯ ನಾಶವಾಗುತ್ತಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ತುಂಬಾ ಪರಿಪೂರ್ಣವಾಗಿ, ಪರಿಪಕ್ವವಾಗಿ ಹಾಗೂ ಸಮರ್ಪಕವಾಗಿ ಕೆಲಸ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಿರ್ವಹಿಸಿದ್ದರೆ ಇಷ್ಟೊಂದು ಪ್ರಮಾಣದಲ್ಲಿ ಅರಣ್ಯ ನಾಶವಾಗುತ್ತಿರಲಿಲ್ಲ. ತೋಟಗಾರಿಕೆ ಇಲಾಖೆಯವರು ಒಳ್ಳೆಯ ತಳಿಗಳ ಗಿಡಗಳನ್ನು ನೆಡಬೇಕು. ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವವರು ತಾವು ತೆಗೆದುಕೊಳ್ಳುವ ವೇತನಕ್ಕೆ ಸಮನಾಗಿ ಸಮಾಜವನ್ನು ಉಳಿಸುವ ಮನೋಭಾವವನ್ನಿಟ್ಟುಕೊಂಡು ಆ ನಿಟ್ಟಿನಲ್ಲಿ ಕೆಲಸಗಳನ್ನು ಮಾಡದೇ ಇರುವುದರಿಂದ ಅರಣ್ಯ ನಾಶವಾಗಿದೆ. ಇಲಾಖೆಯವರು ಒಂದು ರೀತಿಯಾಗಿ ಹಗಲು ದರೋಡೆಯನ್ನು ಮಾಡಿದ್ದಾರೆ. ಆಡಳಿತ ಹಾಗೂ ವಿರೋಧ ಪಕ್ಷಗಳು ಸದನದಲ್ಲಿ ಪರಸ್ಪರ ಆರೋಪ ಮತ್ತು ಪ್ರತ್ಯಾರೋಪ ಮಾಡುತ್ತಿವೆ. ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಇನ್ನು ಮುಂದಾದರೂ ಸರಿ ನಾವು ಪಕ್ಷಾತೀತವಾಗಿ ಪರಿಸರವನ್ನು ಉಳಿಸುವ ಯೋಜನೆಗಳನ್ನು ಹಾಕಿಕೊಳ್ಳಬೇಕು. ಯಾವುದೇ ಕಾರಣಕ್ಕಾದರೂ ಸರಿ ಮಳೆ ಕೊಯ್ಲು ಪದ್ಧತಿಯನ್ನು ಎಲ್ಲಾ ಪ್ರದೇಶಗಳಲ್ಲಿ ಅಳವಡಿಸಿಕೊಳ್ಳುವುದಕ್ಕೆ ಒತ್ತನ್ನು ನೀಡಬೇಕು. ಈ ಅಂಶವನ್ನು ತಮ್ಮ ಗಮನಕ್ಕೆ ತರ ಬಯಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಾಯಶಃ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಬರದ ಪರಿಸ್ಥಿತಿ ಇದ್ದರೆ ನಮ್ಮ ಜಿಲ್ಲೆಯಲ್ಲಿ ಅತಿವೃಷ್ಟಿಯಾಗಿದೆ. ಈ ಅಂಶವನ್ನು ನಾನು ಈಗಾಗಲೇ ಹಲವಾರು ಬಾರಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಪ್ರಸ್ತುತ ಅಧಿವೇಶನದ ಪ್ರಾರಂಭದ ದಿನದಲ್ಲಿ ನಾನು ಚುಕ್ಕೆ ಗುರುತಿನ ಪ್ರಶ್ನೆಯನ್ನು ಕೇಳಿದ್ದೆನು. ಆದರೆ ಕಾರಣಾಂತರಗಳಿಂದ ಅದನ್ನು ಮುಂದೂಡಲಾಯಿತು. ನಿಜವಾಗಿಯೂ ಸಹ ಅದು ಒಂದು ಉತ್ತಮ ಪ್ರಶ್ನೆಯಾಗಿತ್ತು. ಮಾನ್ಯ ಸದಸ್ಯರಾದ ಶ್ರೀ ಸುನಿಲ್ ಸುಬ್ರಮಣಿರವರು ಪ್ರಸ್ತಾಪಿಸಿದಂತೆ ಕಾಫಿ ಬೆಳೆಯನ್ನೇ ನಂಬಿಕೊಂಡು ಕೊಡಗಿನ ಜನರು ಬದುಕುತ್ತಿದ್ದರು. ಆದರೆ ಇವತ್ತಿನ ದಿವಸ ಆ ಭಾಗದ ಆರು ಪಂಚಾಯತಿ ಪ್ರದೇಶಗಳಲ್ಲಿನ ಎಲ್ಲಾ ಕಾಫಿ ಎಸ್ಟೇಟ್‌ಗಳು ಕುಸಿದು ಬಿದ್ದಿವೆ. ಅವುಗಳು ಯಾವ ರೀತಿಯಾಗಿದ್ದವು ಎನ್ನುವುದನ್ನು ಹೇಳುವಂತಹ ಪರಿಸ್ಥಿತಿ ಗೋಚರವಾಗುತ್ತಿದೆ. ಭೂ ಕುಸಿತದಿಂದಾಗಿ ಕಾಫಿ ಗಿಡಗಳು ನೆಲಸಮವಾಗಿ, ಹೊಳೆಯಲ್ಲಿ ಹರಿದು ಹೋಗಿವೆ. ಕಾಫಿ ಗಿಡಗಳನ್ನು ಬೆಳೆಸಬೇಕಾದರೆ ಸುಮಾರು 5-6 ವರ್ಷಗಳ ಸತತ ಪ್ರಯತ್ನ ಅವಶ್ಯಕ. ಕಾಫಿ ತೋಟದ ಯಾವ ಮಾಲೀಕರಿಗೆ ಇಂತಹ ದುಸ್ಥಿತಿ ಇವತ್ತಿನ ದಿವಸ ಬಂದಿದೆ, ಅಂತಹವರಿಗೆ ಸರ್ಕಾರದ ವತಿಯಿಂದ ಎಕರೆವಾರು ಪ್ರದೇಶ ಅಳತೆ ಮಾಡಿ ಅನುಕೂಲ ಮಾಡಿಕೊಡಬೇಕು. ಕಾಫಿ ಬೆಳೆಯನ್ನು ಬೆಳೆಯುವ ಅನುಭವ ಹೊಂದಿದ ರೈತರಿಗೆ ಐದು ವರ್ಷಗಳವರೆಗೆ ಪರಿಹಾರವನ್ನು ಖಂಡಿತವಾಗಿಯೂ ನೀಡಬೇಕು. ಕೊಡಗು ಜಿಲ್ಲೆಯನ್ನು ಕರ್ನಾಟಕದ ಕಾಶ್ಮೀರ ಎಂಬುದಾಗಿ ಕರೆಯುತ್ತಿದ್ದರು. ಅದಕ್ಕೆ ವಿಭಿನ್ನವಾಗಿ ಇವತ್ತಿನ ದಿವಸ ಕೊಡಗು ಜಿಲ್ಲೆಯ ಚಿತ್ರಣ ಬದಲಾಗಿದೆ. ನಿಜವಾಗಿಯೂ ಸಹ ಇದು ನೋವಿನ ಸಂಗತಿಯಾಗಿದೆ. ನಮ್ಮೆಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹೋದ್ಯೋಗಿಗಳು ಕೊಡಗು ಜಿಲ್ಲೆಯನ್ನು ಸ್ವರ್ಗ ಎಂಬುದಾಗಿ ಹೇಳುತ್ತಿದ್ದರು. ಆದರೆ ಇವತ್ತಿನ ದಿವಸ ಅಲ್ಲಿನ ಜನರು ಎಂತಹ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆಂದರೆ ಅದನ್ನು ಯಾರೂ ಸಹ ನಂಬುವುದಿಲ್ಲ. ಮಾಲೀಕರುಗಳನ್ನೇ ಅವಲಂಬಿಸಿದ ಕಾಫಿ ತೋಟದ ಕಾರ್ಮಿಕರು ಕೆಲಸವಿಲ್ಲದೇ ಅವರೂ ಸಹ ನಿರಾಶ್ರಿತರ ತಾಣದಲ್ಲಿರುವಂತಹ ಪರಿಸ್ಥಿತಿ ಇವತ್ತಿನ ದಿವಸ ಕೊಡಗು ಜಿಲ್ಲೆಯಲ್ಲಿ ನಿರ್ಮಾಣವಾಗಿದೆ. ಜಿಲ್ಲೆಯ ಎಲ್ಲಾ ಭಾಗದಲ್ಲಿ ಪ್ರಕೃತಿ ವಿಕೋಪ ಸಂಭವಿಸದೇ ಇದ್ದರೂ ಸಹ ಜಲ್ಲೆಯ ಕೇವಲ ಆರು ಗ್ರಾಮ ಪಂಚಾಯತಿಯ ಜನರು ಬಹಳ ದುಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ. ಸರ್ಕಾರ ಈಗಾಗಲೇ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಆ ಪೈಕಿ ಮನೆ ಕಳೆದುಕೊಂಡಿರುವವರಿಗೆ ಸುಮಾರು 10 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಂದಾಜು 800 ಮನೆಗಳನ್ನು ನಿರ್ಮಿಸುವ ಯೋಜನೆಯನ್ನು ಸರ್ಕಾರ ಕೈಗೊಂಡಿದೆ. ಇತ್ತೀಚೆಗೆ ಶೀಘ್ರವಾಗಿ ಈ ಯೋಜನೆಯ ಶಂಕುಸ್ಥಾಪನೆಯನ್ನೂ ಸಹ ಮಾಡಿದೆ. ಮುಂದಿನ ಆರು ತಿಂಗಳಿನಲ್ಲಿ ಸುಮಾರು 800 ನಿರಾಶ್ರಿತರಿಗೆ ಮನೆ ನಿರ್ಮಿಸಿಕೊಡುವ ಪ್ರಯತ್ನಗಳನ್ನು ಮಾಡಿದೆ. ಈ ಯೋಜನೆಯು ಈಗಾಗಲೇ ಪ್ರಾರಂಭವಾಗಿದೆ. ಸದರಿ ಆರು ಪಂಚಾಯತಿಯ ಗ್ರಾಮಸ್ಥರು ತಮ್ಮ ಮುಂದಿನ ಜೀವನವನ್ನು ಯಾವ ರೀತಿಯಾಗಿ ನಡೆಸಬೇಕು ಎನ್ನುವುದರ ಬಗ್ಗೆ ನಾವು ಗಮನ ಹರಿಸಬೇಕು. ನಾನು ಕೇಳಿರುವ ಪ್ರಶ್ನೆಗೆ ಸರ್ಕಾರ ಯಾವ ರೀತಿಯಾಗಿ ಉತ್ತರಿಸುತ್ತದೆ ಎನ್ನುವುದನ್ನು ನಾನು ನಿರೀಕ್ಷಿಸುತ್ತಿದ್ದೆನು. ಈ ಮೂಲಕ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಕಾಫಿ ತೋಟಗಳು ಭೂಕುಸಿತದಿಂದಾಗಿ ಹೋಗಿವೆ, ಅದಕ್ಕೆ ತಕ್ಕ ಪರಿಹಾರವನ್ನು ಸರ್ಕಾರ ನೀಡಬೇಕು, ಆ ಭಾಗದ ಜನರನ್ನು ಇತರ ಜನರೊಂದಿಗೆ ಬಾಳುವಂತೆ ಮಾಡಬೇಕು. ಅಲ್ಲಿನ ಜನರು ತೋಟಗಳಲ್ಲಿ ಕಾಫಿ ಬೆಳೆಯೊಂದಿಗೆ ಕರಿ ಮೆಣಸನ್ನು ಬೆಳೆಯುತ್ತಿದ್ದರು. ಇವತ್ತಿನ ದಿವಸ ಸದರಿ ಕರಿ ಮೆಣಸಿನ ಬಳ್ಳಿಗಳು ಕಾಣದಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಪ್ರಕೃತಿ ವಿಕೋಪದಿಂದಾಗಿ ಕೊಡಗಿನ ಜನರು ತುಂಬಾ ನೊಂದಿದ್ದಾರೆ. ಅಲ್ಲಿನ ಜನರ ನೋವಿಗೆ ಸರ್ಕಾರ ಕೂಡಲೇ ಸ್ಪಂದಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬರ ಪರಿಸ್ಥಿತಿಯ ಬಗ್ಗೆ ಸುಧೀರ್ಘವಾಗಿ ಚರ್ಚೆಯನ್ನು ಮಾಡುವ ಈ ಸಂದರ್ಭದಲ್ಲಿ ಸದನದ ಸಾಕಷ್ಟು ಹಿರಿಯ ಸದಸ್ಯರುಗಳು ತಮ್ಮದೇ ಆದ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ನಿಜವಾಗಿಯೂ ಸಹ ಬರ ಕೇವಲ ಈ ವರ್ಷಕ್ಕೆ ಸೀಮಿತವಾಗಿಲ್ಲ. ಕಳೆದ ಮೂರು ವರ್ಷಗಳಿಂದ ಸತತವಾಗಿ ಬರಗಾಲ ಪರಿಸ್ಥಿತಿಯನ್ನು ವಿಶೇಷವಾಗಿ ಉತ್ತರ ಕರ್ನಾಟಕ ಭಾಗದ ಪ್ರದೇಶಗಳು ಅನುಭವಿಸುತ್ತಿವೆ. ಕಳೆದ ಎರಡು–ಮೂರು ವರ್ಷಗಳಿಗಿಂತ ಹೆಚ್ಚು ಭೀಕರವಾದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರಗಾಲವನ್ನು ಈ ವರ್ಷದಲ್ಲಿ ನಾವು ಕಂಡಿದ್ದೇವೆ. ಕಳೆದ ಎರಡು–ಮೂರು ವರ್ಷಗಳಲ್ಲಿ ಅಲ್ಪ–ಸ್ವಲ್ಪ ಪ್ರಮಾಣದ ಮಳೆಯನ್ನು ನಾವು ಕಂಡಿದ್ದರೂ ಸಹ ಈ ವರ್ಷ ಮುಂಗಾರು ಮತ್ತು ಹಿಂಗಾರು ಎರಡೂ ಬೆಳೆಗಳು ಸಂಪೂರ್ಣವಾಗಿ ವಿಫಲವಾಗಿರುವುದನ್ನು ನಾವು ಈ ಭಾಗದಲ್ಲಿ ಗಮನಿಸುತ್ತಿದ್ದೇವೆ.

(ಮುಂದು)

**(533) 18–12–2018 5:00 ಸಿಎಸ್/ವಿಕೆ**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಮುಂದು):–**

ಇಂತಹ ಭೀಕರವಾದಂತಹ ಬರಗಾಲವನ್ನು ಸಮರ್ಪಕವಾಗಿ ಎದುರಿಸಿಕೊಂಡು ಬಂದಿದ್ದೇವೆ. ಆ ರೈತರ ಕುಟುಂಬಗಳಿಗೆ, ಆ ಕೂಲಿಕಾರ್ಮಿಕರ ಬದುಕಿಗೆ ಸರ್ಕಾರ ಮುಂದೆ ಬಂದು ಸಹಾಯ ಹಾಗೂ ಸವಲತ್ತುಗಳನ್ನು ಯದ್ಧೋಪಾದಿಯಲ್ಲಿ ನೀಡುವಂತಹ ಅನಿವಾರ್ಯತೆ ಇವತ್ತಿನ ದಿವಸ ಇದೆ. ಆ ರೈತರ ಬದುಕಿಗೆ ಆಸರೆ ಆಗತಕ್ಕ ಅನೇಕ ಯೋಜನೆಗಳನ್ನು ಸಹ ಸರ್ಕಾರ ತರಬೇಕಾಗಿದೆ ಎನ್ನುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಉದಾಹರಣೆಗೆ ಹೇಳುವುದಾದರೆ ಪ್ರತಿ ವರ್ಷದಂತೆ ಈ ವರ್ಷವೂ ಸಹ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನಲ್ಲಿ ಶೇಕಡ 42 ರಷ್ಟು ಮಳೆಯ ಕೊರತೆ ಉಂಟಾಗಿದೆ. ಬಾಗಲಕೋಟೆ ತಾಲ್ಲೂಕಿನಲ್ಲಿ ಸುಮಾರು ಶೇಕಡ 43ರಷ್ಟು ಮಳೆಯ ಕೊರತೆ, ಬೀಳಗಿ ತಾಲ್ಲೂಕಿನಲ್ಲಿ ಶೇಕಡ 50ಕ್ಕಿಂತ ಹೆಚ್ಚು ಮಳೆಯ ಕೊರತೆ ಆಗಿದೆ. ಅದೇ ರೀತಿ ಹುನಗುಂದದಲ್ಲಿ ಶೇಕಡ 46ರಷ್ಟು, ಜಮಖಂಡಿಯಲ್ಲಿ ಶೇಕಡ 30 ರಷ್ಟು, ಮುಧೋಳದಲ್ಲಿ ಶೇಕಡ 37ರಷ್ಟು ಮಳೆಯ ಕೊರತೆ ಉಂಟಾಗಿದ್ದು, ಸರಾಸರಿ ಇಡೀ ಜಿಲ್ಲೆಯಲ್ಲಿ ಶೇಕಡ 41 ರಷ್ಟು ಮಳೆಯು ಕೊರತೆಯನ್ನು ನಾವು ಈ ವರ್ಷದಲ್ಲಿ ಅನುಭವಿಸುತ್ತಿದ್ದೇವೆ. ಆ ಹಿನ್ನಲೆಯಲ್ಲಿ ನಾವು ಕೃಷಿ ಇಲಾಖೆಯಿಂದ ಹಾನಿಗೆ ಒಳಗಾಗಿರುವ ಕ್ಷೇತ್ರವನ್ನು ಗಮನಿಸಿದರೆ 1,16,847 ಹೆಕ್ಟೇರ್ ಕ್ಷೇತ್ರದಲ್ಲಿ ಬೆಳೆದಿರುವ ಬೆಳೆ ಹಾನಿಯಾಗಿದೆ. ಅದೇ ರೀತಿ ತೋಟಗಾರಿಕೆ ವ್ಯಾಪ್ತಿಯಲ್ಲಿ 12,183 ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಬಿತ್ತಿರುವ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಈ ಎರಡು ಕ್ಷೇತ್ರಗಳನ್ನು ಸೇರಿಸಿದರೆ ಸುಮಾರು 1,29,036 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯ ನಾಶವನ್ನು ಈ ಜಿಲ್ಲೆಯಲ್ಲಿ ಇವತ್ತಿನ ದಿವಸ ನಾವು ಕಾಣುತ್ತಿದ್ದೇವೆ. ಹಾಗಾಗಿ ಇಲ್ಲಿರುವ ರೈತರ ಸ್ಥಿತಿ ಚಿಂತಾಜನಕವಾಗಿದೆ. ಪ್ರತಿ ವರ್ಷಕ್ಕಿಂತ ಈ ವರ್ಷ ಮಳೆಯ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಿದೆ. ಇದರಿಂದ ಈ ಭಾಗದ ರೈತರು ಬಹಳಷ್ಟು ಹಾನಿಗೆ ಒಳಗಾಗಿರುವುದನ್ನು ನಾವು ಗಮನಿಸುತ್ತಿದ್ದೇವೆ. ಇದರ ಜೊತೆಗೆ ರೈತರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬದುಕಿನ ಜೊತೆಗೆ ಆಸರೆ ಆಗಿರುವ ಗೋವುಗಳಾಗಲೀ ಎತ್ತುಗಳಾಗಲೀ ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಆಗುತ್ತಿವೆ. ಗೋವಿನ ಸಂಖ್ಯೆ ಕಡಿಮೆ ಆಗುವುದಕ್ಕೆ ಕಾರಣ ಏನೆಂದರೆ ಬರದಿಂದ ರೈತ ಬೆಳೆದಂತಹ ಬೆಳೆ ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಆಗಿರುವುದು ಸಹ ಆಗಿದೆ. ದನಕರುಗಳಿಗೂ ಸಹ ಮೇವಿಲ್ಲದೆ ಅವುಗಳ ಸಂಖ್ಯೆ ಕಡಿಮೆ ಆಗುತ್ತದೆ. ಒಂದು ಲೆಕ್ಕಾಚಾರದಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ನೂರು ಕೋಟಿಗೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಜಾನುವಾರುಗಳು ಇವತ್ತು ಕೇವಲ 30 ಕೋಟಿಗೆ ಇಳಿದಿದೆ, ಈ ಎಲ್ಲಾ ಕಾರಣಗಳಿಂದ ಇವತ್ತು ಅನೇಕ ಜನರು ಕೃಷಿಯನ್ನು ಬಿಟ್ಟು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗುತ್ತಿರುವ ಕಾರಣ ನಮ್ಮಲ್ಲಿರುವ ಜಾನುವಾರುಗಳ ಸಂಖ್ಯೆ ಕಡಿಮೆ ಆಗುತ್ತಿದೆ. ಯಾವಾಗ ನಮ್ಮದು 33 ಕೋಟಿ ಜನಸಂಖ್ಯೆ ಇತ್ತು ಆಗ, ನೂರು ಕೋಟಿ ಜಾನುವಾರುಗಳ ಸಂಖ್ಯೆ ಇತ್ತು. ಇವತ್ತು ಜಾನುವಾರುಗಳ ಸಂಖ್ಯೆ 33 ಕೋಟಿಗೆ ಇಳಿದಿದ್ದು, ಜನಸಂಖ್ಯೆ 120 ಕೋಟಿಗಿಂತಲೂ ಹೆಚ್ಚಾಗಿರುವುದನ್ನು ನಾವು ಕಂಡಿದ್ದೇವೆ. ಕೃಷಿಯ ಫಲವತ್ತತೆಯನ್ನು ಹೆಚ್ಚಿಸಬೇಕಾದ ಜಾನುವಾರುಗಳ ಸಂಖ್ಯೆಯನ್ನು ಹೆಚ್ಚು ಮಾಡುವುದರ ಕಡೆ ಕೂಡ ಸರ್ಕಾರ ಗಮನವನ್ನು ಹರಿಸಬೇಕಾಗುತ್ತದೆ. ಇದರ ಜೊತೆಗೆ ಈಗ ಉಳಿದಿರುವ ಜಾನುವಾರುಗಳ ರಕ್ಷಣೆಗಾಗಿ ಪ್ರತಿ ತಾಲ್ಲೂಕಿನಲ್ಲಿ ಗೋಶಾಲೆಗಳನ್ನು ತೆರೆಯಬೇಕಾದ ಅನಿವಾರ್ಯತೆ ಇದೆ. ಮೇವು ಸಂಗ್ರಹಣ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು. ಇವುಗಳನ್ನು ಸ್ಥಾಪನೆ ಮಾಡುವ ಮೂಲಕ ಗೋವುಗಳ ರಕ್ಷಣೆ ಮಾಡಬೇಕಾಗುತ್ತದೆ. ಅವುಗಳು ಕೂಡ ರೈತ ಕುಟುಂಬಕ್ಕೆ ಆಸರೆಯಾಗುತ್ತಿವೆ. ಈಗ ಬರ ಘೋಷಣೆ ಮಾಡಿರುವ ನೂರು ತಾಲ್ಲೂಕುಗಳಲ್ಲಿಯೂ ಕೂಡ ಗೋಶಾಲೆಗಳನ್ನು ಆದಷ್ಟು ಜಾಗ್ರತೆ ಸ್ಥಾಪನೆ ಮಾಡಬೇಕು. ಇದರ ಜೊತೆಗೆ ನಾವಿನ್ನೂ ಡಿಸೆಂಬರ್ ತಿಂಗಳಿನಲ್ಲಿದ್ದೇವೆ, ಮತ್ತೆ ಮಳೆ ಆಗುವುದು ಜೂನ್ ಜುಲೈ ತಿಂಗಳಿನಲ್ಲಿ, ಹಾಗಾಗಿ ಸುಮಾರು 5 ರಿಂದ 6 ತಿಂಗಳವರೆಗೆ ಬರವನ್ನು ಎದುರಿಸಬೇಕಾದರೆ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಮನುಷ್ಯರಿಗಾಗಲೀ, ಜಾನುವಾರುಗಳಿಗಾಗಲೀ ಕುಡಿಯುವ ನೀರಿನ ಲಭ್ಯತೆಯನ್ನು ಗಮನಿಸಿದಾಗ 500-600 ಅಡಿ ಆಳಕ್ಕೆ ಹೋದರೂ ಸಹ ಕೊಳವೆಬಾವಿಗಳಲ್ಲಿ ನೀರು ಸಿಗುತ್ತಿಲ್ಲ. ಈ 6 ತಿಂಗಳಿನಲ್ಲಿ ಯಾವುದೇ ಗ್ರಾಮ ಅಥವಾ ಪಟ್ಟಣ ಆಗಿರಬಹುದು ಅಲ್ಲಿ ನೀರಿನ ತೊಂದರೆ ಆಗದ ರೀತಿಯಲ್ಲಿ ಸರ್ಕಾರ ಗಮನವನ್ನು ಹರಿಸಬೇಕಾದ ಅನಿವಾರ್ಯತೆ ಇದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಈಗ ಕೆಲವೊಂದು ಕಡೆ ಸರ್ಕಾರದ ನಿಯಮದ ಪ್ರಕಾರ ಕೊಳವೆ ಬಾವಿಗಳನ್ನು ಕೊರೆಯುತ್ತಿಲ್ಲ. ಕಾರಣ ಅಂತರ್ಜಲ ಕುಸಿಯುತ್ತಿರುವ ಗ್ರಾಮಗಳ ಪಟ್ಟಿಯನ್ನು ಮಾಡಲಾಗಿದೆ. ಆದರೆ ಈ ಬರಗಾಲದಲ್ಲಿ ಕುಡಿಯುವ ನೀರಿನ ಸಂಪರ್ಕವನ್ನು ಕಲ್ಪಿಸುವ ಸಂದರ್ಭದಲ್ಲಿ ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಳವೆ ಬಾವಿಗಳನ್ನು ಕೊರೆಯಲು ಸರ್ಕಾರ ಅವಕಾಶ ಮಾಡಿಕೊಡಬೇಕು. ಜೊತೆಗೆ ರೈತರು ಬೆಳೆದಿರುವ ಸಾಕಷ್ಟು ಬೆಳೆಗಳಿಗೆ ಸರ್ಕಾರ ಈಗಾಗಲೇ ಬೆಂಬಲ ಬೆಲೆಯನ್ನು ಘೋಷಿಸಿದ್ದರೂ ಕೂಡ ಆ ಬೆಳೆಗಳನ್ನು ಎಪಿಎಂಸಿ ಅಥವಾ ಬೇರೆ ಸಂಸ್ಥೆಗಳ ಮುಖಾಂತರ ಬೆಳೆಗಳನ್ನು ಖರೀದಿ ಮಾಡದೇ ಇರುವುದನ್ನು ನಾವು ಕಾಣುತ್ತಿದ್ದೇವೆ ಅಥವಾ ಬೆಳೆಗಳನ್ನು ಖರೀದಿಸಿದರೂ ಸಹ ರೈತರಿಗೆ ಸರಿಯಾದ ಸಮಯಕ್ಕೆ ಹಣ ಮರುಪಾವತಿ ಆಗದೇ ಇರುವುದು ಹಾಗೂ ಸರಿಯಾದ ಬೆಲೆ ನೀಡದಿರುವುದು ಸಹಾ ಇದೆ. ಸರಿಯಾಗಿ ಮತ್ತು ಶೀಘ್ರವಾಗಿ ರೈತರಿಂದ ಖರೀದಿಸಿದ ಬೆಳೆಗೆ ಹಣ ಪಾವತಿ ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ.

ಬಹಳ ಮುಖ್ಯವಾಗಿ ನಾವು ನೀರಿನ ನಿರ್ವಹಣೆಯ ಬಗ್ಗೆ ಗಮನವನ್ನು ಹರಿಸಬೇಕಾಗಿದೆ. ಬರ ಬಂದಿದೆ ಎಂದು ಪ್ರಕೃತಿಯನ್ನು ದ್ವೇಷ ಮಾಡತಕ್ಕ ಕೆಲಸವನ್ನು ನಾವು ನೀವೆಲ್ಲರೂ ಸಹ ಮಾಡುತ್ತಿದ್ದೇವೆ. ಆದರೆ ಬರ ಏಕೆ ಬರುತ್ತಿದೆ, ಅದನ್ನು ನಿಯಂತ್ರಣ ಮಾಡಲಿಕ್ಕೆ ಏನಾದರೂ ಮಾಡಬಹುದೇ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿರುವುದು ಬಹಳ ಮುಖ್ಯವಾಗಿದೆ. ಹಿಂದೆ ಎಷ್ಟು ಅರಣ್ಯ ಪ್ರದೇಶ ಇತ್ತು, ಈಗ ಎಷ್ಟಿದೆ ಎನ್ನುವುದನ್ನು ನಾವೆಲ್ಲರೂ ಸಹ ನೋಡುತ್ತಿದ್ದೇವೆ. ಮಾನವನ ನಾಗರೀಕತೆ ಬೆಳೆದ ಹಾಗೆಲ್ಲ, ಅರಣ್ಯ ಸಂಪತ್ತು ಕೂಡ ಹಾಳಾಗುತ್ತಿದೆ. ಅರಣ್ಯವನ್ನು ಬೆಳೆಸುವ ಅದರಲ್ಲಿಯೂ ಮುಖ್ಯವಾಗಿ ಗಿಡಮರಗಳನ್ನು ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಯೋಜನೆಗಳನ್ನು ತೆಗೆದುಕೊಂಡರೆ ಭವಿಷ್ಯದಲ್ಲಿ ಮಳೆಯ ಪ್ರಮಾಣವನ್ನು ಹೆಚ್ಚಿಗೆ ಮಾಡಬಹುದು ಎನ್ನುವುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಆ ನಿಟ್ಟಿನಲ್ಲಿ ಗಿಡಮರಗಳನ್ನು ಅರಣ್ಯವನ್ನು ಬೆಳೆಸತಕ್ಕ ಕೆಲಸವನ್ನು ಸರ್ಕಾರ ಮಾಡಬೇಕು. ಇದರ ಜೊತೆಗೆ ಚೆಕ್‌ಡ್ಯಾಮ್‌ಗಳ ಮೂಲಕ ಕೆರೆ ಕಟ್ಟೆಗಳಲ್ಲಿ ನೀರನ್ನು ಸಂಗ್ರಹ ಮಾಡುವುದು, ಮಳೆ ನೀರಿನ ಕೊಯ್ಲನ್ನು ಸ್ಥಾಪನೆ ಮಾಡಬೇಕು. ಮಳೆಯ ಮುಖಾಂತರ ಭೂಮಿಯ ಮೇಲೆ ಬೀಳುವ ನೀರು ಇವತ್ತು ನದಿ ಮತ್ತು ಸಮುದ್ರವನ್ನು ಸೇರುತ್ತಿದೆ. ಹರಿಯುವ ನೀರನ್ನು ನಿಲ್ಲುವ ಹಾಗೆ, ಹಾಗೆ ನಿಂತ ನೀರು ಭೂಮಿಯಲ್ಲಿ ಹಿಂಗುವ ಹಾಗೆ ಮಾಡಬೇಕೆನ್ನುವ ಸ್ಲೋಗನ್‌ಗಳನ್ನು ನಾವು ಕಾಣುತ್ತಿದ್ದೇವೆ. ಆದರೆ ಸಮರ್ಪಕವಾಗಿ ಆ ಕೆಲಸ ಆಗುತ್ತಿಲ್ಲ. ಬಿದ್ದಿರುವ ಮಳೆಯ ನೀರನ್ನು ಸಂಗ್ರಹ ಮಾಡಿ, ಚೆಕ್‌ಡ್ಯಾಮ್ ಮತ್ತು ಕೆರೆ ಕಟ್ಟೆಗಳನ್ನು ತುಂಬುವ ಮೂಲಕ ಅಂತರ್ಜಲವನ್ನು ಹೆಚ್ಚಿಗೆ ಮಾಡಬೇಕಾಗುತ್ತದೆ. ಇದರಿಂದ ಭವಿಷ್ಯದಲ್ಲಿ ಬರಗಾಲವನ್ನು ನಿಯಂತ್ರಣ ಮಾಡಬಹುದು. ಅದೇ ರೀತಿಯಾಗಿ ನಾವು ಇವತ್ತು ಬೇರೆ ಬೇರೆ ಕಡೆ ನೋಡಿದಾಗ ನೀರಿನ ಸಂಗ್ರಹ ಮಾಡುವುದನ್ನು ನಾವು ಕಾಣುತ್ತಿದ್ದೇವೆ. ವಿಶೇಷವಾಗಿ ಉತ್ತರ ಕರ್ನಾಟಕದ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಸುಮಾರು 123 ಟಿಎಂಸಿ ನೀರನ್ನು ಇವತ್ತು ಸಂಗ್ರಹ ಮಾಡಿದರೂ ಅದರ ಸದ್ಬಳಕೆ ಸರಿಯಾದ ರೀತಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತಿಲ್ಲ. ನೀರಿನ ನಿರ್ವಹಣೆ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ನಾವು ಈ ರೀತಿಯಾಗಿ ನೀರಿನ ಬಳಕೆಯನ್ನು ಮಾಡಿಕೊಂಡು ಹೋದರೆ ಭವಿಷ್ಯದಲ್ಲಿ ಎಷ್ಟೇ ದೊಡ್ಡ ಡ್ಯಾಮ್ ಅನ್ನು ಕಟ್ಟಿದರೂ ಸಹ ಆ ಭಾಗದಲ್ಲಿ ನೀರಿನ ಅಭಾವವನ್ನು ಎದುರಿಸುವ ಪರಿಸ್ಥಿತಿ ಬಂದಿದೆ. ಹಾಗಾಗಿ ಆ ಡ್ಯಾಮ್‌ನಲ್ಲಿರುವ ನೀರನ್ನು ಸದ್ಬಳಕೆ ಮಾಡಲಿಕ್ಕೆ ಹಾಗೂ ಅಲ್ಲಿರುವ ನೀರಿನ ನಿರ್ವಹಣೆ ಮಾಡಲಿಕ್ಕೆ ವಿಶೇಷವಾದ ಒಂದು ತಂಡವನ್ನು ನಿಯೋಜನೆ ಮಾಡುವುದರ ಮೂಲಕ ನೀರಿನ ಕೊರತೆ ಆಗದಂತೆ ಮಾಡಬೇಕೆಂದು ಈ ಸದನದ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮುಂದಿನ ದಿವಸಗಳಲ್ಲಿ ನೀರನ್ನು ಯಾವ ರೀತಿಯಲ್ಲಿ ಬಳಕೆ ಮಾಡಬೇಕೆಂದರೆ ನಮ್ಮ ಹಳ್ಳಿ ಭಾಷೆಯಲ್ಲಿ "ನೀರನ್ನು ತುಪ್ಪ ಬಳಸಿದಂತೆ ಬಳಸಬೇಕು" ಎಂದು ಹೇಳುತ್ತಾರೆ. ಇಂತಹ ಕಾಲ ಇನ್ನೇನು ಬಹಳ ದೂರ ಉಳಿದಿಲ್ಲವೆಂದು ಅನಿಸುತ್ತದೆ. ಏಕೆಂದರೆ ಪ್ರತಿವರ್ಷವೂ ಮಳೆ ಕಡಿಮೆ ಆಗುತ್ತಿದ್ದು, ಬರಗಾಲ ಇದ್ದಲ್ಲಿ ನೀರನ್ನು ನಾವು ಮನೆಯಲ್ಲಿ ಹಾಲು ತುಪ್ಪ ಬಳಸಿದ ಹಾಗೆ ಬಳಸಬೇಕಾಗುತ್ತದೆ. ಆ ರೀತಿಯಲ್ಲಿ ನೀರಿನ ನಿರ್ವಹಣೆ ಮಾಡಿದರೆ ಮಾತ್ರ ನಾವು ಭವಿಷ್ಯಕ್ಕೆ ನೀರನ್ನು ಉಳಿಸಬಹುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಗಳೇ, ನಾವು Israel ದೇಶಕ್ಕೆ ಪ್ರವಾಸ ಹೋಗಿದ್ದೆವು. ಅಲ್ಲಿನ ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ನೂರಾರು ಪದಾರ್ಥಗಳನ್ನು ಊಟಕ್ಕೆ ಇಟ್ಟಿದ್ದರು. ಆ ಊಟವನ್ನೆಲ್ಲ ಒಂದು ನಿಗದಿತ ಬೆಲೆಯಲ್ಲಿ ನೀಡುತ್ತಿದ್ದರೂ ಸಹ full meals ಎಂದು ಬೇರೆ ಪದಾರ್ಥಗಳನ್ನು ಯಥೇಚ್ಛವಾಗಿ ನೀಡುತ್ತಿದ್ದರೂ ಸಹ ನೀರಿನ ಬಾಟಲಿಗೆ ಮಾತ್ರ ಹಣವನ್ನು ಪಡೆಯುತ್ತಿದ್ದರು. ಅರ್ಧ ಲೀಟರ್ ಅಥವಾ 250 ಎಂ.ಎಲ್ ನೀರು ಪಡೆದರೂ ಸಹ ಆ ನೀರಿಗೆ ಪ್ರತ್ಯೇಕವಾಗಿ ಹಣ ನೀಡಬೇಕೆಂದು ಕೇಳುತ್ತಿದ್ದರು. ನಾವು ಇಂತಹ ದೊಡ್ಡ ಹೋಟೆಲ್‌ನಲ್ಲಿ ಇಷ್ಟೆಲ್ಲ ಪದಾರ್ಥಗಳನ್ನು ಕೊಡುತ್ತಿದ್ದೀರಿ, 4–5 ಪದಾರ್ಥಗಳನ್ನು ಕಡಿಮೆ ಕೊಟ್ಟು ನೀರನ್ನು ಕೊಡಿ ಎಂದು ಕೇಳಿದರೆ ಆಗುವುದಿಲ್ಲ ಎಂದರು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಇಷ್ಟು ದಿವಸಗಳಲ್ಲಿ ಭೂಮಿಗಾಗಿ ಹಾಗೂ ಬೇರೆ ಬೇರೆ ಕಾರಣಗಳಿಗಾಗಿ ಯುದ್ಧಗಳನ್ನು ಮಾಡಿರುವುದನ್ನು ನಾವು ನೋಡಿದ್ದೇವೆ. ಬರುವ ಶತಮಾನಗಳಲ್ಲಿ ನೀರಿಗಾಗಿ ಬಡಿದಾಡುವ ದಿನಗಳು ಬಹಳ ದೂರದಲ್ಲಿ ಇಲ್ಲವೆಂದು ಬಹಳ ಖೇಧದಿಂದ ಹೇಳಬೇಕಾಗುತ್ತದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(534) 18-12-2018 (5-10) ಎಲ್‌ಎಂ/ವಿಕೆ ಎಂಎಸ್‌ಎಸ್

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**(ಮುಂದು):- ನಾವು Jordan ದೇಶಕ್ಕೆ ಹೋದಾಗ ನಡೆದ ಒಂದು ಘಟನೆಯನ್ನು ಹೇಳಬಯಸುತ್ತೇನೆ, Jordan ನಲ್ಲಿ ಇಳಿದು ಮುಂದೆ ನಾವು ಬೆಳಗ್ಗೆ Israel ನ, Tel Aviv ಗೆ ಹೋಗಬೇಕಾಗಿತ್ತು. ಬೆಳಗ್ಗೆ ನಮಗೆ ಅಲ್ಲಿಂದ ಫ್ಲೈಟ್ ಇತ್ತು ಅದಕ್ಕಾಗಿ ನಾವು Jordan ನಿಂದ ರಾತ್ರಿ 12-00 ಗಂಟೆಗೆ ಎಲ್ಲಾ check-in ಆಗಿ ನಾವು ತಂಗುವ ಹೊಟೇಲ್‌ಗೆ ತೆರಳಿದೆವು. ನಮ್ಮ ಜೊತೆಯಲ್ಲಿ 20 ಜನ ರೈತರು ಬಂದಿದ್ದರು. ರಾತ್ರಿ 12-00 ಗಂಟೆಗೆ ಹೊಟೇಲ್‌ಗೆ ಹೋದ ತಕ್ಷಣ ಬಾತರೂಂ ಗೆ ಹೋದರೆ ಅಲ್ಲಿ ಒಂದು ಹನಿ ನೀರು ಇರಲಿಲ್ಲ. ನನಗೆ ಆಶ್ಚರ್ಯವಾಯಿತು, ನಂತರ reception ಗೆ ಕಾಲ್ ಮಾಡಿ ಬಾತ್‌ರೂಂ ನಲ್ಲಿ ನೀರು ಬರುತ್ತಿಲ್ಲ ಎಂದು ಹೇಳಿದ್ದಾಗ, ಅವರು ತಾವು ಬಾತ್‌ರೂಂ ಯಾವಾಗ ಉಪಯೋಗಿಸುತ್ತೀರಿ ಎಂದು ಕೇಳಿದರು. ಈಗಲೇ ಉಪಯೋಗಿಸಬೇಕು ಎಂದು ನಾನು ಹೇಳಿದೆ. ನಾನು ಕೇಳಿದಾಗ ರಾತ್ರಿ 12 ಗಂಟೆ 15 ನಿಮಿಷ ಆಗಿತ್ತು. ಆಗ ಅವರು ಹೇಳಿದರು, ಸರ್ ನಾವು ರಾತ್ರಿ 12-30ನಿಮಿಷಕ್ಕೆ ನೀರನ್ನು start ಮಾಡುತ್ತೇವೆ, 12-45ಕ್ಕೆ ಬಂದ್ ಮಾಡುತ್ತೇವೆ, you are going to use the toilets for only 10 minutes and after that we are going to close the taps ಎಂದು ಹೇಳಿದರು. ಬರಿ 10 ನಿಮಿಷ ಮಾತ್ರ ಬಾತ್‌ರೂಂ ಉಪಯೋಗಿಸಲು ಕೊಟ್ಟರು. ಬೆಳಿಗ್ಗೆ ಎಷ್ಟು ನಿಮಿಷ ಬಾತ್‌ರೂಂ ಉಪಯೋಗ ಮಾಡುತ್ತೀರಿ ಎನ್ನುವುದನ್ನು ದಯಮಾಡಿ ಹೇಳಬೇಕು ಎಂದು ಅವರು ನಮಗೆ ಮೊದಲ ರಾತ್ರಿಯೇ ಕೇಳಿದರು. ಬೆಳಗ್ಗೆ ಅವರು ನಮಗೆ ಬಾತ್‌ರೂಂ ಉಪಯೋಗಿಸಲು ಕೊಟ್ಟಿರುವುದು 20 ನಿಮಿಷ ಮಾತ್ರ. ಬಹಳ ಕಡಿಮೆ ಪ್ರಮಾಣದಲ್ಲಿ ನೀರನ್ನು ಬಿಡುತ್ತಾರೆ. ಮಾರನೆ ದಿನ ನಾನು ಸ್ನಾನ ಮುಗಿಸಿಕೊಂಡು ಕೆಳಗೆ ಹೋಗಿ ಹೊಟೇಲ್‌ನವರಿಗೆ ಕೇಳಿದೆ, ಅದಕ್ಕೆ ಅವರು ನಮಗೆ ಮೂರು-ನಾಲ್ಕು ವರ್ಷಕ್ಕೆ ಒಮ್ಮೆ ಮಳೆಯಾಗುತ್ತದೆ ಅದೇ ನೀರನ್ನೇ ಸಂಗ್ರಹ ಮಾಡಿ ನಾವು ಹಿತ-ಮಿತವಾಗಿ ಬಳಸುತ್ತೇವೆ ಎಂದು ಹೇಳಿದರು. ಹೀಗಾಗಿ ಮುಂದೆ ಬರುವಂತಹ ದಿನಗಳಲ್ಲಿ ಪ್ರತಿಯೊಂದು ಹನಿ ನೀರನ್ನು ನಾವು ಬಹಳ ಎಚ್ಚರಿಕೆಯಿಂದ ಬಳಸಬೇಕಾದಂತಹ ಸಂದರ್ಭದಲ್ಲಿ ನಾವಿದ್ದೇವೆ. ಹಿತ-ಮಿತವಾಗಿ ನೀರನ್ನು ಬಳಕೆ ಮಾಡಿದಾಗ ಮಾತ್ರ ಮುಂದಿನ ಜನಾಂಗಕ್ಕೆ ನಾವು ನೀರನ್ನು ಉಳಿಸಲು ಸಾಧ್ಯ ಎನ್ನುವುದನ್ನು ತಮ್ಮ ಮುಖಾಂತರ ಸದನದ ಗಮನಕ್ಕೆ ತರಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :-** ಮಾನ್ಯ ಸಭಾಪತಿಗಳೆ, Israel ನಲ್ಲಿ ಒಂದು litre ನೀರಿಗೆ ನಮ್ಮ ಭಾರತದ currency ಪ್ರಕಾರ 230 ರೂಪಾಯಿಗಳನ್ನು ಕೊಡಬೇಕು. ಅವರು ನೀರಿಗೆ ಬಹಳ ಮಹತ್ವವನ್ನು ಕೊಡುತ್ತಾರೆ. ನಾವು ಇಲ್ಲಿ ಕೃಷಿ ಅಧ್ಯಯನಕ್ಕೆ ಬಂದಿದ್ದೇವೆ ಇನ್ನು ಎಂಟು ದಿನ ಇರುತ್ತೇವೆ ಅದಕ್ಕಾಗಿ ಊಟದಲ್ಲಿ ನಾಲ್ಕು ಐಟಂ ಕಡಿಮೆ ಮಾಡಿ ಆದರೆ ನೀರಿಗೆ ಇಷ್ಟೊಂದು ಬೆಲೆ ಹೇಳಬೇಡಿ, 230 ರೂಪಾಯಿಗಳನ್ನು ಕೊಟ್ಟು ನೀರನ್ನು ಖರೀದಿ ಮಾಡಿ ನಮಗೆ ಅಭ್ಯಾಸವಿಲ್ಲ. ಬೇರೆ ಬಾಟಲಿ ಬೇಕಾದರೆ 2000 ರೂಪಾಯಿಗಳನ್ನು ಕೊಟ್ಟು ನಮ್ಮವರು ತರುತ್ತಾರೆ, ಆದರೆ ನೀರಿಗೆ ಇಷ್ಟು ಹಣ ಕೊಡಲು ತೊಂದರೆಯಾಗುತ್ತದೆ ಎಂದು ಹೇಳಿದಾಗ, ಆ ಹೋಟೇಲ್ ಮಾಲೀಕರು ಆಹಾರದಲ್ಲಿ ಇನ್ನು 10 ಐಟಂಗಳನ್ನು ಒದಗಿಸಬಹುದು ಆದರೆ ನೀರಿಗೆ ಮಾತ್ರ ಹಣ ಕೊಡಲೇ ಬೇಕು ಎಂದು ಹೇಳಿದಾಗ, ಅವರು ನೀರಿಗೆ ಎಷ್ಟು ಮಹತ್ವ ಕೊಡುತ್ತಾರೆ, ನೀರಿನ ಬೆಲೆ ಏನು ಎನ್ನುವುದು ನಿಜವಾಗಿ ಅವತ್ತಿನ ದಿವಸ ನಮಗೆ ಅರ್ಥವಾಯಿತು. Israel ಬಹಳ ಚಿಕ್ಕ ದೇಶ ಆದರೆ ಅದು ಕೃಷಿಯಲ್ಲಿ ಎಷ್ಟು ಮುಂದುವರೆದಿದೆ ಎಂದರೆ ಅಲ್ಲಿ ಬೆಳೆಯುವ ತರಕಾರಿಗಳಿಗೆ ಒಂದು goodwill ಬಂದುಬಿಟ್ಟಿದೆ. ಅದು ಒಂದು ಸಣ್ಣ ದೇಶ. ಇವತ್ತು ಜಗತ್ತಿನ ಬೇರೆ ದೇಶಗಳಿಗೆ ಆಹಾರವನ್ನು ಸರಬರಾಜು ಮಾಡುವಂತಹ ಶಕ್ತಿ ಬರಬೇಕಾದರೆ ಅದಕ್ಕೆ ಕಾರಣ ಅಲ್ಲಿ ಇರುವ ಕೃಷಿ ಪದ್ಧತಿ. ಸಾವಯವ ಕೃಷಿಯನ್ನು ಒಳಗೊಂಡು ಹನಿ ನೀರಾವರಿ ಮುಖಾಂತರ ಇಡೀ ದೇಶದಲ್ಲಿ ನೀರಾವರಿ ಮಾಡುತ್ತಿದ್ದಾರೆ. ನಮ್ಮ ಕರ್ನಾಟಕದಲ್ಲಿಯೂ ಕೂಡಾ ಆ ಮಾದರಿಯ ಹನಿ ನೀರಾವರಿ ಪದ್ಧತಿಯನ್ನು ಬಳಸುವುದರ ಮುಖಾಂತರ ನೀರು ನಿರ್ವಹಣೆ ಮಾಡಲು, ನೀರಿನ ಬಳಕೆ ಮಾಡಲು ಸಾಧ್ಯವಾಗುತ್ತದೆ. ಇವತ್ತು Israel ದೇಶದಲ್ಲಿ ಎಂತಹ ಪರಿಸ್ಥಿತಿ ಇದೆ ಎಂದರೆ, ಮನೆ, ಹೋಟೇಲ್‌ಗಳಲ್ಲಿಯ ಬಾತ್‌ರೂಂನ ನೀರನ್ನು ಒಂದು ಕಡೆ ಸಂಗ್ರಹ ಮಾಡಿ ಅದನ್ನು ಶುದ್ಧಿಕರಣ ಮಾಡಿ ಮತ್ತೆ ಅದನ್ನು ಕೃಷಿ ಉಪಯೋಗಕ್ಕೆ ಕೊಡುತ್ತಾರೆ. ಇಂತಹ ಪರಿಸ್ಥಿತಿ ನಮ್ಮ ಕರ್ನಾಟಕಕ್ಕೆ ಬರಬಾರದು ಎನ್ನುವುದಾದರೆ ಎಲ್ಲ ಕೆರೆ-ಕಟ್ಟೆಗಳನ್ನು ತುಂಬಿಸಬೇಕು, ಡ್ಯಾಂನಲ್ಲಿ ನೀರು ಸಂಗ್ರಹ ಮಾಡುವಂತಹ ಮುಖ್ಯವಾದ ಕೆಲಸವಾಗಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, Israel ನಲ್ಲಿ ಹಾಗೇ ಇದೆ-ಹೀಗೆ ಇದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ನಾವು Israel ನಲ್ಲಿ 10 ದಿನ ಇದ್ದು ಎಲ್ಲವನ್ನು ನೋಡಿಕೊಂಡು ಬಂದಿದ್ದೇವೆ. ನಾವು ಎಲ್ಲರೂ ಹೇಳುತ್ತೇವೆ ಆದರೆ ಅದನ್ನು ಅನುಸರಿಸುವವರು ಯಾರು? ಅಲ್ಲಿ ತುಂಬಾ commitment ನಿಂದ ಕೆಲಸ ಮಾಡುತ್ತಾರೆ. ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿಗೆ ಹೋದಾಗ ನೋಡಿದೆ ಒಂದು ದಾಳಂಬಿ ಗಿಡ 42 ಘುಟ್ ಕೆಳಗೆ ಇರುತ್ತದೆ, ಆ 42 ಘುಟ್ ಪೂರ್ತಿ ದಾಳಿಂಬೆ ಹಣ್ಣುಗಳು ಇರುತ್ತವೆ. ಟೋಮೆಟೋ ಕೂಡಾ ಹಾಗೆ. ಅಲ್ಲಿ 45 ಡಿಗ್ರಿ ಬಿಸಿಲು ಇರುತ್ತದೆ, 3000 ಆಕಳುಗಳನ್ನು 19 ಜನರು ನೋಡಿಕೊಳ್ಳುತ್ತಾರೆ. ನಾವು ಎಲ್ಲರೂ ಎಲ್ಲ ದೇಶಗಳಿಗೆ ಹೋಗಿ ನೋಡಿ ಬರುತ್ತವೆ, ಇಲ್ಲಿ ಬಂದು ಮಾತನಾಡುತ್ತೇವೆ. ಆದರೆ ಅದನ್ನು ಕಾರ್ಯರೂಪಕ್ಕೆ ತರುವವರು ಯಾರು? ಇದರ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ತೀರ್ಮಾನಕ್ಕೆ ಬರಬೇಕಾಗುತ್ತದೆ. ಅಲ್ಲಿ ಒಬ್ಬ ಮನುಷ್ಯ 20-25 ಎಕರೆ ಜಮೀನನ್ನು ಹೊಂದಿರುತ್ತಾನೆ. ಅವನು ತಮ್ಮ ಜಮೀನಿನಲ್ಲಿ sprinkler, drip ಅಳವಡಿಸಿಕೊಂಡು 24 ತಾಸುಗಳವರೆಗೆ ಎಲ್ಲಾ ಕೆಲಸವನ್ನು ಒಬ್ಬನ್ನೆ ಮಾಡುತ್ತಾನೆ. ಅಲ್ಲಿ ಇಡೀ ವರ್ಷದಲ್ಲಿ 10 ಇಂಚ್‌ಗಿಂತ ಕಡಿಮೆ ಮಳೆಯಾಗುತ್ತದೆ. ಇಷ್ಟೇ ನೀರಿನಲ್ಲಿ 38-40 ಮಹಡಿಗಳ ಕಟ್ಟಡವನ್ನು ಕಟ್ಟುತ್ತಾರೆ. ಸಮುದ್ರದ ನೀರನ್ನು purify ಮಾಡಿ ಬೇರೆಯವರಿಗೆ ಮಾರುತ್ತಾರೆ. 40 ಲೀಟರ್‌ಗಿಂತ ಕಡಿಮೆ ಹಾಲನ್ನು ಕೊಡುವಂತಹ ಒಂದು ಆಕಳನ್ನು ಇಟ್ಟುಕೊಳ್ಳುವುದಿಲ್ಲ. ನಾವು ಎಲ್ಲರೂ ಮಾತನಾಡುತ್ತೇವೆ ಆದರೆ ಏನೂ ಮಾಡುತ್ತಿಲ್ಲ. ಎಲ್ಲ ಕಡೆಗಳಲ್ಲಿ ನೀರಿನ ಟ್ಯಾಪ್‌ಗಳನ್ನು ಆನ್‌ಮಾಡಿಬಿಟ್ಟಿರುತ್ತಾರೆ. ಈಗ ನಾನು ನೋಡಿದೆ ವಿಧಾನಸೌಧ ಹೊರಗೆ ಈಗಲೇ ಲೈಟ್ ಹಾಕಿದ್ದಾರೆ. ಈ ಸಮಯದಲ್ಲಿ ಏಕೆ ಲೈಟ್ ಹಾಕಬೇಕು ಕಣ್ಣು ಕಾಣುವುದಿಲ್ಲವೇ? ನಾವೇ ಎಷ್ಟು ಜನ ನೀರನ್ನು ಮಿತವಾಗಿ ಉಪಯೋಗ ಮಾಡುತ್ತೇವೆ ಹೇಳಿ. ಎಲ್ಲ ವಿಚಾರಗಳ ಬಗ್ಗೆ ಹೇಳುತ್ತೇವೆ ಆದರೆ ಅದನ್ನು ಜಾರಿಗೆ ತರುವವರು ಯಾರು? ಸರ್ಕಾರ ಸ್ಪಷ್ಟವಾದ ತೀರ್ಮಾನವನ್ನು ಮಾಡಿದರೆ ನಾವೆಲ್ಲ ಮಾತನಾಡುವುದಕ್ಕೆ ಒಂದು ಅರ್ಥ ಬರುತ್ತದೆ. ಘಟಪ್ರಭಾದಿಂದ ನಮ್ಮ ಮತ್ತು ನಿರಾಣಿಯವರ ಹೊಲಗಳಿಗೆ ನೀರು ಹಾಯ್ದು ಬರುತ್ತದೆ ಅಲ್ಲಿಯ ಭೂಮಿಯ ಗುಣ ಎಲ್ಲಾ ಸವಳಾಗಿಬಿಟ್ಟಿದೆ. ನಿರಾಣಿಯವರ ಮತ್ತು ನನ್ನ ಹೊಲಗಳು ಅಕ್ಕ-ಪಕ್ಕದಲ್ಲಿಯೇ ಇರುವುದು. ರಾತ್ರಿ ವೇಳೆ ನೀರು ಬಿಡುತ್ತಾರೆ, ಕರೆಂಟ್ ಸರಿಯಾಗಿ ಇರುವುದಿಲ್ಲ, ನೀರು ಎಲ್ಲಿ ಅಂದ್ರೆ ಅಲ್ಲಿ ಹರಿದು ಹೋಗುತ್ತದೆ ಇದರಿಂದ ನಮ್ಮ ಎರಿಮಣ್ಣಿನ ಭೂಮಿ black soil ಎಲ್ಲಾ ಬಿಳಿಯಾಗಿ ಬಿಟ್ಟಿದೆ. ನಮ್ಮ ಒಂದೇ ಊರಿನಲ್ಲಿ 480 ಎಕರೆ ಭೂಮಿ ಸವಳಾಗಿದೆ. ಇದರಿಂದ ಆ ಭೂಮಿ ಏನು ಉಪಯೋಗಕ್ಕೆ ಬರುವುದಿಲ್ಲ. ಅಲ್ಲಿ ಪಿಕ್ಕಜಾಲಿ ಗಿಡಗಳು ಬೆಳೆಯುತ್ತದೆ. ಇಲ್ಲಿ ಸರ್ಕಾರಿ ನೌಕರರು ಮತ್ತು ನಮಗೂ ಯಾರಿಗೂ commitment ಇಲ್ಲ. ಆ commitment ಬರುವವರೆಗೆ ನಾವು ಮಾತನಾಡುವುದು ಕೇವಲ ಭಾಷಣವಾಗುತ್ತದೆ ಹೊರತು, ಏನು ಉಪಯೋಗವಿಲ್ಲ. ನಾನು Science and Technology Minister ಆಗಿದ್ದಾಗ ಮಾನ್ಯ Kapil Sibal ರವರು ದೆಹಲಿಗೆ ಕರೆದಿದ್ದರು, "If the same condition continues for another twenty years in Karnataka, then the water

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

should be distributed to the public only through the ration cards." ಈಗ ನಮ್ಮಲ್ಲಿ ನೀರು ಇದೆ, ಇದರ ಉಪಯೋಗಕ್ಕಾಗಿ ಸರ್ಕಾರ ಒಂದು ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಎಲ್ಲವನ್ನು ಸರ್ಕಾರವೇ ಮಾಡಬೇಕು ಎಂದರೆ ಆಗುವುದಿಲ್ಲ. ನಾವು ಎಲ್ಲರೂ commitment ಇಟ್ಟುಕೊಂಡು ಕೆಲಸವನ್ನು ಮಾಡಬೇಕಾಗುತ್ತದೆ. ಬೆಳಿಗ್ಗೆ ಸುವರ್ಣ ವಿಧಾನಸೌಧಕ್ಕೆ ಕಛೇರಿಗಳು ಸ್ಥಳಾಂತರವಾಗಬೇಕು ಎಂದು ಚರ್ಚೆ ಮಾಡಲಾಯಿತು. ಆದರೆ ಇದ್ಧರ maintenance ಎಷ್ಟು ಇದೆ ಎನ್ನುವುದನ್ನು ವಿಚಾರ ಮಾಡಬೇಕು. ಕಟ್ಟಬೇಕೆಂದು ಕಟ್ಟಿಬಿಟ್ಟರು ಅಷ್ಟೆ. ಅದರ ಬಗ್ಗೆ ಯಾರಿಗೂ commitment ಇಲ್ಲ. ನೀರಿನ ಉಪಯೋಗದ ಬಗ್ಗೆ ಮಾತನಾಡಿರುವುದು ಸತ್ಯವಾದ ಸಂಗತಿ. ಆದರೆ ಅದರ ಜಾರಿಗೆ ಏನಾದರೂ ಒಂದು ಸ್ಪಷ್ಟ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ತೀರ್ಮಾನಕ್ಕೆ ಬರಬೇಕು. ಬರೀ ಸರ್ಕಾರ ಮಾಡಬೇಕು ಎಂದು ಜವಾಬ್ದಾರಿಯನ್ನು ಸರ್ಕಾರದ ಮೇಲೆ ಹಾಕಿದರೂ ತಪ್ಪಾಗುತ್ತದೆ. ನಮ್ಮ ಎಲ್ಲರ ಜವಾಬ್ದಾರಿ ಇದೆ. ಅದಕ್ಕಾಗಿ ಎಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬರುವಂತಹ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ ಎಂದು ಹೇಳಬಯಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಗಳೆ, Israel ಪದ್ಧತಿಯಲ್ಲಿ ನೀರು ನಿರ್ವಹಣೆ ಆಗಬೇಕು ಎನ್ನುವ ವಿಷಯವನ್ನು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ಏಕೆ ತರಲಾಯಿತು ಎಂದರೆ, ಮಾನ್ಯ ಹೊರಟ್ಟಿಯವರು ಹೇಳಿದ ಹಾಗೆ ನಮ್ಮನು ಸೇರಿಸಿಕೊಂಡು ರೈತರಿಗೆ, ಸಾರ್ವಜನಿಕರಿಗೆ ನೀರಿನ ಬಳಕೆ ಬಗ್ಗೆ ಯಾರಿಗೂ ಕಾಳಜಿ ಇಲ್ಲ. ಅಪರ್ ಕೃಷ್ಣಾ ಯೋಜನೆಯಲ್ಲಿ 2016-17ನೇ ಸಾಲಿನಲ್ಲಿ 120 ಟಿಎಂಸಿ ನೀರು ಇದ್ದರೂ ಕೂಡಾ ಏಪ್ರಿಲ್ ಮೇ ತಿಂಗಳಿನಲ್ಲಿ ಅಲ್ಲಿ ಇರುವ ಜಲಚರ ಪ್ರಾಣಿಗಳಿಗೆ ನೀರು ಸಿಗದಂತೆ ಕೃಷ್ಣಾ ನದಿ ಖಾಲಿಯಾಗಿರುವ ಇತಿಹಾಸವನ್ನು ನಾವು ಕಾಣುತ್ತೇವೆ.

(ಮುಂದು)

(535)18-12-2018(05-20)ಬಿಎಸ್‌ಡಿ-ಬಿಎನ್‌ಎಸ್

ಶ್ರೀ ನಿರಾಣಿ ಹನುಮಂತ್ ರುದ್ರಪ್ಪ (ಮುಂದು)

ಈ ರೀತಿ ಆಗಬಾರದು ಎಂಬ ಹಿನ್ನೆಲೆಯಲ್ಲಿ ಏನಾದರೂ ಕಟ್ಟುಪಾಡುಗಳನ್ನು ಹಾಕಬೇಕು. ನೀರಿನ ನಿರ್ವಹಣೆ ಸರಿಯಾದ ರೀತಿಯಲ್ಲಿ ಆಗಬೇಕೆಂದು ಸದನದ ಗಮನವನ್ನು ಸೆಳೆಯಬಯಸುತ್ತೇನೆ. ಕರ್ನಾಟಕ ಸರ್ಕಾರ ಇಸ್ರೇಲ್ ಮಾದರಿ ನೀರಾವರಿ ಮಾಡುವ ಮುಖಾಂತರ ಕೃಷಿಯನ್ನು ಅಭಿವೃದ್ಧಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಲು ಹೊರಟಿರುವುದನ್ನು ಸ್ವಾಗತ ಮಾಡುತ್ತೇನೆ. ಇಸ್ರೇಲ್‌ನಲ್ಲಿ ಹನಿ ನೀರಾವರಿಗೆ ಒತ್ತು ಕೊಟ್ಟಿದ್ದಾರೆ. ಬಾಗಲಕೋಟೆ ಜಿಲ್ಲೆಯ ರಾಮ್‌ತಾಳ್‌ನಲ್ಲಿ ಮೂರು ಸಾವಿರ ಹೆಕ್ಟೇರ್ ಜಮೀನಿಗೆ ಸುಮಾರು ಮೂರುವರೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಏತ ನೀರಾವರಿ ಯೋಜನೆಗೆ ಚಾಲನೆ ಕೊಟ್ಟಿದ್ದಾರೆ. ಆದರೆ ಇವತ್ತಿಗೂ ಆ ಯೋಜನೆ ಸಮರ್ಪಕವಾಗಿ ನಡೆಯುತ್ತಿಲ್ಲ. ಇಸ್ರೇಲ್‌ನಲ್ಲಿರುವ Jain Irrigation Systems Ltd. ಎಂಬ ಕಂಪನಿಯು ದೊಡ್ಡ projector ನಲ್ಲಿ ತೋರಿಸುತ್ತಿದ್ದಾರೆ. ಕರ್ನಾಟಕದಲ್ಲಿ Jain Irrigation Systems Ltd. ಕಂಪನಿಯಿಂದ ಹನಿ ನೀರಾವರಿ ಕೆಲಸ ಮಾಡುವ ಮೂಲಕ ಆರೇಳು ಸಾವಿರ ಎಕರೆ ನೀರಾವರಿ ಕೊಟ್ಟಿದ್ದೇವೆ ಎಂದು ತೋರಿಸುತ್ತಿದ್ದಾರೆ. ಆದರೆ ಇಲ್ಲಿ ಅದ್ಯಾವುದೂ ಕಾರ್ಯರೂಪಕ್ಕೆ ಬಂದಿಲ್ಲ. ಇಸ್ರೇಲ್ ಮಾದರಿಯ ಹನಿ ನೀರಾವರಿಯನ್ನು ಉತ್ತರ ಕರ್ನಾಟಕದ ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರದ ಭಾಗಗಳಲ್ಲಿ ಮಾಡಬೇಕು. ಬಾಗಲಕೋಟೆಯಲ್ಲಿ ಪ್ರತಿಷ್ಠಿತ ತೋಟಗಾರಿಕೆ ವಿಶ್ವವಿದ್ಯಾಲಯ ಇದ್ದು, ಅಲ್ಲಿ ಸುಮಾರು 50-60 ಎಕರೆ ಜಮೀನಿನಲ್ಲಿ ಮಾದರಿಯಾಗಿ ಹಣ್ಣುಗಳನ್ನು ಬೆಳೆಯುತ್ತಿದ್ದಾರೆ ಮತ್ತು ಇಸ್ರೇಲ್ ಮಾದರಿಯ ಪ್ರಾತ್ಯಕ್ಷಿಕೆಯನ್ನು ಮಾಡುತ್ತಿದ್ದಾರೆ. ಇನ್ನು ಎರಡು ದಿವಸಗಳಲ್ಲಿ ವಿಶ್ವವಿದ್ಯಾಲಯದಲ್ಲಿ ಘಟಿಕೋತ್ಸವ ನಡೆಯುತ್ತಿದ್ದು, ಇದನ್ನು ಸಹ ಗಮನಿಸಬೇಕೆಂದು ವಿನಂತಿಸುತ್ತೇನೆ. ರಾಮ್‌ತಾಳ್ ಯೋಜನೆಗೆ ಈಗಾಗಲೇ ಸರ್ಕಾರವು ಹಣವನ್ನು ಖರ್ಚು ಮಾಡಿದ್ದು, ಅಲ್ಲಿ ಇಸ್ರೇಲ್ ಮಾದರಿಯನ್ನು ಅಳವಡಿಸಿದರೆ ಸರ್ಕಾರಕ್ಕೆ ಹೊಸ ಪ್ರಯೋಗ ಮಾಡುವುದು ತಪ್ಪುತ್ತದೆ. ಒಟ್ಟಿನಲ್ಲಿ ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಭಾಗಗಳನ್ನು ಇಸ್ರೇಲ್ ಮಾದರಿಗೆ ಆಯ್ಕೆ ಮಾಡಿಕೊಂಡು, ತೋಟಗಾರಿಕಾ ವಿಶ್ವವಿದ್ಯಾಲಯಕ್ಕೆ ಜವಾಬ್ದಾರಿಯನ್ನು ಕೊಡಬೇಕು. ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಇಸ್ರೇಲ್ ಮಾದರಿಯೂ ಒಂದಾಗಿದ್ದು, ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಈ ಸಂದರ್ಭದಲ್ಲಿ ಐತಿಹಾಸಿಕ ನಿರ್ಧಾರವನ್ನು ತೆಗೆದುಕೊಂಡು ಈ ಭಾಗಗಳಲ್ಲಿ ಇಸ್ರೇಲ್ ಮಾದರಿಯನ್ನು ಅಳವಡಿಸಬೇಕು. ನೀರಿನ ವ್ಯವಸ್ಥೆ ಹಾಗೂ ಭೂಮಿ ಹಾಗೂ ಫಲವತ್ತಾದ ಮಣ್ಣು ಮತ್ತು ಹವಾಮಾನ ಇದೆ. ವಿಶೇಷವಾಗಿ ಹಣ್ಣುಹಂಪಲು ಬೆಳೆಯಲು ಶ್ರೇಷ್ಠ ಭೂಮಿ ಇರುವುದರಿಂದ ಈ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ತಿಳಿಸಿ, ಸಮಯದ ಅಭಾವ ಇರುವುದರಿಂದ ನಾನು ಹೆಚ್ಚು ಮಾತನಾಡದೇ, ಮಾನ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸಭಾಪತಿಯವರು:- ನಿಯಮ 68ರ ಮುಂದುವರೆದ ಚರ್ಚೆಯನ್ನು ನಾಳೆಗೆ ಮುಂದುವರೆಸೋಣ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

**8. ಗಮನ ಸೆಳೆಯುವ ಸೂಚನೆಗಳು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅ): ಬಾಪೂಜಿ ಸೇವಾ ಕೇಂದ್ರಗಳಲ್ಲಿ ಸಿಬ್ಬಂದಿಗಳನ್ನು ನೇಮಿಸದಿರುವುದು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸದಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಕುರಿತು

ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಬಾಪೂಜಿ ಸೇವಾ ಕೇಂದ್ರಗಳಲ್ಲಿ ಸಿಬ್ಬಂದಿಗಳನ್ನು ನೇಮಿಸದಿರುವುದು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸದಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಕುರಿತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

(ಉತ್ತರವನ್ನು ಲಗತ್ತಿಸಿದೆ)

ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಸಭಾಪತಿಯವರೇ, ಉತ್ತರವನ್ನು ಮಂಡನೆ ಮಾಡಿದ್ದು, ಸಾರಾಂಶವನ್ನು ಹೇಳಬಯಸುತ್ತೇನೆ. ಬಾಪೂಜಿ ಸೇವಾ ಕೇಂದ್ರಗಳಲ್ಲಿ ನಾನಾ ಸೇವೆಗಳನ್ನು ಒದಗಿಸುತ್ತಿದ್ದು, ಅಲ್ಲಿನ ಕೆಲಸಗಳು ಸಮರ್ಪಕವಾಗಿ ಆಗಲು ಅಗತ್ಯವಿರುವ ಸಿಬ್ಬಂದಿ ಮತ್ತು ಇತರೆ ಸೌಲಭ್ಯ ಕೊಡಬೇಕೆಂದು ಒತ್ತಾಯ ಮಾಡಿದ್ದಾರೆ. ಅಲ್ಲದೇ ದರದ ಬಗ್ಗೆ ಗಮನ ಸೆಳೆದಿದ್ದಾರೆ. ದರಕ್ಕೆ ಸಂಬಂಧಪಟ್ಟಂತೆ ರೂ.10 ರಲ್ಲಿ ರೂ.5 ಗಳು ಗ್ರಾಮ ಪಂಚಾಯಿತಿಗೆ ಹೋಗುತ್ತದೆ ಮತ್ತು ರೂ.5 ಗಳು ಕಂದಾಯ ಇಲಾಖೆಯ ಮೂಲಕ ಭೂಮಿ Cell ಗೆ ಹೋಗುತ್ತದೆ. ದರದ ಮೂಲ ಕರಾರು ಇದೇ ರೀತಿ ಇದೆ. ಈಗ ಕಂದಾಯ ಇಲಾಖೆಯವರು ರೂ.15ಕ್ಕೆ ದರವನ್ನು ಪರಿಷ್ಕರಣೆ ಮಾಡಿದ್ದು, ಇದಾದ ನಂತರ ನಾವು ಅವರೊಡನೆ ಒಡಂಬಡಿಕೆ ಮಾಡಿಕೊಳ್ಳಬೇಕಾಗುತ್ತದೆ. ಇನ್ನೂ ಈ ವಿಚಾರ ಚರ್ಚೆಗೆ ಬಂದಿಲ್ಲ. ಈ ಸೌಲಭ್ಯಗಳನ್ನು ಕೊಡಲು Data Entry Operator ಗಳ ಬಗ್ಗೆ ಪ್ರಸ್ತಾಪ ಮಾಡಿದ್ದು, ಮಾನ್ಯ ಸದಸ್ಯರಿಗೆ ಎಲ್ಲಾ ವಿಚಾರ ಗೊತ್ತಿದೆ. ಹಿಂದೆ ಸಹ ಇದರ ವಿಚಾರ ಚರ್ಚೆಯಾಗಿದ್ದು, ನೇಮಕಾತಿ ಮಾಡುವಾಗ ಮೀಸಲಾತಿ ಸೌಲಭ್ಯ ಸಿಗುತ್ತಿಲ್ಲ ಎಂದು ಸಂಪುಟದ ಉಪ ಸಮಿತಿಯವರು ನಮ್ಮ ಇಲಾಖೆಯವರನ್ನು ಕರೆಸಿಕೊಂಡು ಮೀಸಲಾತಿ ಸೌಲಭ್ಯ ಸಿಗುವಂತೆ ಮಾಡುವ ಸಲಹೆಯನ್ನು ಕೊಟ್ಟಿದ್ದರು. ಅದಾದ ಮೇಲೆ ತಾಲ್ಲೂಕು ಮಟ್ಟದಲ್ಲಿ ಕ್ರೋಢೀಕರಿಸಿ ಮಾಡಲು ಹೋದರು. ನಂತರ ಹೈದ್ರಾಬಾದ್-ಕರ್ನಾಟಕ ಭಾಗದವರು ಅವರಿಗೆ reservation ಬರಬೇಕೆಂದು ತಕರಾರು ಅರ್ಜಿ ಕೊಟ್ಟರು. ನಂತರ ವಿಕಲ ಚೇತನರು ಒಂದು ತಕರಾರು ಅರ್ಜಿ ಕೊಟ್ಟು, ನಂತರ ಕೋರ್ಟ್‌ನಿಂದ ಒಂದು ಸೂಚನೆಯನ್ನು ಕೊಡಿಸಿದ್ದಾರೆ. ಇವೆಲ್ಲಾ ಕಾರಣಗಳಿಂದ ವಿಳಂಬವಾಗಿದೆ. ಕಾರ್ಯಭಾರ ಹೆಚ್ಚಿದ್ದು ಅವಶ್ಯಕ ಇರುವ ಕಡೆ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚುವರಿ Data Entry Operator ಗಳನ್ನು ತೆಗೆದುಕೊಳ್ಳಲು ಅನುಮತಿಯನ್ನಾದರೂ ಕೊಡಬೇಕು ಅಥವಾ ಹಿಂದೆ ತಾಲ್ಲೂಕು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯಿತಿ ಲೆವೆಲ್‌ನಲ್ಲಿ aggregate ಮಾಡಿದ ನಂತರ ಮಾಡಲು ಹೊರಟಿದ್ದರು. ಯಾವುದಾದರೂ ಒಂದು ರೂಪದಲ್ಲಿ ಯಾವ ಗ್ರಾಮ ಪಂಚಾಯಿತಿಗಳಿಗೆ ನಿಜವಾಗಿ ಹೆಚ್ಚುವರಿ Data Entry Operator ಗಳ ಅವಶ್ಯಕತೆಯಿರುವಲ್ಲಿ ಅನುಮತಿಯನ್ನಾದರೂ ಕೊಡಬೇಕು ಎನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯ ಇದೆ. ಇದಕ್ಕೆ ಸರ್ಕಾರದ ಸಹಮತಿ ಸಹ ಇದೆ. ಮೂರ್‍ನಾಲ್ಕು issues ಸೇರಿಕೊಂಡು complicated ಆಗಿ ನಿಂತಿದೆ. ಅದನ್ನು ಪರಿಹರಿಸಬೇಕಾದ ಜವಾಬ್ದಾರಿ ನಮ್ಮ ಮೇಲೆ ಇದೆ. ಇಲ್ಲಿ ಅವಶ್ಯಕತೆ ಎಂದರೆ ಹೆಚ್ಚು R.T.C. issue ಆಗುವ ಮತ್ತು ಬಾಪೂಜಿ ಸೇವಾ ಕೇಂದ್ರಗಳು ಹೆಚ್ಚು ಬಳಕೆ ಆಗುತ್ತಿರುವಲ್ಲಿ ಕನಿಷ್ಠ ಹೆಚ್ಚುವರಿ ಸಿಬ್ಬಂದಿ ತೆಗೆದುಕೊಳ್ಳಲು ಅನುಮತಿ ಕೊಡಬೇಕು. ಇದನ್ನು ಆದಷ್ಟು ಬೇಗ ಪರಿಹರಿಸುತ್ತೇನೆ.

ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಬಾಪೂಜಿ ಕೇಂದ್ರಗಳು ಬಹಳ ಒಳ್ಳೆಯ ಕೆಲಸ ಮಾಡಿ ಜನರಿಗೆ ಉಪಯೋಗ ನೀಡುತ್ತಿದೆ. ಜನರಿಗೆ ಶೀಘ್ರ ರೀತಿಯಲ್ಲಿ ಕೆಲಸಗಳು ಆಗುತ್ತವೆ ಮತ್ತು ಗ್ರಾಮದಿಂದ District Head Quarters ಗೆ ಬರುವ ಕೆಲಸ ತಪ್ಪುತ್ತದೆ ಎಂದು ಬಾಪೂಜಿ ಕೇಂದ್ರಗಳನ್ನು ಮಾಡಿದ್ದಾರೆ. ಆದರೆ ಆ ಉದ್ದೇಶ ಈಡೇರಿಲ್ಲ ಎಂದು ನನಗೆ ಅನಿಸುತ್ತಿದೆ. ಏಕೆಂದರೆ ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಮಾತನಾಡುವಾಗ ಸುಮಾರು 104 ಗ್ರಾಮ ಪಂಚಾಯಿತಿಗಳು ಇವೆ. ಅಲ್ಲಿ ಸುಮಾರು 66 P.D.O. (Panchayath Development Officer) ಗಳು ಕೆಲಸ ಮಾಡುತ್ತಿದ್ದು, ಉಳಿದ ಕಡೆ ಇಲ್ಲ. ಬಾಪೂಜಿ ಕೇಂದ್ರದಲ್ಲಿ Data Entry Operator ಗಳು incharge ಆಗಿ ಕೆಲಸ ಮಾಡುತ್ತಿದ್ದು, ಪ್ರತ್ಯೇಕ ನೇಮಕಾತಿ ಮಾಡಿಲ್ಲ. ಮಾನ್ಯ ಸಚಿವರು ಕೋರ್ಟ್‌ನ ತಡೆಯಾಜ್ಞೆ ಹಾಗೂ ನೇಮಕಾತಿ ಮಾಡಲು ಬೇರೆ ಬೇರೆ ಅಡೆತಡೆ ಇರುವ ಬಗ್ಗೆ ತಿಳಿಸಿದ್ದಾರೆ. ಇದರ ಉದ್ದೇಶ ಒಳ್ಳೆಯದಿದ್ದು, ಮಹಾತ್ಮ ಗಾಂಧಿಯವರು ರಾಮರಾಜ್ಯದ ಕನಸನ್ನು ನನಸು ಮಾಡಲು ಒಳ್ಳೆಯ ಕಾರ್ಯಕ್ರಮವಾಗಿದೆ. ಇದರಲ್ಲಿ ಸುಮಾರು 100 ಸೇವೆಗಳು ಸಿಗುತ್ತವೆ. ಕಂದಾಯ ಇಲಾಖೆಯ 40 ಸೇವೆಗಳು, 17 ಇತರ ವಾಣಿಜ್ಯ ಸೇವೆಗಳು ಮತ್ತು ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆ 43 ಸೇವೆಗಳು ಸಿಗುತ್ತಿದ್ದು, ಒಟ್ಟು 100 ಸೇವೆಗಳು ಸಿಗುತ್ತವೆ. ಆದರೆ ಅಲ್ಲಿ ಕೆಲಸದವರು ಇಲ್ಲದೇ ಪರಿಸ್ಥಿತಿ ಹಾಳಾಗಿದೆ. ಅಲ್ಲಿನ systems ಮತ್ತು U.P.S. (Uninterrupted Power Supply) ಸರಿ ಇರುವುದಿಲ್ಲ. ಕೊಡಗಿನಲ್ಲಿ ಮಳೆಗಾಲದಲ್ಲಿ ಕರೆಂಟ್ ಇಲ್ಲದೇ ಕೆಲಸಗಳು ಆಗುತ್ತಿಲ್ಲ. ಆದ್ದರಿಂದ ಪ್ರತ್ಯೇಕವಾಗಿ generator and system ಕೊಡುವ ವ್ಯವಸ್ಥೆ ಆಗಬೇಕು. ಕೊಡಗು hill station ಆಗಿದ್ದು, ಹಳ್ಳಿಯಿಂದ ಬರುವವರಿಗೆ ಒಂದು ದಿನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕಾಗುತ್ತದೆ. ಯಾವುದೇ ಗಡಿ ಭಾಗದಿಂದ ಬರಲು ಸುಮಾರು 200 ಕಿ.ಮೀ ವರೆಗೂ ಆಗುತ್ತದೆ. ಬೆಂಗಳೂರು ಸಿಟಿಯಲ್ಲಿ ಒಂದು parliament area 5 ಕಿ.ಮೀ ಒಳಗೆ ಬರುತ್ತದೆ. ಆದರೆ ನಮ್ಮಲ್ಲಿ ಒಂದು ಗ್ರಾಮ ಪಂಚಾಯಿತಿಗೆ ಬರಲು ಬಸ್ ಸಿಕ್ಕಿ ಆ ಬಸ್‌ನಲ್ಲಿ ಬರಬೇಕು. ಬಂದ ನಂತರ ಕರೆಂಟ್ ಇರುವುದಿಲ್ಲ. ಇಂತಹ ಪರಿಸ್ಥಿತಿಗಳು ಇರುವುದಿಲ್ಲ. ಆದ್ದರಿಂದ U.P.S. ವ್ಯವಸ್ಥೆ ಅಳವಡಿಸಬೇಕು. ಅಲ್ಲದೇ ಅಲ್ಲಿ P.D.O. ಗಳನ್ನು ಕೊಡಬೇಕೆಂದು ಮಾನ್ಯ ಗ್ರಾಮೀಣ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

(ಮುಂದು)

**(536)18-12-2018(5-30)ಹೆಚ್‌ವಿಃಬಿಎನ್‌ಎಸ್**

(ಸಭಾಪತಿಯವರು ಉಪಸ್ಥಿತಿ)

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಾನು ಬಾಪೂಜಿ ಸೇವಾ ಕೇಂದ್ರದ ಬಗ್ಗೆ ಸದನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು "ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಬಾಪೂಜಿ ಸೇವಾ ಕೇಂದ್ರಗಳನ್ನು ನೀಡಲಾಗಿದೆ" ಎನ್ನುವ ಉತ್ತರವನ್ನು ಕೊಟ್ಟಿದ್ದರು. ಮಾನ್ಯ ಸಚಿವರು ಕೊಟ್ಟಿದ್ದ ಉತ್ತರವನ್ನು ನನ್ನ ಜಿಲ್ಲೆಯ ಪತ್ರಿಕೆಗೆ ಕಳುಹಿಸಿಕೊಟ್ಟಿದ್ದೆ. ಪತ್ರಿಕೆಗೆ ಆ ಉತ್ತರವನ್ನು ಕಳುಹಿಸಿಕೊಟ್ಟ ಕ್ಷಣದಿಂದ ಇಡೀ ರಾತ್ರಿ 'ಬಾಪೂಜಿ ಸೇವಾ ಕೇಂದ್ರ ಎಲ್ಲಿದೆ?' ಎನ್ನುವ ಫೋನ್ ಕರೆಗಳು ನನಗೆ ಬರುವುದಕ್ಕೆ ಪ್ರಾರಂಭವಾಯಿತು.

ಸನ್ಮಾನ್ಯ ಸಭಾಪತಿಯವರೇ, ನಾನು ಸುಮಾರು 227 ಗ್ರಾಮಪಂಚಾಯಿತಿಗಳನ್ನು ಪ್ರತಿನಿಧಿಸುತ್ತಿದ್ದೇನೆ. ಈ 227 ಗ್ರಾಮ ಪಂಚಾಯಿತಿಗಳಲ್ಲಿ ಎಲ್ಲಿಯೂ 'ಬಾಪೂಜಿ ಸೇವಾ ಕೇಂದ್ರ' ಎನ್ನುವ ಫಲಕವನ್ನು ಹಾಕಿಲ್ಲ ಮತ್ತು ಯಾವ ಅಧಿಕಾರಿಗಳನ್ನು ಸಹ ನೇಮಕ ಮಾಡಿಲ್ಲ. 'ಬಾಪೂಜಿ ಸೇವಾ ಕೇಂದ್ರ' ಪ್ರಾರಂಭವಾದರೆ, ಪಾಣಿ ಮತ್ತು ಪಟ್ಟೆ ಸಿಗುತ್ತದೆ. ಈ ಕೇಂದ್ರಕ್ಕೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಪಂಚಾಯಿತಿಯ ಮುಖಾಂತರ ಕೊಡಬೇಕು ಎನ್ನುವುದು ಸರ್ಕಾರದ ವತಿಯಿಂದ ತೀರ್ಮಾನವಾಗಿದೆ ಎಂದು ನಾನು ಹೇಳಿದ್ದೆ. ಆಗ ಅಲ್ಲಿನ ಜನರು 'ಬಾಪೂಜಿ ಸೇವಾ ಕೇಂದ್ರ ಸ್ಥಾಪನೆಯಾಗಿರುವ ಒಂದು ಉದಾಹರಣೆಯನ್ನು ನಮಗೆ ಕೊಡಿ. ನಿಮಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟ ಕೂಡಲೇ ಅದನ್ನು ಒಪ್ಪಿಕೊಂಡು ತಾವು ಪತ್ರಿಕೆಗಳಿಗೆ ಸುದ್ದಿಯನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ತಾವು ಮಾಹಿತಿಯನ್ನು ಸಂಗ್ರಹ ಮಾಡಿದ್ದೀರಾ' ಎನ್ನುವ ಪ್ರಶ್ನೆಗಳನ್ನು ನನಗೆ ಕೇಳಿದ್ದರು. ನಾನು ಕೂಡಲೇ ಸಂಬಂಧಪಟ್ಟ ಪಿ.ಡಿ.ಓ.ಗಳಿಗೆ ಮತ್ತು ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಈ ಬಗ್ಗೆ ವಿಚಾರಿಸಿದಾಗ, ಅವರು 'ನಾವು ಕೇವಲ ಇ-ಸ್ವತ್ತನ್ನು ಮಾತ್ರ ಪಂಚಾಯಿತಿಯಿಂದ ಕೊಡುವಂತಹ ಕೆಲಸವಾಗಿದೆಯೇ ಹೊರತು ಇತರೆ ಯಾವುದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೌಲಭ್ಯಗಳನ್ನು ಬಾಪೂಜಿ ಸೇವಾ ಕೇಂದ್ರದಿಂದ ಕೊಡುವಂತಹ ಕೆಲಸವಾಗುತ್ತಿಲ್ಲ' ಎನ್ನುವ ಮಾತುಗಳನ್ನು ಹೇಳಿದ್ದರು.

ಸನ್ಮಾನ್ಯ ಸಭಾಪತಿಯವರೇ, ನನ್ನ 227 ಗ್ರಾಮ ಪಂಚಾಯಿತಿಗಳಲ್ಲಿ 6 ಗ್ರಾಮ ಪಂಚಾಯಿತಿಗಳ ಪಿ.ಡಿ.ಓ.ಗಳು ಸ್ವಲ್ಪ ಮಟ್ಟಿಗೆ ಹುರುಪಿನಿಂದ ಕೆಲಸ ಮಾಡಿರುವ ಪರಿಣಾಮವಾಗಿ ಇ-ಸ್ವತ್ತು ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗಿದೆ. ವಿದ್ಯುತ್ ಸಮಸ್ಯೆಯಿಂದಾಗಿ ಗ್ರಾಮಪಂಚಾಯಿತಿಗಳ ಕೆಲಸಕಾರ್ಯಗಳಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ನನಗೆ ಸರ್ಕಾರ ಕೊಡುವಂತಹ ಎರಡು ಕೋಟಿ ಅನುದಾನದಿಂದ ಸುಮಾರು 95 ಜನರೇಟರ್‌ಗಳನ್ನು ಗ್ರಾಮಪಂಚಾಯಿಗಳಿಗೆ ಕೊಡುವಂತಹ ಕೆಲಸವನ್ನು ಮಾಡಿದ್ದೇನೆ. ಪುನಃ ಈ ಕಂತಿನಲ್ಲಿ ಸುಮಾರು 50 ಗ್ರಾಮ ಪಂಚಾಯಿತಿಗಳಿಗೆ ಜನರೇಟರ್‌ಗಳನ್ನು ಕೊಡುವಂತಹ ಕೆಲಸ ಮಾಡುತ್ತಿದ್ದೇನೆ. ವಿಧಾನ ಪರಿಷತ್ತಿನ ಸದಸ್ಯರ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಜನರೇಟರ್ ಕೊಡುವುದಕ್ಕೆ ಅವಕಾಶ ಇರಲಿಲ್ಲ. ಈ ವಿಚಾರವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ, ವಿಧಾನ ಪರಿಷತ್ತಿನ ಸದಸ್ಯರ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಜನರೇಟರ್ ಕೊಡುವಂತಹ ವ್ಯವಸ್ಥೆ ಮಾಡಿಸಿದೆ. ಗ್ರಾಮಪಂಚಾಯಿತಿಗಳು ವಿದ್ಯುತ್ ಸಮಸ್ಯೆಯನ್ನು ಎದುರಿಸಬಾರದು ಎನ್ನುವ ದೃಷ್ಟಿಯಿಂದ ನಾನು ಈ ಕೆಲಸವನ್ನು ಮಾಡಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನನಗೆ ಬೇಸರದ ಸಂಗತಿ ಏನೆಂದರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಸ್ಥಳೀಯ ಸಂಸ್ಥೆಗಳ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಕರೆದಿದ್ದ ಸಭೆಯಲ್ಲಿ ಈ ಕ್ಷೇತ್ರದಲ್ಲಿರುವ ಸಾಕಷ್ಟು ಸಮಸ್ಯೆಗಳನ್ನು ನಾವು ಅವರ ಗಮನಕ್ಕೆ ತಂದಿದ್ದೆವು. ಅವರು ಈ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತೇವೆಂದು ಹೇಳಿ ಬಹಳಷ್ಟು ಸಮಯ ಕಳೆದು ಹೋಗಿದೆ. ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಸಹ ಮುಂದಿಟ್ಟಿಲ್ಲ. ಮೊನ್ನೆ ಬಾಪೂಜಿ ಸೇವಾ ಕೇಂದ್ರದ ಬಗ್ಗೆ ನಾನು ಕೇಳಿದ ಪ್ರಶ್ನೆಗೆ ಅವರು ಕೊಟ್ಟಿರುವ ಉತ್ತರವನ್ನು ನೋಡಿ, ಏತಕ್ಕೋಸ್ಕರ ಅವರು ಇಂತಹ ಉತ್ತರವನ್ನು ಕೊಟ್ಟಿದ್ದಾರೆ ಎನ್ನುವ ಪ್ರಶ್ನೆ ಉದ್ಭವವಾಯಿತು. ತಿಳುವಳಿಕೆ ಇರುವಂತಹ, ಈ ಮಂತ್ರಿ ಮಂಡಲದಲ್ಲಿ ಒಳ್ಳೆಯ ಮಂತ್ರಿ ಎಂದು ಹೆಸರು ಪಡೆದುಕೊಂಡಿರುವಂತಹ ಮಾನ್ಯ ಕೃಷ್ಣಭೈರೇಗೌಡರಿಂದ ನಾವು ಇಂತಹ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ನನ್ನ ಪ್ರಶ್ನೆಗೆ ತಪ್ಪು ಉತ್ತರವನ್ನು ನೀಡಿರುವುದು, ನಾನು ಅವರ ಉತ್ತರವನ್ನು ಪತ್ರಿಕೆಗೆ ಕಳುಹಿಸಿಕೊಟ್ಟ ನಂತರ ಜನರು ನನ್ನನ್ನು ಪ್ರಶ್ನೆ ಮಾಡಿರುವುದು ಇವೆಲ್ಲವೂ ಎಷ್ಟು ಸರಿ ಎನ್ನುವುದು ನನ್ನ ಪ್ರಶ್ನೆಯಾಗಿದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಪ್ರಾಣೇಶ್‌ರವರೇ, ತಮ್ಮ ಮಾತುಗಳನ್ನು ಇಲ್ಲಿಗೆ ಮುಗಿಸಿ. ತಮಗೆ ಮಾತನಾಡಲು ಎರಡು ನಿಮಿಷಗಳ ಕಾಲಾವಕಾಶವನ್ನು ನೀಡಲಾಗಿತ್ತು, ಮಾನ್ಯ ಕೆ.ಪಿ.ನಂಜುಂಡಿಯವರು ತಮ್ಮ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಎರಡು ದಿನಗಳಿಂದ ಕಾಯುತ್ತಿದ್ದಾರೆ. ಅವರಿಗೂ ಅವಕಾಶವನ್ನು ಕೊಡಬೇಕಾಗಿದೆ. ಈ ವಿಚಾರಕ್ಕೆ ಸಂಬಂಧಪಟ್ಟ ಗಮನ ಸೆಳೆಯುವ ನೋಟಿಸ್‌ಗೆ ಯಾರು ಸಹಿ ಮಾಡಿದ್ದಾರೆ ಅವರಿಗೆ ಮಾತ್ರ ಮಾತನಾಡಲು ಅವಕಾಶವನ್ನು ನೀಡಲಾಗುತ್ತಿದೆ. ಬೇರೆ ಯಾರಿಗೂ ಅವಕಾಶವನ್ನು ನೀಡಲಾಗುವುದಿಲ್ಲ.

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ಈ ವ್ಯವಸ್ಥೆಯಲ್ಲಿರುವ ಕೊರತೆಗಳನ್ನು ಮತ್ತು ಅವುಗಳನ್ನು ಸುಧಾರಿಸುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಈ ವ್ಯವಸ್ಥೆಯನ್ನು ಸುಧಾರಿಸುವ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, 'ಬಾಪೂಜಿ ಸೇವಾ ಕೇಂದ್ರ' ಯೋಜನೆಯನ್ನು 2016ನೇ ಜುಲೈ 1ರಂದು ಪ್ರಾರಂಭ ಮಾಡಲಾಯಿತು. ಪ್ರಥಮ ಹಂತದಲ್ಲಿ ರಾಜ್ಯದ ಸುಮಾರು ಎರಡು ಸಾವಿರ ಗ್ರಾಮಪಂಚಾಯಿತಿಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ನಂತರ ಈಗ ಸುಮಾರು 5,411 ಗ್ರಾಮಪಂಚಾಯಿತಿಗಳಲ್ಲಿ 'ಬಾಪೂಜಿ ಸೇವಾ ಕೇಂದ್ರ'ವನ್ನು ಪ್ರಾರಂಭ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೊಂದು ಸಾವಿರ ಕೇಂದ್ರಗಳನ್ನು ಪ್ರಾರಂಭಗೊಳಿಸಿದರೆ ಈ ಯೋಜನೆಯನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸಿದಂತೆ ಆಗುತ್ತದೆ ಎನ್ನುವ ದೃಷ್ಟಿಯಿಂದ ಸರ್ಕಾರ ಈ ಕ್ರಮವನ್ನು ಕೈಗೊಂಡಿರಬಹುದೆಂದು ನಾನು ಭಾವಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, 'ಬಾಪೂಜಿ ಸೇವಾ ಕೇಂದ್ರ'ವನ್ನು ತೆರೆಯುವಂತಹ ಸಂದರ್ಭದಲ್ಲಿ 'ಸಾಮಾನ್ಯ ಜನರು ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಿಗೆ ಅಲೆದಾಡಬಾರದು, ಅವರು ನೇರವಾಗಿ ತಮ್ಮ ಗ್ರಾಮ ಪಂಚಾಯಿತಿಗಳಲ್ಲಿಯೇ ಅವರಿಗೆ ಬೇಕಾಗಿರುವ ಸವಲತ್ತುಗಳನ್ನು ಪಡೆಯಬೇಕು' ಎನ್ನುವುದು ಸರ್ಕಾರದ ಆಶಯವಾಗಿತ್ತು. ಆ ಸಂದರ್ಭದಲ್ಲಿ 'ಇದು ಅಧಿಕಾರ ವಿಕೇಂದ್ರೀಕರಣದ ಕಡೆಗೆ ಇಟ್ಟಂಥ ದಿಟ್ಟ ಹೆಜ್ಜೆ' ಎಂದು ನಾವು ಹೇಳಿದ್ದೆವು. ಸರ್ಕಾರವೇ ಹೇಳಿರುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಸಂಬಂಧಪಟ್ಟಂತೆ ಸುಮಾರು 43 ಸೇವೆಗಳು, ಕಂದಾಯ ಇಲಾಖೆಗೆ ಸಂಬಂಧಪಟ್ಟ 40 ಸೇವೆಗಳು ಇನ್ನಿತರ 17 ಸೇವೆಗಳು ಅಂದರೆ, ಬಸ್, ರೈಲ್ವೆ ಮತ್ತು ವಿಮಾನ ಟಿಕೆಟ್‌ಗಳನ್ನು ಬುಕ್ ಮಾಡುವಂತಹ ಸೇವೆಗಳು ಹೀಗೆ ಒಟ್ಟಿಗೆ 100 ಸೇವೆಗಳನ್ನು ಕಲ್ಪಿಸಿಕೊಡಲಾಗಿದೆ. ಸರ್ಕಾರ ಈ 100 ಸೇವೆಗಳನ್ನು ಯಥಾವತ್ತಾಗಿ ಅನುಷ್ಠಾನಗೊಳಿಸುವಂತಹ ಶಕ್ತಿ ಮತ್ತು ಸಾಮರ್ಥ್ಯವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

'ಬಾಪೂಜಿ ಸೇವಾ ಕೇಂದ್ರ'ಗಳಿಗೆ ಕೊಟ್ಟರೆ, ಯಾವುದೇ ಗ್ರಾಮದಲ್ಲಿರುವ ಸಾಮಾನ್ಯ ರೈತನಿಂದ ಹಿಡಿದು ಎಲ್ಲರೂ ಕೂಡ ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಿಗೆ ಅಲೆದಾಡುವುದನ್ನು ತಪ್ಪಿಸಲಾಗುತ್ತದೆ ಎನ್ನುವುದು ಈ ವ್ಯವಸ್ಥೆಯ ಮೂಲ ಧ್ಯೇಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯವರು ನೀಡುತ್ತಿರುವ 40 ಸೇವೆಗಳಲ್ಲಿ ಜನರಲ್ ಸರ್ಟಿಫಿಕೇಟ್‌ಗಳು, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಹಿಂದುಳಿದ ಜಾತಿ ಪ್ರಮಾಣಪತ್ರ, ಅನುಸೂಚಿತ ಜಾತಿ ಪ್ರಮಾಣ ಪತ್ರಗಳು, ವಾಸ ಪ್ರಮಾಣಪತ್ರ ಮತ್ತು ಆದಾಯ ದೃಢೀಕರಣ ಪತ್ರವೂ ಸೇರಿದಂತೆ, ವಿಧವಾ ವೇತನ, ಅಂಗವಿಕಲ ವೇತನ, ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಮತ್ತು ಬಡವರಿಗಾಗಿ ರಚಿಸಲ್ಪಟ್ಟಿರುವ ಎಲ್ಲ ಕಲ್ಯಾಣ ಯೋಜನೆಗಳು ಅನುಷ್ಠಾನಗೊಳ್ಳಬೇಕು ಎನ್ನುವುದು ಇದರ ಕಲ್ಪನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಈ ಯೋಜನೆ ಜಾರಿಯಾಗಿ ಸುಮಾರು ಎರಡು ವರ್ಷಗಳಾಗುತ್ತಾ ಬಂದಿದೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾಗಿದ್ದ ಕಾಲದಲ್ಲಿ ಇದು ಅವರ ಕಲ್ಪನೆಯಾಗಿತ್ತು. ಅವರ ಕಲ್ಪನೆ ಎಂದರೆ ಆಗಿನ ಸರ್ಕಾರದ ಕಲ್ಪನೆಯಾಗಿತ್ತು. ಈಗ ಮಾನ್ಯ ಕೃಷ್ಣಭೈರೇಗೌಡರು ಆ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ 100 ಸೇವೆಗಳಲ್ಲಿ ಒಂದೆರಡು ಸೇವೆಗಳನ್ನು ಹೊರತು ಪಡಿಸಿದರೆ ಉಳಿದ 98 ಸೇವೆಗಳಲ್ಲಿ ಒಂದೇ ಒಂದು ಸೇವೆಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒದಗಿಸಿಕೊಡಲಾಗಿದೆಯೆಂದು ಅವರು ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಈ ಯೋಜನೆಯಿಂದ ಬಡವರ ಮನೆ ಬಾಗಿಲಿಗೆ ಸರ್ಕಾರದ ಸವಲತ್ತುಗಳು ಸಿಗುವಂತಾಗುತ್ತದೆ ಎನ್ನುವ ಕಾರಣಕ್ಕಾಗಿ ನಾವು 'ಬಾಪೂಜಿ ಸೇವಾ ಕೇಂದ್ರ'ವನ್ನು ಸ್ವಾಗತಿಸಿದ್ದೇವೆ. ಈಗಲೂ ನಮಗೆ ಅದೇ ಕಲ್ಪನೆಯಿದೆ. ಆದರೆ, ಸರ್ಕಾರ ಈ ನಿಟ್ಟಿನಲ್ಲಿ ಒಂದೇ ಒಂದು ಹೆಜ್ಜೆಯನ್ನು ಮುಂದಿಡುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣಭೈರೇಗೌಡರು ಈ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡ ಸಂದರ್ಭದಲ್ಲಿ ನಮ್ಮನ್ನೆಲ್ಲ ಕರೆದು ಮಾತನಾಡಬೇಕೆಂದು ವಿನಂತಿ ಮಾಡಿದ ಹಿನ್ನೆಲೆಯಲ್ಲಿ ಅವರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾದ 25 ಜನ ಸದಸ್ಯರನ್ನು ಕರೆದು ಸುಮಾರು 17 ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದರು. ಈ 17 ವಿಚಾರಗಳಲ್ಲಿ ಬಹಳಷ್ಟು ವಿಚಾರಗಳನ್ನು ಒಪ್ಪಿಕೊಂಡಿದ್ದರು. ಬೆಳಿಗ್ಗೆ 11 ಗಂಟೆಗೆ ಪ್ರಾರಂಭವಾದ ಆ ಸಭೆ ಮಧಾಹ್ನ 3 ಗಂಟೆಯವರೆಗೆ ನಡೆಯಿತು. ಅವರ ತಾಳ್ಮೆಯನ್ನು ಕಂಡು ನನಗೆ ಅಚ್ಚರಿಯಾಗಿತ್ತು. ಏಕೆಂದರೆ ಬೇರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ಮಂತ್ರಿಗಳು ಇಷ್ಟು ಸಮಯ ಕುಳಿತು ಸಭೆ ನಡೆಸಿಲ್ಲ. ಆದರೆ, ಇಲ್ಲಿಯವರೆಗೆ ಈ ವಿಚಾರವಾಗಿ ಒಂದೇ ಒಂದು ಹೆಜ್ಜೆಯನ್ನು ಮುಂದಿಟ್ಟಿಲ್ಲ.

**ಸಭಾಪತಿಯವರುಃ–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಅಪರೂಪಕ್ಕೆ ಸ್ಥಳೀಯ ಸಂಸ್ಥೆಗಳ ಮೇಲೆ ಚರ್ಚೆ ನಡೆಯುತ್ತಿದೆ. ಪಂಚಾಯತ್‌ರಾಜ್ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುವುದೇ ಕಡಿಮೆ.

**ಸಭಾಪತಿಯವರುಃ–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ಗಮನಸೆಳೆಯುವ ಸೂಚನೆಯಾಗಿದೆ. ಅರ್ಧಗಂಟೆ ಚರ್ಚೆಯಡಿಯಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಿದ್ದರೆ ನೀವು ಎಷ್ಟು ಬೇಕಾದರೂ ಮಾತನಾಡಬಹುದಾಗಿತ್ತು.

**ಶ್ರೀ ಮಾನೆ ಶ್ರೀನಿವಾಸ್ಃ–** ಸನ್ಮಾನ್ಯ ಸಭಾಪತಿಯವರೇ, ಯಾವಾಗಲೂ ಪದವೀಧರರ ಕ್ಷೇತ್ರ ಮತ್ತು ಶಿಕ್ಷಕರ ಕ್ಷೇತ್ರಗಳಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೆಚ್ಚು ಸಮಯವನ್ನು ನೀಡಲಾಗುತ್ತದೆ. ಆದರೆ, ಈಗ ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾಗಿರುವವರು ಸಭಾಪತಿಗಳಾಗಿದ್ದಾರೆ ನಮ್ಮ ಕ್ಷೇತ್ರಕ್ಕೆ ಹೆಚ್ಚು ಸಮಯ ಸಿಗುತ್ತದೆಂದು ನಾವುಗಳು ಭಾವಿಸಿದ್ದೆವು.

**ಸಭಾಪತಿಯವರುಃ–** ಗಮನಸೆಳೆಯುವ ಸೂಚನೆಯ ನೋಟಿಸ್‌ಗೆ ಯಾರು ಸಹಿ ಮಾಡಿದ್ದಾರೆ, ಆ ಸದಸ್ಯರಿಗೆ ಮಾತನಾಡಲು ನಾನು ಅವಕಾಶವನ್ನು ನೀಡಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವ ವಿಚಾರವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಟೀಕೆಯೆಂದು ಪರಿಗಣಿಸಬಾರದು. ಸಾಮಾನ್ಯವಾಗಿ ಟೀಕೆಗಳನ್ನು ನಿಭಾಯಿಸುವುದಕ್ಕೆ ಅವರಿಗೆ ಗೊತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಗ್ರಾಮಪಂಚಾಯಿತಿಗಳಲ್ಲಿರುವ ಪಿ.ಡಿ.ಓ.ಗಳ ಹುದ್ದೆಗಳು ಈಗಾಗಲೇ ತಹಸೀಲ್ದಾರ್ ಗ್ರೇಡ್‌ನಲ್ಲಿವೆ ಎನ್ನುವ ಮಾತಿದ್ದರೂ ಸಹ ಆ ಹುದ್ದೆಯನ್ನು 'ಬಿ' ದರ್ಜೆಗೇರಿಸಿ ಎಂದು ನಾವು ಹೇಳಿದ್ದೆವು. ಕೃಷಿ ಇಲಾಖೆಯ ಡಿ.ಡಿ.ಯವರು 'ಬಿ' ದರ್ಜೆಯವರಾಗಿದ್ದಾರೆ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯರ ಹುದ್ದೆ 'ಬಿ' ದರ್ಜೆಯದಾಗಿದೆ. ಪಶು ವೈದ್ಯಾಧಿಕಾರಿಗಳ ಹುದ್ದೆಗಳು 'ಬಿ'

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದರ್ಜೆಯದಾಗಿದೆ. ಪಿ.ಡಿ.ಓ.ಗಳ ಹುದ್ದೆಯನ್ನು 'ಬಿ' ದರ್ಜೆಗೇರಿಸಿದರೆ ಅಲ್ಲಿರುವ ಯಾರೋ ಒಬ್ಬ ಬಡ ಹೆಣ್ಣುಮಗಳು ಅಥವಾ ಅಂಗವಿಕಲರು ಬಂದು ಅರ್ಜಿಯನ್ನು ಕೊಟ್ಟರೆ 24 ಗಂಟೆಗಳೊಳಗೆ ಅವರಿಗೆ ಆದೇಶ ಪ್ರತಿಯನ್ನು ಕೊಡುವಂತಹ ಅಧಿಕಾರ 'ಬಿ' ದರ್ಜೆಯಲ್ಲಿರುವ ಅಧಿಕಾರಿಗೆ ಇರುತ್ತದೆ ಎನ್ನುವುದು ನಮ್ಮ ಕಲ್ಪನೆ. ಪಿ.ಡಿ.ಓ.ಗಳನ್ನು 'ಬಿ' ದರ್ಜೆ ಅಧಿಕಾರಿಗಳನ್ನಾಗಿ ಅಥವಾ ತಹಸೀಲ್ದಾರ್‌ರನ್ನಾಗಿ ಮಾಡಬೇಕೆನ್ನುವುದು ನಮ್ಮ ಆಶಯವಲ್ಲ. ಆದರೆ, ಅಧಿಕಾರದ ವಿಕೇಂದ್ರೀಕರಣಕ್ಕೆ ಒತ್ತು ಕೊಡುವಂತಹ ಸಂದರ್ಭದಲ್ಲಿ ಗುರುತರವಾದ ಹೆಜ್ಜೆಗಳನ್ನು ಇಡಬೇಕಾಗುತ್ತದೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರು, 'ಇದು ಅತ್ಯಂತ ಜವಾಬ್ದಾರಿಯುತವಾದ ಕೆಲಸ ನೀವು ನಿರ್ಲಕ್ಷ್ಯ ಮಾಡುತ್ತಿದ್ದೀರಿ' ಎಂದು ಆರ್ಥಿಕ ಇಲಾಖೆಗೆ ಕಟುವಾಗಿ ಒಂದು ಪತ್ರ ಬರೆದಿರುವ ಮಾಹಿತಿ ನನ್ನ ಬಳಿ ಇದೆ. ಈ ಕೆಲಸವನ್ನು ಈಗಿನ ಸಚಿವರು ಮಾಡಬಹುದೆಂದು ನಾವು ಭಾವಿಸಿದ್ದೆವು. ಆದರೆ, ಅವರು ಆ ಕೆಲಸವನ್ನು ಮಾಡಿಲ್ಲ. ಈ ಸದನ ಮುಗಿಯುವುದರೊಳಗೆ ಪಿ.ಡಿ.ಓ. ಹುದ್ದೆಗಳನ್ನು 'ಬಿ' ದರ್ಜೆಗೇರಿಸುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕಾಗಿದೆ. 'ಈಗಲೇ ಪಿ.ಡಿ.ಓ.ಗಳು ನಮ್ಮ ಮಾತುಗಳನ್ನು ಕೇಳುವುದಿಲ್ಲ. ಅವರು ತಹಸೀಲ್ದಾರ್ ಆದರೆ ಹೇಗೆ ನಿಭಾಯಿಸುವುದು' ಎನ್ನುವ ಅಪಸ್ವರಗಳು ಅಲ್ಲೊಂದು ಇಲ್ಲೊಂದು ಕೇಳಿ ಬರಬಹುದು. ಇದನ್ನು ನಿಬಾಯಿಸುವಂತಹ ಶಕ್ತಿ ರಾಜ್ಯದಲ್ಲಿರುವ ಗ್ರಾಮಪಂಚಾಯಿತಿ ಸದಸ್ಯರುಗಳಿಗೆ ಇದೆ. ಇದರ ಬಗ್ಗೆ ಸರ್ಕಾರ ಯೋಚಿಸಬೇಕಾದ ಅಗತ್ಯವಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಗ್ರಾಮಪಂಚಾಯಿತಿ ಮಟ್ಟದಲ್ಲಿ ಕಂಪ್ಯೂಟರ್‌ನಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಸಂಖ್ಯೆ ಹೆಚ್ಚುಕಡಿಮೆ ಸುಮಾರು 6020 ಇರಬಹುದು. ಹಿಂದಿನ ಮಂತ್ರಿಗಳಿದ್ದಾಗ ಅವರಿಗೆ weightage ಕೊಡಬೇಕೆಂದು ಹೇಳಿದ್ದರು. ಸುಮಾರು 10-12 ವರ್ಷಗಳಿಂದ ಈ ಕೆಲಸ ಮಾಡಿಕೊಂಡಿರುವವರು ಇದ್ದಾರೆ. ಮೊನ್ನೆ ತಾನೇ ಅವರ ವೇತನವನ್ನು ಪರಿಷ್ಕರಣೆ ಮಾಡಲಾಗಿದೆ. ಈಗ ಅವರಿಗೆ ಮದುವೆಯಾಗಿ, ಮಕ್ಕಳಾಗಿ ಜವಾಬ್ದಾರಿ, ಖರ್ಚು ಹೆಚ್ಚಾಗಿರುತ್ತದೆ. ಅವರನ್ನು ಹೀಗೆ ಬಿಟ್ಟರೆ ಹೇಗೆ? ಸರ್ಕಾರ ಕೆಲವೊಮ್ಮೆ ಶಿಕ್ಷಣ ಕ್ಷೇತ್ರದಲ್ಲಿರುವ ಬುದ್ಧಿವಂತರನ್ನು ನಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾಯಿಸುತ್ತದೆ. ಒಮ್ಮೆ ಜೆ.ಓ.ಸಿ. ಶಿಕ್ಷಕರನ್ನು ಏಕಕಾಲಕ್ಕೆ ವಿಲೀನಗೊಳಿಸಲಾಗುತ್ತದೆಂದು ಹೇಳಿ ಅವರುಗಳನ್ನು ಖಾಯಂಗೊಳಿಸಲಾಯಿತು.

(ಮುಂದುವರಿದಿದೆ)

**(537) 18.12.2018 5.40 ಪಿಕೆ:ಕೆಎಸ್**

**(ಸಭಾಪತಿಗಳ ಉಪಸ್ಥಿತಿ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು)**

ಜೆಓಸಿ ಶಿಕ್ಷಕರನ್ನು ಏಕ ಕಾಲದಲ್ಲಿ ವಿಲೀನಗೊಳಿಸಿದ್ದರಿಂದ ಅವರನ್ನು ಖಾಯಂ ಮಾಡಲಾಯಿತು. ಇದೇರೀತಿ 3 ವರ್ಷದಿಂದ ಸೇವೆ ಸಲ್ಲಿಸುತ್ತಿರುವ ಆ ಬಡಪಾಯಿ ಸಿಬ್ಬಂದಿಗಳಿಗೆ ಏಕಕಾಲದಲ್ಲಿ ವಿಲೀನ ಮಾಡುತ್ತೇವೆ ಎಂದು ನಿಮ್ಮ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ ಅವರನ್ನು ಖಾಯಂ ಮಾಡಿದರೆ ನಿಮಗಾಗುವ ನಷ್ಟವೇನು? ಒಂದೇ ಸಲ ವಿಲೀನ ಮಾಡುವುದರಿಂದ ಈ ಪ್ರಕ್ರಿಯೆ ಸರಳವಾಗುತ್ತದೆ. ಅದುಬಿಟ್ಟು, 3 ಪರ್ಸೆಂಟ್ ಕೊಡುತ್ತೇವೆ, 5 ಪರ್ಸೆಂಟ್ ಕೊಡುತ್ತೇವೆ, ಹೊರಗಡೆ ಗ್ರಾಮದವರಾದರೆ 2 ಪರ್ಸೆಂಟ್ ಕೊಡುತ್ತೇವೆ ಎಂದು ಹೇಳುವ ಅವಶ್ಯಕತೆ ಸರ್ಕಾರಕ್ಕಿದೆಯೇ? ಹಿಂದೆ ಹೆಚ್ಚು–ಕಡಿಮೆ ಆಗಿರಬಹುದು. ಈಗ ತಾವು ಇದನ್ನು ಸರಿಪಡಿಸಬೇಕು ಎನ್ನುವುದು ನಮ್ಮ ಆಗ್ರಹವಾಗಿದೆ. ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಕಂದಾಯ ಇಲಾಖೆಯ ಸುಮಾರು 40 ಸೇವೆಗಳಲ್ಲಿ ಕೇವಲ RTC (Record of rights, Tenancy and Crops) ಯನ್ನು ಬಿಟ್ಟರೆ ಬೇರೆ ಯಾವುದೇ ಸೇವೆ ಸಿಗುತ್ತಿಲ್ಲ. ಹೊಸ ಸಿಬ್ಬಂದಿಗಳನ್ನು ನೇಮಕ ಮಾಡಲು ಕೇಳಿದ್ದೆವು. ಕಂಪ್ಯೂಟರ್ ಕೊಡುವ ಬಗ್ಗೆ ಹಿಂದಿನ ಮಂತ್ರಿಗಳ ಜೊತೆ ಚರ್ಚೆ ಮಾಡುವಾಗ, ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ಕೊಡುತ್ತೇವೆ, ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಒಂದೊಂದು ಕಂಪ್ಯೂಟರ್ ಕೊಡಿಸದೇ ಇರುವಷ್ಟು ಆರ್ಥಿಕ ಅಸಮರ್ಥತೆ ಸರ್ಕಾರದಲ್ಲಿಲ್ಲ ಎಂಬ ಮಾತನ್ನು ಹೇಳಿದ್ದರು. ಆಗ ನಾವು ನಿಮ್ಮಲ್ಲಿ, ನಮಗೆ ಕೊಡುವ ಅನುದಾನದಲ್ಲಿ ಕಂಪ್ಯೂಟರ್ ಒದಗಿಸಿ ಕೊಡುವುದಕ್ಕೆ ಅನುಮತಿ ಕೊಡಿ ಎಂದು ಕೇಳಿದೆವು. ನೀವು ಅದಕ್ಕೆ ಅನುಮತಿ ಕೊಟ್ಟಿರಬಹುದು; ಈ ದಿಸೆಯಲ್ಲಿ ಆದೇಶ ಬಂದಿರಬಹುದು ಅಥವಾ ಬಂದಿಲ್ಲದೇ ಇರಬಹುದು, ನನ್ನ ಗಮನದಲ್ಲಿಲ್ಲ. ಈ ಕುರಿತು ನಂತರ ನೋಡುತ್ತೇನೆ. ನಾವು ನಿಮಗೆ, ಉದ್ಯೋಗ ಖಾತ್ರಿ ಯೋಜನೆಯಿಂದ ಹಿಡಿದು ಪ್ರತಿಯೊಂದು ಕೆಲಸಗಳನ್ನು ಗ್ರಾಮ ಪಂಚಾಯಿತಿಗಳು ಮಾಡುವ ಪರಿಸ್ಥಿತಿ ಇದೆ ಎನ್ನುವುದರ ಬಗ್ಗೆ ತಿಳಿಸಿದ್ದೆವು. ಹೊರಗಿನ ವ್ಯಕ್ತಿಗಳ ಮನಸ್ಸಿನಲ್ಲಿ, ಒಂದು ಸಣ್ಣ ಗ್ರಾಮ ಪಂಚಾಯಿತಿಯಲ್ಲಿ PDO (Panchayath Development Officer) ಇರುತ್ತಾರೆ, ಸೆಕ್ರೆಟರಿಯೊಬ್ಬರು ಇರುತ್ತಾರೆ, ಒಬ್ಬ ಕಂಪ್ಯೂಟರ್ ಆಪರೇಟರ್ ಇರುತ್ತಾರೆ, ಹೀಗೆ ಒಟ್ಟು 5–6 ಜನ ಇರುತ್ತಾರೆ ಎನ್ನುವ ಲೆಕ್ಕಾಚಾರ ಇರುತ್ತದೆ. ತಾವು 10 ಗ್ರಾಮ ಪಂಚಾಯಿತಿಗಳಿಗೆ ಭೇಟಿ ಕೊಟ್ಟರೆ ಅಲ್ಲಿನ ಪರಿಸ್ಥಿತಿ ಏನು ಎನ್ನುವುದು ಅರ್ಥವಾಗುತ್ತದೆ. ಬಾಪೂಜಿ ಸೇವಾ ಕೇಂದ್ರಗಳಿಗೆ ಸಿಬ್ಬಂದಿಗಳನ್ನು ನೇಮಿಸಲು, ನಮಗೆ ಕೊಡುವ ಅನುದಾನದಲ್ಲಿ ಆ ಸಿಬ್ಬಂದಿಗಳ ವೇತನವನ್ನು ಕ್ರೋಡೀಕರಿಸಲು ನೀವು ಅನುಮತಿ ಕೊಡಬೇಕು. ಒಟ್ಟಿನಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಸಿಬ್ಬಂದಿಗಳ ನೇಮಕ ಮತ್ತು ಮೂಲಭೂತ ಸೌಕರ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದರಲ್ಲಿ ಒಂದು ಹೆಜ್ಜೆ ಕೂಡ ಮುಂದಿಟ್ಟಿಲ್ಲ. ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಕೇವಲ RTC ಬಿಟ್ಟು ಬೇರೆ ಯಾವ ಸೇವೆಯನ್ನು ಕೊಡುತ್ತಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಈಗಿರುವ ಸ್ಥಿತಿಯೇ ಮುಂದುವರೆದಿದೆ. ಬಾಪೂಜಿ ಸೇವಾ ಕೇಂದ್ರಗಳು ಬಂದು ಏನೂ ಬದಲಾವಣೆಯಾಗಿಲ್ಲ. ಅಲ್ಲದೇ, ಇತರ 17 ಸೇವೆಗಳ ಪೈಕಿ ಒಂದು ಸೇವೆಯನ್ನೂ ಕೊಟ್ಟಿಲ್ಲ. ಸೇವೆ ಉತ್ತಮಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಯೋಚನೆ ಮಾಡಿ ಕಠಿಣವಾದಂತಹ ನಿರ್ಧಾರವನ್ನು ಮತ್ತು ಯೋಚನೆಯನ್ನು ಮಾಡಬೇಕಾಗಿದೆ. 'Login' ಆಗುವಾಗಿನ ಪರಿಸ್ಥಿತಿ ಬಗ್ಗೆ ಹೇಳುವುದಾದರೆ, ಪಂಚಮಿತ್ರ ಯೋಜನೆಯಲ್ಲಿ ಒಂದು RTC ಅಥವಾ ಪಹಣಿ ಪತ್ರವನ್ನು ತೆಗೆದುಕೊಳ್ಳಬೇಕಾದರೆ, 30 ನಿಮಿಷಗಳ ನಂತರ, Login ಮಾಡಿ ಎಂಬ ಮೆಸೆಜ್ ಬರುತ್ತದೆ. ಇಲ್ಲಿ ಸರ್ವರ್‌ಗಳ ಸಮಸ್ಯೆ ಇದೆ ಎನ್ನುವುದು ನಿಮಗೂ ಗೊತ್ತಿದೆ. ಈಗ recharge ಮಾಡುವ ಅಂದರೆ, ಹಣವನ್ನು ಮೊದಲೇ ಪಾವತಿಸಬೇಕು ಎನ್ನುವ ವ್ಯವಸ್ಥೆ ಮಾಡಿದ್ದೀರಿ. ಇದೂ ಕೂಡ ಇವತ್ತು ನಿಷ್ಕ್ರಿಯೆ ಆಯಿತು, ಸಫಲವಾಗಲಿಲ್ಲ. ಮಾನ್ಯ ಸಭಾಪತಿಯವರೇ, ಡೇಟಾ ಎಂಟ್ರಿದಾರರು ಯಾರಿದ್ದಾರೆ ಅವರನ್ನು ಮೂರೇ ವರ್ಷದಲ್ಲಿ ವಿಲೀನ ಮಾಡುವ ಕೆಲಸ ಮಾಡಬೇಕು. ಬಾಪೂಜಿ ಸೇವಾ ಕೇಂದ್ರಕ್ಕೆ ಕಂಪ್ಯೂಟರ್ ಮತ್ತು ಸಿಬ್ಬಂದಿಗಳನ್ನು ನೇಮಿಸಲು ತಕ್ಷಣ ಆದೇಶ ಕೊಡಬೇಕು, ಸರ್ವರ್ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ಪಂಚಮಿತ್ರ ಯೋಜನೆ ಅಡಿ ಪಹಣಿ ಪತ್ರ ವಿತರಣೆಯ ಉದ್ದೇಶಕ್ಕಾಗಿ ನಡೆಸಿದ ಪ್ರಕ್ರಿಯೆಯ ನಂತರ, 30 ನಿಮಿಷ ಆದಮೇಲೆ, Login ಮಾಡಿ ಎಂದು ಮತ್ತೆ ಮೆಸೆಜ್ ಬರುತ್ತದೆ. This has become a very big problem for panchayats. Login ಆದನಂತರ ಪಹಣಿಯನ್ನು download ಮಾಡುವುದಕ್ಕೆ ಹೋದರೆ ಸರ್ವರ್ ವೇಗ ಬಹಳ ನಿಧಾನ ಗತಿಯಲ್ಲಿರುವುದರಿಂದ ಸಮಸ್ಯೆ ಉಂಟಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಲ್ಲಾ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ, ಅಲ್ಲಿರುವ Wi-Fi (Wireless Fidelity) ಕಾರ್ಯಕ್ಷಮತೆಯನ್ನು ಹೆಚ್ಚು ಮಾಡಬೇಕು. This is the basic crux of the problem. ಇಲ್ಲದಿದ್ದರೆ ನಾವು ಯಾವುದನ್ನೂ ಮಾಡುವುದಕ್ಕೆ ಆಗುವುದಿಲ್ಲ. ಆರ್.ಟಿ.ಸಿ. ಪಡೆಯಲು ಒಂದೇ ಸಲ 100 ಜನ ಬಂದರೆ, ಈಗಿರುವ ವ್ಯವಸ್ಥೆಯಲ್ಲಿ 10 ಜನರಿಗೂ ಆರ್.ಟಿ.ಸಿ. ಕೊಡುವುದಕ್ಕೆ ಆಗುವುದಿಲ್ಲ. ಇಂಟರ್‌ನೆಟ್ ಸೌಲಭ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರಿಯಾಗಬೇಕಾದರೆ, ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸಬೇಕಾದರೆ, Wi-Fi ಕ್ಷಮತೆಯನ್ನು ಹೆಚ್ಚು ಮಾಡುವುದಕ್ಕೆ BSNL (Bharat Sanchar Nigam Limited) ಅಥವಾ ಸಂಬಂಧಪಟ್ಟ ಇಲಾಖೆಯ ಜೊತೆ ಸರ್ಕಾರ upgrade ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಬೇಕು. ಆಪರೇಟರ್‌ಗಳನ್ನು ರೆಗ್ಯುಲರೈಸ್ ಮಾಡುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಈ ದಿಸೆಯಲ್ಲಿ ಸರ್ಕಾರ ಗಮನಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿಗಳಲ್ಲಿ ಈಗೇನು ಹೊಸ ವ್ಯವಸ್ಥೆ ತಂದಿದ್ದಾರೋ ಅದರಿಂದ ಸ್ಥಳೀಯರಿಗೆ ಅನುಕೂಲವಾಗಿದೆ. ಆದರೆ, ಇಲಾಖೆಗಳಿಂದ ಸಮಯಕ್ಕೆ ಸರಿಯಾಗಿ ಕೊಡಬೇಕಾದ ಸವಲತ್ತುಗಳನ್ನು ಕೊಡದೇ ಇರುವುದರಿಂದ ತೊಂದರೆ ಕೂಡ ಅನುಭವಿಸುತ್ತಿದ್ದಾರೆ. Internet and Power connectivity ಗಳ ವಿಷಯದಲ್ಲಿರಬಹುದು, ಮತ್ತು ಮುಖ್ಯವಾಗಿ ಅಲ್ಲಿ ಕೆಲಸ ಮಾಡುವ ಸಿಬ್ಬಂದಿ ಕೊರತೆ ಏನಿದೆ ಅದು ಈ ವ್ಯವಸ್ಥೆಯನ್ನು ಹಿನ್ನೆಲೆಗೆ ದೂಡುವಂತೆ ಮಾಡಿದೆ. ಇವತ್ತು ಸಾಕಷ್ಟು ಜನ ಸದಸ್ಯರು ಈ ಹಿನ್ನೆಲೆಯಲ್ಲಿ ಸಲಹೆಗಳನ್ನು ನೀಡಿದ್ದಾರೆ. Internet and Power connectivity ಯಾವಾಗಲೂ ಇರಬೇಕು. ಮತ್ತೆ, ಸಿಬ್ಬಂದಿಗಳನ್ನು ನೇಮಕ ಮಾಡುವುದಕ್ಕಾಗಲಿಲ್ಲ ಎಂದರೆ, revenue generation ಇದ್ದರೆ, ಹೊರಗುತ್ತಿಗೆಯ ಆಧಾರದ ಮೇಲೆ ಸಿಬ್ಬಂದಿಗಳನ್ನು ತೆಗೆದುಕೊಳ್ಳಲು ಸರ್ಕಾರ ಅವಕಾಶ ಮಾಡಿಕೊಡಬೇಕಾಗುತ್ತದೆ. ಒಂದೇ ಡೇಟಾ ಎಂಟ್ರಿ ಮೇಲೆ ಎರಡು ಕೆಲಸಗಳನ್ನು ಮಾಡುವುದು ಸರಿಹೋಗುವುದಿಲ್ಲ. ನಾವು ಒಂದು ವರ್ಷ ಹಿಂದೆ ನೋಡಿದಾಗ, PDO ಹಾಗೂ ಅಕೌಂಟ್ಸ್ ಸ್ಟಾಫ್‌ಗಳ ಕೊರತೆಯಿಂದ ಸಾಕಷ್ಟು ಅಭಿವೃದ್ಧಿ ಕೆಲಸಗಳು ಕುಂಠಿತವಾಗಿತ್ತು. ಆದರೆ ಈಗಾಗಲೇ PDO ಗಳ ನೇಮಕವಾಗಿ, ಅವರೂ ಕೂಡ ಫೀಲ್ಡ್‌ಗೆ ಬಂದಿದ್ದಾರೆ. ಬೇರೆ ಬೇರೆ ಸಮಸ್ಯೆಗಳೂ ಕೂಡ ಇವತ್ತು ಬಗೆಹರಿಸುತ್ತಿರುವ ಸಂದರ್ಭದಲ್ಲಿ, ಬಾಪೂಜಿ ಸೇವಾ ಕೇಂದ್ರದ ಸೇವೆ ಜನರಿಗೆ ಪರಿಣಾಮಕಾರಿಯಾಗಿ ತಲುಪಬೇಕಾದರೆ ಹೊರಗುತ್ತಿಗೆ ಆಧಾರದ ಮೇಲೆ, revenue generation ಇದ್ದರೆ ಸ್ಥಳೀಯ ಮಟ್ಟದಲ್ಲಿ ನಿವಾರಣೆ ಮಾಡಿಕೊಳ್ಳುವುದಕ್ಕೆ ಅವಕಾಶಗಳನ್ನು ಸರ್ಕಾರ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಸಚಿವನಾದ ಮೇಲೆ ಸುಮಾರು 17-18 ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದೇನೆ. ಉಡುಪಿ, ಮಂಗಳೂರು ಸೇರಿ, ಬಹುತೇಕ ಎಲ್ಲಾ ಗ್ರಾಮಪಂಚಾಯಿತಿಗಳಿಗೆ ಭೇಟಿ ಕೊಟ್ಟಿದ್ದೇನೆ. ಬಾಪೂಜಿ ಸೇವಾ ಕೇಂದ್ರ ಎಂದರೆ ಅದಕ್ಕೊಂದು ಪ್ರತ್ಯೇಕ ಕಟ್ಟಡ ಕಟ್ಟಿ establish ಮಾಡುವುದು ಇದರ ಉದ್ದೇಶವಾಗಿರುವುದಿಲ್ಲ ಎಂದು ನಾನು ಭಾವಿಸಿದ್ದೇನೆ. ಒಬ್ಬೊಬ್ಬರ ಕಲ್ಪನೆ ಒಂದೊಂದು ಇರಬಹುದು. But, it is a service centre. ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ಯಾವ ಇಲಾಖೆಯನ್ನು ತೆಗೆದುಕೊಂಡರೂ ಮುಖ್ಯವಾದ ಕೆಲಸ ಎಂದರೆ, ಕಟ್ಟಡಗಳನ್ನು ಕಟ್ಟುವುದು ಮತ್ತು ಸಾಮಗ್ರಿಗಳನ್ನು ಖರೀದಿ ಮಾಡುವುದು ಎಂದಾಗಿಬಿಟ್ಟಿದೆ. ಯೂನಿವರ್ಸಿಟಿಗಳ ಸಂಬಂಧ ಪ್ರತಿ ವರ್ಷ ಬಜೆಟ್‌ನ ವಿಚಾರವಾಗಿ ಚರ್ಚೆಗೆ ಕುಳಿತುಕೊಂಡರೆ ಅಲ್ಲೂ ಕೂಡ, ಇದೊಂದು ಕಟ್ಟಡ ಕಟ್ಟಬೇಕು, ಅದೊಂದು ಕಟ್ಟಡ ಕಟ್ಟಬೇಕು ಎಂಬುದು ಬರುತ್ತಿತ್ತು.

(ಮುಂದುವರೆದಿದೆ)

(538)18-12-2018 ಡಿಎಸ್-ಕೆಎಸ್ 5.50

**ಶ್ರೀ ಕೃಷ್ಣಭೈರೇಗೌಡ(ಮುಂದು);-**

ಇಲ್ಲಿ ಗ್ರಾಮ ಪಂಚಾಯಿತಿ ಬಿಟ್ಟು ಅದಕ್ಕೊಂದು ಪ್ರತ್ಯೇಕ ಕಟ್ಟಡ ಕಟ್ಟಿ ಮಾಡುವುದು ಇದರ ಉದ್ದೇಶ ಅಲ್ಲ. ಆದರೆ ಪ್ರತಿಯೊಂದು ಗ್ರಾಮ ಪಂಚಾಯಿತಿಯೊಳಗಡೆ ಬಾಪೂಜಿ ಸೇವಾ ಕೇಂದ್ರ ಕೆಲಸ ಆರಂಭ ಮಾಡಿದೆ. ಆ ಬಾಪೂಜಿ ಸೇವಾ ಕೇಂದ್ರಗಳಿಗೆ ವೈಯಕ್ತಿಕವಾಗಿ ನಾನು ಮತ್ತು ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಭೇಟಿ ಕೊಟ್ಟು ನಿಮ್ಮ ಕಷ್ಟ-ಸುಖಗಳೇನು ಎಂದು ಪ್ರತಿಯೊಂದು ಕಡೆಯಲ್ಲೂ ವಿಚಾರಿಸುತ್ತಿದ್ದೇವೆ. ಮಾನ್ಯ ಸುನೀಲ್ ಸುಬ್ರಮಣಿ ಯವರು PDO (Panchayat Development Officer) ಗಳ ಕೊರತೆಯಿದೆ ಎಂದು ಹೇಳಿದರು. ಸರ್ಕಾರದಲ್ಲಿ ಹೆಚ್ಚು fill-up ಆಗಿರುವ post ಎಂದರೆ, ಅದು PDO ಗಳದ್ದೇ. About 90-96% of PDO posts have been filled-up. ಇವು ಏಕೆ ಖಾಲಿ ಇವೆ ಎಂದರೆ ಇಷ್ಟ ಬಂದ ಹಾಗೆ ಸುಮಾರು 1500 PDO ಗಳು ಎಲ್ಲೆಂದರಲ್ಲಿ deputation ಗಳ ಮೇಲೆ ಹೋಗಿದ್ದಾರೆ. ನಿಜವಾಗಿಯೂ ಹುದ್ದೆಗಳು ಖಾಲಿ ಇಲ್ಲ. ಅವರದ್ದು ಗ್ರಾಮ ಪಂಚಾಯಿತಿಯಲ್ಲಿ ಪೋಸ್ಟಿಂಗ್ ಇದೆ, ಜಿಲ್ಲಾ ಪಂಚಾಯಿತಿ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಾಲ್ಲೂಕು ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ 3 ಗ್ರಾಮ ಪಂಚಾಯಿತಿಗಳಿಗೆ, 4 ಗ್ರಾಮ ಪಂಚಾಯಿತಿಗಳಿಗೆ ಒಬ್ಬರು ಪಿಡಿಓ ಚಾರ್ಜ್ ತೆಗೆದುಕೊಂಡಿದ್ದಾರೆ. ಆದ್ದರಿಂದ ಅದಕ್ಕೆ ನಾವು ಆದೇಶ ಹೊರಡಿಸಿ ಎಲ್ಲಾ deputation ಗಳನ್ನು ರದ್ದು ಮಾಡಿದ್ದೇನೆ. ಅದಕ್ಕೆ ನಾನಾ ಶಾಸಕರುಗಳು ಅವರು ಮಾಡುವ ಕೆಲಸ ಬಿಟ್ಟು ಮಾಡಬಾರದೆಲ್ಲಾ ಮಾಡುತ್ತಿದ್ದಾರೆಂದು ನನ್ನ ಮೇಲೆ ಬೇಸರಗೊಳ್ಳುತ್ತಿದ್ದಾರೆ. ಏನಾದರೂ ಶಿಸ್ತು ತರುವುದಕ್ಕೆ ಹೋದರೆ, ಈ ರೀತಿಯ ಪರಿಸ್ಥಿತಿ ಬರುತ್ತಿದೆ. ಯಾರು deputation ಇದ್ದಾರೆ ಅವರಿಗೆ ಮಾತ್ರ ರದ್ದು ಮಾಡಿ ನಿಮ್ಮ ಮೂಲ ಸ್ಥಾನಕ್ಕೆ ಹೋಗಿ ಎಂದು ಹೇಳಿದ್ದೇನೆ. ಯಾರು ಅನುಮತಿ ತೆಗೆದುಕೊಂಡು ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಶಾಸಕರು, ಸಂಸದರ ಸಿಬ್ಬಂದಿಗಳ ಹುದ್ದೆಗೆ ಸರ್ಕಾರದಿಂದ ಅನುಮತಿ ಇದೆ, ಆ ಹುದ್ದೆಗೆ ಯಾರನ್ನು ಬೇಕಾದರೂ ತೆಗೆದುಕೊಳ್ಳುವುದಕ್ಕೆ ನಿಯಮದಲ್ಲಿ ಅವಕಾಶ ಇದೆ. ಯಾರು ಆ ರೀತಿ ತೆಗೆದುಕೊಂಡಿದ್ದಾರೆ ಅದನ್ನು ನಾನು ಮುಟ್ಟಿಲ್ಲ. ಬರೀ deputation ಆರ್ಡರ್ ಮಾಡಿಕೊಂಡು ಹೋಗಿದ್ದಾರೆ ಅದನ್ನು ರದ್ದು ಮಾಡಿ ಮೂಲ ಸ್ಥಾನಗಳಿಗೆ ಕಳುಹಿಸುತ್ತಿದ್ದೇವೆ. ಇದರಿಂದ ಎಷ್ಟೋ ಖಾಲಿ ಹುದ್ದೆ ಭರ್ತಿಯಾಗುತ್ತದೆ.

ಇನ್ನು generator ಸಮಸ್ಯೆ ಬಗ್ಗೆ ಹೇಳಿದ್ದಾರೆ, ಅದನ್ನು ನಾವು ಸ್ವಲ್ಪ attend ಮಾಡುತ್ತೇವೆ. ಬಾಪೂಜಿ ಸೇವಾ ಕೇಂದ್ರದಲ್ಲಿ ಏನು ಸೌಲಭ್ಯಗಳನ್ನು ಜನಗಳಿಗೆ ಕೊಡುತ್ತಿದ್ದೇವೆ, ಉದಾಹರಣೆಗೆ ಪಹಣಿ ಬಗ್ಗೆ ಹೇಳುವುದಾದರೆ, ಒಂದು ಪಹಣಿಗೆ ಜನಗಳಿಗೆ ತಗಲುವ ವೆಚ್ಚ 10 ರೂಪಾಯಿ. ಅದರಲ್ಲಿ ಗ್ರಾಮ ಪಂಚಾಯಿತಿಗೆ 5 ರೂಪಾಯಿಯನ್ನು ಕೊಡುತ್ತಿದ್ದೇವೆ. ಇನ್ನು 5 ರೂಪಾಯಿ 'Bhoomi Monitoring Cell' ಗೆ ಹೋಗುತ್ತದೆ. ಈ 5 ರೂಪಾಯಿ ಇವರಿಗೆ ಬರುತ್ತದೆಂದರೆ ಎಲ್ಲೋ ಒಂದು ಕಡೆ quality of service ಅನ್ನು improve ಮಾಡುವುದಕ್ಕೆ ಅವರು invest ಮಾಡಬೇಕಲ್ಲವೇ? Free service ಅನ್ನು ಕೊಡುವುದಾಗಿದ್ದರೆ ನೀವು ಹೇಳಬಹುದು ಎಲ್ಲಾ ಸರ್ಕಾರವೇ ಕೊಡಿ ಎಂದು. Revenue sharing model ನಲ್ಲಿ ಮಾಡಿರುವುದು. ನಾವು ಒಂದು ಸಲ ಮೂಲಭೂತ ಸೌಕರ್ಯಗಳನ್ನು ಕೊಟ್ಟ ಮೇಲೆ maintenance and improvement ಗೆ ಅವರು ಏಕೆ ಆ ಹಣವನ್ನು ಬಳಕೆ ಮಾಡಬಾರದು? ಅವರಿಗೆ 5 ರೂಪಾಯಿ ಆದಾಯ ಬರುತ್ತಿದೆಯಲ್ಲವೇ? ಇಲ್ಲಿ ಯಾವ ಸೇವೆಯೂ ಉಚಿತವಾಗಿಲ್ಲ, ಜಾತಿ ಪ್ರಮಾಣ ಪತ್ರ, ಪಹಣಿ, ಇದು ಯಾವುದು ಉಚಿತವಾಗಿ ಕೊಡುತ್ತಿಲ್ಲ. ಬಹುಶಃ ಆಧಾರ್ ಕಾರ್ಡ್ ತಿದ್ದುಪಡಿಯನ್ನು ಉಚಿತವಾಗಿ ಮಾಡುತ್ತಿಲ್ಲ. ಎಲ್ಲಾದರಲ್ಲೂ ಅವರಿಗೆ ಆದಾಯ ಬರುತ್ತಿದೆ. ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿರುವ ಆದಾಯ ಎಲ್ಲಿಗೆ ಹೋಗುತ್ತಿದೆ? ಅವರು ಏಕೆ ಆ ಹಣವನ್ನು ಅಭಿವೃದ್ಧಿಗಾಗಿ invest ಮಾಡಬಾರದು? ಅವರು ಏಕೆ ಸರ್ಕಾರಕ್ಕೆ ಮುಖ ಮಾಡಿಕೊಂಡು ನೋಡಬೇಕು? ಇದನ್ನೆಲ್ಲಾ ತಾವೆಲ್ಲರೂ ಯೋಚನೆ ಮಾಡಿ.

ಇನ್ನೂ Data connectivity ಸಮಸ್ಯೆ ಇದೆ. ನಿನ್ನೆ ನಮ್ಮ ಪ್ರಧಾನ ಕಾರ್ಯದರ್ಶಿಗಳು ಶ್ರೀ ಶಿವಶೈಲಂ ರವರ ಜೊತೆಯಲ್ಲಿ ಮಾತನಾಡಿದ್ದಾರೆ. ಅವರು ಸಹ ಇದನ್ನು ಅಭಿವೃದ್ಧಿ ಮಾಡುತ್ತೇವೆಂದು ಭರವಸೆ ನೀಡಿದ್ದಾರೆ. ನಮ್ಮ ಡಿಜಿಟಲ್ ನೆಟ್‌ವರ್ಕ್ ಏನಿದೆ ಅದರ capacity ಯನ್ನು ನಾವು ಅಭಿವೃದ್ಧಿ ಮಾಡುತ್ತಿದ್ದೇವೆ. 600 ಕೋಟಿ ರೂಪಾಯಿ ವೆಚ್ಚದಲ್ಲಿ ಒಂದೂವರೆ ವರ್ಷದ ಹಿಂದೆ ನಾವು ತೆಗೆದುಕೊಂಡಿದ್ದೇವೆ. ಅದರ ಉದ್ದೇಶವೇನೆಂದರೆ, capacity of data connectivity ಅನ್ನು ತಾಲ್ಲೂಕು ಮಟ್ಟ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ improve ಆಗಬೇಕು. Overload ಇರುವುದು ನಿಜ. ಒಂದು ರಾತ್ರಿಯಲ್ಲಿ ಅದನ್ನು ಪರಿಹಾರ ಮಾಡಲಾಗುವುದಿಲ್ಲ. BSNL (Bharat Sanchar Nigam Limited) ಜೊತೆಗೂ ಮಾತನಾಡುತ್ತಿದ್ದೇವೆ, ನಾವು ಕೂಡ 600 ಕೋಟಿ ರೂಪಾಯಿ ವೆಚ್ಚದಲ್ಲಿ, ನಮ್ಮ ಇಲಾಖೆಯಲ್ಲದೆ entire Treasury system ಸೇರಿಕೊಂಡು, we are upgrading the internet facility as per today's requirement. ಸ್ವಲ್ಪ ದಿನದಲ್ಲೇ ಆ ಕೆಲಸವಾದರೆ, overload ಕಡಿಮೆಯಾಗುತ್ತದೆ.

ಮಾನ್ಯ ಸಭಾಪತಿಯವರೇ, ಇನ್ನು ಮುಖ್ಯವಾಗಿ ಎರಡು ವಿಚಾರಗಳನ್ನು ಹೇಳಬಯಸುತ್ತಿದ್ದೇನೆ, ಮಾನ್ಯ ಸದಸ್ಯರು ಪಹಣಿ ಒಂದನ್ನು ಬಿಟ್ಟರೆ ತಾವೇನು ಕೊಡುತ್ತಿಲ್ಲವೆಂದು ಹೇಳಿದರು. ಈಗ ನೂರು ಸೇವೆಗಳು ಎಂದು ನಾವೇನು ಘೋಷಣೆ ಮಾಡಿದ್ದೇವೆ, ಅದರಲ್ಲಿ ಸುಮಾರು ಸೇವೆಗಳು ಗ್ರಾಮ ಪಂಚಾಯಿತಿಯವರೆ ಪೇಪರ್ ಮೂಲಕ ಮಾಡುವಂಥದ್ದನ್ನು digitize ಮಾಡಿದ್ದೇವೆ. ಉದಾಹರಣೆಗೆ, building plan approval ಇವೆಲ್ಲಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಗುವಂಥದ್ದು. ಗ್ರಾಮ ಪಂಚಾಯಿತಿಗೆ ಅಲ್ಲಿ ಯಾರೋ ಜಾಹೀರಾತು ಪ್ರಕಟ ಮಾಡುವುದಕ್ಕೆ ಅನುಮತಿಯನ್ನು ಕೇಳುತ್ತಾರೆ, ಅದು ಸಹ ನೂರು ಸೇವೆಗಳಲ್ಲಿ ಸೇರಿಕೊಂಡಿವೆ. These services also cover the basic functions of Gram Panchayat. Digitize ಮಾಡುವುದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೇ ಇದೆ. ಅದಲ್ಲದೆ ಗ್ರಾಮ ಪಂಚಾಯಿತಿಗೆ

ಮೀರಿದಂತಹ ಸೌಲಭ್ಯಗಳು ಸುಮಾರು ಕಂದಾಯ ಇಲಾಖೆಗೆ, ಆಹಾರ ಇಲಾಖೆಗೆ ಬರುತ್ತವೆ. ಉದಾಹರಣೆಗೆ ಹೇಳುವುದಾದರೆ, ಪಹಣಿ ಒಂದೇ ಅಲ್ಲ, RTC (Records of rights, Tenancy and Crops) ಒಂದೇ ನಾವು ಕೊಡುತ್ತಿಲ್ಲ, ಅದರಲ್ಲಿ ಜಾತಿ ಪ್ರಮಾಣ ಪತ್ರವನ್ನು ಕೊಡುತ್ತಿದ್ದೇವೆ, ಆದಾಯ ಪ್ರಮಾಣ ಪತ್ರವನ್ನು ಕೊಡುತ್ತಿದ್ದೇವೆ, ಪಡಿತರ ಚೀಟಿಗಾಗಿ ಅರ್ಜಿ ತೆಗೆದುಕೊಳ್ಳುತ್ತಿದ್ದೇವೆ, ಪಡಿತರ ಚೀಟಿಯಲ್ಲಿ ತಿದ್ದುಪಡಿಯನ್ನು ಕೂಡ ಮಾಡುತ್ತಿದ್ದೇವೆ. ಈಗ ಎರಡು ತಿಂಗಳಿನಿಂದೀಚೆಗೆ ಆಧಾರ್ ಕಾರ್ಡ್ ತಿದ್ದುಪಡಿ, ಬಹುಶಃ ದೇಶದಲ್ಲಿ ಎಲ್ಲೂ ಆಗಿಲ್ಲ. ಕರ್ನಾಟಕದಲ್ಲಿ ಮಾತ್ರ ಆಧಾರ್ ಕಾರ್ಡ್ ತಿದ್ದುಪಡಿ ಗ್ರಾಮ ಪಂಚಾಯಿತಿಯಲ್ಲೇ ಮಾಡುವ ರೀತಿಯಲ್ಲಿ ಅವರಿಗೆ ಮಾಡಿ ಕೊಟ್ಟಿದ್ದೇವೆ. ಇದು ಘೋಷಣೆ ಮಾತ್ರವಲ್ಲ, ನಾನೇ ಖುದ್ದಾಗಿ ಹೋಗಿ ಹಲವು ಜಿಲ್ಲೆಗಳಲ್ಲಿ ನೋಡಿದ್ದೇನೆ. ಇದನ್ನು ಎಲ್ಲಾ ಕಡೆಯಲ್ಲೂ scale-up ಮಾಡುತ್ತಿದ್ದೇವೆ. ಆಧಾರ್ ಕಾರ್ಡ್ ತಿದ್ದುಪಡಿ ಕೂಡ ಬಾಪೂಜಿ ಸೇವಾ ಕೇಂದ್ರದ ಮುಖಾಂತರ ಮಾಡುತ್ತಿದ್ದೇವೆ. ವಿಕಲಚೇತನರ ಸೌಲಭ್ಯಗಳ ಅರ್ಜಿ, ಪಿಂಚಣಿ ಅರ್ಜಿ ತೆಗೆದುಕೊಳ್ಳುವುದು, ಈ ರೀತಿಯ ನಾನಾ ಸೌಲಭ್ಯಗಳನ್ನು ಅಲ್ಲಿ ಕೊಡುತ್ತಿದ್ದೇವೆ. ಈಗ ಮಾನ್ಯ ಸದಸ್ಯರು ಎಲ್ಲಿ ಸರ್ವಿಸ್ ಕೊಟ್ಟಿದ್ದೀರಿ, ಮಂತ್ರಿಗಳು ಹೇಳಿಬಿಟ್ಟರು ಎಂದು ನಾನು ಅಲ್ಲಿಗೆ ಹೋಗಿ ಕೇಳಿದೆ ಎಂದು ಹೇಳಿದರು. ನಾನು ಮಾನ್ಯ ಸದಸ್ಯರಿಗೆ ಮಾಹಿತಿ ಹೇಳುವುದಾದರೆ, ಈ ಸೇವೆಗಳನ್ನು ಪ್ರಾರಂಭ ಮಾಡಿದ ಮೇಲೆ RDPR (Rural Development and Panchayat Raj Department) ಬಾಪೂಜಿ ಸೇವಾ ಕೇಂದ್ರದ ಮುಖಾಂತರ is providing essential services to the Gram Panchayat. ಆ ಒಂದು ಸೌಲಭ್ಯಗಳೇ ಬಾಪೂಜಿ ಸೇವಾ ಕೇಂದ್ರದ ಮುಖಾಂತರ 49,22,780 services ಅನ್ನು deliver ಮಾಡಿದ್ದೇವೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೆ,......

**ಶ್ರೀ ಕೃಷ್ಣಬೈರೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಪೂರ್ತಿಯಾಗಿ ಮಾತನಾಡುವುದನ್ನು ಅವರು ಕೇಳಿಸಿಕೊಳ್ಳಲಿ. ಅವರು ಎಷ್ಟೇ provocative ಆಗಿ ಮಾತನಾಡಿದರೂ ಕೂಡ ನಾನು ಮಧ್ಯ ಪ್ರವೇಶ ಮಾಡಲಿಲ್ಲ. ಮಾನ್ಯ ಸದಸ್ಯರು ಏನು ಹೇಳುತ್ತಾರೆಯೋ ಅದನ್ನು ಆಮೇಲೆ ಹೇಳಲಿ.

ಮಾನ್ಯ ಸಭಾಪತಿಯವರೆ, ಗ್ರಾಮ ಪಂಚಾಯಿತಿ ಪ್ಲಾನ್ ಅಪ್ರೂವಲ್ ಕೊಡುವುದು, ಲೈಸೆನ್ಸ್ ಕೊಡುವುದು, ಇತ್ಯಾದಿಗಳನ್ನು ಕೊಡುವುದು ಗ್ರಾಮ ಪಂಚಾಯಿತಿಯ mandate. 49,22,780

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ವಿಸ್‌ಗಳನ್ನು, ಇವು ಬರೆದಿರುವುದಲ್ಲ, digitally system ನಲ್ಲಿ generate ಆಗುತ್ತದೆ. ನಾನು ಯಾವುದೋ ವರದಿಯನ್ನು ತರಿಸಿಕೊಂಡು ಹೇಳುತ್ತಿಲ್ಲ. As everything is digitized, the report has been automatically generated in the system. ಗ್ರಾಮ ಪಂಚಾಯಿತಿಯದ್ದು ಬಿಟ್ಟುಬಿಡಿ. ಇತರೆ ಸೇವೆಗಳೇನು ನೀವು promise ಮಾಡಿದ್ದೀರಿ ಅದರದ್ದು ಹೇಳಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಬಿಟ್ಟು ನಾಡ ಕಚೇರಿಯಲ್ಲ, ತಹಸೀಲ್ದಾರ್ ಕಚೇರಿಯಲ್ಲಿ ಅಲ್ಲ, ಗ್ರಾಮ ಪಂಚಾಯಿತಿಯಲ್ಲಿ ಬಾಪೂಜಿ ಸೇವಾ ಕೇಂದ್ರದ ಮುಖಾಂತರ 37,57,002 ಪಹಣಿಗಳನ್ನು ಕೊಟ್ಟಿದ್ದೇವೆ. It is not a small figure. ಸುಮಾರು 37 ಲಕ್ಷ ಪಹಣಿಗಳನ್ನು ಕೊಟ್ಟಿದ್ದೇವೆ. ಆಯಿತು, ಪಹಣಿಗಳನ್ನು ಕೊಡುತ್ತಿದ್ದೀರಿ, ಉಳಿದ ಸೇವೆಗಳ ಬಗ್ಗೆ ಹೇಳಿ ಎಂದು ಮಾನ್ಯ ಸದಸ್ಯರು ಕೇಳಿದರು. ಬಾಪೂಜಿ ಸೇವಾ ಕೇಂದ್ರದ ಮುಖಾಂತರ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ ಮತ್ತು ತಿದ್ದುಪಡಿ, ಇಂತಹ 1,11,668 ಸೇವೆಗಳನ್ನು ಕೊಟ್ಟಿದ್ದೇವೆ. ಅದಲ್ಲದೆ, ಅನಿಲ ಭಾಗ್ಯ ಯೋಜನೆ, ಆಹಾರ ಸರಬರಾಜು ಇಲಾಖೆಯದ್ದು 3,25,207 ಸೇವೆಗಳನ್ನು ಬಾಪೂಜಿ ಸೇವಾ ಕೇಂದ್ರದ ಮುಖಾಂತರ ಮಾಡಿದ್ದೇವೆ. ಇದೆಲ್ಲಾ ಲೆಕ್ಕ ಹಾಕಿದರೆ ಸುಮಾರು 95 ಲಕ್ಷ service transactions, ಬಾಪೂಜಿ ಸೇವಾ ಕೇಂದ್ರದ ಮುಖಾಂತರ ಆಗಿವೆ. ಇದರಲ್ಲಿ ಬಹುತೇಕ revenue sharing model ನಲ್ಲಿದೆ. ಅದರಲ್ಲಿ ಭಾಗಶಃ ಅದರ ಆದಾಯ ಗ್ರಾಮ ಪಂಚಾಯಿತಿಗಳಿಗೂ ಸಹ ಹೋಗುತ್ತಿದೆ. We have actually created an additional revenue stream for Gram Panchayats. ನಾನು ಇನ್ನು ಎರಡು ವಿಚಾರಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಿಜ, ಕೆಲವು ಸೇವೆಗಳು ಅಷ್ಟು ವ್ಯಾಪಕವಾಗಿ ಬಳಕೆ ಆಗುತ್ತಿಲ್ಲ.

(ಮುಂದು)

(539)18-12-2018(6-00) ಬಿಕೆಪಿ-ಜಿಆರ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣ ಬೈರೇಗೌಡ(ಮುಂದು. . )**

ಆಗುತ್ತಿಲ್ಲವೆಂದರೆ ಅದರ ಅವಶ್ಯಕತೆಯ ಮೇಲೆ ಅವಲಂಬಿತವಾಗುತ್ತದೆ. ಇನ್ನು ಕೆಲವು ಸೇವೆಗಳನ್ನು ನಾವು ಇನ್ನೂ enable ಮಾಡಿರುವುದಿಲ್ಲವೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದ್ಯಾವುದು ಎಂದರೆ

ಉದಾಹರಣೆಗೆ ಬಸ್ ಟಿಕೇಟ್, ರೈಲ್ ಟಿಕೇಟ್ ಇವೆಲ್ಲವುಗಳನ್ನು ಬುಕ್ ಮಾಡುವುದು ಸಹ original mandate ನಲ್ಲಿ ಸೇರಿಕೊಂಡಿದೆ. ಅಂದರೆ, ಅದು 100 ಸೇವೆಗಳಲ್ಲಿ ಸೇರಿಕೊಂಡಿದೆ. ಅದನ್ನು ಮಾಡಬೇಕೆಂದರೆ ನಾವು digital payment portal ಅನ್ನು ಇದರಲ್ಲಿ ಕ್ರಿಯೇಟ್ ಮಾಡಬೇಕು. Direct ಆಗಿ ಅವರಿಗೆ ಪೇಮೆಂಟ್ ಹೋಗುವ ರೀತಿಯಲ್ಲಿ ಇರಬೇಕು. ವಿದ್ಯುತ್ ಬಿಲ್, ರೈಲ್ವೇ ಟಿಕೇಟ್ ಬುಕಿಂಗ್, ಬಸ್ ಟಿಕೇಟ್ ಬುಕಿಂಗ್ ಇಂತಹವುಗಳೆಲ್ಲಾ ಇದರಲ್ಲಿ ಸೇರಿಕೊಂಡಿದೆ. ಅವುಗಳೆಲ್ಲಾ ಆಗಬೇಕೆಂದರೆ ಇಲ್ಲಿ digital payment ಆಗಬೇಕು. ಅದಕ್ಕೆ ನಾವು ನೆಟ್‌ವರ್ಕ್ ಕ್ರಿಯೇಟ್ ಮಾಡುತ್ತಿದ್ದೇವೆ. ಅದಕ್ಕೆ ಬೇಕಾದಂತಹ I.T., infrastructure ಕ್ರಿಯೇಟ್ ಮಾಡುತ್ತಿದ್ದೇವೆ. ಆ ರೀತಿ ಆದಲ್ಲಿ ಇದು ಸಹ ಸರಿಯಾಗುತ್ತದೆ. ಅದಕ್ಕೆ ಸ್ವಲ್ಪ ಸಮಯವನ್ನು ತೆಗೆದುಕೊಳ್ಳುತ್ತಿದೆ. Essentiality ಸಹ ನೋಡಬೇಕು. ಇದು ಒಳ್ಳೆಯ ಕ್ವಾಲಿಟಿ ಸರ್ವಿಸ್ ಆಗಬಹುದು. ಆದರೆ, ಅದು ಎಷ್ಟು ಅವಶ್ಯಕತೆ ಇದೆ ಎನ್ನುವುದನ್ನು ಸಹ ನಾವು ನೋಡಬೇಕು. ಆಗಿದ್ದರೂ ಸಹ we are not backing out. ನಮ್ಮ ಕಮಿಟ್‌ಮೆಂಟ್‌ನಿಂದ ನಾವು ಹಿಂದೆ ಸರಿಯುತ್ತಿಲ್ಲ, ಆ ದಿಕ್ಕಿನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಮುಂಗಡವಾಗಿ ಅವರು ಹಣವನ್ನು ಇಡಬೇಕೆಂದು ತಾವು ಹೇಳಿದಿರಿ. ಅದು ಇಲ್ಲಿಯವರೆವಿಗೂ ಇತ್ತು. ಈಗ E-wallet system ಅನ್ನು ಇದರಲ್ಲಿ ಅಳವಡಿಸಿದ್ದೇವೆ. ಇನ್ನು ಮುಂದೆ ತಿಂಗಳ ಆರಂಭದಲ್ಲಿಯೇ ಅವರು ಒಂದು ಕ್ರೆಡಿಟ್ ಇಟ್ಟಿರಬೇಕು, ಆರ್.ಟಿ.ಸಿ., ಆದಂತೆ ಆ ಕ್ರೆಡಿಟ್ ಅನ್ನು ಕಡಿತಗೊಳಿಸುತ್ತಾ ಹೋಗಬೇಕೆಂದು ಇತ್ತು. ಆದರೆ, ಇನ್ನು ಮುಂದೆ ಅದು ಬರುವುದಿಲ್ಲ. ಇಲ್ಲಿಯವರೆವಿಗೂ ಅದು ಇತ್ತು. ಆದರೆ, ಪೇಮೆಂಟ್‌ಗೆ E-wallet system ಇರಲಿಲ್ಲ. ಈಗ E-wallet system ಅನ್ನೂ ಸಹ ಅಳವಡಿಸಿಕೊಂಡಿರುವುದರಿಂದ automatically ನಮಗೂ ಪೇಮೆಂಟ್ ಬರುತ್ತದೆ, ಅವರಿಗೂ ಹೋಗುವ ವ್ಯವಸ್ಥೆಯನ್ನು ಮಾಡಿರುವ ಕಾರಣದಿಂದ ಇನ್ನು ಮುಂದೆ ಆ ತೊಂದರೆ ಪರಿಹಾರವಾಗುತ್ತದೆ. ಹೀಗಾಗಿ, ನಾವು ಇವುಗಳನ್ನು scale-up ಮಾಡಿಕೊಂಡು ಹೋಗುತ್ತಿದ್ದೇವೆ. ಹಂತಹಂತವಾಗಿ ಸೇವೆಗಳನ್ನು ವಿಸ್ತರಿಸಿಕೊಂಡು ಹೋಗುತ್ತಿದ್ದೇವೆ.

ಮತ್ತೆ, ಮಾನ್ಯ ಸದಸ್ಯರು ಇದಕ್ಕೆ ಬೇಕಾದಂತಹ ಸಿಬ್ಬಂದಿಯ ಬಗ್ಗೆ ಮುಖ್ಯವಾಗಿ ಹೇಳಿದ್ದಾರೆ. ತಾವು ಸಹ ಬಹುಶಃ ಒಪ್ಪುತ್ತೀರಿ. ಎಲ್ಲಿ ಸೇವೆಗಳನ್ನು ಜನರು ಉಪಯೋಗಿಸುತ್ತಿದ್ದಾರೆ, ಎಲ್ಲಿ ಸೇವೆಗಳಿಗೆ ಗ್ರಾಮ ಪಂಚಾಯಿತಿಗಳು ಹೆಚ್ಚು ಪ್ರಚಾರ ಕೊಟ್ಟು, ಜನರು ಬಂದು ಉಪಯೋಗಿಸುವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯಲ್ಲಿ ಮಾಡುತ್ತಿದ್ದಾರೆ, ಅಂತಹ ಕಡೆ ಹೆಚ್ಚುವರಿ ಸಿಬ್ಬಂದಿಯ ಅವಶ್ಯಕತೆ ಬರಬಹುದು. ನಾನು ಈ ಬಗ್ಗೆ ಜನರೇಟ್ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರ ಜೊತೆಯೂ ಸಹ ಶೇರ್ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರ ಜಿಲ್ಲೆಯ ಮಾಹಿತಿ ಬೇಕಾಗಿದ್ದರೆ ಎಷ್ಟು ಸೇವೆಗಳು ಡೆಲಿವರಿ ಆಗಿದೆ ಎಂದು ಮಾಹಿತಿ ಕೊಡಬಹುದಾಗಿದೆ. ಏಕೆಂದರೆ, ನನ್ನ ಮಾತಿನ ಮೇಲೆ ಮಾನ್ಯ ಸದಸ್ಯರು ಅಲ್ಲಿ ಮಾಹಿತಿಯನ್ನು ಕೊಟ್ಟು ಮಾನ್ಯ ಗ್ರಾಮ ಪಂಚಾಯಿತಿ ಸದಸ್ಯರನ್ನು ಅಲ್ಲಿ ಪ್ರಶ್ನೆ ಕೇಳುವುದಾದರೆ, ತಮಗೆ ಇವತ್ತು ಅಥವಾ ನಾಳೆ ಒಳಗಡೆ ಮಾನ್ಯ ಸದಸ್ಯರ ಜಿಲ್ಲೆಯಲ್ಲಿ ಎಷ್ಟು ಸೇವೆಗಳನ್ನು ಕೊಟ್ಟಿದ್ದೇವೆ ಎನ್ನುವ ಬಗ್ಗೆ ಅಂಕಿ-ಅಂಶಗಳೊಂದಿಗೆ ಮಾಹಿತಿಯನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ನಾಳೆ ಒಳಗಡೆ ಕೊಡುವುದಕ್ಕೆ ಅದೇನೂ ಕಷ್ಟವಾಗುವುದಿಲ್ಲ. ಯಾವ್ಯಾವ ಗ್ರಾಮ ಪಂಚಾಯಿತಿಗಳಲ್ಲಿ 'ಇ-ಸೇವೆ' ಗಳ ಉಪಯೋಗದ ಪ್ರಮಾಣ ಎಷ್ಟಿದೆ ಅಂದರೆ, ಒಂದು ವಾರದಲ್ಲಿ ಎಷ್ಟಿದೆ ಎಂದು ನೋಡಬಹುದಾಗಿದೆ. ನಾನು ಸುಮಾರು ಗ್ರಾಮ ಪಂಚಾಯಿತಿಗಳ ಕಡೆ ಹೋಗಿ ನೋಡಿದ್ದೇನೆ. ಈ ವರ್ಷದ ಆರಂಭದಲ್ಲಿ ಪಹಣಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಜಾತಿ ಪ್ರಮಾಣ ಪತ್ರಗಳ ಉಪಯೋಗ ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ. ಅವುಗಳ ಉಪಯೋಗ ಯಾವಾಗ ಆಗುತ್ತದೆ ಎಂದರೆ, ಅದು ಒಂದು ತಿಂಗಳ ಅವಧಿಯಲ್ಲಿ ಆಗುತ್ತದೆ. throughout the year ವಾರದಲ್ಲಿ ಒಂದೆರಡು ಆಧಾರ್ ಕಾರ್ಡ್‌ಗಳ ತಿದ್ದುಪಡಿಗಳಾಗುತ್ತವೆ. ಆದರೆ, ಇದರಲ್ಲಿ ಮುಖ್ಯವಾಗಿ 70% ಒಂದು-ಒಂದೂವರೆ ತಿಂಗಳಿನಲ್ಲಿ ಉಪಯೋಗವಾಗುತ್ತದೆ. ಅದನ್ನು ಬಿಟ್ಟರೆ ನಾನು ಪಂಚಾಯಿತಿಗೆ ಭೇಟಿ ಕೊಟ್ಟ ಸಮಯದಲ್ಲಿ ವಾರದಲ್ಲಿ ಎಷ್ಟು ಉಪಯೋಗವಾಗುತ್ತದೆ ಎಂದು ಅಲ್ಲಿನ ಸಿಬ್ಬಂದಿಯನ್ನು ಕೇಳಿದಾಗ ವಾರದಲ್ಲಿ ಸುಮಾರು 20 ಜನ ಬಂದು ಅದನ್ನು ಉಪಯೋಗ ಮಾಡಿಕೊಳ್ಳುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಹೀಗಾಗಿ, ಎಲ್ಲಾ ಕಡೆಯಲ್ಲಿಯೂ ಅದೇ ರೀತಿಯಲ್ಲಿ ಇದೆ ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಕೆಲವು ಕಡೆ ಹೆಚ್ಚಿನ ಜನರು ಇದನ್ನು ಬಳಕೆ ಮಾಡುತ್ತಿರಬಹುದು. ಅಂತಹ ಕಡೆಗಳಲ್ಲಿ ಹೆಚ್ಚುವರಿ ಸಿಬ್ಬಂದಿಯ ಅವಶ್ಯಕತೆ ಇರುವುದಾಗಿ ಮಾನ್ಯ ಸದಸ್ಯರುಗಳಾದ ಶ್ರೀ ಪ್ರಾಣೇಶ್ ರವರು ಮತ್ತು ಶ್ರೀ ಶ್ರೀನಿವಾಸ್ ಮಾನೆ ರವರು ಹೇಳಿದರು. ಅವರಿಗೆ revenue generation capacity ಇತ್ತು. ಹೀಗಿರುವಾಗ ಅವರಿಗೆ ಏತಕ್ಕೆ ತಾವು ಅನುಮತಿಯನ್ನು ಕೊಡಬಾರದು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಮಾನ್ಯ ಸದಸ್ಯರುಗಳ ಸಲಹೆಗೆ ನನ್ನ ಸಹಮತವೂ ಸಹ ಇದೆ. ಆದಷ್ಟು ಬೇಗ ಈ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ, ಅವರಿಗೆ ನಾವು ಅನುಮತಿಯನ್ನು ಕೊಟ್ಟು, ಎಲ್ಲಿ ಈ ಸೇವೆಗಳು ಹೆಚ್ಚು ಉಪಯೋಗ ಆಗುತ್ತಿವೆ, ಮತ್ತೆ ಯಾರು ಇದನ್ನು popularise ಮಾಡಿರುವುದಿಲ್ಲ, ಎಲ್ಲಿ ಉಪಯೋಗವಾಗುತ್ತಿಲ್ಲ, ಅಂತಹ ಕಡೆಗಳಿಗೆಲ್ಲಾ ಸಿಬ್ಬಂದಿಯನ್ನು ಕೊಟ್ಟು ಗ್ರಾಮ ಪಂಚಾಯಿತಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರೆ ಮಾಡುವುದಕ್ಕಿಂತ ಎಲ್ಲಿ ನಿಜವಾಗಿ ಅದರ ಅವಶ್ಯಕತೆ ಇದೆ, Need and genuine demand ಇದೆ, ಅಂತಹವರಿಗೆ ನಾವು ಅನುಮತಿಯನ್ನು ಕೊಡತಕ್ಕಂತಹದ್ದನ್ನು ಮಾಡಬೇಕು. ಅವರಿಗೆ transactions ಇರಬೇಕು ಮತ್ತು ಅವರ ತೆರಿಗೆ ಸಂಗ್ರಹವೂ ಸಹ ಚೆನ್ನಾಗಿರಬೇಕು. ಭಾರವನ್ನು ತಡೆದುಕೊಳ್ಳುವಂತಹ ಶಕ್ತಿ ಅವರಿಗೆ ಇರಬೇಕು. ಅವಶ್ಯಕತೆ ಮತ್ತು ಶಕ್ತಿ ಇರುವ ಎರಡು ಕಡೆ ಅವರಿಗೆ ಅವಕಾಶ ಮಾಡಿಕೊಡುವ ಬಗ್ಗೆ ಮಾನ್ಯ ಸದಸ್ಯರುಗಳು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಅದನ್ನು ನಾನು ಸಕಾರಾತ್ಮಕವಾಗಿ ಸ್ವೀಕಾರ ಮಾಡುತ್ತೇನೆ. ಅಧಿಕಾರಿಗಳ ಜೊತೆ ಮಾತನಾಡಿ ಅದಕ್ಕೆ ಪೂರಕವಾಗಿ ಒಂದು ತೀರ್ಮಾನ ತೆಗೆದುಕೊಳ್ಳುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ.

**ಶ್ರೀ ಪ್ರಾಣೇಶ್ ಎಂ.ಕೆ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳಿಗೆ ಮಾತನಾಡುವಾಗ ನಮ್ಮ ಮೇಲೆ ಎಲ್ಲಿಯೋ ಒಂದು ಕಡೆ ಅನುಮಾನ ಇದೆ ಎಂದು ಕಾಣಿಸುತ್ತದೆ. ಏಕೆಂದರೆ we are the practical persons. ಅದಕ್ಕೋಸ್ಕರ ನಾನು ಈ ಬಗ್ಗೆ ಮಾತನಾಡಲಿಕ್ಕೆ ಬಯಸುತ್ತೇನೆ. ಏಕೆಂದರೆ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ 227 ಗ್ರಾಮ ಪಂಚಾಯಿತಿಗಳು ಬರುತ್ತವೆ. ನಾನು ಗ್ರಾಮ ಪಂಚಾಯಿತಿಗಳಿಗೆ ಖುದ್ದಾಗಿ ಭೇಟಿ ಮಾಡಿ ಅವರುಗಳನ್ನು ಮಾತನಾಡಿಸಿದ್ದೇನೆ. ಆದರೆ, ಮಾನ್ಯ ಸಚಿವರು ನೀವು ಹೇಳಿರುವಂತಹ ಕೆಲಸಗಳನ್ನೆಲ್ಲಾ ನಾವು ಖಂಡಿತವಾಗಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಹಾಗಾದರೆ ನಾವು ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆನ್ನುವ ಯಾವ ಉದ್ದೇಶಗಳು ಇಲ್ಲ. ಅಲ್ಲಿ ಇರುವಂತಹ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಕೆಲಸಗಳು ನ್ಯಾಯವಾಗಿ ನಡೆಯಬೇಕೆನ್ನುವ ಒಂದೇ ಒಂದು ಉದ್ದೇಶದಿಂದ ಹೇಳುತ್ತಿದ್ದೇವೆ. ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ನನಗೆ ಅನಿಸಿದ್ದು ಏನೆಂದರೆ ಇದನ್ನು ಇವರು ಪ್ರಾಕ್ಟಿಕಲ್ ಆಗಿ ಅಧಿಕಾರಿಗಳಿಂದ ಮಾಹಿತಿಯನ್ನು ಸಂಗ್ರಹ ಮಾಡಿದ್ದಾರೆ. ಇವರು ಕೆಲವು ಗ್ರಾಮ ಪಂಚಾಯಿತಿಗಳಿಗೆ ಹೋಗಿರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಇವರು ನಮ್ಮ ಭಾಗಕ್ಕೆ ಬಂದಿದ್ದಾರೆಯೇ? ನನ್ನ ಕ್ಷೇತ್ರದ 227 ಗ್ರಾಮ ಪಂಚಾಯಿತಿಗಳಿಗೆ ಸಂಬಂಧಪಟ್ಟಂತೆ ಮಾತ್ರ ನಾನು ಮಾಹಿತಿಯನ್ನು ಕೇಳಿದ್ದೆ. ಅದಕ್ಕೆ ಅವರು ಉತ್ತರ ಕೊಟ್ಟಿರುವಂತಹದ್ದರಲ್ಲಿ ನನಗೆ ಮತ್ತೆ ಅದರ ಬಗ್ಗೆ ಅನುಮಾನ ಪ್ರಾರಂಭವಾಗಿ ಸಂಬಂಧಪಟ್ಟವರಿಗೆ ದೂರವಾಣಿ ಮಾಡಿ, ಅವರುಗಳು ಕೂಡ ನನ್ನ ಮೇಲೆ ಒತ್ತಡ ಹಾಕಿದರು. ಹೀಗಾಗಿ, ಅಲ್ಲಿ ಇರುವಂತಹ ಸಮಸ್ಯೆಗಳು ಏನು ಎಂದು ನೋಡಬೇಕಾಗುತ್ತದೆ. Online ಮೂಲಕ ಏನೂ ಆಗುತ್ತಿಲ್ಲ. ಈಗ ಬಾಪೂಜಿ ಸೇವಾ ಕೇಂದ್ರ manual ಆಗಿ ಕೊಡುತ್ತಿರುವಂತಹದ್ದಾಗಿದೆ. ಅಲ್ಲಿ ಆನ್‌ಲೈನ್ ಕಡ್ಡಾಯ ಮಾಡಲಿಕ್ಕೆ ಏನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದೀರಿ ಎಂಬುದನ್ನು ಇಲ್ಲಿ ಹೇಳಲಿಲ್ಲ. ಈ ಕೆಲಸ ಆನ್‌ಲೈನ್ ಆಗಬೇಕಾದರೆ ಏನು ವ್ಯವಸ್ಥೆ ಮಾಡಿದ್ದೀರಿ? ಇವತ್ತು ಇದು manual ಆಗಿ ಆಗುತ್ತಿದೆ. ಇವತ್ತು ತಾಲ್ಲೂಕು ಆಫೀಸ್‌ನ ಎದುರುಗಡೆ ಬೆಳಿಗ್ಗೆ 5 ಗಂಟೆಯಿಂದ ಹೆಚ್ಚು ಕಡಿಮೆ 11-00 ಗಂಟೆಯವರೆಗೆ ಕ್ಯೂ ನಿಲ್ಲುವುದಕ್ಕೆ ಸಮಯವನ್ನು ಕೊಡುತ್ತಾರೆ. ಅವರುಗಳು ಕ್ಯೂ ನಲ್ಲಿ ಮಲಗಿರುತ್ತಾರೆ, ಕುಳಿತಿರುತ್ತಾರೆ, ಜೊತೆಗೆ ತಮ್ಮ ಜೊತೆ ತಂದಿರುವಂತಹ ಬ್ಯಾಗ್‌ಗಳನ್ನಿಟ್ಟಿರುತ್ತಾರೆ. ಏತಕ್ಕೆಂದರೆ ಅವರು ಪಹಣಿಯನ್ನು ತೆಗೆದುಕೊಳ್ಳಲಿಕ್ಕೆ ಬಂದಿರುತ್ತಾರೆ. ಇವತ್ತು ಪಹಣಿ ಇಲ್ಲದೇ ಸರ್ಕಾರದ ಸವಲತ್ತುಗಳು ಯಾವುದೂ ಸಹ ಸಿಕ್ಕುವುದಿಲ್ಲ. ನಾವು ಈ ಒಂದು ಕಾಳಜಿಯಿಂದ ಮಾತನಾಡುತ್ತಿದ್ದೇವೆಯೇ ವಿನಃ ಬೇರೆ ಯಾವುದೇ ಕಾಳಜಿ ಅಥವಾ ಮಂತ್ರಿಗಳ ಬಗ್ಗೆ ಏನಾದರೂ ಆರೋಪವನ್ನು ಹೊರಿಸಬೇಕು ಅಥವಾ ಸರ್ಕಾರವನ್ನು ವಿರೋಧ ಮಾಡಬೇಕೆನ್ನುವ ಉದ್ದೇಶ ನಮಗಿಲ್ಲ. ಇದನ್ನು ತಾವು ಯೋಚನೆ ಮಾಡಬೇಕು. ಹೀಗಾಗಿ ಮಾನ್ಯ ಮಂತ್ರಿಗಳು ಹೇಳಿರುವಂತಹ ವಿಚಾರಗಳು ಖಂಡಿತವಾಗಿ ಚೆನ್ನಾಗಿವೆ. ಆದರೆ, ನಾವು ಅವುಗಳ ಜಾರಿಯ ವಿಷಯವಾಗಿ ಹೇಳುತ್ತಿದ್ದೇವೆ. ಅದು ಕಾರ್ಯಗತ ಆಗಬೇಕಲ್ಲವೇ? ಅವುಗಳನ್ನು ಕಾರ್ಯಗತ ಮಾಡಬೇಕು. ಇಡೀ ರಾಜ್ಯದಲ್ಲಿರುವ ಎಲ್ಲಾ ಗ್ರಾಮ ಪಂಚಾಯಿತಿಗಳ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬಹುದೇ ವಿನಃ ಮಂತ್ರಿಗಳು ಎಲ್ಲದಕ್ಕೂ ಹೋಗಲಿಕ್ಕೆ ಆಗುವುದಿಲ್ಲ. ಆದರೆ, ಮಂತ್ರಿಗಳು ಕೇಳಿದಂತಹ ಪ್ರಶ್ನೆಗೆ ಅವರುಗಳು ಏನು ಉತ್ತರಗಳನ್ನು ಕೊಡುತ್ತಾರೆ, ಅದನ್ನು ಮಂತ್ರಿಗಳು ನಮಗೆ ಕಳುಹಿಸಿದ್ದಾರೆ. ಅದು ತಪ್ಪು ಇದೆ. ನಾನು ಇರುವಂತಹ ಮನೆಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಇವತ್ತು ಬಾಪೂಜಿ ಸೇವಾ ಕೇಂದ್ರ ಇರುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಊರು ಚನ್ನರಾಯಪಟ್ಟಣ ಪಂಚಾಯಿತಿಗೆ ಪ್ರತಿ ದಿನವೂ ಕೊಡುತ್ತೇವೆ.

**ಶ್ರೀ ಪ್ರಾಣೇಶ್ ಎಂ.ಕೆ.:-** ನಾನು ಬಿಲ್ಡಿಂಗ್ ವಿಷಯವಾಗಿ ಹೇಳಲಿಲ್ಲ. ಇರುವಂತಹ ಬಿಲ್ಡಿಂಗ್‌ನಲ್ಲಿ ಬಾಪೂಜಿ ಸೇವಾ ಕೇಂದ್ರ ಪ್ರಾರಂಭವಾಗಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿ ಎಲ್ಲಿಯೂ ಬೋರ್ಡ್‌ಗಳನ್ನು ಹಾಕಿರುವುದಿಲ್ಲ. ಎಲ್ಲಿಯಾದರೂ ಆ ರೀತಿ ಇದ್ದಲ್ಲಿ photo ತೆಗೆಸಿ ಕಳುಹಿಸಲಿಕ್ಕೆ ಹೇಳಿ. ನಾಳೆಯೇ ಅದರ ಮಾಹಿತಿಯನ್ನು ತರಲಿಕ್ಕೆ ಹೇಳಿ. ಎಲ್ಲಿಯೂ ಕೂಡ ಬಾಪೂಜಿ ಸೇವಾ ಕೇಂದ್ರ ಇದೆ ಎಂದು ಹೇಳಿ ಯಾವ ಗ್ರಾಮ ಪಂಚಾಯಿತಿಯಲ್ಲಿಯೂ ಒಂದು ಬೋರ್ಡ್ ಹಾಕಿರುವುದಿಲ್ಲ. ಹೆಚ್ಚು ಕಡಿಮೆ ಈ ರೀತಿಯ ಸಮಸ್ಯೆಗಳಿವೆ. ನನ್ನ ಕಳಕಳಿಯ ಮನವಿ ಏನೆಂದರೆ, ನಾವು ಅವರುಗಳನ್ನು ಪ್ರತಿನಿಧಿಸುವಂತಹವರಾಗಿದ್ದೇವೆ. ನಮ್ಮ ಹತ್ತಿರವೇ ಸಮಸ್ಯೆಗಳು ಬರುತ್ತವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದಕ್ಕೆ ಪರಿಹಾರವನ್ನು ಮಾನ್ಯ ಮಂತ್ರಿಗಳ ಮೂಲಕ ಮಾಡಿಸಬೇಕೆನ್ನುವ ಉದ್ದೇಶದಿಂದಲೇ ನಾವು ಇದನ್ನು ಚರ್ಚೆಗೆ ತೆಗೆದುಕೊಂಡಿದ್ದೇವೆಯೇ ವಿನಃ ಮತ್ತೇನೂ ಬೇರೆ ಉದ್ದೇಶವಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಸದಸ್ಯರಾದ ಶ್ರೀ ಪ್ರಾಣೇಶ್ ರವರು ಒಂದೇ ಜಿಲ್ಲೆಯವರಾಗಿದ್ದೇವೆ. ನಮ್ಮ ಚನ್ನರಾಯಪಟ್ಟಣ ಪಂಚಾಯಿತಿ ಬಗ್ಗೆ ಅವರಿಗೆ ಚೆನ್ನಾಗಿ ಗೊತ್ತಿದೆ. ನಮ್ಮ ಪಂಚಾಯಿತಿಯವರು ಸಹ ಅವರಿಗೆ ಚೆನ್ನಾಗಿ ಓಟು ಹಾಕಿದ್ದಾರೆ. ಬಾಪೂಜಿ ಕೇಂದ್ರ ಎಂದು ಮಾನ್ಯ ಮಂತ್ರಿಗಳು ಏನು ಹೇಳಿದರು, ಅದು ಸೇವಾ ಕೇಂದ್ರವಾಗಿದ್ದು, ಅದಕ್ಕೆ ಪ್ರತ್ಯೇಕವಾಗಿ ಎಲ್ಲಿಯೂ ಕಟ್ಟಡವಿರುವುದಿಲ್ಲ. ಬಾಪೂಜಿ ಕೇಂದ್ರ ಎಂದು ಹೇಳಿ ನಮ್ಮ ಊರಿನಲ್ಲಿ ಬೋರ್ಡ್ ಹಾಕಿದ್ದಾರೆ. ಆ ಸೇವಾ ಕೇಂದ್ರದಲ್ಲಿ ಏನೇನು ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿ ಪ್ರತಿಯೊಂದನ್ನೂ ಸಹ ಹಾಕಿದ್ದಾರೆ. ಅತಿ ಹೆಚ್ಚು ಉಪಯೋಗ ಆಗುವಂತಹದ್ದು ಎಂದರೆ ಅದು ಪಹಣಿ, ಆಧಾರ್ ಕಾರ್ಡ್ ಇಂತಹ ವಿಚಾರಗಳಿಗೆ ಅಲ್ಲಿ ಕೆಲಸಗಳು ಹೆಚ್ಚಾಗುತ್ತಿವೆ. ತಾಲ್ಲೂಕು ಕೇಂದ್ರಗಳಿಗೆ ಅತಿ ಹೆಚ್ಚು ಜನರು ಬರುತ್ತಾರೆ. ಹೀಗಾಗಿ, ಅಲ್ಲಿ ಅತಿ ಹೆಚ್ಚು ಕ್ಯೂ ಇರುತ್ತದೆ. ಹೀಗಾಗಿ ಬಾಪೂಜಿ ಸೇವಾ ಕೇಂದ್ರ ಬಹಳ ಉಪಯೋಗವಾಗುವಂತಹ ಕೇಂದ್ರವಾಗಿದೆ. ನಮ್ಮಲ್ಲಿ ಇರತಕ್ಕಂತಹ ಪಂಚಾಯಿತಿಗಳಲ್ಲಿ ಸೇವಾ ಕೇಂದ್ರ ಇದೆ. ಕೆಲಸ ಮಾಡುತ್ತಿದೆ. ಆದರೆ, ಶ್ರೀ ಪ್ರಾಣೇಶ್‌ರವರ ಕಡೆ ಏನಾಗುತ್ತದೆ ಎಂದರೆ, ಅದು ಮಲೆನಾಡು ಪ್ರದೇಶ; ಅದರಲ್ಲೂ ಅದು ಪ್ಯೂರ್ ಮಲೆನಾಡು ಪ್ರದೇಶವಾಗಿರುತ್ತದೆ. ಆ ಪ್ಯೂರ್ ಮಲೆನಾಡಿನಲ್ಲಿ ಆ ಸೇವಾ ಕೇಂದ್ರ ಇದ್ದರೂ ಕೂಡ ಉಪಯೋಗವಾಗದ ರೀತಿಯಲ್ಲಿ ಇರುತ್ತದೆ. Continuous power ಇರುವುದಿಲ್ಲ. ಹೀಗಾಗಿ ಬಯಲು ಸೀಮೆ ಪ್ರದೇಶದಲ್ಲಿ ಈ ಬಾಪೂಜಿ ಸೇವಾ ಕೇಂದ್ರ ಬಹಳ ಪರಿಪಕ್ವವಾಗಿ ಕೆಲಸ ಮಾಡುತ್ತಿದೆ. ಅದಕ್ಕೆ ಪ್ರತ್ಯೇಕ ಕಟ್ಟಡವನ್ನು ಕಟ್ಟಿ ಅದಕ್ಕೆ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಇದ್ದಂತಹ ಪಂಚಾಯಿತಿ ಕಟ್ಟಡದಲ್ಲಿ ಒಂದು ಮೂಲೆಯಲ್ಲಿ ಆ ಒಂದು ಸೇವಾ ಕೇಂದ್ರವನ್ನು ಮಾಡಿದ್ದಾರೆ, ಅಲ್ಲಿ ಜನರು ಆ ಸೌಲಭ್ಯವನ್ನು ಉಪಯೋಗ ಮಾಡಿಕೊಳ್ಳುತ್ತಾರೆ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೆ, ಅದರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸೇವೆಗಳನ್ನು 49,22,780 ಫಲಾನುಭವಿಗಳು ಪಡೆದಿದ್ದಾರೆಂದು ಅಂಕಿ-ಅಂಶಗಳೊಂದಿಗೆ ಹೇಳಿದ್ದಾರೆ. ಇದು 2016 ರಲ್ಲಿ ಬಾಪೂಜಿ ಸೇವಾ ಕೇಂದ್ರ ಸ್ಥಾಪನೆ ಅಥವಾ ಅವರಿಗೆ ನೇಮಿಸಿದ ಮೇಲೆ ಇರತಕ್ಕಂತಹ ಅಂಕಿ-ಅಂಶಗಳು ಎಂದು ನಾನು ತಿಳಿದುಕೊಳ್ಳುತ್ತೇನೆ. ಹೀಗಾಗಿ, ಮೊದಲನೆಯದಾಗಿ, 2016 ರಲ್ಲಿ ಅವರು ಕೊಟ್ಟಿರುವಂತಹದ್ದು ಪಂಚಾಯತ್ ರಾಜ್ ಇಲಾಖೆಯಿಂದ 43 ಸೇವೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದರು, ತದನಂತರ ಕಂದಾಯ ಇಲಾಖೆಯಿಂದ 40 ಸೇವೆಗಳನ್ನು ಕೊಟ್ಟಿದೆ ಮತ್ತು 17 ವಾಣಿಜ್ಯ ಸೇವೆಗಳನ್ನು ಕೊಟ್ಟಿದೆ. ಹೀಗೆ ಒಟ್ಟು 100 ಸೇವೆಗಳನ್ನು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಇದು ಔಟ್‌ಸೋರ್ಸ್ ಮಾಡುವಂತಹ ರೀತಿಯಲ್ಲಿ ಏನು ಸರ್ಕಾರ ಕೊಡುವಂತಹ extract ಅಥವಾ ಸರ್ವೀಸಸ್ ಏನಿದೆ, ಅದನ್ನು ಕೊಡುವುದಕ್ಕೆ ಒಂದು ಸಂಸ್ಥೆಯನ್ನು ನಾವು ನೇಮಿಸಿದ್ದೇವೆ.

ಮುಂದು. . .

(540) 18.12.2018 06.10 SV-GR

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್ (ಮುಂದು):-** ಎಷ್ಟು ಪರಿಣಾಮಕಾರಿಯಾಗಿ ಕೆಲಸ ಆಗುತ್ತದೆ ಎಂಬುದು ಇದರ ಉದ್ದೇಶ. ಇದಕ್ಕೆ ನಾವು ಸೇವಾ ಕೇಂದ್ರ ಎಂದು ಹೇಳುತ್ತೇವೆ. ಇದಕ್ಕೆ ನನ್ನ ಸಲಹೆ ಏನೆಂದರೆ ಇದು ಬಾಪೂಜಿ ಗ್ರಾಮ ಸೇವಾ ಕೇಂದ್ರ ಎಂದು ಗ್ರಾಮದಲ್ಲಿರಬೇಕು ಅಥವಾ ತಾಲ್ಲೂಕು ಮಟ್ಟದಲ್ಲಿದ್ದರೆ ಬಾಪೂಜಿ ತಾಲ್ಲೂಕು ಸೇವಾ ಕೇಂದ್ರ ಎಂದು ಇರಬೇಕು. ಹಾಗೆಯೇ ಜಿಲ್ಲಾ ಸೇವಾ ಕೇಂದ್ರ ಎಂದು ಇರಬೇಕು. ಜಿಲ್ಲಾ ಮಟ್ಟದಲ್ಲಿ ಕೊಡುವಂತಹ ಸೇವೆಗಳು ಬೇರೆ ಬೇರೆ ಇರುತ್ತವೆ. ತಾಲ್ಲೂಕು ಮಟ್ಟದಲ್ಲಿ ಕೊಡುವಂತಹ ಸೇವೆಗಳು ಬೇರೆಯಾಗಿರುತ್ತವೆ. ಈಗ ಬೆಂಗಳೂರು ನಗರದಲ್ಲಿ ತೆಗೆದುಕೊಳ್ಳುವ ಸೇವೆಗಳಾದ ಜಾತಿ ಪ್ರಮಾಣಪತ್ರವಾಗಿರಬಹುದು, ಆಧಾರ್ ಕಾರ್ಡ್ ಇರಬಹುದು; ಇಲ್ಲಿಯೂ ಸಹ ನಗರೀಕರಣವಾಗಿದ್ದರೂ ಸಹ ಗ್ರಾಮೀಣ ಸೌಲಭ್ಯಗಳನ್ನು ಪಡೆದುಕೊಳ್ಳುವುದು ಆಗಲೇಬೇಕಾಗಿದೆ. ಹಾಗಾಗಿ ಇದನ್ನು ವಿಭಾಗಿಸಿದರೆ ಬಹಳ ಪರಿಣಾಮಕಾರಿಯಾಗುತ್ತದೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಲ್ಲರೂ ತಲೆದೂಗುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು. ಇದರಲ್ಲಿ ಎರಡು ಮಾತಿಲ್ಲ. ನೂರು ಸೇವೆಯನ್ನು ಸರ್ಕಾರ ಘೋಷಣೆ ಮಾಡಿದೆ. ನೂರು ಏಕೆ ಕೊಟ್ಟಿಲ್ಲ ಎಂದು ನಾವು ಕೇಳುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ಹೇಳಿರುವಂತಹ 16 ಸೇವೆಗಳಾದ ವಿಮಾನ ಟಿಕೆಟ್, ರೈಲು ಟಿಕೆಟ್ ಇತ್ಯಾದಿಗಳು ಇಂದಿನ ಸ್ಮಾರ್ಟ್ ಯುಗದಲ್ಲಿ ನಮ್ಮ ಟಿಕೆಟ್ ಅನ್ನು ನಾವೇ ಮಾಡಿಕೊಳ್ಳಬೇಕಾದಂತಹ ಪರಿಸ್ಥಿತಿ ಇದೆ. ಅದನ್ನು ಏಕೆ ಕೊಟ್ಟಿಲ್ಲ ಎಂದು ನಾವು ಕೇಳುವುದಿಲ್ಲ. ಮಾನ್ಯ ಸಚಿವರು 47 ಲಕ್ಷ ಆರ್.ಟಿ.ಸಿ., ಗಳನ್ನು ಕೊಡಲಾಗಿದೆ ಎಂದು ಹೇಳಿದರು. ಇದರಲ್ಲಿ ನಮ್ಮ ಗೊಂದಲವಿಲ್ಲ. ನಾವೂ ಸಹ ಇಷ್ಟು ಆರ್.ಟಿ.ಸಿ., ಗಳನ್ನು ಕೊಡಲಾಗಿದೆ ಎಂದು ಹೇಳಿದ್ದೇವೆ. ಒಂದು ಲಕ್ಷಕ್ಕೂ ಹೆಚ್ಚು ಜಾತಿ ಆದಾಯ ಪ್ರಮಾಣ ಪತ್ರವನ್ನು ನೀಡಲಾಗಿದೆ ಎಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದರು. 6,020 ಗ್ರಾಮ ಪಂಚಾಯ್ತಿಗಳ ಪೈಕಿ 4,500 ಗ್ರಾಮ ಪಂಚಾಯ್ತಿಗಳಲ್ಲಿ ಬಾಪೂಜಿ ಸೇವಾ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ಅದರಲ್ಲಿ ಒಂದೂವರೆ ಲಕ್ಷ ಹೆಚ್ಚೇನೂ ಅಲ್ಲ. ಆದರೆ ಇದರ ಸೇವೆಗಳಾದ ಜಾತಿ ಆದಾಯ, ವಿಧವಾ ವೇತನ, ಅಂಗವಿಕಲ ವೇತನ, ವೃದ್ಧಾಪ್ಯ ವೇತನ, ಬಡವರ ಕಲ್ಯಾಣ ಯೋಜನೆಗಳು ಇವೆಲ್ಲವನ್ನು ಗ್ರಾಮ ಪಂಚಾಯ್ತಿಯ ಮಟ್ಟದಲ್ಲಿ ನಿರ್ವಹಿಸಬೇಕು. ಯಾರೋ ಒಬ್ಬರು ಜಾತಿ ಆದಾಯ ಪ್ರಮಾಣ ಪತ್ರಕ್ಕಾಗಿ ಗ್ರಾಮ ಪಂಚಾಯ್ತಿಗೆ ಅರ್ಜಿಯನ್ನು ಕೊಟ್ಟರೆ, ಅವರು ಅದನ್ನು ನಾಡ ಕಛೇರಿಗೆ ಕಳುಹಿಸಿಕೊಡುತ್ತಾರೆ. ಅಲ್ಲಿಂದ ಆರ್.ಐ.ಗೆ ನಂತರ ವಿ.ಎ.,ಗೆ ಕಳುಹಿಸಲಾಗುತ್ತದೆ. ನಂತರ ಗ್ರಾಮ ಸಹಾಯಕ ಬಂದು ಅದನ್ನು ತೆಗೆದುಕೊಂಡು ಹೋಗಿ ಮಂಜೂರು ಮಾಡಿ ನಮ್ಮಲ್ಲಿ ಕೊಡುತ್ತಾರೆ. ನಾನು ಹೇಳುತ್ತಿರುವುದು ಅದನ್ನಲ್ಲ. ಗ್ರಾಮ ಪಂಚಾಯ್ತಿ ಅಧ್ಯಕ್ಷನಿಗೆ ಒಂದು ಅರ್ಜಿಯನ್ನು ಕೊಟ್ಟರೆ ಸಂಜೆಯ ಒಳಗಾಗಿ ಮಂಜೂರಾತಿಯನ್ನು ಕೊಡುವಂತಾಗಬೇಕು. ಪಿಡಿಓಗಳನ್ನು 'ಬಿ' ದರ್ಜೆಗೆ ಏರಿಸಿದರೆ ಅವರೇ ಸರ್ವ ತನಿಖೆಯನ್ನು ಮಾಡಿ ಮಂಜೂರಾತಿಯನ್ನು ನೀಡಬೇಕೆಂದು ನಾವು ಕೇಳಿದ್ದೆವು. ಅದಕ್ಕೆ ಹಿಂದಿನ ಸರ್ಕಾರ ಕೊಡಲು ಪ್ರಯತ್ನ ಮಾಡಲಾಗುವುದು ಎನ್ನುವ ಮಾತನ್ನು ಹೇಳಿತ್ತು ಎಂಬುದನ್ನು ತಮ್ಮ ಗಮನಕ್ಕೆ ತಂದಿರುತ್ತೇವೆ. ಅದನ್ನು ಯಾವಾಗ ಮಾಡಲಾಗುವುದು? ಇದನ್ನು ಅನುಷ್ಠಾನಕ್ಕೆ ತರುವುದು ಸರ್ಕಾರದ ಪರಮಾಧಿಕಾರ. ನಮ್ಮ ಗ್ರಾಮ ಪಂಚಾಯ್ತಿಯಲ್ಲಿ ಬಡವರ ಕಲ್ಯಾಣ ಯೋಜನೆಯನ್ನು ಅನುಷ್ಠಾನ ಮಾಡುವುದಕ್ಕೆ ಅಧಿಕಾರವನ್ನು ಕೊಡುವಂತಹ 'ಬಿ' ದರ್ಜೆಗೇರಿಸುವಂತಹ ಕೆಲಸವನ್ನು ಯಾವಾಗ ಮಾಡಲಾಗುತ್ತದೆ ಎಂಬುದನ್ನು ಸ್ಪಷ್ಟ ಪಡಿಸಬೇಕು.

ಸರ್ಕಾರ ಯಾವುದೇ ಗೊಂದಲಕ್ಕೊಳಗಾಗದೆ Data Entry ಸಿಬ್ಬಂದಿಗಳಲ್ಲಿ 3 ವರ್ಷಕ್ಕಿಂತಲೂ ಹೆಚ್ಚಿಗೆ ಸೇವೆಯನ್ನು ಸಲ್ಲಿಸಿರುವವರನ್ನು ಏಕಕಾಲಕ್ಕೆ ಖಾಯಂಗೊಳಿಸಬೇಕು. ಈ ವ್ಯವಸ್ಥೆಯಿಂದ ಆರ್ಥಿಕ ಹೊರೆ ಉಂಟಾಗುವುದಿಲ್ಲ. ಅದರ ಬಗ್ಗೆ ಗೊಂದಲ ಮಾಡಿಕೊಳ್ಳದೆ ಈ ರೀತಿ ಮಾಡಬೇಕೆಂದು ನಾವು ಹೇಳಿದ್ದೆವು. ಯಾವ ರೀತಿಯಾಗಿ ಮಾಡಲಾಗುವುದು ಎಂದರೆ ಬಾಪೂಜಿ ಸೇವಾ ಕೇಂದ್ರದಲ್ಲಿ ಹಣ ಬರುತ್ತದೆ ಎಂದು ಹೇಳಲಾಯಿತು. ನೀವು ಏಕೆ ಬಳಸಿಕೊಳ್ಳಲಿಲ್ಲವೆಂದು ಕೇಳಿದಾಗ ಪ್ರತಿಯೊಂದಕ್ಕೂ ಮಾರ್ಗಸೂಚಿಯನ್ನು ಹೇಳಿದರು. ಸರ್ಕಾರ ರೂ.5 ಅಥವಾ ರೂ.7.50 ಏನು ಕೊಡುತ್ತದೆಯೋ ಅದರ ಬಗ್ಗೆ ನಾನು ಇಲ್ಲವೆಂದು ಹೇಳುವುದಿಲ್ಲ. ಒಪ್ಪಿಕೊಳ್ಳುತ್ತೇನೆ. ಉಳಿಕೆಯಾದ ಹಣವನ್ನು ಬಳಸಿಕೊಳ್ಳುವುದಕ್ಕೆ ಇಂತಹ ಮಾರ್ಗಸೂಚಿಯನ್ನು ಕೊಡದೆ ಇದ್ದರೆ ಯಾವ ಪಿ.ಡಿ.ಓ., ಗಳು ಒಪ್ಪುವುದಿಲ್ಲವೆಂದಷ್ಟೇ ನಾನು ಮಾನ್ಯ ಸಚಿವರ ಬಳಿ ಹೇಳಲಿಚ್ಛಿಸುತ್ತೇನೆ. ಆದ್ದರಿಂದ ಒಂದು ಮಾರ್ಗಸೂಚಿಯನ್ನು ತಕ್ಷಣವೇ ಪ್ರಕಟಿಸಬೇಕು. ಈ ವಿಚಾರದಲ್ಲಿ ನಾವು ಸರ್ಕಾರಕ್ಕೆ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಪೂರ್ಣ ಸಹಕಾರವನ್ನು ನೀಡುತ್ತಿದ್ದೇವೆ. ಆದರೆ ನಮ್ಮ ತಾಳ್ಮೆಗೂ ಒಂದು ಮಿತಿಯಿದೆ ಎಂಬುದು ನಮ್ಮ ಆಗ್ರಹವಾಗಿದೆ.

**ಶ್ರೀ ಕೃಷ್ಣ ಬೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್ ಅವರು ಮೊದಲು ಹೇಳಿದುದನ್ನೇ ಪುನಃ ಹೇಳಿರುತ್ತಾರೆ. ನಾನೂ ಸಹ ಅದನ್ನೇ ಪುನರುಚ್ಚಾರ ಮಾಡಬೇಕಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಸೇವೆಗಳನ್ನು ಮತ್ತು ಯಾವ ಯಾವ ಸೇವೆಗಳನ್ನು ಕೊಡಲಾಗಿದೆ ಎಂಬುದರ ಬಗ್ಗೆ ನಾನು ನಾಳೆಯೇ ಅವರಿಗೆ ಮಾಹಿತಿಯನ್ನು ನೀಡುತ್ತೇನೆ. ಅದರ ಬಗ್ಗೆ ನಾನು ಹೆಚ್ಚಿಗೆ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಬೋರ್ಡ್ ಒಳಗೆ ಹಾಕಿಕೊಂಡಿರುತ್ತಾರೆ. ಜನರಿಗೆ ಸೇವೆಗಳು ಲಭಿಸಬೇಕು ಎನ್ನುವುದು ಮಾತ್ರ ಮುಖ್ಯ ಉದ್ದೇಶವಾಗಿರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಟ್ಟಡ, ಬೋರ್ಡ್ ಅವುಗಳನ್ನೆಲ್ಲಾ ನಾವು ನೋಡಿಕೊಳ್ಳುತ್ತೇವೆ. ಸಣ್ಣಪುಟ್ಟ ಹೆಚ್ಚುಕಡಿಮೆಗಳಿಗೆ ಮಾನ್ಯ ಸಚಿವರ ಬಳಿ ಜಗಳವಾಡಿದರೆ ತಪ್ಪೇನೂ ಇಲ್ಲ. ಆದರೆ ಗಂಭೀರವಾದ ಈ ವಿಚಾರದ ಬಗ್ಗೆ ಸರ್ಕಾರದ ಕ್ರಮವೇನು?

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಆ ವಿಚಾರಕ್ಕೂ ಬರುತ್ತೇನೆ. ಮೊದಲು ಅವರು ಹೇಳಿರುವುದಕ್ಕೆ ಉತ್ತರ ಹೇಳಬೇಕಲ್ಲವೇ? ಬಾಪೂಜಿ ಸೇವಾ ಕೇಂದ್ರ ಕೆಲಸವನ್ನು ಮಾಡದೆ 37,50,000 ಪಹಣಿಗಳನ್ನು ನಾವು ಮಾಡುವುದಕ್ಕೆ ಆಗುತ್ತಿತ್ತೇ ಎಂಬುದನ್ನು ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ. ಮಾನ್ಯ ಪ್ರಾಣೇಶ್ ಅವರಿಗೆ ಒಂದು ಮಾತನ್ನು ಹೇಳುತ್ತೇನೆ. ಏಕೆಂದರೆ ನಾವು ಎಲ್ಲರಿಗೂ ಉತ್ತರವನ್ನು ಕೊಡಬೇಕು. 1,11,000 Revenue services, 3,25,000 Food and Civil Supplies Services, ಪಿಂಚಣಿಗಳು ಎಲ್ಲವೂ ಸೇರಿದರೆ 40-45 ಲಕ್ಷ ಸೇವೆಗಳನ್ನು, without operationalising Bapuji Seva Kendra, ಕೊಡುವುದಕ್ಕಾಗುತ್ತಿತ್ತೇ ಎಂಬ ವಿಚಾರವನ್ನು ತಮಗೆ ಬಿಡುತ್ತೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ನೀಡಲಾಗಿದೆ ಎಂಬುದರ ಬಗ್ಗೆ ನಾನು ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ಕೊಡುತ್ತೇನೆ. ಅದರಲ್ಲಿಯೂ ಸಹ ಗ್ರಾಮಪಂಚಾಯ್ತಿವಾರು ಮಾಹಿತಿಯನ್ನು ಒಂದು ಸಿ.ಡಿ. ಮಾಡಿಕೊಡಲು ಸಾಧ್ಯವಾಗುತ್ತದೆಯೇ ಎಂದು ನೋಡುತ್ತೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ಸ್ವಲ್ಪ ಅಧ್ಯಯನವನ್ನು ಮಾಡಿ ಯಾವ ಗ್ರಾಮ ಪಂಚಾಯ್ತಿಯಲ್ಲಿ ಆಗುತ್ತಿದೆ, ಯಾವ ಗ್ರಾಮ ಪಂಚಾಯ್ತಿಯಲ್ಲಿ ಆಗುತ್ತಿಲ್ಲ ಎಂಬ ಮಾಹಿತಿಯನ್ನು ನೀಡಿದರೆ, ನಾವು ಎಲ್ಲಿ ಆಗುತ್ತಿಲ್ಲವೋ ಅಲ್ಲಿಗೆ concentrate ಮಾಡಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮೂರು ವಿಚಾರಗಳನ್ನು ಹೇಳಿದ್ದಾರೆ. ಪಿ.ಡಿ.ಓ., ಗಳನ್ನು 'ಬಿ' ದರ್ಜೆಗೆ ಏರಿಸುವುದು ಪ್ರತ್ಯೇಕವಾದ ವಿಚಾರ. ಅದನ್ನು ಈ ವಿಚಾರಗಳೊಂದಿಗೆ ಸೇರಿಸಿ ಮಿಕ್ಸ್ ಮಾಡುವುದಕ್ಕೆ ಹೋಗುವುದಿಲ್ಲ. ಆ ವಿಚಾರದಲ್ಲಿ ನನ್ನ ಅಭಿಪ್ರಾಯವೇನೆಂದು ನಾನು ಈ ಸದನದಲ್ಲಿ ಹಿಂದೆಯೇ ಹೇಳಿರುತ್ತೇನೆ. ನಾವು one and one ಚರ್ಚೆ ನಡೆದಾಗಲೂ ಸಹ ಅವರೊಂದಿಗೆ ನಾನು ವಿಷಯವನ್ನು ಹಂಚಿಕೊಂಡಿದ್ದೇನೆ.

ಇನ್ನು Data Entry Operator ಗಳ ವಿಚಾರದ ಬಗ್ಗೆ ಹೇಳುವುದಾದರೆ ಈಗ ಇರುವವರಿಗೆ ಸರ್ಕಾರದಿಂದಲೇ ಸಂಬಳ ಹೋಗುತ್ತಿದೆ. ಇದಕ್ಕೆ ಕಳೆದ ವರ್ಷ ಸರ್ಕಾರ ಒಪ್ಪಿಗೆಯನ್ನು ನೀಡಿ, ಈ ವರ್ಷ ಏಪ್ರಿಲ್‌ನಿಂದ ಅವರ ವೇತನವನ್ನು ಸರ್ಕಾರದಿಂದಲೇ ಪಾವತಿಸಲಾಗುತ್ತಿದೆ. ಹೆಚ್ಚುವರಿ ಅವಶ್ಯಕತೆಯಿರುವ ಕಡೆಯಲ್ಲಿ ಬ್ಲಾಂಕೆಟ್ ಆಗಿ ಅನುಮತಿಯನ್ನು ಕೊಡುವುದು ಬೇಡ. ನಾನು ಎರಡು ವಿಚಾರಗಳನ್ನು ಹೇಳಿದ್ದೇನೆ. ಅದಕ್ಕೆ ಮೊದಲು ಮಾನ್ಯ ವಿರೋಧಪಕ್ಷದ ನಾಯಕರು ಮತ್ತೊಂದು ವಿಚಾರವನ್ನು ಹೇಳಿದರು. ನಾನು ಅದನ್ನೂ ಇದನ್ನೂ ಎರಡನ್ನೂ ಲಿಂಕ್ ಮಾಡಿ ಹೇಳುತ್ತಿದ್ದೇನೆ. ಒಂದು Additional Data Entry Operatorಗೆ ಅವಕಾಶ ಕೊಡಬೇಕೆನ್ನುವುದು ಮಾನ್ಯ ವಿರೋಧ ಪಕ್ಷದ ನಾಯಕರ ವಾದವಾಗಿದೆ. ಅವಶ್ಯಕತೆಗನುಗುಣವಾಗಿ ಒಂದು ನಿರ್ದಿಷ್ಟ ಮಾನದಂಡವನ್ನು ಇಟ್ಟುಕೊಳ್ಳಬೇಕು. ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ನನಗೂ ಆಸಕ್ತಿ ಇಲ್ಲ. ಶೇ.80ರಷ್ಟು ತೆರಿಗೆಯನ್ನು ಸಂಗ್ರಹ ಮಾಡುವವರಿಗೂ, ಶೇ.2ರಷ್ಟು ತೆರಿಗೆಯನ್ನು ಸಂಗ್ರಹ ಮಾಡುವವರಿಗೂ ನಾವು ಒಂದೇ response ಕೊಡುವುದಕ್ಕೆ ಸಾಧ್ಯವೇ? ಹಾಗಾದರೆ ಶೇ.80ರಷ್ಟು ತೆರಿಗೆಯನ್ನು ಸಂಗ್ರಹ ಮಾಡುವವರಿಗೆ ನಮ್ಮಿಂದ ಏನು positive response ಕೊಟ್ಟಹಾಗೆ ಆಯಿತು? ಮೊದಲನೆಯದಾಗಿ ಅವರಿಗೆ ತಡೆದುಕೊಳ್ಳುವುದಕ್ಕೆ ಶಕ್ತಿ ಇರಬೇಕು. ಎರಡನೆಯದಾಗಿ ಬಾಪೂಜಿ ಸೇವಾ ಕೇಂದ್ರವನ್ನು ಬಳಸುತ್ತಿರಬೇಕು. ಇಂದು ಮಾನ್ಯ ಸದಸ್ಯರೆಲ್ಲರೂ ಬಾಪೂಜಿ ಸೇವಾ ಕೇಂದ್ರದಲ್ಲಿ ಇನ್ನೂ ಹೆಚ್ಚಿನ ಸೇವೆಗಳನ್ನು ಕೊಡಬೇಕಿತ್ತೆಂದು ನನ್ನನ್ನು ಪ್ರಶ್ನೆ ಮಾಡುತ್ತಿದ್ದಾರೆ. ಕೊಡುವುದಕ್ಕೆ ನಾವು ಐ.ಟಿ., ಯಲ್ಲಿ, ಸಿಸ್ಟಂನಲ್ಲಿ enable ಮಾಡಿದ್ದೇವೆ. ಕೊಡಬೇಕಾಗಿರುವವರು ಆ ಸಿಬ್ಬಂದಿಗಳು. ಆಸಕ್ತಿ ಇದ್ದು ಮಾಡುವವರು, ಡಿಮ್ಯಾಂಡ್ ಅನ್ನು ಜನರೇಟ್ ಮಾಡುವವರು. ಯಾವ ತರಹದ ಡಿಮ್ಯಾಂಡ್ ಎಂದು ಕೇಳಬಹುದು. ಎಷ್ಟು ಸೇವೆಗಳು ಯಾವ ಗ್ರಾಮ ಪಂಚಾಯ್ತಿಯಲ್ಲಿ ಡೆಲಿವರ್ ಆಗಿವೆ ಎಂಬುದನ್ನು ಕೇವಲ ಒಂದು ಬಟನ್ ಒತ್ತುವ ಮೂಲಕ ತಿಳಿದುಕೊಳ್ಳಬಹುದು. ಎಲ್ಲಿ higher delivery of services ಆಗುತ್ತಿದೆ ಹಾಗೂ ಸ್ವಲ್ಪ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

financial discipline ಇಟ್ಟುಕೊಂಡಿದ್ದಾರೆ, ಅಂತಹ ಕಡೆಗೆ ಕೊಡುವುದಕ್ಕೆ ನನ್ನದು ಯಾವುದೇ ತಕರಾರು ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದುದನ್ನು ಜಾರಿಗೆ ತರುವುದಕ್ಕೆ in principle ನನ್ನ ಸಹಮತವಿದೆ. ಯಾವ ರೀತಿಯಲ್ಲಿ ಮಾಡಬೇಕೆಂಬುದರ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಆದಷ್ಟು ಬೇಗ ಆದೇಶವನ್ನು ಮಾಡಲಾಗುವುದು.

ಮೂರನೆಯದಾಗಿ ಹಣ ಬಳಕೆ ಮಾಡುವುದಕ್ಕೆ ನಿರ್ದಿಷ್ಟವಾದಂತಹ ಮಾಹಿತಿ ಇಲ್ಲದೆ ಇರುವುದರಿಂದ ಬಳಕೆಯಾಗುತ್ತಿಲ್ಲ ಎನ್ನುವ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಅದನ್ನೂ ಸಹ ನಾನು ಇಂದೇ ಪರಿಶೀಲಿಸುತ್ತೇನೆ. ಅದು ಹಿಂದೆ ಇಷ್ಯೂ ಆಗಿದ್ದರೆ, ಅದನ್ನು ಇಂದೇ ರಿ–ಇಷ್ಯೂ ಮಾಡುತ್ತೇವೆ. ಆಗಿಲ್ಲವೆಂದರೆ ಒಂದೆರಡು ದಿನಗಳೊಳಗೆ ಈ ರೆವಿನ್ಯೂ ಶೇರಿಂಗ್‌ನಲ್ಲಿ ಗ್ರಾಮ ಪಂಚಾಯ್ತಿಗೆ ಬರುತ್ತಿರುವ ರೆವಿನ್ಯೂ ಶುಲ್ಕವನ್ನು ಯಾವ ರೀತಿ ಉಪಯೋಗಿಸಬಹುದು ಎಂಬುದರ ಕುರಿತು ಒಂದೆರಡು ದಿನಗಳೊಳಗಾಗಿ ನಾವು ಸುತ್ತೋಲೆಯನ್ನು ಹೊರಡಿಸುತ್ತೇವೆ.

**ಆ) ವಿಷಯ:– ಚಿನ್ನ ಬೆಳ್ಳಿ ಕೆಲಸಗಾರರ ಮೇಲೆ ವಿನಾ ಕಾರಣ ದೂರು ದಾಖಲು ಮಾಡುತ್ತಿರುವುದು, ಕಳ್ಳತನ ಪ್ರಕರಣಗಳ ತನಿಖೆ ನೆಪದಲ್ಲಿ ಚಿನ್ನ – ಬೆಳ್ಳಿ ಕೆಲಸಗಾರರ ಮೇಲೆ ದೌರ್ಜನ್ಯ ನಡೆಸುತ್ತಿರುವ ಬಗ್ಗೆ**

***

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಚಿನ್ನ – ಬೆಳ್ಳಿ ಕೆಲಸಗಾರರ ಮೇಲೆ ವಿನಾಕಾರಣ ದೂರು ದಾಖಲು ಮಾಡುತ್ತಿರುವುದು, ಕಳ್ಳತನ ಪ್ರಕರಣಗಳ ತನಿಖೆಯ ನೆಪದಲ್ಲಿ ಚಿನ್ನ ಬೆಳ್ಳಿ ಕೆಲಸಗಾರರ ಮೇಲೆ ದೌರ್ಜನ್ಯ ನಡೆಸುತ್ತಿರುವ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಯವರ ಗಮನವನ್ನು ಸೆಳೆಯ ಬಯಸುತ್ತೇನೆ.

**ಡಾ:ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಉತ್ತರಗಳನ್ನು ಒದಗಿಸಲಾಗಿದೆ. ಮಾನ್ಯ ನಂಜುಂಡಿಯವರು ನನಗೆ ಬಹಳ ಆತ್ಮೀಯ ಸ್ನೇಹಿತರು. ಮೊದಲು ಈ ಕಡೆಯಿದ್ದವರು, ಈಗ ಆ ಕಡೆಗೆ ಹೋಗಿರುತ್ತಾರೆ. ಅನೇಕ ಸಂದರ್ಭಗಳಲ್ಲಿ ನಾವು ಚರ್ಚೆಯನ್ನು ಮಾಡಿರುತ್ತೇವೆ. ಕಳೆದ ಬಾರಿ ಕೂಡ ನಾನು ಗೃಹ ಸಚಿವನಾಗಿದ್ದಾಗ ಅವರು ನನ್ನೊಡನೆ ಪ್ರಸ್ತಾಪ ಮಾಡಿದ್ದಾರೆ. ಅವರ ಸಮುದಾಯದವರು ಚಿನ್ನ ಬೆಳ್ಳಿ ವ್ಯಾಪಾರವನ್ನು ಮಾಡುತ್ತಿದ್ದು, ಅವರಿಗೆ ಪೊಲೀಸರು ಅನವಶ್ಯಕವಾಗಿ ತೊಂದರೆಯನ್ನು ಕೊಡುತ್ತಿದ್ದಾರೆ ಎಂದು ಚರ್ಚೆ ಮಾಡಿದ್ದಾರೆ. ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(...ಮುಂದು)**

(541) 18.12.2018 ಕೆಜಿ.ಎಂ.ಡಿ 6.20

**ಡಾ॥ ಜಿ.ಪರಮೇಶ್ವರ (ಉಪ ಮುಖ್ಯಮಂತ್ರಿ ಮತ್ತು ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಸದಸ್ಯರಾದಂತಹ ಶ್ರೀ ಕೆ.ಪಿ.ನಂಜುಂಡಿಯವರು ಬಹಳ ಆತ್ಮೀಯ ಗೆಳೆಯರು. ನಾನು ಈ ಹಿಂದೆ ಗೃಹ ಸಚಿವನಾಗಿದ್ದಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ನನ್ನ ಜೊತೆಗೆ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ನಮ್ಮ ಸಮುದಾಯದವರು ಚಿನ್ನ–ಬೆಳ್ಳಿ ವ್ಯಾಪಾರ ಮಾಡುತ್ತಾರೆ. ಅವರ ಮೇಲೆ ಅನವಶ್ಯಕವಾಗಿ ಪೊಲೀಸರು ಬಹಳ ತೊಂದರೆ ಕೊಡುತ್ತಾರೆಂದು ಪ್ರಸ್ತಾಪ ಮಾಡಿದ್ದಾರೆ. ನಾವು ಅದನ್ನು ಚರ್ಚೆ ಮಾಡಿದ್ದೇವೆ. ಇದು ಬಹಳ ಗಂಭೀರವಾದಂತಹ ವಿಷಯ. ಜೊತೆಗೆ ಸಾಮಾನ್ಯ ಜನರಿಗೆ ತೊಂದರೆ ಕೊಡುವುದಕ್ಕೆ ಇದೆಯೇ ಎಂದು ಒಂದೊಂದು ಬಾರಿ ಭಾವನೆ ಬರುತ್ತದೆ. ಚಿನ್ನ–ಬೆಳ್ಳಿ ವ್ಯಾಪಾರ ಮಾಡುವವರಿಗೆ ನಿಜ, ಅನೇಕ ಸಂದರ್ಭದಲ್ಲಿ ಚಿನ್ನ–ಬೆಳ್ಳಿ ಕಳ್ಳತನ ಮಾಡಿರುವಂತಹ ಕಳ್ಳರನ್ನು ಪೊಲೀಸರು ಹಿಡಿದುಕೊಂಡಾಗ, ಪೊಲೀಸರು ಏನು ಮಾಡುತ್ತಾರೆಂದರೆ, ಕಳ್ಳತನ ಮಾಡಿದಂತಹ ಚಿನ್ನ–ಬೆಳ್ಳಿಯನ್ನು ಯಾರಿಗೆ ಕೊಟ್ಟಿದ್ದೀಯಾ ಎಂದು ಪೊಲೀಸರು ಸ್ವಾಭಾವಿಕವಾಗಿ ಕೇಳುತ್ತಾರೆ. ಏಕೆಂದರೆ, ಅದನ್ನು ಅವನೇ ಇಟ್ಟುಕೊಂಡರೆ, ಮಾರಾಟ ಮಾಡಬೇಕಾಗುತ್ತದೆ. ಚಿನ್ನ–ಬೆಳ್ಳಿಯನ್ನು ಕಳ್ಳತನ ಮಾಡಿರುವಂತಹ ಕಳ್ಳರು ಸಾಮಾನ್ಯವಾಗಿ ಚಿನ್ನ–ಬೆಳ್ಳಿ ಕೆಲಸ ಮಾಡುವವರ ಬಳಿ ಅಥವಾ ಗಿರಿವಿ ಅಂಗಡಿಯವರ ಬಳಿ ಹೋಗುತ್ತಾರೆ. ಪೊಲೀಸರು ಕಳ್ಳರನ್ನು ಕೇಳಿದ ತಕ್ಷಣ, ಅವರು ಒಂದು ಅಂಗಡಿಯನ್ನು ತೋರಿಸಿ ಈ ಅಂಗಡಿಗೆ ಕೊಟ್ಟಿದ್ದೇನೆಂದು ಹೇಳುತ್ತಾರೆ. ಆಗ ಪೊಲೀಸರು ಆ ಅಂಗಡಿಯವರನ್ನು ಹಿಡಿದುಕೊಳ್ಳುತ್ತಾರೆ. ನಂತರ ಅವರಿಗೆ ತೊಂದರೆಗಳು ಪ್ರಾರಂಭವಾಗುತ್ತವೆ. ಮಾನ್ಯ ಸದಸ್ಯರು ಇದೇ ವಿಷಯವನ್ನೇ ಪ್ರಸ್ತಾಪ ಮಾಡಿದ್ದಾರೆ. ಅದು ನಿಜ. ಅದಕ್ಕೆ ನಮ್ಮ DGP (Director General of Police) ರವರು 2006ರಲ್ಲಿ ಇಂತಹ ಸಂದರ್ಭಗಳಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂಬ ಬಗ್ಗೆ guidelines ಮಾಡಿ ಆದೇಶ ಹೊರಡಿಸಿದ್ದಾರೆ. 2007 ರಲ್ಲಿ ಮತ್ತೊಂದು ಆದೇಶವನ್ನು ಮಾಡಿದ್ದಾರೆ. Same guidelines ನ್ನು reiterate ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ಈಗ ನಾನು ಮಾನ್ಯ ಸದಸ್ಯರಿಗೆ ಆ ಒಂದರೆಡು guidelines ಬಗ್ಗೆ ತಿಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ವರ್ತಕರು, ಕುಶಲಕರ್ಮಿಗಳು ಮತ್ತು ಚಿನಿವಾರರು ಚಿನ್ನದ ಆಭರಣಗಳನ್ನು ಕರಗಿಸಿ ಚಿನ್ನದ ಗಟ್ಟಿಗಳನ್ನು ಮಾಡಿದ್ದಾರೆ ಎಂಬುದಕ್ಕೆ ಸಾಕಷ್ಟು ಸಾಕ್ಷ್ಯ ಒದಗಿ ಬಂದಿದ್ದರೆ ಮಾತ್ರ ಪೊಲೀಸರು ಚಿನ್ನದ ಗಟ್ಟಿಯನ್ನು ಜಪ್ತಿ ಮಾಡತಕ್ಕದ್ದು. ಅದೇರೀತಿ ಒಂದು ವಸ್ತು, ಕಳವು ವಸ್ತು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ಇದ್ದರೆ, ಮಾತ್ರ ಪೊಲೀಸರು ಸದರಿ ವಸ್ತುವನ್ನು ವಶಪಡಿಸಿಕೊಳ್ಳತಕ್ಕದ್ದು".

"ಜಪ್ತಿ ಮಾಡುವ ಪೊಲೀಸ್ ಅಧಿಕಾರಿಯು ಮೊದಲು ಸ್ಥಳ ಮಹಜರ್ ತಯಾರಿಸಿ ಅದನ್ನು ಆಯಾ ಸ್ಥಳದ ಇಬ್ಬರು ಗೌರವಯುತರಾದ ಸಾಕ್ಷಿದಾರರಿಂದ ಸಹಿ ಮಾಡಿಸಿ ದಿನಾಂಕದೊಂದಿಗೆ ಸಹಿ ಮಾಡಿದ ರಶೀದಿಯನ್ನು ವರ್ತಕರಿಗೆ ನೀಡಿದ ನಂತರವೇ ಜಪ್ತಿ ಮಾಡತಕ್ಕದ್ದು. ಅನವಶ್ಯಕವಾಗಿ ಅಂತಹ ವರ್ತಕರನ್ನು ಪೊಲೀಸ್ ಠಾಣೆಗೆ ವಿಚಾರಣೆಗಾಗಿ ಕರೆಸಬಾರದು ಹಾಗೂ ಅವರುಗಳನ್ನು ಲಾಕಪ್‌ನಲ್ಲಿ ಇಡಬಾರದು. ಮುಖ್ಯವಾದ ಕಳವು, ಸುಲಿಗೆ, ದರೋಡೆ ಪ್ರಕರಣಗಳಲ್ಲಿ ಚಿನ್ನ ಮತ್ತು ಬೆಳ್ಳಿ ಆಭರಣಗಳು ಒಳಪಟ್ಟಿದ್ದರೆ Superintendent of Police or Police Commissioner ರವರು ಪ್ರಕರಣಗಳಲ್ಲಿ ಒಳಪಟ್ಟಿರುವ ಆಭರಣಗಳ ಪಟ್ಟಿಗಳನ್ನು ಸಂಘದ ಸದಸ್ಯರುಗಳಿಗೆ ಪರೀಕ್ಷಿಸಲು ಮತ್ತು ಅಂತಹ ಆಭರಣಗಳು ವರ್ತಕರಿಗೆ ಮಾರಾಟಕ್ಕೆ ಬಂದಾಗ ಸ್ಥಳೀಯ ಪೊಲೀಸರಿಗೆ ತಕ್ಷಣ ಮಾಹಿತಿ ಕಳುಹಿಸುವ ಸಲುವಾಗಿ ತಮ್ಮ ಸಂಬಂಧಪಟ್ಟ ಸಂಘಕ್ಕೆ ಕಳುಹಿಸಿಕೊಡಬೇಕು.

ಮಾನ್ಯ ಸಭಾಪತಿಯವರೇ, ಇನ್ನೊಂದು guideline ಇದೆ. ಚಿನಿವಾರರಿಗೆ ಕಳವು ವಸ್ತುಗಳನ್ನು ಪಡೆದುಕೊಂಡಿದ್ದಾರೆಂಬ ಸಂಶಯದ ಮೇಲೆ ಕಿರುಕುಳ ನೀಡಬಾರದೆಂದು ಸ್ಪಷ್ಟವಾದಂತಹ ಸೂಚನೆಗಳನ್ನು ಎಲ್ಲಾ ಪೊಲೀಸ್ ಅಧಿಕಾರಿಗಳಿಗೂ ನೀಡಿದಾಗ್ಯೂ ಇತ್ತೀಚಿನ ಪ್ರಕರಣ ಒಂದರಲ್ಲಿ ಕೆಲವು ಪೊಲೀಸರ ಈ ವರ್ತನೆಯು ಅಧಿಕಾರಿಗಳು ಅಧಿಕೃತವಾಗಿ ವರ್ತಿಸದೆ ತಮಗೆ ಕಿರುಕುಳ ನೀಡುವ ಸಲುವಾಗಿ ಮಫ್ತಿಯಲ್ಲಿ ಬಂದಿದ್ದಾರೆಂಬ ಸಾಮಾನ್ಯ ಭಾವನೆಯು ಚಿನಿವಾರರಲ್ಲಿ ಉಂಟು ಮಾಡಿದ್ದು, ಇದರ ಪರಿಣಾಮವಾಗಿ ಚಿನಿವಾರರೆಲ್ಲರು ಗುಂಪು ಕೂಡಿ ಪೊಲೀಸರಿಗೆ ಥಳಿಸಿದ್ದಾರೆ. ಪೊಲೀಸ್ ಅಧಿಕಾರಿಗಳು ಸಹ ಸ್ಥಳೀಯ ಪೊಲೀಸರಿಗೂ ವಿಷಯ ತಿಳಿಸಿರಲಿಲ್ಲ ಮತ್ತು ಅವರ ನೆರವನ್ನು ಸಹ ಪಡೆದಿರಲಿಲ್ಲ. ಇನ್ನು ಮುಂದೆ ಇಂತಹ ಕೆಟ್ಟ ಘಟನೆಗಳನ್ನು ತಡೆಗಟ್ಟಲು ಈ ಕೆಳಕಂಡ ಉಪಾಯಗಳನ್ನು ಅನುಸರಿಸಬೇಕೆಂದು ಇದೆ.

"ಪೊಲೀಸ್ ಅಧಿಕಾರಿಗಳು ಕಳವು ವಸ್ತುಗಳನ್ನು ಪತ್ತೆ ಮಾಡಲು ಹೋದಾಗ ಹಿರಿಯ ಅಧಿಕಾರಿಯು ತಪ್ಪದೇ ಸಮವಸ್ತ್ರವನ್ನು ಧರಿಸಿರಬೇಕು ಹಾಗೂ ಕಳವು ಮಾಲನ್ನು ವಶಪಡಿಸಿಕೊಳ್ಳಲು ಅವರು ಉದ್ದೇಶಿಸಿರುವ ಚಿನಿವಾರರಿಗೆ ತಮ್ಮ ಗುರುತಿನ ಚೀಟಿಯನ್ನು ತೋರಿಸತಕ್ಕದ್ದು. ಹಿಂಸಾತ್ಮಕ ಘಟನೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆದರೆ ಅವರ ಬಗ್ಗೆ ಪೂರ್ಣ ವಿವರಗಳನ್ನು ಘಟನಾಧಿಕಾರಿಗಳು ಕಳುಹಿಸಬೇಕು ಹಾಗೂ ಏನಾದರೂ ಪೊಲೀಸರ ಲೋಪದೋಷಗಳು ಇದ್ದರೆ ಅದನ್ನು ಗಮನದಲ್ಲಿರಿಸಿ ಅನುಷಂಗಿಕ ಕ್ರಮವನ್ನು ತೆಗೆದುಕೊಳ್ಳಬೇಕು" ಎಂದು ಇದೆ.

ಮಾನ್ಯ ಸಭಾಪತಿಯವರೇ, ಈ guidelines ನಮ್ಮ DGP ಯವರು ಕಳುಹಿಸಿಕೊಟ್ಟಿದ್ದಾರೆ. ಆದರೂ ಸಹ ಕೆಲವೊಂದು ಸಂದರ್ಭದಲ್ಲಿ ಗೊತ್ತಾಗದಯೇ ಇವರು ಮಫ್ತಿಯಲ್ಲಿ ಹೋಗುವುದು ಅವರ ಮೇಲೆ ಅನವಶ್ಯಕವಾಗಿ ಕಿರುಕುಳ ಕೊಡುವುದು ನಡೆಯುತ್ತಿದೆ. ನಾನು ಸಹ ಇದರ ಬಗ್ಗೆ ಈ ಹಿಂದೆ ಚರ್ಚೆ ಮಾಡಿದ ಮೇಲೆ ಸೂಚನೆ ಕೊಟ್ಟಿದ್ದೇನೆ. ನಾವು DGP ರವರು ಕಳುಹಿಸಿರುವಂತಹ guidelines ಏನಿದೆ, ಅದನ್ನು ಚಾಚು ತಪ್ಪದೇ ನೀವು follow ಮಾಡಬೇಕೆಂದು ಹೇಳಿ ಸೂಕ್ತವಾಗಿರುವಂತಹ ಆದೇಶವನ್ನು ಸಹ ಕೊಟ್ಟಿದ್ದೇವೆ. ಮುಂದೆ ಈ ರೀತಿಯಾಗದಂತೆ ಗಮನವನ್ನು ಹರಿಸುತ್ತೇನೆ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ಓದುವುದಕ್ಕೆ ಬಹಳ ಸಂತೋಷವಾಗುತ್ತದೆ. ಅದರೆ, ಇದು ಇವತ್ತಿಗೂ ಸಹ ಆಚರಣೆಯಲ್ಲಿ ಇಲ್ಲ. ಇವತ್ತಿಗೂ ಸಹ ನಮ್ಮ ರಾಜ್ಯದಲ್ಲಿರುವಂತಹ ಎಲ್ಲಾ ಜಿಲ್ಲೆಗಳಲ್ಲೂ ಸಹ, ಪೊಲೀಸರು ಸಮವಸ್ತ್ರವನ್ನು ಧರಿಸದೇ ಮಫ್ತಿಯಲ್ಲಿ ಹೋಗಿ ಯಾರು ಕಳ್ಳ ತೋರಿಸು ಬಾ ಎಂದು ಚಿನ್ನ-ಬೆಳ್ಳಿ ಕೆಲಸಗಾರರನ್ನು ಎಳೆದುಕೊಂಡು ಜೀಫಿನಲ್ಲಿ ಕೂರಿಸಿಕೊಂಡು ಅವರನ್ನು ಪೊಲೀಸ್ ಠಾಣೆಗೂ ಕರೆದುಕೊಂಡು ಹೋಗದೆ, ಬೇರೆ ಕಡೆಗೆ ಕರೆದುಕೊಂಡು ಹೋಗಿ ಮೂರ್‍ನಾಲ್ಕು ದಿವಸ ಇಟ್ಟುಕೊಂಡು ಅವರಿಗೆ ಚಿತ್ರಹಿಂಸೆಯನ್ನು ಕೊಟ್ಟು ಅವರು ತೆಗೆದುಕೊಂಡಿಲ್ಲವೆಂದರೂ ಸಹ ಕಳ್ಳರ ಮೇಲೆ ಹಾಕುವಂತಹ ಐ.ಪಿ.ಸಿ., ಸೆಕ್ಷನ್‌ಗಳನ್ನು ಹಾಕಿ ಆ ತರಹ ನಾಲ್ಕೈದು ಕೇಸ್‌ಗಳನ್ನು ಹಾಕುತ್ತೇವೆಂದು ಹೇಳಿ ಅವರಿಗೆ ಕೊಡಬಾರದಂತಹ ಚಿತ್ರಹಿಂಸೆಯನ್ನು ಕೊಟ್ಟು ಅವನನ್ನು ಒಪ್ಪಿಸುವಂತಹ ರೀತಿಯಲ್ಲಿ ಮಾಡುತ್ತಾರೆ. ಅವರನ್ನು ಮನೆಯಿಂದ ಎತ್ತಿಕೊಂಡು ಹೋದ ಮೇಲೆ ಸಂಬಂಧಪಟ್ಟರು ಎಲ್ಲಾ ಕಡೆ ಹುಡುಕುತ್ತಾರೆ. ಇಂತಹ ಪೊಲೀಸರು ಬಂದಿದ್ದರು ಎಂದು ಇವತ್ತಿಗೂ ಸಹ ಗೊತ್ತಾಗುತ್ತಿಲ್ಲ. ಅವರು ಗ್ರಾಮಾಂತರ ಪ್ರದೇಶದಲ್ಲಿ ಇದ್ದರೆ, SP Officeಗೆ ದೂರು ಕೊಡುತ್ತಾರೆ. ಏನಾದರೂ ನಗರಗಳಲ್ಲಿ ಇದ್ದರೆ Commissioner of Policeಗೆ ದೂರು ಕೊಡುತ್ತಾರೆ. ಅಲ್ಲಿಯವರೆಗೂ ಸಹ ಯಾವ ಠಾಣೆಯವರು ಬಂದು ಎತ್ತಿಹಾಕೊಂಡು ಹೋದರು ಎಂದು ಗೊತ್ತಾಗುವುದಿಲ್ಲ. ಆದಾದ ನಂತರ ಅವನು ತೆಗೆದುಕೊಂಡಿಲ್ಲವೆಂದರೂ ಸಹ, ಅವನು ಮಾನಕ್ಕೆ ಅಂಜಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತನ್ನ ಬಳಿ ಏನಾದರೂ ಇದ್ದರೆ ಅದನ್ನು ಮಾರಿ ಕೊಡಬೇಕು. ಇಲ್ಲವೆಂದರೆ, ಕೊಡುತ್ತೇನೆಂದು ಹೋಗಿ ಪ್ರಾಣ ಕಳೆದುಕೊಳ್ಳಬೇಕು. ಈ ಎರಡು ನಿರಂತರವಾಗಿ ನಡೆಯುತ್ತಿದೆ. ಮೊದಲೇ ವಿಶ್ವಕರ್ಮ ಸಮಾಜದವರಿಗೆ ಸರ್ಕಾರದ ಸವಲತ್ತುಗಳು ಇಲ್ಲ. ಅವರಿಗೆ ಆರ್ಥಿಕ ಶಕ್ತಿಯೂ ಇಲ್ಲ. ಹಳೆಯ ಕೆಲಸಗಳನ್ನು ಮುಂದುವರಿಸಿಕೊಂಡು ಬರುತ್ತಿರುವವರ ಮೇಲೆ ಪೊಲೀಸರು ದೌರ್ಜನ್ಯ ಮಾಡುತ್ತಾರೆ. ನಮಗೆ ಪೊಲೀಸರನ್ನು ಎದುರಿಸುವಂತಹ ಶಕ್ತಿಯು ಇಲ್ಲ. ನಾನು ಎಂ.ಎಲ್.ಸಿ., ಆದಮೇಲೆ ದಿವಸಕ್ಕೆ 20 ಕಡೆ ಫೋನ್ ಮಾಡುವುದೇ ಆಗುತ್ತಿದೆ. ಆದ್ದರಿಂದ, ಇದಕ್ಕೆ ಏನಾದರೊಂದು ಶಾಶ್ವತವಾದಂತಹ ಪರಿಹಾರವನ್ನು ಮಾನ್ಯ ಗೃಹಮಂತ್ರಿಗಳು ಕೊಡಬೇಕು. ಏಕೆಂದರೆ, ಅವರು 18 ವರ್ಷಗಳ ಕಾಲ ನಮ್ಮ ಸಮಾಜದೊಂದಿಗೆ ಬೆರೆತ್ತಿದ್ದಾರೆ. ಅವರು ಎಲ್ಲಾ ನೋವುಗಳನ್ನು ಅರ್ಥ ಮಾಡಿಕೊಂಡಿದ್ದಾರೆ. ಇದು ಆಚರಣೆ ಬಂದಾಗ ಮಾತ್ರ ಇದು ಉಳಿಯುತ್ತದೆ. ಇದಕ್ಕೆ ನನ್ನ ಒಂದು ಸಲಹೆ ಇದೆ. ಸಮವಸ್ತ್ರವನ್ನು ಧರಿಸದೇ ಬಂದ ಪೊಲೀಸ್ ಅಧಿಕಾರಿಯ ಹೆಸರು ಗೊತ್ತಿರುವುದಿಲ್ಲ. Atleast ಅವರನ್ನು arrest ಮಾಡಬೇಕೆಂದರೆ, ಒಂದು ನೋಟಿಸ್ ಅನ್ನಾದರೂ ಕೊಡಬೇಕು. ಅಕ್ಕಪಕ್ಕದವರಿಗೆ ಇಂತಹ ಪೊಲೀಸ್‌ಠಾಣೆಯವರು ಎಂದು ಹೇಳಬೇಕು. ಇಂತಹ ವಿಷಯಕ್ಕೆ ವಿಚಾರಣೆ ಮಾಡುತ್ತೇವೆ ಎಂದಾದರೂ ಹೇಳಬೇಕು. ಆ ರೀತಿ ಏನು ಮಾಡುವುದಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಈಗಾಗಲೇ ಇದೆ. ಅದನ್ನು ಮಾನ್ಯ ಸಚಿವರು ಹಾಕಿದ್ದಾರೆ. Dattu v/s State ಎಂದು ಇದೆ. ಅದರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸದರಿ ಪ್ರಕರಣದಲ್ಲಿ ಯಾವುದೇ ಕಳ್ಳರನ್ನು ಯಾವುದೇ ಪೊಲೀಸ್ ಅಧಿಕಾರಿಯಾಗಲಿ, ಪೇದೆಯಾಗಲಿ ಬಂಧಿಸಬೇಕಾದರೆ ಸಮವಸ್ತ್ರ ಹಾಕಿರಬೇಕು ಮತ್ತು ಅವರು ಹೆಸರು ಕಾಣುವ ತರಹ ಇರಬೇಕು. ಅವರನ್ನು arrest ಮಾಡಬೇಕಾದರೆ arrest warrant ಇರಬೇಕು. ಇಲ್ಲವೆಂದರೆ, ನೋಟಿಸ್ ಅನ್ನಾದರೂ ಕೊಡಬೇಕು. ಅದನ್ನು ಎಲ್ಲರಿಗೂ ಸಹ ತಿಳಿಸುವಂತಹ ವ್ಯವಸ್ಥೆ ಮಾಡಬೇಕು. ಅವರನ್ನು ಕರೆದುಕೊಂಡ ಹೋದ 24 ಗಂಟೆಯಲ್ಲಿ ಏನಾದರೂ IPC section 411 ಪ್ರಕಾರ 'Receiver' ಎಂದು ದೃಢಪಟ್ಟಾಗ ಮಾತ್ರ ಆ ವಸ್ತುಗಳನ್ನು ಪಂಚನಾಮೆ ಮಾಡಿ ಅವರನ್ನು 24 ಗಂಟೆಯೊಳಗೆ ನ್ಯಾಯಾಲಯಕ್ಕೆ ತಲುಪಿಸಬೇಕೆಂದು ಆದೇಶ ಮಾಡಿದೆ.

ಮಾನ್ಯ ಸಭಾಪತಿಯವರೇ, ಒಂದು ವೇಳೆ ಪೊಲೀಸರೆ ಉಲ್ಲಂಘನೆ ಮಾಡಿದಂತಹ ಸಂದರ್ಭದಲ್ಲಿ ಪೊಲೀಸರು ಯಾರನ್ನು ಕರೆದುಕೊಂಡು ಹೋಗಿರುತ್ತಾರೆ, ಅವರೇ ಏನಾದರೂ ಇಲಾಖೆಗೆ ದೂರು ಕೊಟ್ಟರೆ ಅವರ ವಿರುದ್ಧ ಕಾನೂನು ರೀತಿ ಕ್ರಮ ತೆಗೆದುಕೊಂಡಾಗ ಮಾತ್ರ ಪೊಲೀಸರಿಗೆ ಭಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರುತ್ತದೆ. ಇಲ್ಲವೆಂದರೆ, ಕಳ್ಳನ ಬಳಿ ವಸ್ತುಗಳನ್ನು ತೆಗೆದುಕೊಂಡಿರುವವರು ಇವನು ಕಳ್ಳ ಎಂದು ಅವನನ್ನು ignore ಮಾಡಿ ಕಳುಹಿಸಿದರೆ ನಾವು ಎಲ್ಲಿಗೆ ಬಂದು ನಿಲ್ಲುತ್ತೇವೆಂದರೆ, ಈಗಾಗಲೇ ಉತ್ತರ ಕರ್ನಾಟಕದಲ್ಲಿ ಎಷ್ಟೋ ಜನ ಊರು ಬಿಟ್ಟುಬಿಟ್ಟಿದ್ದಾರೆ. ಈ ಕೆಲಸವೆ ಬೇಡ ಎನ್ನುವಂತಹ ಪರಿಸ್ಥಿತಿಗೆ ಬಂದಿದ್ದಾರೆ. ಆದ್ದರಿಂದ, ತಾವು ದಯಮಾಡಿ ಈ ಕೆಲಸಗಾರರಿಗೆ ಏನಾದರೊಂದು ನ್ಯಾಯ ಕೊಡುವುದಲ್ಲ, ಜೀವನ ಕೊಡುವಂತಹ ವಿಚಾರ ಇದೆ. ಆದ್ದರಿಂದ, ಇದರ ಬಗ್ಗೆ ಮಾನ್ಯ ಸಚಿವರು ಹೆಚ್ಚಿನ ಮುತುವರ್ಜಿ ವಹಿಸಿ ನ್ಯಾಯ ಕೊಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ಉಪ ಮುಖ್ಯಮಂತ್ರಿಯವರು ಈ ಸುತ್ತೋಲೆಯನ್ನು ತೆಗೆದಿದ್ದಾರೆ. ಕಳೆದ ವರ್ಷ ಕಾರವಾರದಲ್ಲಿ ಒಂದು ಘಟನೆ ಆಗಿತ್ತು.

(542)18-12-2018(6-30)ಎಂವಿ-ಎಂಡಿ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು...):-**

ಕಾರವಾರದ ಸಿಟಿಯಲ್ಲಿ ಸಂಗನಗೌಡ ಎನ್ನುವಂತಹ ಒಬ್ಬ ಇನ್‌ಸ್ಪೆಕ್ಟರ್, ಶ್ರೀ ಸುನಿಲ್ ರೇವಣ್ಣಕರ್ ಎನ್ನುವಂತಹ ನವನಗರದ ಒಬ್ಬ ಹುಡುಗ. ಅವನು ಬಂಗಾರದ ಅಂಗಡಿಯನ್ನು ಇಟ್ಟಿದ್ದ. ಅವನ ಅಂಗಡಿಗೆ ಯಾರೋ ಕಳುವಾದಂತಹ ಮಾಲನ್ನು ಮಾರಿದ್ದರು. ಅದನ್ನು ಹೇಗೆ ಮಾರಿದ್ದರು ಎಂದರೆ, ಇವರ ಅಂಗಡಿಗೆ ಕಳ್ಳತನ ಮಾಡಿದವನು ಬಂದಿರಲಿಲ್ಲ. ಪರಿಚಯದವರ ಮುಖಾಂತರ ಅದನ್ನು ಮಾರಾಟ ಮಾಡಿದ್ದ. ಶ್ರೀ ಸಂಗನಗೌಡ ಎನ್ನುವ ಇನ್‌ಸ್ಪೆಕ್ಟರ್ ಅಂಗಡಿಯವನನ್ನು ಕರೆದುಕೊಂಡು ಹೋಗಿ, ಅವನಿಗೆ ಹೇಗೆ ಬಡಿದಿದ್ದ ಅಂದರೆ, ಮೈಯೆಲ್ಲಾ ಬಾಸುಂಡೆ ಬಂದಿತ್ತು. ಆ ಇನ್‌ಸ್ಪೆಕ್ಟರ್ ಅವನಿಗೆ ಬೂಟಿನಲ್ಲಿ ಹೊಡೆದಿದ್ದ. ನಾನು ಇದನ್ನು ಮಾನ್ಯ ಗೃಹಮಂತ್ರಿಗಳ ಗಮನಕ್ಕೆ ತಂದಿದ್ದೆ. ಅದಕ್ಕೆ ಅವರು ಎಸ್.ಪಿ.ಯವರಿಗೆ ಫೋನ್ ಮಾಡಿದರು. ಫೋನ್ ಮಾಡಿದ ನಂತರ ನಾನು ಎಸ್.ಪಿ.ಯವರಿಗೆ ಫೋನ್ ಮಾಡಿದೆ. ಆಗ ಅವನು ನನಗೆ ಏನು ಸರ್ ನೀವು ಕಳ್ಳನಿಗೆ support ಮಾಡುತ್ತೀರಿ ಎಂದು ಹೇಳಿದ. ಅಂಗಡಿಯವನ ಮನೆಯಲ್ಲಿ ಅವನ ತಂದೆಗೆ ಹೃದ್ರೋಗವಿತ್ತು. ಕೊನೆಗೆ ಶ್ರೀ ರಾಣೆ ಎನ್ನುವಂತಹ ಪೊಲೀಸ್ ಕಮೀಷನರ್ ಅನ್ನು ಕಳುಹಿಸಿ ಅದನ್ನು ನೋಡಿ ಎಂದು ಹೇಳಿದರೆ, ಅವರು ಹೋದ ನಂತರ ಮತ್ತೆ ಅವನನ್ನು ಕರೆದುಕೊಂಡು ಹೋಗಿ, ಅವನಿಗೆ ಹೇಗೆ ಹೊಡೆದಿದ್ದಾರೆ ಎಂದರೆ, ಅವನು ಇವತ್ತಿನವರೆಗೂ ಮೇಲೆ ಎದ್ದಿಲ್ಲ. ನಂತರ ಅವನನ್ನು ಗೋವಾಕ್ಕೆ ಕರೆದುಕೊಂಡು ಹೋಗಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೋವಾದಲ್ಲಿ ಕಳುವಾಗಿದೆ ಎಂದು ಅವನ ಮೇಲೆ ಅಲ್ಲಿ ಇಪ್ಪತ್ತು ಕೇಸ್ ಹಾಕಿ ಅವನ ಮನೆಯಲ್ಲಿದ್ದಂತಹ ಬಂಗಾರವನ್ನೆಲ್ಲಾ ತೆಗೆದುಕೊಂಡು ಹೋದರು. ಈ ಪ್ರಕರಣವನ್ನು ಒಂದು ವರ್ಷದವರೆಗೆ ಮಾಡಿ, ಅವನ ಮನೆಯ ಲಾಕರ್ ಅನ್ನು ಜಪ್ತಿ ಮಾಡಿದರು. ಹೀಗೆ ಪೊಲೀಸ್ ದೌರ್ಜನ್ಯ ಆಗುತ್ತದೆ. ಪಾಪ ಈ ರೀತಿಯಾದರೆ ಇವತ್ತು ಅವರು ಏನು ಮಾಡಬೇಕು. ಮಾನ್ಯ ಗೃಹಮಂತ್ರಿಗಳು ಫೋನ್ ಮಾಡಿ ಹೇಳಿದರು ಸಹ ಎಸ್.ಪಿ.ಯವರು ಹೇಳಿದರು ಸಹ ಅವನು ಕೇಳಲಿಲ್ಲ. ನಾನು ಫೋನ್ ಮಾಡಿದಾಗ ಅವನು ಈ ರೀತಿ ಮಾತನಾಡಿದ. ಅವನ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಆ ಇನ್‌ಸ್ಪೆಕ್ಟರ್ ಕನಿಷ್ಠ 10 ರಿಂದ 20 ತೊಲೆ ಬಂಗಾರವನ್ನು ತೆಗೆದುಕೊಂಡಿದ್ದಾನೆ. ಆದರೆ, ಅವನ ಮೇಲೆ ಇವತ್ತಿನವರೆಗೂ ಕ್ರಮ ಜರುಗಿಸಿಲ್ಲ. ಈಗ ಧರ್ಮಸ್ಥಳದಲ್ಲಿ ಕಳುವಾಗಿದೆ, ಆ ಕೇಸ್ ಅನ್ನು ಅವನ ಮೇಲೆ ಹಾಕುತ್ತೇನೆಂದು ಎದುರಿಸುತ್ತಾರೆ. ಈ ರೀತಿಯೂ ಕೂಡ ಆಗುತ್ತದೆ. ಮಾನ್ಯ ಸದಸ್ಯರು ಹೇಳುವುದು ನೂರಕ್ಕೆ ನೂರು ಸತ್ಯವಿದೆ. ನಮ್ಮ ಉತ್ತರ ಕರ್ನಾಟಕದಲ್ಲಿ ಅವರ ಉದ್ಯೋಗ ಬಂದ್ ಆಗಿದೆ. ಮಾನ್ಯ ಗೃಹ ಸಚಿವರೆ, ಇವತ್ತಿನವರೆಗೂ ಯಾವುದೇ ತರಹದ ಕ್ರಮವಾಗಿಲ್ಲ, ಪರಿಸ್ಥಿತಿ ಬಹಳ ಗಂಭೀರವಿದೆ. ನಾನು ಎಲ್ಲಾ ಪೊಲೀಸ್‌ನವರು ಇದೇರೀತಿ ಇರುತ್ತಾರೆಂದು ಹೇಳುವುದಿಲ್ಲ. ಆದರೆ, ಒಬ್ಬೊಬ್ಬರು ಅಧಿಕ ಪ್ರಸಂಗ ಮಾಡುತ್ತಾರೆ. ಅವರ ಮೇಲೆ ಯಾವುದೇ ಕ್ರಮ ಜರುಗಿಸುವುದಿಲ್ಲ. ಈ ತರಹ ಮಾಡಿದ್ದಾನೆಂದು ಯಾವುದೇ ಪುರಾವೆಗಳು ಇಲ್ಲ. ಅವನು ನಮಗೆ ಏಳು ತೊಲೆ ಬಂಗಾರ ತಂದು ಕೊಟ್ಟಿರುವುದು ನಿಜ ಎಂದಿದ್ದಾನೆ. ಆದರೆ, ಅವನು ಕೊಟ್ಟಿಲ್ಲ ಅವನ ಪರಿಚಯದವರು ಕೊಟ್ಟಿದ್ದಾರೆಂದು ಹೇಳಿದ. ಇದನ್ನೆಲ್ಲಾ ಮಾಡಿದರು ಸಹ ಇವತ್ತಿನವರೆಗೂ ಅವನ ಮೇಲೆ ಏನು ಕ್ರಮ ಜರುಗಿಸಿಲ್ಲ. ಅದಕ್ಕೆ ಇದು ಸರಿಯಾದುದು ಅಲ್ಲ. ಈ ತರಹದ ಘಟನೆಗಳು ಬಹಳ ನಡೆಯುತ್ತವೆ. ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ನಾನು ಸದಸ್ಯರಾದ ಮಾನ್ಯ ನಂಜುಂಡಿಯವರ ಪ್ರಸ್ತಾಪಕ್ಕೆ ಬೆಂಬಲವನ್ನು ಕೊಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಈ ತರಹ ಕೆಲಸ ಮಾಡುವವರ ಸಂಖ್ಯೆ ಜಾಸ್ತಿ ಇದೆ. ನಾನು ಮೂಲತಃ ಕಾರ್ಮಿಕ ಕ್ಷೇತ್ರದಿಂದ ಬಂದಿದ್ದೇನೆ. ನಾನು ಆ ಕೆಲಸಗಾರರ ಸಂಘವನ್ನು ಸಹ ಕಟ್ಟಿಕೊಂಡಿದ್ದೆ. ಈಗ ದೊಡ್ಡ ದೊಡ್ಡ ಬಂಗಾರದ ಅಂಗಡಿಗಳು ಬಂದಿವೆ, ಈಗ ಇದರ ಪ್ರಮಾಣ ಸ್ವಲ್ಪ ಕಡಿಮೆಯಾಗಿದೆ. ಪೊಲೀಸ್‌ನವರು ಬಹಳ ಒಳ್ಳೆಯವರು. ಏಕೆಂದರೆ ಅವರು ಕಳ್ಳರ ಮಾತುಗಳನ್ನೇ ನಂಬುವುದು. ಅವರು ಯಾರೋ ಒಬ್ಬ ಕಳ್ಳನನ್ನು ಹಿಡಿದುಕೊಂಡು ಬಂದಿರುತ್ತಾರೆ. ಅವನ ಬಾಯಿ ಬಿಡಿಸುವಂತಹ ವಿಧಾನ ಅವರಿಗೆ ಗೊತ್ತಿರುತ್ತದೆ. ಕಳ್ಳನನ್ನು ಹಿಡಿದುಕೊಂಡು ಬಡಿದರೆ ಯಾರು ಬೇಕಾದರು ಬಾಯಿ ಬಿಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದರೆ, ಒಪ್ಪಿಕೊಳ್ಳುತ್ತಿಯೋ ಇಲ್ಲವೋ ಅಷ್ಟೆ. ಅವನು ಅದನ್ನು ಒಪ್ಪಿಕೊಳ್ಳದಿದ್ದರೆ ಮತ್ತೆ ಹೊಡೆತ ಬೀಳುತ್ತವೆ. ಅದಕ್ಕೆ ಅವನು ಒಪ್ಪಿಕೊಳ್ಳುತ್ತಾನೆ. ಒಪ್ಪಿಕೊಂಡ ಮೇಲೆ, ಪೊಲೀಸ್‌ನವರು ಅವನನ್ನು ಕುಳ್ಳಿರಿಸಿಕೊಳ್ಳುತ್ತಾರೆ. ಇದು ಬಂಗಾರ ಮತ್ತು ದುಡ್ಡು ಸಂಗ್ರಹ ಮಾಡುವುದಕ್ಕೆ ಬಹಳ ದೊಡ್ಡ ದಂಧೆ. ಗಾಂಧಿ ಬಜಾರ್ ಎಂದು ಮಾರುಕಟ್ಟೆ ಪ್ರದೇಶ ಇದೆ. ಅಲ್ಲಿ ಬಂಗಾರ ಮಾರಾಟ ಮಾಡುವವರು ಜಾಸ್ತಿ ಇದ್ದಾರೆ. ಕಳ್ಳನನ್ನು ಜೀಪ್‌ನಲ್ಲಿ ಕುಳ್ಳಿರಿಸಿಕೊಂಡಿರುತ್ತಾರೆ. ಈ ಅಂಗಡಿಯವನಿಗೆ ಕೊಟ್ಟಿದ್ದೇನೆಂದು ಹೇಳು ಎಂದು ಕಳ್ಳನಿಗೆ ಹೇಳುತ್ತಾರೆ. ಆಗ ಅವನು ಆ ಅಂಗಡಿಯವನನ್ನು ತೋರಿಸುತ್ತಾನೆ. ಅವನು ಹೇಳಿದ ತಕ್ಷಣ, ಅಂಗಡಿಯವನನ್ನು ಕೇಳುತ್ತಾರೆ, ಇವನು ನಿನಗೆ ಗೊತ್ತಾ ಎಂದು. ಅಂಗಡಿಯವನು ಗೊತ್ತಿಲ್ಲವೆಂದು ಹೇಳುತ್ತಾನೆ. ಕಳ್ಳ ಬಂಗಾರ ಕೊಟ್ಟಿದ್ದಾನೆಂದು ಅಂಗಡಿಯವನನ್ನು ಜೀಪಿಗೆ ಹಾಕಿಕೊಳ್ಳುತ್ತಾರೆ. ಕಳ್ಳನಿಂದ ತೆಗೆದುಕೊಂಡಿಲ್ಲವೆಂದು ಅಂಗಡಿಯವನು ಹೇಳುತ್ತಾನೆ. ಆದರೆ, ಕಳ್ಳ ಹೇಳುತ್ತಿದ್ದಾನೆಂದು ಹೇಳುತ್ತಾರೆ. ಅವರು ಅಂಗಡಿಯವನನ್ನು ನಂಬುವುದಿಲ್ಲ. ಅವರು ಲಾಕಪ್‌ನಲ್ಲಿ ಇರುವಂತಹ ಕಳ್ಳನನ್ನು ನಂಬುತ್ತಾರೆ. ಕೊನೆಗೆ ನಮ್ಮ ಸಂಘದವರು ಹೋಗುತ್ತಾರೆ. ರಾತ್ರಿ ಆಗುತ್ತದೆ ಅಂಗಡಿಯವನ ಮನೆ ಮಂದಿಯೆಲ್ಲಾ ಗಾಬರಿ ಆಗುತ್ತಾರೆ. ನಂತರ compromise ಶುರುವಾಗುತ್ತದೆ. ಸುಮಾರು 25 ತೊಲ ಹೋಗಿದೆ ಎಂದು ಹೇಳಿ. Compromise ನಲ್ಲಿ ಕೊನೆಗೆ ಹಾಳಾಗಿ ಹೋಗಲಿ ಹತ್ತು ತೊಲ ತಂದು ಕೊಡು ಎಂದು ಹೇಳುತ್ತಾರೆ. ಅಂಗಡಿಯವನು ಏನೋ ಮಾಡಿ ಹತ್ತು ತೊಲ ಚಿನ್ನವನ್ನು ತಂದು ಕೊಡುತ್ತಾನೆ. ಈ ತರಹ ಶಿವಮೊಗ್ಗದಲ್ಲಿ ಐದಾರು ಜನರಿಗೆ ಮಾಡುತ್ತಾರೆ. ಈಗ ಹತ್ತು ತೆಗೆದುಕೊಂಡಿದ್ದರೆ, ಅವರು ಸುಮಾರು ಐವತ್ತು ತೊಲವನ್ನು ವಸೂಲಿ ಮಾಡುತ್ತಾರೆ. ಆ ಸಂದರ್ಭದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ವಿಚಾರಣೆ ನಡೆಯುತ್ತಿದೆ ಎಂದು ನೋಡಿಕೊಂಡು ಹೋಗುತ್ತಾರೆ. ಅವರು ಅದನ್ನು ನೋಡಿಕೊಂಡು ಹೋಗುವುದು, ಅವರು ಅಪರಾಧಿ ಹೌದೋ, ಅಲ್ಲವೋ? ಎಂದು ತನಿಖೆ ಮಾಡುವುದಕೋ ಅಥವಾ ನಾನು ಇದ್ದೇನೆ ಅದರಲ್ಲಿ ಬರುವಂತಹ ಲಾಭದಲ್ಲಿ ನನಗೂ ಪಾಲುಬೇಕೆಂದು ಒಂದು ಹಾಜರಾತಿಯನ್ನು ಹಾಕಿ ಹೋಗುತ್ತಾರೋ ಎಂದು ನನಗೆ ಗೊತ್ತಿಲ್ಲ. ಈ ತರಹ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ, ಎಲ್ಲೂ ಕೂಡ ಅವರು ಸ್ವಹಸ್ತದಲ್ಲಿ ಹೋಗದೇ, ಮಫ್ತಿಯಲ್ಲಿ ಹೋಗುತ್ತಾರೆ. ಬಡವರು ಕೈಕೆಲಸ ಕಲಿತಿರುವಂತಹ, ಕುಸುರಿ ಕೆಲಸವನ್ನು ಕಲಿತಿರುವವರಿಗೆ ಅನಾವಶ್ಯಕವಾಗಿ ಈ ತರಹ ಆಗುತ್ತದೆ. ಕಳ್ಳತನ ಮಾಡಿರುವವರು ಯಾರಾದರೂ ಇದ್ದರೆ, ಅವರಿಗೆ ಯಾರೂ ಸಹಾನುಭೂತಿಯನ್ನು ತೋರಿಸುವುದಿಲ್ಲ ಮತ್ತು ಕಳ್ಳನನ್ನು ಯಾರು ಸಹ ರಕ್ಷಣೆ ಮಾಡುವುದಿಲ್ಲ. ಈ ರೀತಿಯಾದರೆ ಅವರ ವೃತ್ತಿಯೇ ಸತ್ತು ಹೋಗುತ್ತದೆ. ಅದು ಒಂದು ಕಲಾತ್ಮಕವಾದಂತಹ ವೃತ್ತಿ ಅದು ಸಾಯಬಾರದು. ಅದನ್ನು ಕಾಪಾಡುವಂತಹ ದೃಷ್ಟಿಯಿಂದ,

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಗೃಹಸಚಿವರು ಆ ಸುತ್ತೋಲೆ ಏನಿದೆ, ಅದನ್ನು ನಮಗೂ ಸಹ ನೀಡಿ. ಒಂದೊಂದು ಬಾರಿ ಆ ರೀತಿ ಹಿಡಿದುಕೊಂಡು ಹೋದರೆ, WhatsApp ನಲ್ಲಿ ಫೋಟೋ ಹಾಕುತ್ತೇವೆ. ಅವರು ಸ್ಪಾಟ್‌ನಲ್ಲಿ ಸಸ್ಪೆಂಡ್ ಆಗಲಿ. ಒಬ್ಬ ಅಧಿಕಾರಿ ಈ ತರಹ ಮಾಡುತ್ತಾನೆ ಎಂದು ಗೊತ್ತಾದರೆ, ಆ ಸ್ಟೇಷನ್ ಆಫೀಸರ್‌ನಿಂದ ಅಲ್ಲಿಗೆ ಹೋದಂತಹ ಆಫೀಸರ್ ತನಕ ತಕ್ಷಣ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಂದರೆ ಮಾತ್ರ ಅವರಿಗೆ ಭಯ ಹುಟ್ಟುತ್ತದೆಂದು ವಿನಂತಿ ಮಾಡುತ್ತಿದ್ದೇನೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ಚಿನ್ನದಂತಹ ಮಾತಿನಿಂದ ಹೇಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇದು ಖರೀದಿಯ ವಿಚಾರವಲ್ಲ, ಚಿನ್ನ ಕದ್ದವರಿಗೆ ಏನು ಮಾಡಬೇಕೆಂಬ ವಿಚಾರ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇವತ್ತು machine made ಆಭರಣಗಳು ಬಂದಾಗ್ಯೂ ಕೂಡ ಹೆಣ್ಣು ಮಕ್ಕಳು ಇಷ್ಟಪಡುವಂಥದ್ದು *Antique Piece* ಮತ್ತು ನಾವು ಏನು ಪ್ರೀತಿಯಿಂದ ಆಚಾರಿಗಳೆಂದು ಕರೆಯುತ್ತೇವೆ, ಆ ಕುಶಲಕರ್ಮಿಗಳು ಮಾಡಿದಂತಹ ಆಭರಣಗಳನ್ನು ಇಷ್ಟಪಡುತ್ತಾರೆ. ಈಗ ನಮ್ಮ ಕಾಲದಲ್ಲಿ ಆದಾಯ ತೆರಿಗೆಯನ್ನು ಘೋಷಣೆ ಮಾಡಬೇಕು. ಆಗ ನಮ್ಮ ಬಳಿ ಇರುವಂತಹ ಆಭರಣಗಳು ಗೊತ್ತಾಗುತ್ತದೆ. ನಮ್ಮ ಅಜ್ಜಿ, ಮುತ್ತಜ್ಜಿಯವರ ಪರಂಪರಾಗತವಾಗಿ ಬಂದಂತಹ ಒಡವೆಗಳನ್ನು ಕೇಳಿದರೆ, ನಮಗೆ ನಮ್ಮ ಅಮ್ಮಂದಿರು ಯಾವುದೇ ಲೆಕ್ಕವನ್ನು ಕೊಟ್ಟಿಲ್ಲ. ಇವತ್ತು ರೈತರು ಸಾಲ ಪಡೆದುಕೊಳ್ಳಬೇಕಾದರೆ, ಆಪತ್ತಿನಲ್ಲಿ ತಕ್ಷಣ ಸಿಗುವಂತಹ ಚಿನ್ನಾಭರಣ ಸಾಲ ಅದು ಕಡಿಮೆ ಬಡ್ಡಿಗೆ ದೊರೆಯುತ್ತದೆ. ಸರ್ಕಾರ ಈ ಒಂದು ಉಪಕಾರವನ್ನು ಮಾಡಿದೆ. ಇಂತಹ ಸನ್ನಿವೇಶದಲ್ಲಿ ಯಾರಿಂದ ಪೊಲೀಸ್‌ರವರನ್ನು sensitize ಮಾಡಬೇಕೆಂದು. ಈಗ ಪೊಲೀಸ್‌ನವರಿಗೆ ಲಾಟಿ ಸಿಕ್ಕಿದ ತಕ್ಷಣ ಬಡಿದರೆ ಎಲ್ಲರೂ ಸಹ ಹೇಳುತ್ತಾರೆ ಮತ್ತು ಕೋರ್ಟ್‌ನಲ್ಲಿ ಪೊಲೀಸ್‌ನವರು ಹಿಂಸೆ ಕೊಟ್ಟರು ಎಂದು ಹೇಳುತ್ತಾರೆ. ನಿಜವಾಗಿಯೂ ಏನಾದರೂ ಅಲ್ಪಸಂಖ್ಯಾತ ಸಮುದಾಯವೆಂದು ಕರೆಯಬೇಕಾದರೆ, ವಿರಳ ಜನಸಂಖ್ಯೆಯಾದಂತಹ ಇಂತಹ ಕರಕುಶಲ ಕರ್ಮಿಗಳು ಏನು ಇದ್ದಾರೆ, ಈಗ ನೇಯ್ಗೆಯವರು ಇರಬಹುದು, ಸುಮಾರು ಹತ್ತು ಲಕ್ಷ ರೂಪಾಯಿಗಳವರೆಗೆ ಇರುವಂತಹ ಸೀರೆಗಳನ್ನು ಕೈಯಿಂದ ಮಾಡಿದಂತಹ ಕೌಶಲ್ಯಕ್ಕೆ ಹೆಚ್ಚು ಬೆಲೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ಹಾಗಾಗಿ ಆ ಸಮಾಜದ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡುವ ಮಟ್ಟಕ್ಕೆ ಅವರ ಮೇಲಿನ ದೌರ್ಜನ್ಯವನ್ನು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ॥ ಜಿ.ಪರಮೇಶ್ವರ್‌ರವರು ಸೂಕ್ಷ್ಮಮತಿಗಳಾಗಿದ್ದಾರೆ. ಅವರ ಮೇಲೆ ನಮಗೆ ನಂಬಿಕೆ ಇದೆ. ಪೊಲೀಸ್‌ನವರಿಗೆ ಇದರ ಬಗ್ಗೆ sensitize ಮಾಡಬೇಕು. ಕಳ್ಳತನದ ವಸ್ತುವನ್ನು ಪಡೆದುಕೊಳ್ಳಬಹುದು. ಆದರೆ, ಪ್ರಾಣ ಹೋಗಿರುವುದನ್ನು ನಿರ್ಲಕ್ಷ್ಯ ಮಾಡುತ್ತಾರೆ. ಕಳ್ಳತನದ ವಿಚಾರದಲ್ಲಿ ಅವನಿಗೆ ಪ್ರಾಣ ತೆಗೆಯುತ್ತಾರೆ. ಹಾಗಾಗಿ ಇದರ ಬಗ್ಗೆ ಆ ಸಮಾಜಕ್ಕೆ ರಕ್ಷಣೆಯನ್ನು ಕೊಡಬೇಕೆಂದು ಹೇಳಿ. ಮಾನ್ಯ ಸದಸ್ಯರಾದ ಕೆ.ಪಿ.ನಂಜುಂಡಿಯವರ ಪ್ರಸ್ತಾಪಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನಾವು ಖರೀದಿದಾರರು ಎಂದು ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿ ಗೌಡರವರು ಮಾತನಾಡಲು ಅವಕಾಶ ಕೊಟ್ಟಾಗ ನಾವು ಖರೀದಿದಾರರು ಎಂದು ಹೇಳಿದರು. ಮಹಿಳೆಯರಿಗೆ ನಾವು ತೆಗೆದುಕೊಟ್ಟರೆ ಅವರು ಖರೀದಿದಾರರು.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಹಿಳೆಯರು ದುಡಿಯುತ್ತಿದ್ದೇವೆ. ಮಾನ್ಯರೇ, ಇಲ್ಲೂ ಕೂಡ gender bias ಇದೆ. ಮಹಿಳೆಯರು ಅಲ್ಪಸಂಖ್ಯಾತರು, ಪೀಠ ನಮ್ಮ ರಕ್ಷಣೆಗೆ ಬರಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಚೌಡರೆಡ್ಡಿ ತೂಪಲ್ಲಿಯವರು ಯಾರಿಗೆ ಕೊಡಿಸುತ್ತಾರೆ. ಅವರಿಗೆ ಏನು ಇಲ್ಲವೇ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇದರಲ್ಲಿ ಬಹಳ ಮುಖ್ಯವಾಗಿ ಇರುವಂತಹ ವಿಚಾರ. ಮಾನ್ಯ ಸದಸ್ಯರಾದ ಕೆ.ಪಿ.ನಂಜುಂಡಿಯವರು ಹಲವಾರು ಬಾರಿ ಈ ರಾಜ್ಯದ ಅನೇಕ ಮುಖ್ಯಮಂತ್ರಿಗಳನ್ನು ಮತ್ತು ಗೃಹ ಸಚಿವರನ್ನು ಕರೆದು, ಅವರ ಇಡೀ ಜನಾಂಗವನ್ನೆಲ್ಲಾ ಒಟ್ಟುಗೂಡಿಸಿ ಅದ್ದೂರಿಯಾಗಿ ಸನ್ಮಾನ ಮಾಡಿರುವಂತಹ ಕಾರ್ಯಕ್ರಮಗಳನ್ನು ನಾನು ಬಹಳ ನೋಡಿದ್ದೇನೆ. ಹಾಗಾಗಿ ಆ ಜನಾಂಗದ ರಕ್ಷಣೆಗೋಸ್ಕರ ಅವರು ಒಬ್ಬ ನಾಯಕರಾಗಿ ಬೆಳೆದು, ಇಡೀ ರಾಜ್ಯದಲ್ಲಿ ಲಕ್ಷಾಂತರ ಜನರನ್ನು ಒಟ್ಟುಗೂಡಿಸಿ ಒಳ್ಳೆಯ ಸಮಾರಂಭಗಳನ್ನು ಮಾಡಿದ್ದಾರೆ. ಆ ಜನಾಂಗದ ಮೇಲೆ ಆಗುವಂತಹ ದೌರ್ಜನ್ಯಗಳನ್ನು ತಮ್ಮ ಸಮಾರಂಭಗಳಲ್ಲಿ ಹೇಳಿದ್ದಾರೆ. ಕರಕುಶಲ ಎಂದರೆ, it is an Art. ಇಂತಹ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರಕುಶಲ ವಸ್ತುಗಳನ್ನು ಮಾಡುವಂತಹವರು, ಇಂತಹ ಕಿರುಕುಳದಿಂದ ಅನೇಕ ಜನರು ಮನೆ ಸೇರಿದ್ದಾರೆ. ಆದುದರಿಂದ ಅವರ ಮಕ್ಕಳು ಯಾರು ಸಹ ಈ ಕರಕುಶಲ ಕೆಲಸವನ್ನು ಕಲಿಯುತ್ತಿಲ್ಲ. ಅವರು ಏಕೆ ಕಲಿಯುತ್ತಿಲ್ಲವೆಂದರೆ, ಅವರ ಅಪ್ಪ ಪಡುವ ಕಷ್ಟವನ್ನು ನೋಡಿ ಮತ್ತೆ ಮಕ್ಕಳು ಕಷ್ಟ ಅನುಭವಿಸುವುದು ಬೇಡವೆಂದು ಅವರು ದೂರ ಹೋಗಿದ್ದಾರೆ. ಹಾಗಾಗಿ ಇರುವಂತಹವರನ್ನು ಸಂರಕ್ಷಣೆ ಮಾಡಿ, ಕನಿಷ್ಠ ಪಕ್ಷ ಮಾನ್ಯ ಸದಸ್ಯರಾದ ಡಾ||ತೇಜಸ್ವಿನಿ ಗೌಡರವರು ಹೇಳಿದ ಹಾಗೆ, ಆ ಕರಕುಶಲ ಕೆಲಸ ಮಾಡುವಂತಹವರನ್ನು ಉಳಿಸಿ ಕೊಳ್ಳಬೇಕಾದಂತಹ ಒಂದು ಸಮಯ ಬಂದಿದೆ. ಹಾಗಾಗಿ ಅವರನ್ನು ಉಳಿಸಿಕೊಳ್ಳಬೇಕಾಗುತ್ತದೆ. ಇದರಲ್ಲಿ ಬಹಳ ಮುಖ್ಯವಾಗಿ ನಮ್ಮ ಮಂತ್ರಿಗಳು ಹೇಳಿದರು. ಯಾವ ರೀತಿ ಅವರನ್ನು ನಿಯಂತ್ರಿಸಬೇಕು ಮತ್ತು ರಕ್ಷಣೆ ಕೊಡಬೇಕು ಎನ್ನುವ ವಿಚಾರದಲ್ಲಿ ಬಹಳ ಉಪಯುಕ್ತವಾದಂತಹ ಅಂಶಗಳಿವೆ. ಆದರೆ, ನಮ್ಮ ಪೊಲೀಸ್ ಅಧಿಕಾರಿಗಳು ಇವನ್ನು ಎಷ್ಟರಮಟ್ಟಿಗೆ ಪರಿಪಾಲನೆ ಮಾಡುತ್ತಾರೆ ಎನ್ನುವುದು ಬಹಳ ಮುಖ್ಯವಾಗಿದೆ. ಇದರಲ್ಲಿ habitual offender ಒಬ್ಬ ಇರುತ್ತಾನೆ. ಈಗ ಎಲ್ಲಾದರೂ ಕಳ್ಳತನವಾದರು ಸಹ ಆ habitual offender ಅನ್ನು ಹಿಡಿದುಕೊಂಡು ಹೋಗುತ್ತಾರೆ. ಹಿಡಿದುಕೊಂಡು ಬಂದಮೇಲೆ ಅವರು ಏನು ಮಾಡುತ್ತಾರೆಂದರೆ, ಈಗಾಗಲೆ ಸದಸ್ಯರಾದ ಮಾನ್ಯ ಆಯನೂರು ಮಂಜುನಾಥ್ ರವರು ಹೇಳಿದ ಹಾಗೆ, ಯಾವ ಅಂಗಡಿ ಚೆನ್ನಾಗಿದೆ ಎಂದು ನೋಡಿ ಕಳ್ಳನನ್ನು ಜೀಪ್‌ನಲ್ಲಿ ಸುತ್ತಿಸುತ್ತಾರೆ. ನಂತರ ನಾವು ಹೇಳಿದ ಅಂಗಡಿಯ ಹೆಸರನ್ನು ಹೇಳಬೇಕು ಎಂದು ಹೇಳುತ್ತಾರೆ, ಅವನು ತೋರಿಸಿದ ನಂತರ ಅವರು ಬರುತ್ತಾರೆ. ಆದರೆ, ಮಾನ್ಯ ಸಚಿವರೆ, ಒಂದು ವಿಚಾರ ಮಾತ್ರ ಬಹಳ ಗಂಭೀರವಾಗಿದೆ. ಶೇಕಡಾ 100ಕ್ಕೆ 99 ಪೊಲೀಸ್‌ನವರು ಕಳ್ಳನಿಗೆ ಕೇಸ್ ಹಾಕಿ ಒಳಗೆ ಕಳುಹಿಸುತ್ತಾರೆ. ಆದರೆ, Receiver of Stolen Property ಇದೆಯಲ್ಲಾ? ಆ ತರಹದ ಎಷ್ಟು ಜನರನ್ನು ಅವರು ಒಳಗೆ ಕಳುಹಿಸಿದ್ದಾರೆ. Receiver of Stolen Property ಗೆ ಸಂಬಂಧಿಸಿದಂತೆ ಶೇಕಡಾ 90ರಷ್ಟು ಪ್ರಕರಣವನ್ನು ಹಾಕುವುದಿಲ್ಲ. ಏಕೆಂದರೆ, ಅವನು ಏನೋ adjustment ಮಾಡಿ ಅದನ್ನು ಮುಕ್ತಾಯಗೊಳಿಸುತ್ತಾನೆ. ಹಾಗಾಗಿ Receiver of Stolen Property ಗೆ ಸಂಬಂಧಿಸಿದಂತೆ ಪ್ರಕರಣವನ್ನು ದಾಖಲಿಸಿದರೆ. Automatic ಆಗಿ ಕಳ್ಳನೂ ಸಹ ಅಲ್ಲಿಗೆ ಹೋಗಿ ಕೊಡುವುದಿಲ್ಲ. ಎಲ್ಲಿಯವರೆಗೆ ಇದನ್ನು ತೆಗೆದುಕೊಳ್ಳುವವರು ಇರುತ್ತಾರೆ, ಅಲ್ಲಿಯವರೆಗೆ ಕಳ್ಳ ಅಂಗಡಿಗೆ ಹೋಗಿ ಕೊಡುತ್ತಾನೆ.

(ಮುಂದು...)



"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸಭಾಪತಿಯವರ ಉಪಸ್ಥಿತಿ)**

ಶ್ರೀ ಎಸ್.ಎಲ್ ಭೋಜೇಗೌಡ(ಮುಂದುವರೆದಿದ್ದು...)

ಶೇಕಡಾ 99ರಷ್ಟು ಮಾಡುತ್ತಾರೆ. ಆದರೆ, ಯಾರು receiver of stolen property ಇದ್ದಾರಲ್ಲಾ ಅಂತಹ ಎಷ್ಟು ಜನರನ್ನು ಒಳಗೆ ಕಳುಹಿಸಿದ್ದಾರೆ? Receiver of stolen property ಕೇಸ್ ಆಗತಕ್ಕಂಥದ್ದು, ಶೇಕಡ 90ರಷ್ಟು ಹಾಕುವುದಿಲ್ಲ. ಏಕೆಂದರೆ, ಅವನು adjustment ಮಾಡಿ, ಏನೋ ಮಾಡಿ ಕೇಸ್ ಕ್ಲೋಸ್ ಮಾಡಿಸುತ್ತಾನೆ. ಹಾಗಾಗಿ, ನೀವು receiver of stolen property ಕೇಸ್ ಹಾಕಿಸಿದರೆ automatic ಆಗಿ ಕಳ್ಳ ಕೂಡ ಅಲ್ಲಿ ಹೋಗಿ ಕಳ್ಳತನ ಮಾಡಿದ ಚಿನ್ನ-ಬೆಳ್ಳಿಯನ್ನು ಮಾರಾಟ ಮಾಡುವುದಿಲ್ಲ. ಹಾಗಾಗಿ, ಎಲ್ಲಿಯವರೆಗೆ ಕಳ್ಳಮಾಲನ್ನು ತೆಗೆದುಕೊಳ್ಳುವವರು ಇರುತ್ತಾರೆ, ಅಲ್ಲಿಯವರೆಗೆ ಕಳ್ಳ ಹೋಗಿ ಕಳ್ಳ ಮಾಲನ್ನು ಕೊಟ್ಟೇ ಕೊಡುತ್ತಾನೆ. ಯಾರು receiver of stolen property ಇರುತ್ತಾರೆ, ಶೇಕಡ 100ರಷ್ಟು ಇವನು ಕಳ್ಳ ಮಾಲನ್ನು ಕೊಡುತ್ತಿದ್ದಾನೆ ಎಂದು ಗೊತ್ತಿದ್ದರೂ ಕೂಡ ಅದನ್ನು ತೆಗೆದುಕೊಳ್ಳುತ್ತಾನೆ. ಏಕೆಂದರೆ, ಮುಂದೆ ಪೊಲೀಸರಿಗೆ ಯಾವ ರೀತಿ ಅಡ್ಜಸ್ಟ್‌ಮೆಂಟ್ ಮಾಡಬೇಕು, ಯಾವ ರೀತಿ ಮ್ಯಾನೇಜ್ ಮಾಡಬೇಕು ಎನ್ನುವಂತಹ ವಿಚಾರದಲ್ಲಿ ಒಂದು ಬಾರಿ ಸಿಕ್ಕಿ ಹಾಕಿಕೊಂಡರೆ ಅವನಿಗೆ ಗೊತ್ತಾಗುತ್ತದೆ. ಹಾಗಾಗಿ, ಯಾರು receiver of stolen property ಇರುತ್ತಾರೆ, ಅಂತಹವರನ್ನು ಯಾವ ಕಾರಣಕ್ಕೂ ಬಿಡಬಾರದೆಂದು ನಾನು ಸರ್ಕಾದವರಲ್ಲಿ ವಿನಂತಿ ಮಾಡುತ್ತೇನೆ.

**ಡಾ: ಜಿ. ಪರಮೇಶ್ವರ್(ಉಪ ಮುಖ್ಯಮಂತ್ರಿಯವರು ಹಾಗೂ ಒಳಾಡಳಿತ, ಬೆಂಗಳೂರು ಅಭಿವೃದ್ಧಿ, ನಗರ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ):-** ಮಾನ್ಯ ಸಭಾಪತಿಯವರೇ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ನಮ್ಮ ಇಲಾಖೆಯ ಪೊಲೀಸ್ ಮಹಾ ನಿರ್ದೇಶಕರು ಕೆಲವೊಂದು ಮಾರ್ಗಸೂಚಿಗಳನ್ನು ಕೊಟ್ಟಿದ್ದಾರೆ, ಅದನ್ನು ಪರಿಪಾಲನೆ ಮಾಡುವುದಕ್ಕೆ ಮತ್ತೊಂದು ಬಾರಿ ನಾವೇನು ಹಿರಿಯ ಅಧಿಕಾರಿಗಳ ಸಭೆಗಳನ್ನು ಮಾಡುತ್ತೇವೆ, ಆ ಸಂದರ್ಭದಲ್ಲಿ ಅವರನ್ನು sensitize ಮಾಡುವುದಕ್ಕೆ ಖಂಡಿತವಾಗಿ ಪ್ರಯತ್ನ ಮಾಡುತ್ತೇನೆ. ಜೊತೆಗೆ, ಈ ಗೈಡ್‌ಲೈನ್ಸ್ ಬಗ್ಗೆ ಹೇಳುತ್ತಾ, ಚಿನ್ನ-ಬೆಳ್ಳಿ ಮಾರಾಟ ಮಾಡುವಂತಹವರನ್ನು ಹಿಡಿದುಕೊಂಡು ಹೋಗುತ್ತಾರೆ, ಅವರಿಗೆ ಒಂದು ಬಾರಿ ದೂರು ನೀಡುವುದಕ್ಕೆ ಅವಕಾಶ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ನಾವು ಈಗಾಗಲೇ ಅವಕಾಶ ಕೊಟ್ಟಿದ್ದೇವೆ. ಪೊಲೀಸ್ ಕಮೀಷನರ್‌ಗೆ, Superintendent of Police ಗೆ ಒಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೇಳೆ ಅವರು ಹೋಗಿ ದೂರು ನೀಡಿದರೆ, ಖಂಡಿತವಾಗಿ ಯಾವ ಅಧಿಕಾರಿ ಅವರನ್ನು ಕರೆದುಕೊಂಡು ಹೋಗಿರುತ್ತಾರೆ, ಅವರಿಗೆ ತೊಂದರೆ ಮಾಡಿರುತ್ತಾರೆ, ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಈ ಗೈಡ್‌ಲೈನ್ಸ್‌ನಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ.

ಇದರ ಜೊತೆಗೆ, ತಮಗೆಲ್ಲರಿಗೂ ಗೊತ್ತಿರುವಂತೆ, ಅನೇಕ ಬಾರಿ ಕಳ್ಳ ಮಾಲನ್ನು ಪತ್ತೆ ಹಚ್ಚಿದ ನಂತರ ಪೊಲೀಸ್‌ನವರು publish ಮಾಡಿ, ಅವರಿಗೆ ವಾಪಸ್ಸು ಕೊಡುವಂತಹ ಕೆಲಸವನ್ನು ವರ್ಷಕ್ಕೊಂದು ಬಾರಿ ಅಥವಾ ಎರಡು ಬಾರಿ ಮಾಡುತ್ತಾರೆ. ನಾನೇ ಎಷ್ಟೋ ಬಾರಿ ಹೋಗಿ ಪೊಲೀಸರು ಪತ್ತೆ ಹಚ್ಚಿರುವ ಚಿನ್ನ-ಬೆಳ್ಳಿಯನ್ನು, ಯಾರು ಕಳೆದುಕೊಂಡಿರುತ್ತಾರೆ ಅವರಿಗೆ ವಾಪಸ್ಸು ಕೊಡುವಂತಹ ಕೆಲಸವನ್ನು ಮಾಡಿದ್ದೇನೆ. ಆದರೆ, ಎಲ್ಲವೂ ಕೂಡ ಆ ರೀತಿ ಇರುವುದಿಲ್ಲ. ಆದರೆ, ಒಂದೊಂದು ಸಾರಿ ಏನಾಗುತ್ತದೆಯೆಂದರೆ, ಕೆಜಿ ಗಟ್ಟಲೇ ಬಂಗಾರ ತೆಗೆದುಕೊಂಡು ಅವರು ಹೇಳುವುದಿಲ್ಲವೆಂದರೆ, ಪೊಲೀಸ್‌ನವರು ಆ ರೀತಿ ನಡೆದುಕೊಳ್ಳುತ್ತಾರೆ. ಆದರೆ, ಈ ರೀತಿ ಆಗದ ಹಾಗೆ, ವಿಶ್ವಕರ್ಮ ಸಮುದಾಯದ ಕಲೆ ಉಳಿಯಬೇಕು. ಇದೊಂದು ಕಲೆ. ವಿಶ್ವಕರ್ಮ ಸಮುದಾಯದವರು ಪಂಚ ಕಸುಬು ಮಾಡತಕ್ಕಂತಹ ಜನ. ಅಮರಶಿಲ್ಪಿ ಜಕಣಾಚಾರಿಯ ವಂಶಸ್ಥರು, ವಿಶ್ವಕರ್ಮ ಸಮುದಾಯಕ್ಕೆ ಸೇರಿದವರು, ನಮ್ಮ ಊರಿನವರು. ಕೈದಳ ಗ್ರಾಮದವರು. ಕೈದಳ ಗ್ರಾಮ ನಮ್ಮ ತುಮಕೂರು ಜಿಲ್ಲೆಗೆ ಒಂದೂವರೆ ಕಿಲೋಮೀಟರ್ ದೂರದಲ್ಲಿದೆ. ಬೇಲೂರು ಹಳೇಬೀಡು ಕಟ್ಟಿದಂತಹ ಶ್ರೀ ಅಮರಶಿಲ್ಪಿ ಜಕಣಾಚಾರಿಯವರ ಊರಿನವರು ನಾವು. ಖಂಡಿತವಾಗಿ ನಾವು ಅವರನ್ನು ರಕ್ಷಣೆ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಈ ಕಲೆ ಉಳಿಯಬೇಕೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಹೇಳಿದಂತಹ ವಿಷಯದಲ್ಲಿ ತಪ್ಪಿತಸ್ಥರಿಗೆ ಏನು ಶಿಕ್ಷೆ ಎಂದು ಹೇಳಿರುವುದಿಲ್ಲ. ಏಕೆಂದರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಹೇಳಿರುವುದನ್ನು ವಿಚಾರ ಮಾಡಿ, ಖಂಡಿತವಾಗಿ ಅಂತಹವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**ಇ) ವಿಷಯ:- ಬೆಂಗಳೂರು ನಗರದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಸಿಎ ನಿವೇಶನಗಳನ್ನು ಗುತ್ತಿಗೆ ಪಡೆದ ಸಂಸ್ಥೆಗಳು ನಿವೇಶನ ಪಡೆಯುವ ಸಂದರ್ಭದಲ್ಲಿ ತಿಳಿಸಿದ ಉದ್ದೇಶಕ್ಕಾಗಿ ಉಪಯೋಗಿಸದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸುತ್ತಿರುವ ಬಗ್ಗೆ.**

– – –

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಸಿ.ವೇಣುಗೋಪಾಲ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಸಿಎ ನಿವೇಶನಗಳನ್ನು ಗುತ್ತಿಗೆ ಪಡೆದ ಸಂಸ್ಥೆಗಳು ನಿವೇಶನ ಪಡೆಯುವ ಸಂದರ್ಭದಲ್ಲಿ ತಿಳಿಸಿದ ಉದ್ದೇಶಕ್ಕಾಗಿ ಉಪಯೇಗಿಸದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸುತ್ತಿರುವ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ,

(ಸಚಿವರ ಲಿಖಿತ ಹೇಳಿಕೆಯ ಪ್ರತಿಯನ್ನು ಲಗತ್ತಿಸಿದೆ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸಿಎ ನಿವೇಶನಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಸಾರ್ವಜನಿಕ ಸೌಲಭ್ಯಗಳಿಗೆ, ಶಾಲೆ ಕಟ್ಟುವುದಕ್ಕೆ, ಆಸ್ಪತ್ರೆ ಕಟ್ಟುವುದಕ್ಕೆ ಅಥವಾ ಯಾವುದಾದರೂ ಸಾಂಸ್ಕೃತಿಕ ಕೇಂದ್ರಗಳನ್ನು ಮಾಡುವುದಕ್ಕೆ ಈ ರೀತಿಯ ಚಟುವಟಿಕೆಗಳಿಗೆ, ನಾಗರಿಕ ಸೌಲಭ್ಯಗಳಿಗೆ ಕೊಡುವುದಕೋಸ್ಕರ ಎಲ್ಲಿಯಾದರೂ ಒಂದು ಬಡಾವಣೆಯನ್ನು ಹೊಸದಾಗಿ ಮಾಡುವಂತಹ ಸಂದರ್ಭದಲ್ಲಿ ಅಲ್ಲಿ ಜಾಗವನ್ನು ಮೀಸಲಿಡಬೇಕೆಂದು ಅವಕಾಶವನ್ನು ಕೊಟ್ಟಿದ್ದಾರೆ. ಬಹಳ ವರ್ಷಗಳಿಂದ, ಬಹಳ ದೊಡ್ಡ ದೊಡ್ಡ ಸಂಸ್ಥೆಗಳಿಗೆ, ಒಳ್ಳೆಯ ಶಿಕ್ಷಣ ಸಂಸ್ಥೆಗಳಿಗೆ, ಧಾರ್ಮಿಕ ಸಂಸ್ಥೆಗಳಿಗೆ ಅವರಿಗೆಲ್ಲಾ ಕೊಟ್ಟಿದ್ದಾರೆ. ಮೊದಲು 99 ವರ್ಷ ಲೀಸ್ ಕೊಡುತ್ತಿದ್ದರು. ಈಗ ಅದನ್ನು ಕಡಿಮೆ ಮಾಡಿ 30 ವರ್ಷಕ್ಕೆ ಇಳಿಸಿದ್ದಾರೆ. ಇಂತಹ ಸಿಎ ನಿವೇಶನಕ್ಕಾಗಿ ಸುಮಾರು ಜನ ಹಣ ಕಟ್ಟಿ, ಆ ಸಂದರ್ಭದಲ್ಲಿ ಏನು ಬಿಡಿಎಯವರು ಹಣ ನಿಗದಿ ಮಾಡಿದ್ದರು, ಆ ಹಣವನ್ನು ಕಟ್ಟಿ ಸಿಎ ನಿವೇಶನ ತೆಗೆದುಕೊಂಡಿದ್ದಾರೆ.

ಇಲ್ಲಿಯವರೆಗೆ ಸುಮಾರು 1635 ಸಿಎ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ. ಕೆಲವನ್ನು 99 ವರ್ಷಗಳಿಗೆ ಲೀಸ್ ಕೊಟ್ಟಿದ್ದಾರೆ, ಇನ್ನೂ ಕೆಲವನ್ನು 30 ವರ್ಷಗಳಿಗೆ ಲೀಸ್ ಕೊಟ್ಟಿರುತ್ತಾರೆ. ಇವುಗಳನ್ನು ಬಹಳ ವರ್ಷಗಳ ಹಿಂದೆ ಕೊಟ್ಟಿರುವುದು. ಈಗ 99 ವರ್ಷಗಳಿಗೆ ಲೀಸ್ ಕೊಡುವುದೇ ಇಲ್ಲ, ಕೇವಲ 30 ವರ್ಷಗಳಿಗೆ ಮಾತ್ರ ಕೊಡುತ್ತಾರೆ. ಇದರಲ್ಲಿ 11 ಸಂಘ ಸಂಸ್ಥೆಗಳವರು ಲೀಸ್ ಅನ್ನು ನವೀಕರಣ ಮಾಡಿಕೊಂಡಿರುವುದಿಲ್ಲ. ಜೊತೆಗೆ, ಹಣ ಕೂಡ ಕಟ್ಟಿರುವುದಿಲ್ಲ. 11 ಸಂಘ ಸಂಸ್ಥೆಗಳವರು ಇನ್ನೂ ಕೂಡ ಸದರಿ ಸಿಎ ನಿವೇಶನದಲ್ಲಿ ಹಾಗೆಯೇ ಇದ್ದಾರೆ. ಅವರಿಗೆಲ್ಲಾ ಬಿಡಿಎ ನೋಟೀಸ್ ಕೊಟ್ಟಿದೆ. ಅದರಲ್ಲಿ ಕೆಲವರಿಗೆ ಹಂಚಿಕೆಯನ್ನು ರದ್ದು ಕೂಡ ಮಾಡಿದ್ದಾರೆ. ಉದಾಹರಣೆಗೆ, ರಾಜಾಜಿನಗರ ಎಜುಕೇಷನ್ ಸೊಸೈಟಿ, ಕಿರ್ಲೋಸ್ಕರ್ ಬಡಾವಣೆ ಇವರಿಗೆ ಶಾಲೆಗೆಂದು ಸಿಎ ನಿವೇಶನ ಹಂಚಿಕೆ ಮಾಡಿದ್ದರು. ಅವರು ಹಂಚಿಕೆ ಜೊತೆಗೆ, ಅದನ್ನು ವಾಣಿಜ್ಯ ಉದ್ದೇಶಕ್ಕೆ ಅಂದರೆ, commercial activity ಮಾಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪಯೋಗ ಮಾಡಿಕೊಂಡಿದ್ದಾರೆ. ಇದು ಗೊತ್ತಾದ ಮೇಲೆ ಬಿ.ಡಿ.ಎ. ನವರು ಆ ಸಿಎ ನಿವೇಶನದ ಲೀಸ್ ಅನ್ನು ರದ್ದು ಮಾಡಿದ್ದಾರೆ. ಅದೇ ರೀತಿಯಾಗಿ Children's Education Society ಎಂದು ಜೆ.ಪಿ. ನಗರದಲ್ಲಿ ಕಾಲೇಜ್‌ಗಾಗಿ ಕೊಟ್ಟಿದ್ದರು. ಅವರೂ ಕೂಡ ಕಮರ್ಷಿಯಲ್ ಮಾಡುವುದಕ್ಕೆ ಹೊರಟ್ಟಿದ್ದರಿಂದ ಅವರ ನಿವೇಶನವನ್ನು ರದ್ದು ಮಾಡಿದ್ದಾರೆ. ಆದರೆ, ಅವರು ನ್ಯಾಯಾಲಯದ ಮುಂದೆ ಹೋಗಿರುತ್ತಾರೆ. ಇನ್ನುಳಿದ 11 ಜನರಿಗೂ ಈಗಾಗಲೇ ನೋಟೀಸ್ ಕೊಟ್ಟಿದ್ದಾರೆ. ಅವರಿಂದ ಉತ್ತರ ಬಂದ ನಂತರ ಕ್ರಮ ಕೈಗೊಳ್ಳುತ್ತೇವೆ. ಒಂದು ವೇಳೆ ಹಣ ಅವರಿಂದ ಕಟ್ಟಿಸಿಕೊಂಡು ರೆಗ್ಯುಲರೈಸ್ ಮಾಡಬೇಕು ಅಥವಾ ಆ ಉದ್ದೇಶಕ್ಕೆ ಉಪಯೋಗ ಮಾಡುವುದಿದ್ದರೆ ಅಂದರೆ, ಯಾವ ಉದ್ದೇಶಕ್ಕಾಗಿ ನಾವು ಅವರಿಗೆ ಸಿಎ ನಿವೇಶನ ಕೊಟ್ಟಿದ್ದೇವೆ, ಉದಾಹರಣೆಗೆ, ಶಾಲಾ–ಕಾಲೇಜುಗಳಿಗೆ ಕೊಟ್ಟಿದ್ದೇವೆಯೇ, ಧಾರ್ಮಿಕ ಸಂಸ್ಥೆಗಳಿಗೆ, ಆಸ್ಪತ್ರೆಗಳಿಗೆ ಕೊಟ್ಟಿದ್ದೇವೆಯೇ. ಈ ರೀತಿ ಯಾವ ಉದ್ದೇಶಗಳಿಗೆ ಕೊಟ್ಟಿದ್ದೇವೆಯೇ, ಆ ಉದ್ದೇಶಗಳಿಗೆ ಅವರು ಉಪಯೋಗ ಮಾಡದೇ ಇದ್ದರೆ, ಅದನ್ನು ರದ್ದು ಮಾಡುವಂತಹ ಕೆಲಸ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಇದರ ಜೊತೆಗೆ, ನಮ್ಮಲ್ಲಿ ಮೊನ್ನೆ ದಿವಸ ಇದರ ಬಗ್ಗೆ ನಾನು ಇಲ್ಲಿಂದ ಶುಕ್ರವಾರ ಸಂಜೆ ಹೋದ ನಂತರ, ಶನಿವಾರ ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಸಭೆ ಮಾಡಿದ್ದೇನೆ. ಸಿಎ ನಿವೇಶನ ಹೊಸದಾಗಿ ಹಂಚಿಕೆ ಮಾಡುವ ಬಗ್ಗೆ, ಬೋರ್ಡ್ ಮೀಟಿಂಗ್‌ನಲ್ಲಿ ಈ ವಿಷಯ ಬಂದಾಗ ಇದಕ್ಕೆ ನಾವು ಕೆಲವು ಹೊಸ ಗೈಡ್‌ಲೈನ್ಸ್‌ಗಳನ್ನು ಮಾಡಬೇಕೆಂದು ಸಭೆ ಮಾಡಿದ್ದೇವೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ನಿಯಂತ್ರಣವನ್ನು ತರುವುದಕ್ಕೋಸ್ಕರ, ಹೊಸ ಗೈಡ್‌ಲೈನ್ಸ್ ನ್ನು ಮಾಡಬೇಕೆಂದು ಚರ್ಚೆ ಮಾಡಿದ್ದೇವೆ. ಆದಷ್ಟು ಶೀಘ್ರವಾಗಿ ಇದನ್ನು ರೆಗ್ಯುಲೇಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ತಮಗೆ ತಿಳಿಸುತ್ತೇನೆ.

ಮಾನ್ಯ ಎಂ.ಸಿ. ವೇಣುಗೋಪಾಲ್‌ರವರು ಹೊಸದಾಗಿ ಈ ಸದನಕ್ಕೆ ಬಂದಿದ್ದಾರೆ. ಅವರು ಒಂದು ಉತ್ತಮವಾದ ಕೆಲಸ ಮಾಡಿದರು. ಜೆ.ಪಿ. ನಗರದಲ್ಲಿ ಇದೇ ರೀತಿಯಾಗಿ ಒಂದೂವರೆ ಎಕರೆ ಅಥವಾ ಎರಡು ಎಕರೆ ಜಮೀನು ಇರಬಹುದು. ಅದರಲ್ಲಿ ಒಂದು ದೇವಸ್ಥಾನ ಕಟ್ಟಿಕೊಂಡು ಅದು ಬಿ.ಡಿ.ಎ. ಗೆ ಸಂಬಂಧಪಟ್ಟ ಸಿಎ ಸೈಟು. ಅವರು ಅದನ್ನು ಅತಿಕ್ರಮಣ ಮಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದರು. ಆ ಸಂದರ್ಭದಲ್ಲಿ ನಮ್ಮ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ದೊರೆಸ್ವಾಮಿ ಮತ್ತು ಮಾನ್ಯ ಸದಸ್ಯರು ಸೇರಿಕೊಂಡು ಆ ಎರಡು ಎಕರೆ ಜಮೀನನ್ನು ಉಳಿಸಿದ್ದಾರೆ. ಆ ಜಮೀನಿಗೆ ಇವೊತ್ತಿನ ಮಾರುಕಟ್ಟೆಯಲ್ಲಿ ಕನಿಷ್ಠ 100 ಕೋಟಿ ರೂಪಾಯಿ ಬೆಲೆ ಇರಬಹುದು. ಅಂತಹ ಜಮೀನನ್ನು ಮಾನ್ಯ ವೇಣುಗೋಪಾಲ್‌ರವರು ಉಳಿಸಿದ್ದಾರೆ. ಈಗ ಅದನ್ನು ಬಿ.ಡಿ.ಎ. ನವರು ವಶಕ್ಕೆ ತೆಗೆದುಕೊಂಡು,

ಅಲ್ಲಿರುವಂತಹ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸುವಂತಹ ಕೆಲಸ ಮಾಡಿ, ಆ ಜಾಗವನ್ನು ಉಪಯುಕ್ತವಾಗಿ ಉಪಯೋಗ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ.

**ಶ್ರೀ ಎಂ.ಸಿ. ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಉಪ ಮುಖ್ಯಮಂತ್ರಿಗಳಲ್ಲಿ ನಾನು ತಮ್ಮ ಮೂಲಕ ಮನವಿ ಮಾಡುವುದೇನೆಂದರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಕೊಟ್ಟಂತಹ ಉತ್ತರದಲ್ಲಿ ಸಿಎ ನಿವೇಶನವನ್ನು ಹಂಚಿಕೆ ಮಾಡಿದ ಉದ್ದೇಶಕ್ಕೆ ಉಪಯೋಗಿಸದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡಿರುವುದು ಪ್ರಾಧಿಕಾರದ ಗಮನಕ್ಕೆ ಬಂದಂತಹ ಸಂದರ್ಭದಲ್ಲಿ ಹಂಚಿಕೆಯನ್ನು ರದ್ದುಪಡಿಸುತ್ತೇವೆಂದು ಹೇಳಿದ್ದಾರೆ. ಆದರೆ, ನನ್ನ ಮನವಿ ಏನೆಂದರೆ, ಸರ್ಕಾರ ಯಾವ ಉದ್ದೇಶಕ್ಕಾಗಿ ಸಿಎ ನಿವೇಶನವನ್ನು ಹಂಚಿಕೆ ಮಾಡಿತ್ತು ಅದನ್ನು ಸದುಪಯೋಗ ಮಾಡಿಕೊಳ್ಳದೇ, ಈ ರೀತಿ ಚೀಟಿಂಗ್ ಮಾಡಿ commercial purpose ಗೆ ಅಥವಾ ಮತ್ತೊಂದು ಉದ್ದೇಶಕ್ಕಾಗಿ ಉಪಯೋಗಿಸಿಕೊಂಡು, 30 ವರ್ಷ ಅಥವಾ 99 ವರ್ಷ ಅನುಭವಿಸಿ ಉಪಯೋಗ ಮಾಡಿಕೊಂಡವರ ವಿರುದ್ಧ ಸರ್ಕಾರ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಎರಡನೆಯದಾಗಿ, ಕೆಲವು ಸಂಘ ಸಂಸ್ಥೆಗಳು ಈ ಸಾರ್ವಜನಿಕ ಉದ್ದೇಶದಿಂದ ಸಂಘ ಸಂಸ್ಥೆಗಳಿಗೆ ಸಿಎ ನಿವೇಶನಗಳನ್ನು ಕೊಡುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅದರ ಜೊತೆಯಲ್ಲಿ ಕೆಲವು ಸಂಘ ಸಂಸ್ಥೆಗಳು ಸಿಎ ನಿವೇಶನಗಳನ್ನು ಪಡೆದುಕೊಂಡು, ಆ ನಿವೇಶನವನ್ನು 30 ವರ್ಷಗಳ ಕಾಲ ಉಪಯೋಗಿಸಿಕೊಂಡು ಆರ್ಥಿಕವಾಗಿ ಅವರು ಸಬಲೀಕರಣವಾಗಿರುವುದರಿಂದ ಅದನ್ನು ಅವರಿಗೆ ಏತಕ್ಕೆ ರಿಜಿಸ್ಟ್ರೇಷನ್ ಮಾಡಿಸಿಕೊಡಬಾರದು?

(ಮುಂದುವರೆದಿದೆ...)

(544) 18-12-2018 (6.50) ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಂ.ಸಿ.ವೇಣುಗೋಪಾಲ್(ಮುಂದು):-

ಯಾವ ಸಂಘಸಂಸ್ಥೆಗಳು ಕೇಳಿರುತ್ತಾರೆ ಅವರಿಗೆ ಎಸ್.ಆರ್. ದರದಲ್ಲಿ ನೋಂದಣಿ ಮಾಡಿಸಿಕೊಡುವುದು ಸೂಕ್ತವೆಂದು ಹೇಳುತ್ತೇನೆ. ನೂರಾರು ಉದಾಹರಣೆಗಳು ನನ್ನ ಹತ್ತಿರ ಇದೆ. ಈಗಾಗಲೇ ಸಮಯವಾಗಿರುವುದರಿಂದ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಸಮಯವನ್ನು ನೀಡಿದರೆ ಮುಂದುವರೆಸುವುದಕ್ಕೂ ಸಿದ್ಧನಾಗಿದ್ದೇನೆ. ಎರಡನೆಯದಾಗಿ ಅತ್ಯಂತ ಪ್ರತಿಷ್ಠಿತ ಸಂಸ್ಥೆಗಳಿಂದ, ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಸ್ಥೆಯ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ, ಆ ಸಂಸ್ಥೆಗಳಿಂದ ಸುಮಾರು 100.00 ಕೋಟಿ ರೂಪಾಯಿಗಳಷ್ಟು ಹಣ ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗಿದೆ. ಬೆಂಗಳೂರು ನಗರದಲ್ಲಿ ಸಿ.ಎ. ನಿವೇಶನವನ್ನು ಪಡೆದುಕೊಂಡು ಕೆಲವು ಕ್ಲಬ್‌ಗಳನ್ನು ನಡೆಸಲಾಗುತ್ತಿದ್ದು, ಆ ಕ್ಲಬ್‌ಗಳಲ್ಲಿ ಸದಸ್ಯತ್ವವನ್ನು ಪಡೆಯಲು 10 ಲಕ್ಷ, 20 ಲಕ್ಷ ರೂಪಾಯಿಗಳನ್ನು ಕೇಳುತ್ತಾರೆ. ಸದಸ್ಯತ್ವವನ್ನು ಪಡೆದುಕೊಂಡ ಮೇಲೆ Subscription Fees ಎಂದು ಪ್ರತಿ ತಿಂಗಳು ಶುಲ್ಕವನ್ನು ತೆಗೆದುಕೊಳ್ಳುತ್ತಾರೆ. ಇವತ್ತು ನಮ್ಮಲ್ಲಿರುವ ಕಲೆ, ಸಂಸ್ಕೃತಿ, ಸಮಾಜದ ಬಗ್ಗೆ ಕಳಕಳಿ ಇರುವಂಥವರಿಗೆ ಸಿ.ಎ. ನಿವೇಶನವನ್ನು ಒದಗಿಸಿ. ಆದರೆ, ದುರುಪಯೋಗ ಪಡಿಸಿಕೊಳ್ಳುವವರಿಗೆ ಏನು ಶಿಕ್ಷೆಯನ್ನು ನೀಡುತ್ತಾರೆ ಎನ್ನುವುದು ಉತ್ತರದಲ್ಲಿ ಇರುವುದಿಲ್ಲ.

**ಸಭಾಪತಿಯವರು:-** ಸಾಕು, ಮಾನ್ಯ ಸಚಿವರು ಮಾತನಾಡುತ್ತಾರೆ.

**ಶ್ರೀ ಎಂ.ಸಿ.ವೇಣುಗೋಪಾಲ್(ವಿಧಾನಸಭ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದ ವಿಚಾರವಾಗಿರುವುದರಿಂದ ಪಟ್ಟಿಯನ್ನು ಸಹ ಹೇಳುತ್ತೇವೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಶೇಕಡ ನೂರಕ್ಕೆ ನೂರರಷ್ಟು ದುರುಪಯೋಗ ಪಡಿಸಿಕೊಂಡವರಿಗೆ ಏನು ಶಿಕ್ಷೆ ವಿಧಿಸುತ್ತಾರೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು.

**ಡಾ॥ ಜಿ.ಪರಮೇಶ್ವರ(ಉಪ ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇರುವ ಪಟ್ಟಿಯ ಬಗ್ಗೆಯೂ ಹೇಳಲಿ.

**ಸಭಾಪತಿಯವರು:-** ಆಯಿತು.

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ನಿಯಮ 330 ರಡಿ ಪೂರ್ತಿ ಚರ್ಚೆ ಮಾಡುವುದಕ್ಕೆ ಅವಕಾಶ ಒದಗಿಸಿದರೆ ಸರ್ಕಾರಕ್ಕೆ 3000 ದಿಂದ 3600 ಕೋಟಿ ರೂಪಾಯಿಗಳವರೆಗೂ ಲಾಭ ಬರುವಂಥದ್ದಾಗಿದೆ. ಇದರ ಬಗ್ಗೆ ನಾನು ಹೇಳುತ್ತಿಲ್ಲ. ಈ ಹಿಂದೆ ಲೋಕಾಯುಕ್ತದಲ್ಲಿದ್ದ ಉಪ ಲೋಕಾಯುಕ್ತರವರು ಒಂದು ವರದಿಯನ್ನು ನೀಡಿದ್ದಾರೆ. ನಂತರ ದಿನಾಂಕ 26 ಆಗಸ್ಟ್ 2018 ರಂದು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯಲ್ಲಿ ಸಹ ವರದಿಯಾಗಿದೆ. ಆದ್ದರಿಂದ ನಾನು ಹೇಳುವುದಕ್ಕೆ ಇಚ್ಛಿಸುವುದೇನೆಂದರೆ, ಸಿ.ಎ.ನಿವೇಶನಗಳನ್ನು ಕೇವಲ influence ಅಥವಾ ಬೇರೆ ಕಾರಣದಿಂದ ಕೊಡುವುದರ ಬದಲು,... ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್.ಎಸ್.ದೊರೆಸ್ವಾಮಿಯವರು, ಸಾಹಿತಿಗಳು, ನಾವೆಲ್ಲರೂ ಹೋಗಿ ಮುಷ್ಕರ ಮಾಡಿ, ಆ ಸಂದರ್ಭದಲ್ಲಿ ಬಿ.ಡಿ.ಎ. ನ A.E.E ಕರೆದು ಬಿ.ಡಿ.ಎ. ನಿವೇಶನದಲ್ಲಿ ಈ ರೀತಿ ಮನೆಗಳನ್ನು ನಿರ್ಮಿಸುತ್ತಿದ್ದಾರೆ ಅದಕ್ಕೆ ಏನು ಮಾಡಬೇಕೆಂದು ವರದಿಯನ್ನು ನೀಡಿದರೆ, ಆ ಇಂಜಿನಿಯರ್ಸ್‌ಗಳು ವರದಿಯನ್ನು ಲಾಭದಾಯಕವಾಗಿ ಉಪಯೋಗ ಮಾಡಿಕೊಳ್ಳುತ್ತಾರೆ. ತಡೆಯಾಜ್ಞೆ ತಂದ ಮೇಲೆ ಆ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಬೆಂಗಳೂರು ಉಸ್ತುವಾರಿ ಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಇದಕ್ಕೆ ಕಡಿವಾಣ ಹಾಕಿದರೆ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿರುವ 3000 ಕೋಟಿ ರೂಪಾಯಿ ಲಾಭದಾಯಕವಾಗುತ್ತದೆ. ಕೊನೆಯದಾಗಿ 5 ಪಾಯಿಂಟ್ ಹೇಳುವುದಕ್ಕೆ ಇಚ್ಛಿಸುತ್ತೇನೆ. ಅದೇನೆಂದರೆ, ಬೆಂಗಳೂರು ನಗರದಲ್ಲಿ ನಿವೇಶನದ ಒತ್ತಡ ಇರುವುದರಿಂದ ಯಾವ ಉದ್ದೇಶಕ್ಕಾಗಿ ಸಿ.ಎ.ನಿವೇಶನವನ್ನು ಬಳಸಲಾಗುತ್ತಿದೆ ಅದನ್ನು ಆಟದ ಮೈದಾನವಾಗಿ ಉಪಯೋಗಿಸಿಕೊಳ್ಳುವುದಕ್ಕೆ ನೀಡಿ. ಹಾಗೆಯೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ರವೀಂದ್ರ ಕಲಾಕ್ಷೇತ್ರ ಮತ್ತು ಟೌನ್‌ಹಾಲ್ ಬಿಟ್ಟರೆ, ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ರವೀಂದ್ರ ಕಲಾಕ್ಷೇತ್ರದ ರೀತಿಯಲ್ಲಿಯೇ ಒಂದೊಂದು ಕಲಾಕ್ಷೇತ್ರವನ್ನು ಮಾಡುವುದರ ಮೂಲಕ ಸಂಸ್ಕೃತಿಯನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಬೇಕು. ಹಿಂದೆ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರು ಬೆಂಗಳೂರು ನಗರದಲ್ಲಿ ಉದ್ಯಾನವನ್ನು ಮಾಡಿದರು. ನಿಜಕ್ಕೂ ಬೆಂಗಳೂರಿನ ಜನರಿಗೆ ಆ ಉದ್ಯಾನವನಗಳು ಸಂಜೀವಿನಿಯಾಗಿದೆ. ಆ ಉದ್ಯಾನವನಗಳಲ್ಲಿ ಜನರು ಬೆಳಗಿನ ಜಾವ ವಾಕಿಂಗ್ ಮಾಡುವುದಕ್ಕೆ ಅನುಕೂಲ ಆಗುತ್ತಿರುವುದರಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ಉದ್ಯಾನವನಗಳನ್ನು ಮಾಡಬೇಕಾಗಿದೆ. ಅವಧಿ ಮುಗಿದಿರುವ ಸಿ.ಎ.ನಿವೇಶನಗಳು ಏನಿದೆ, ಆ ಸಿ.ಎ.ನಿವೇಶನಗಳನ್ನು ಬಿ.ಡಿ.ಎ. ಸ್ವತ್ತು ಎಂದು ಹೇಳಿ ಬೋರ್ಡ್ ಹಾಕಿ ಬೇಲಿ ಹಾಕಿಸುವುದು ಬಹಳ ಅವಶ್ಯಕತೆ ಇದೆ. ಸಾರ್ವಜನಿಕ ಜೀವನ ನಡೆಸುತ್ತಿರುವ ನಾವು ಸಹ ಎಷ್ಟೆಂದು ಮಾಹಿತಿಯನ್ನು ಪಡೆಯುವುದಕ್ಕಾಗುತ್ತದೆ. ನಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಮಾಹಿತಿಯನ್ನು ಪಡೆಯಬೇಕಾಗುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಯುಕ್ತರು, ಕಾರ್ಯದರ್ಶಿಗಳು ಎಲ್ಲರೂ ಒಳ್ಳೆಯವರೇ ಇದ್ದಾರೆ. ಆದರೆ, ಈಗ ಇರುವಂಥ ಆಯುಕ್ತರವರಿಗೆ 3-4 ಇಲಾಖೆಗಳ ಜವಾಬ್ದಾರಿಯನ್ನು ವಹಿಸಲಾಗಿದೆ. ಆದ್ದರಿಂದ ಆ ಆಯುಕ್ತರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಇಲಾಖೆಯ ಕಡೆಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ, ಇದರ ಬಗ್ಗೆ ಗಮನಹರಿಸುವಂತೆ ಮಾಡಬೇಕು. ಹಿರಿಯ ಸ್ವತಂತ್ರ್ಯ ಹೋರಾಟಗಾರರು, ಸಾಹಿತಿಗಳು, ನಾವುಗಳು ಹೋದಾಗ ಮಾನ್ಯ ಉಪ ಮುಖ್ಯಮಂತ್ರಿಗಳು 100.00 ಕೋಟಿ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಉಳಿಸಿ ಆಟದ ಮೈದಾನಕ್ಕೆ ಅವಕಾಶ ಕಲ್ಪಿಸಿದ್ದಾರೆ. ಆದ್ದರಿಂದ ಕೊನೆಯದಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿನಂತಿಸುವುದೇನೆಂದರೆ, ಸಿ.ಎ.ನಿವೇಶನಗಳಲ್ಲಿ ಆಗುತ್ತಿರುವ ದಂಧೆಯನ್ನು ನಿಲ್ಲಿಸಬೇಕು ಹಾಗೂ ಅವಧಿ ಮುಗಿದ ನಂತರ ಎಸ್.ಆರ್. ದರದಲ್ಲಿ ನಿವೇಶನವನ್ನು ನೋಂದಣಿ ಮಾಡಿಸಿಕೊಡಬೇಕು. ಎಲ್ಲೆಲ್ಲಿ ಕಾನೂನುಬಾಹಿರವಾಗಿ ಸಿ.ಎ.ನಿವೇಶನವನ್ನು ತೆಗೆದುಕೊಂಡಿದ್ದಾರೆ ಅವರುಗಳ ಮೇಲೆ ಕೂಡಲೇ ಶಿಸ್ತು ಕ್ರಮ ಜರುಗಿಸಬೇಕು. ಅದಕ್ಕೆ ಬೇಕಾದಂಥ ಮಾಹಿತಿಯನ್ನು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಹಾಗೂ ಬಿ.ಡಿ.ಎ.ಗೆ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಹಾಗೆಯೇ ಮಾನ್ಯ ಉಪ ಮುಖ್ಯಮಂತ್ರಿಯವರು ಅಧಿಕಾರಕ್ಕೆ ಬಂದ ಮೇಲೆ ಬೆಂಗಳೂರಿನಲ್ಲಿರುವ ನಿವೇಶನಗಳನ್ನು ಮತ್ತು ಸಿ.ಎ.ನಿವೇಶನಗಳನ್ನು ಕೊಡಿಸುವುದಕ್ಕೆ ಒಬ್ಬ ಹಿರಿಯ K.A.S. Officer ನ್ನು Estate Officer ಆಗಿ ನೇಮಿಸಲಾಗಿದೆ. ಅದರ ಜೊತೆಗೆ ಹೆಚ್ಚಿನ ಸಿಬ್ಬಂದಿಗಳನ್ನು ಒದಗಿಸಿ ಇದಕ್ಕೆ ರಕ್ಷಣೆಯನ್ನು ನೀಡಿದರೆ, ರೈತರ ಸಾಲಮನ್ನಾ ಮಾಡುವುದಕ್ಕೆ ಆಗಬಹುದು, ಮತ್ತೊಂದು ಯಾವುದಾದರೂ ಕೆಲಸಕ್ಕೆ ಉಪಯೋಗವಾಗುವಷ್ಟು ಸುಮಾರು ಕೋಟಿ ರೂಪಾಯಿಗಳು ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ ಎಂದು ಹೇಳಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿಸುತ್ತೇನೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರ ಬಳಿ ಸಿ.ಎ. ನಿವೇಶನದ ಬಗ್ಗೆ ಚರ್ಚೆ ನಡೆಯುತ್ತಿದೆ. ದೇಶದಲ್ಲಿ ಬೀದಿ ಬದಿ ವ್ಯಾಪಾರಿಗಳಿಗಾಗಿ Street Vendors Act ನ್ನು ಜಾರಿಗೆ ತರಲಾಗಿದೆ. ಸಿ.ಎ. ನಿವೇಶನವನ್ನು ನೀಡುವಾಗ ಉದ್ಯಾನಗಳಿಗೆ ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಒದಗಿಸಬೇಕೆಂದು ಮಾಡಲಾಗಿದೆ ಟ್ರಾಫಿಕ್ ಮತ್ತೊಂದು ಎಂದು ಜನಜೀವನ ವ್ಯವಸ್ಥೆ ಮಾಡುವುದಕ್ಕಾಗಿ Street Vendors Act ಒಳಗೆ ಕೇಂದ್ರೀಕೃತವಾಗಿ ತೊಂದರೆಯಾಗಬಾರದೆಂಬ ಕಾರಣದಿಂದ ಈ ರೀತಿಯ ನಿವೇಶನಗಳನ್ನು ಸ್ಥಳೀಯವಾಗಿ ಬೀದಿ ಬದಿ ವ್ಯಾಪಾರಿಗಳಿಗೆ ಮಾರುಕಟ್ಟೆಯಾಗಿ ಮಾಡುವುದಕ್ಕೆ ಅವಕಾಶ ಮಾಡಲಾಗಿದೆ. ಈಗಾಗಲೇ 1635 ನಿವೇಶನಗಳನ್ನು ಹಂಚಿಕೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದರಲ್ಲಿ ಆ ರೀತಿಯ ಬೀದಿ ಬದಿ ವ್ಯಾಪಾರಿಗಳಿಗೋಸ್ಕರ ಸಣ್ಣ-ಸಣ್ಣ ಮಾರುಕಟ್ಟೆ ಬಡಾವಣೆಗಳನ್ನು ಸೃಷ್ಠಿ ಮಾಡುವುದಕ್ಕೋಸ್ಕರ ಎಷ್ಟು ನಿವೇಶನವನ್ನು ನೀಡಲಾಗಿದೆ, ಒಂದು ವೇಳೆ ನಿವೇಶನವನ್ನು ನೀಡದಿದ್ದರೆ ಮುಂದಾದರೂ ನೀಡಬಹುದೇ ಎನ್ನುವಂಥ ಪ್ರಶ್ನೆಯನ್ನು ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಕೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಪ್ರಶ್ನೆ ಇರುವುದು ಕೇವಲ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮಾತ್ರ ಸಂಬಂಧಪಟ್ಟಂತಲ್ಲಿ, ಬೆಂಗಳೂರು ನಗರದಲ್ಲಿರುವ ನಿವೇಶನದ ಬಗ್ಗೆ ಕೇಳಿದ್ದಾರೆ. ಬೆಂಗಳೂರು ನಗರ ಎಂದರೆ ಈ ಹಿಂದೆ C.I.T.B (City Improvement Trust Board) ಮತ್ತು ಮುನಿಸಿಪಾಲಿಟಿ ಸಂಸ್ಥೆಯು ಇತ್ತು. ಹಾಗೆಯೇ ಬಿ.ಡಿ.ಎ.ಗೆ ಬಹಳ limitation ಇದೆ. ಬೆಂಗಳೂರು ನಗರದಲ್ಲಿ ಬ್ರಿಟಿಷರ ಕಾಲದಲ್ಲಿಯೂ ಸಹ ಈ ರೀತಿಯ ಸಂಸ್ಥೆಗಳಿಗೆ ನಿವೇಶನ ಕೊಟ್ಟಿರುವಂತಹದ್ದು ಇತ್ತು. ಸ್ವಾತಂತ್ರ್ಯ ನಂತರ ಸರ್ಕಾರದ ವತಿಯಿಂದ, ಬಿ.ಡಿ.ಎ, local bodies, ಮತ್ತು C.I.T.B. ವತಿಯಿಂದ ನಿವೇಶನವನ್ನು ನೀಡಿರುವಂಥ ಉದಾಹರಣೆ ಇವೆ. ಈ ರೀತಿ ಹಲವಾರು ಪ್ರಕರಣಗಳಲ್ಲಿ ಸಾರ್ವಜನಿಕ ಉದ್ದೇಶದಿಂದ ಯೋಜನೆಗಳನ್ನು ಮತ್ತು ಸೌಕರ್ಯಗಳನ್ನು ನೀಡಲು ಬೇರೆ ಖಾಸಗಿ ಸಂಸ್ಥೆಗಳಿಗೆ ನಿವೇಶನಗಳನ್ನು ನೀಡಿರುವಂಥದ್ದಾಗಿದೆ. ಇಂತಹ ನಿವೇಶನಗಳು ಎಷ್ಟಿದೆ ಎಂದು ಯೋಜನಾ ಪ್ರಾಧಿಕಾರದ ಮೂಲಕ ಮಾಸ್ಟರ್ ಪ್ಲಾನ್ ಎಂದು ಮಾಡಲಾಗುತ್ತದೆ. ಅಂತಹ ಮಾಸ್ಟರ್ ಪ್ಲಾನ್ ಮಾಡುವ ಸಮಯದಲ್ಲಿ ಯಾವ್ಯಾವ ನಿವೇಶನಗಳನ್ನು ಲೀಸ್ ಅಥವಾ ಗ್ರ್ಯಾಂಟ್ ಮೂಲಕ ನೀಡಿರುವುದಕ್ಕೆ special indication ಏನಾದರೂ ಮಾಸ್ಟರ್ ಪ್ಲಾನ್ ಮೂಲಕ ಮಾಡಲಾಗುತ್ತಿದೆಯೇ? ಇದು ಬಹಳ ಮುಖ್ಯವಾದ ವಿಚಾರ. ಇಂತಹದ್ದನ್ನು ಮಾಡದಿದ್ದರೆ you cannot identify it. ಏಕೆಂದರೆ, ಮಾನ್ಯ ಸದಸ್ಯರುಗಳಾದ ಶ್ರೀ ಸುನೀಲ್ ಸುಬ್ರಮಣಿರವರ ಹತ್ತಿರ ಮತ್ತು ಶ್ರೀ ರಾಮಸ್ವಾಮಿಯವರ ಹತ್ತಿರ ಅದಕ್ಕೆ ಸಂಬಂಧಿಸಿದಂತೆ ವರದಿ ಇದ್ದು, ಇದರಲ್ಲಿ ಇಂತಹ ವಿಚಾರಗಳೆಲ್ಲಾ ಬರುವುದರಿಂದ ಇದನ್ನು ಬೆಳೆಯುವುದಕ್ಕೆ ಬಿಡಬಾರದು. First, list the grant and leased property. ಮುನಿಸಿಪಾಲಿಟಿಯವರು, C.I.T.B. ಇದ್ದಾಗ ಅಥವಾ ಬ್ರಿಟಿಷರ ಕಾಲದಲ್ಲಿ ಕೊಟ್ಟಂತಹ ಇಂತಹ ಭೂಮಿಗಳೆಲ್ಲವೂ ದುರುಪಯೋಗವಾಗಿದೆ. ಕೇವಲ ಬಿ.ಡಿ.ಎ. ನಿವೇಶನಗಳು ಮಾತ್ರ ಆಗಿರುವುದಿಲ್ಲ. ಬಿ.ಡಿ.ಎ. ನಿವೇಶನಕ್ಕೆ ಒಳಪಟ್ಟಿರುವ 11, 15 ಪ್ರಕರಣದ ಬಗ್ಗೆ ಹೇಳಲಾಗುತ್ತಿದೆ. ಹಾಗಾಗಿ reclaim ಮಾಡುವಂಥ ಒಂದು ಪ್ರಕ್ರಿಯೆಯ ಕಾನೂನನ್ನೇ ತರಬೇಕಾಗುತ್ತದೆ. ಆಗ ಮಾತ್ರ reclaim ಮಾಡುವುದಕ್ಕೆ ಸಾಧ್ಯವಾಗುತ್ತದೆ. Grant violations, lease violations, terms and conditions ಹಾಕಿರತಕ್ಕಂತಹ Lease Deeds examine ಮಾಡುವುದಕ್ಕೆ ಒಂದು ವ್ಯವಸ್ಥೆಯನ್ನೇ ಮಾಡಬೇಕಾಗುತ್ತದೆ. ಇದು ಒಂದೆರಡು ದಿವಸದಲ್ಲಿ ಮಾಡುವಂಥ ವಿಚಾರವಾಗಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಉಪಯೋಗಕ್ಕೆ ಕೊಡುವಂಥ ನಿವೇಶನವನ್ನು ಆ ಉದ್ದೇಶಕ್ಕೆ ಮಾತ್ರ ಬಳಸಬೇಕೆಂಬ ಕಾನೂನು ಇದ್ದು, ಅದರ ಪ್ರಕಾರವೇ ಆಗುತ್ತದೆ. ಆದರೆ, ಇದು ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ಇಡೀ ರಾಜ್ಯದ ವಿಚಾರದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದವರು ಸಾಕಷ್ಟು ಸಿ.ಎ. ನಿವೇಶನಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಮಾಡಿ, 30 ವರ್ಷಗಳವರೆಗೂ ಲೀಸ್ ಎಂದು ಮಾಡುತ್ತಾರೆ. ಅದಕ್ಕೆ ಸಂಬಂಧಿಸಿದಂತೆ 2–3 ಸಲ ಪ್ರಶ್ನೆಯ ಮೂಲಕವು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಮೊನ್ನೆ ಸಹ ನಿವೇಶನಕ್ಕೆ ಸಂಬಂಧಿಸಿದಂತೆ ಪ್ರಶ್ನೆ ನೀಡಿದಾಗ ಅದು ಚುಕ್ಕೆ ಗುರುತಿಲ್ಲದ ಪ್ರಶ್ನೆಯಾಗಿ ಮಾರ್ಪಟ್ಟಿದ್ದರಿಂದ ಚರ್ಚೆ ಮಾಡುವುದಕ್ಕೆ ಅವಕಾಶವಾಗಲಿಲ್ಲ.

**ಸಭಾಪತಿಯವರು:–** ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ನಿವೇಶನದ ಬಗ್ಗೆ ಚರ್ಚೆ ಮಾಡಲಾಗುತ್ತಿದೆ.

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಹೌದು. ಅದರ ಬಗ್ಗೆಯೂ ಸರ್ಕಾರಕ್ಕೆ ತಿಳಿಸಬೇಕಲ್ಲವೇ?

**ಸಭಾಪತಿಯವರು:–** ಆಯಿತು.

(ಮುಂದು) . . .

(545) 18–12–2018 7–00 ಎಸ್‌ಕೆ/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಡಾ|| ಜಿ.ಪರಮೇಶ್ವರ್(ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಮಾನ್ಯ ಸದಸ್ಯರುಗಳು ಬಹಳ ಉತ್ತಮವಾಗಿರತಕ್ಕಂತಹ ಸಲಹೆಗಳನ್ನು ಕೊಟ್ಟಿರುದ್ದಾರೆ. ನಾನು ಆಗಲೇ ಹೇಳಿದಂತೆ ಹೊಸದಾಗಿ ಈ C.A (Civic Amenity Sites) ನಿವೇಶನಗಳನ್ನು ಕೊಡುವುದಕ್ಕೆ ನಾವು ಹೊಸ ಕಾನೂನುಗಳನ್ನು ಮಾಡಿ ಹಣ ಕಟ್ಟದೇ ಇರುವವರ ಮೇಲೆ ಈಗಾಗಲೇ ಕ್ರಮ ತೆಗೆದುಕೊಳ್ಳಲು ಪ್ರಾರಂಭ ಮಾಡಿದ್ದೇವೆ. ಒಂದು ವೇಳೆ 30 ವರ್ಷ ಆಗಿದೆ ಅಥವಾ 99 ವರ್ಷದಲ್ಲಿ 80 ವರ್ಷ ಆಗಿದೆ ಅಂಥವರು ಕೆಲವರು ನಮಗೆ ರಿಜಿಸ್ಟರ್ ಮಾಡಿ ಕೊಟ್ಟು ಬಿಡಿ, ಹೇಗಿದ್ದರೂ ಕೂಡ ನೀವು ವಾಪಸ್ ತೆಗೆದುಕೊಳ್ಳುವುದಿಲ್ಲ ಅಥವಾ ಅವರು ವಾಪಸ್ ಕೊಡುವುದೂ ಇಲ್ಲ. ಅದನ್ನು ಈಗಿನ ಪ್ರಸ್ತುತ ದರ ಏನಿದೆ ಅಷ್ಟಕ್ಕೆ ನೋಂದಣಿ ಮಾಡಿಕೊಡಿ ಎಂದೂ ಸಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳುತ್ತಿದ್ದಾರೆ. ಅದನ್ನೂ ನಾವು ಪರಿಶೀಲನೆ ಮಾಡತಕ್ಕಂತಹವರಿದ್ದೇವೆ. 40 ವರ್ಷ 50 ವರ್ಷ ಆಗಿಬಿಟ್ಟಿದೆ ಅದನ್ನು ಈಗ ನಾವು ವಾಪಸ್ ತೆಗೆದುಕೊಳ್ಳುವಂತಹ ಸ್ಥಿತಿಯಲ್ಲಿಯು ಇಲ್ಲ. 30 ವರ್ಷ ಆದವರಿಗೆ ಇನ್ನು 30 ವರ್ಷಕ್ಕೆ ನಾವು renew ಮಾಡಿಕೊಡಬೇಕಾಗುತ್ತದೆ. ಹೀಗಾಗಿ ಒಂದೇ ಸಾರಿ ನಾವು ರಿಜಿಸ್ಟರ್ ಮಾಡಿಕೊಟ್ಟರೆ ಸರ್ಕಾರಕ್ಕೆ ಹಣ ಕೂಡ ಬರುತ್ತದೆ ಎನ್ನುವ ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ಕೂಡಾ ನಾವು ಪರಿಶೀಲನೆ ಮಾಡುತ್ತೇವೆ. ಮಾನ್ಯ ರಮೇಶ್‌ರವರು ಹೇಳಿದ ಹಾಗೆ ಬಿಡಿಎ ದಲ್ಲಿ ಈಗ ಒಂದು Land Audit ಎನ್ನುವುದನ್ನು ಪ್ರಾರಂಭ ಮಾಡಿದ್ದೇವೆ. ಬಿಡಿಎ ಸ್ವತ್ತು ಎಲ್ಲೆಲ್ಲಿ ಇದೆ ಎನ್ನುವುದಕ್ಕೆ ಬಹಳಷ್ಟು ದಾಖಲೆಗಳು ನಮ್ಮಲ್ಲಿ ಇಲ್ಲ. ಕೆಲವು ದಾಖಲೆಗಳು ಹಾಳಾಗಿವೆ. ಅದಕ್ಕಾಗಿ Land Audit ಮಾಡುತ್ತಿದಾರೆ. Land Audit complete ಆದಮೇಲೆ ನಮ್ಮ ಆಸ್ತಿ ಯಾವುದು ಎನ್ನುವುದು ಗೊತ್ತಾಗುತ್ತದೆ. ನಮ್ಮ ಆಸ್ತಿ ಅಲ್ಲ ಎನ್ನುವುದಾದರೆ ಅದು ಬೇರೆ ಯಾರ ಆಸ್ತಿ ಎನ್ನುವುದನ್ನು ಪರಿಶೀಲನೆ ಮಾಡಬಹುದು. ಅದಕ್ಕಾಗಿ ಈಗ Land Audit ಪ್ರಾರಂಭ ಮಾಡಿದ್ದೇವೆ. ಆಗ ಎಲ್ಲ ವಿಚಾರ ತಿಳಿದು ಬರುತ್ತದೆ. ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳ ಬಗ್ಗೆ ಚರ್ಚೆ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಒಟ್ಟಾರೆ ಬೆಂಗಳೂರಿನಲ್ಲಿ ಈ ರೀತಿ ಸಾರ್ವಜನಿಕ ಉಪಯೋಗಕ್ಕಾಗಿ ಭೂಮಿಯನ್ನು ತೆಗೆದುಕೊಂಡು ಬೇರೆ-ಬೇರೆ ಉದ್ದೇಶಕ್ಕೆ ಉಪಯೋಗಿಸುವಂತಹದನ್ನು ನಿಲ್ಲಿಸುತ್ತೇವೆ.

ಬೀದಿ ವ್ಯಾಪಾರಿಗಳಿಗೆ ಜಾಗ ಕೊಡಿ ಎಂದು ಮಾನ್ಯ ಸದಸ್ಯರಾದ ಮಂಜುನಾಥ್‌ರವರು ಸಲಹೆ ಕೊಟ್ಟಿದ್ದಾರೆ. ಅದನ್ನು ಕೂಡಾ ಪರಿಶೀಲನೆ ಮಾಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ನಮ್ಮ ಸದಸ್ಯರಾದ ಶ್ರೀ ಸುನೀಲ ಸುಬ್ರಹ್ಮಣ್ಯರವರು ಟಿಪ್ಪು ಜಯಂತಿ ಬಗ್ಗೆ ಪ್ರಶ್ನೆ ಹಾಕಿದರು. ಮುಂದೆ ಆಗಿರುವ ಸಮಸ್ಯೆಗಳಿಗೆ ಸರ್ಕಾರದಿಂದ ಉತ್ತರವು ಬಂತು. ಬಂದಿರುವ ಉತ್ತರದಿಂದ ನಮಗೆ ಸಮಾಧಾನವಾಗದಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇವೆ ಎಂದು ಹೇಳಿದರು. ನಿನ್ನೆ ಮಾನ್ಯಮಂತ್ರಿಗಳು ಇರಲಿಲ್ಲ ಆದ್ದರಿಂದ ನಾಳೆ ಉತ್ತರವನ್ನು ಕೊಡೆಸುತ್ತೇವೆ ಎಂದು ಕಾನೂನು ಮತ್ತು ಸಂಸದೀಯ ಸಚಿವರು ಹೇಳಿದರು. ಈಗ ಗೃಹ ಮಂತ್ರಿಗಳಾದ ತಾವೇ ಉತ್ತರವನ್ನು ಕೊಡುತ್ತೀರಾ ಅಥವಾ ಮಾನ್ಯ ಮುಖ್ಯಮಂತ್ರಿಗಳನ್ನು ಕರೆಯಿಸುತ್ತೀರಾ? ಇಲ್ಲಿ ಯಾವ ಸ್ಥಿತಿ ಇದೆ ಎಂದರೆ, ಸರ್ಕಾರದವರು ನಾಳೆ ಉತ್ತರ ಕೊಡುತ್ತೇವೆ, ನಾಳೆ ಉತ್ತರ ಕೊಡುತ್ತೇವೆ ಎಂದು ಹೇಳಿ-ಹೇಳಿ ಯಾರಾದರೂ ಉತ್ತರ ಕೊಟ್ಟರೆ ಸಾಕು ಎನ್ನುವ ಸ್ಥಿತಿಗೆ ನಾವು ಬಂದಿದ್ದೇವೆ. ಹೀಗಾಗಿ ಇವತ್ತು ನೀವೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಉತ್ತರ ಕೊಡುತ್ತೀರಾ? ಇನ್ನೊಂದು ಔರಾದ್ಕರ್ ವರದಿ ಬಗ್ಗೆ ಚರ್ಚೆಯಾಯಿತು. ಮರಳುಗಾರಿಕೆ ವಿಷಯ ಮುಗಿದ ಮೇಲೆ ಇದನ್ನು ತೆಗೆದುಕೊಳ್ಳುತ್ತೀರಾ ಹೇಗೆ ಎನ್ನುವುದನ್ನು ತಿಳಿಸಬೇಕು.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಪಡೆದುಕೊಳ್ಳಬೇಕು ಎನ್ನುವ ಅಪೇಕ್ಷೆ ನಿಮಗೆ ಇದ್ದರೆ ಅವರಿಂದಲೇ ಉತ್ತರ ಕೊಡಿಸುತ್ತೇವೆ. ನಾನೇ ಕೊಡಬೇಕು ಎಂದರೂ ಖಂಡಿತವಾಗಿ ಉತ್ತರವನ್ನು ಕೊಡುತ್ತೇನೆ. ಅದರಲ್ಲಿ ಯಾವುದೇ ತೊಂದರೆ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇವೆ ಎಂದು ಸರ್ಕಾರದ ಕಡೆಯಿಂದ ಒಪ್ಪಿಕೊಂಡಿದ್ದಾರೆ. ಈಗ ನಮ್ಮ ಸ್ಥಿತಿ ಹೇಗೆ ಆಗಿದೆ ಎಂದರೆ, ಉತ್ತರವನ್ನು ನಾಳೆ ಕೊಡುತ್ತಾರೆ, ನಾಳೆ ಕೊಡುತ್ತಾರೆ ಎಂದು ಕಾಯುವಂತೆ ಆಗಿದೆ.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಗಳೆ, ವಿರೋಧ ಪಕ್ಷದ ನಾಯಕರ ಅಪೇಕ್ಷೆಯಂತೆ ಉತ್ತರವನ್ನು ಕೊಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಟಿಪ್ಪು ಜಯಂತಿ ಬಗ್ಗೆ ನಮಗೆ ಕ್ಲೀಯರ್ ಆಗಿ ಯಾವಾಗ ಯಾರಿಂದ ಉತ್ತರ ಕೊಡಿಸುತ್ತೀರಿ ಎಂದು ಹೇಳಿ. ಇದು ಬಹಳ ಗಂಭೀರವಾದ ವಿಚಾರ.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ತಾವು ನಮ್ಮ ರಕ್ಷಣೆಗೆ ಬರಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ನಿನ್ನೆ ಮಾನ್ಯ ಗೃಹ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇವೆ ಎಂದು ಹೇಳಿದರು. ಇಂದು ಬೆಳಗ್ಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಅದೇ ಮಾತನ್ನು ಹೇಳಿದ್ದಾರೆ. ಇದೇ ಮಾತನ್ನು ನಿನ್ನೆ ಸಭಾನಾಯಕರು ಹೇಳಿದರು. ಸದನದಲ್ಲಿ ಮೂರು ಜನ ಮಂತ್ರಿಗಳು ಇದೇ ಉತ್ತರವನ್ನು ಹೇಳಿದ್ದೀರಿ.

**ಡಾ|| ಜಿ.ಪರಮೇಶ್ವರ್:-** ಮೂರು ಜನ ಒಂದೇ ಉತ್ತರವನ್ನು ಕೊಟ್ಟಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಿನ್ನೆಯೇ ಉತ್ತರ ಕೊಡಿಸುತ್ತೇವೆ ಎಂದು ಹೇಳಿದ್ದೀರಿ. ಆದರೆ ಮೂರು ಜನ ಸತ್ಯಕ್ಕೆ ದೂರವಾದ ಮಾತನ್ನು ಹೇಳುತ್ತಿದ್ದೀರಿ ಎನ್ನುವ ಆತಂಕ ನಮಗೆ ಇದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ತೇಜಸ್ವಿನಿ ಗೌಡ:-** ಪೀಠಕ್ಕೆ ಸುಳ್ಳು ಉತ್ತರವನ್ನು ಕೊಟ್ಟ ಹಾಗೆ ಆಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ತಾವು ಈಗ ಗೃಹ ಮಂತ್ರಿಗಳು ಸದನದಲ್ಲಿ ಇದ್ದಾರೆ. ನಿಯಮ 72ಕ್ಕೆ ನಾಳೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡೆಸುತ್ತಾರೆಯೇ ಎಂಬುದನ್ನು ಅವರು ಹೇಳಬೇಕು

**ಡಾ|| ಜಿ.ಪರಮೇಶ್ವರ್:-** ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ. ನಾಳೆ ಅಥವಾ ನಾಡಿದ್ದು ಉತ್ತರವನ್ನು ಕೊಡಿಸುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇಂದು ಬೆಳಿಗ್ಗೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇದೇ ಮಾತನ್ನು ಹೇಳಿದ್ದಾರೆ.

(ಗೊಂದಲ)

**ಡಾ|| ಜಿ.ಪರಮೇಶ್ವರ್:-** ಮಾನ್ಯ ವಿರೋಧ ಪಕ್ಷದ ನಾಯಕರು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಬರಗಾಲದ ಚರ್ಚೆ ನಡೆದಿದೆ ಅದಕ್ಕೂ ಉತ್ತರ ಆಗಬೇಕು. ಒಂದು ಬರಗಾಲದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರೆ, ಅದು ಆದಮೇಲೆ ನಾನು ಉತ್ತರವನ್ನು ಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಬೇರೆ-ಬೇರೆ ಕಾರಣಗಳಿಂದ ಅಜೆಂಡಾ ಪೂರ್ತಿಯಾಗುತ್ತಿಲ್ಲ. ತಾವು ನಾಳೆ ಉತ್ತರ ಕೊಡದಿದ್ದರೆ ನಾಡಿದ್ದು ಗುರುವಾರ, ನಂತರ ಶುಕ್ರವಾರ ಸದನ ಮುಗಿದು ಹೋಗುತ್ತದೆ, ನೀವು ಉತ್ತರ ಕೊಡುವುದು ಯಾವಾಗ?

**ಡಾ|| ಜಿ.ಪರಮೇಶ್ವರ್:-** ಖಂಡಿತವಾಗಿ ನಿಮಗೆ ಉತ್ತರ ಸಿಗುತ್ತದೆ, ಉತ್ತರವನ್ನು ಕೊಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಗೃಹ ಸಚಿವರು ನಾಳೆ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇವೆ ಎಂದು ಹೇಳಿಬಿಡಲಿ. ಇದರಲ್ಲಿ ಏನು ತೊಂದರೆ ಇದೆ. ಅರ್ಧ ಗಂಟೆ ತಾವು ಕೆಳಮನೆಯಲ್ಲಿ ಕುಳಿತುಕೊಳ್ಳಿ, ಮಾನ್ಯ ಮುಖ್ಯಮಂತ್ರಿಗಳನ್ನು ಈ ಮನೆಗೆ ಕಳುಹಿಸಿ.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಗಳೆ, ನಾನು ಏಕೆ ಹೇಳಲು ಆಗುತ್ತಿಲ್ಲ ಎಂದರೆ, ನಾಳೆ ಈ ಮನೆಯಲ್ಲಿ ಮತ್ತು ಕೆಳಮನೆಯಲ್ಲಿ ಬರಗಾಲದ ಬಗ್ಗೆ ಉತ್ತರವನ್ನು ಕೊಡುವುದಿದ್ದರೆ ಅದು ಆದಮೇಲೆ ಕೊಡಿಸುತ್ತೇವೆ.

## 9. ಪ್ರಕಟಣೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–**

ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 104 ರ ಮೇರೆಗೆ ವಿಧಾನಸಭೆಯು ದಿನಾಂಕ: 18–12–2018ರಂದು 2018ನೇ ಸಾಲಿನ ಕರ್ನಾಟಕ ಧನವಿನಿಯೋಗ(ಸಂಖ್ಯೆ:3) ವಿಧೇಯಕವನ್ನು ಅಂಗೀಕರಿಸೀತೆಂದು ಮತ್ತು ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**10 ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಮೇಲಿನ ಚರ್ಚೆ**

**ವಿಷಯ: ಕರಾವಳಿ ಜಿಲ್ಲೆಗಳಲ್ಲಿ ಮರಳು ಸಮಸ್ಯೆ ತೀವ್ರಗೊಂಡಿದ್ದು, ಈ ಸಂಬಂಧ ಸರ್ಕಾರ ಮತ್ತು ಖಾಸಗಿ ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಂಡಿರುವುದರಿಂದ ಕಾರ್ಮಿಕರು ಅನುಭವಿಸುತ್ತಿರುವ ತೊಂದರೆ ಬಗ್ಗೆ.**

---------

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–**ಮಾನ್ಯ ಸಭಾಪತಿಗಳೆ, ಕರಾವಳಿ ಜಿಲ್ಲೆಗಳಲ್ಲಿ ಮರಳು ಸಮಸ್ಯೆ ತೀವ್ರಗೊಂಡಿದ್ದು, ಈ ಸಂಬಂಧ ಸರ್ಕಾರ ಮತ್ತು ಖಾಸಗಿ ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಂಡಿರುವುದರಿಂದ ಕಾರ್ಮಿಕರು ಅನುಭವಿಸುತ್ತಿರುವ ತೊಂದರೆ ಬಗ್ಗೆ ಸದನದ ಗಮನವನ್ನು ಸೆಳೆಯುತ್ತೇನೆ. ಯಾರು ಮರಳುಗಾರಿಕೆಯನ್ನು ಮಾಡುತ್ತಿದ್ದರು, ಯಾರಿಗೆ ಮರಳು ಬೇಕಾಗಿತ್ತು, ಮರಳುಗಾರಿಕೆಯಲ್ಲಿ ಎಷ್ಟು ಜನ ಕಾರ್ಮಿಕರು ಭಾಗಿಗಳಾಗಿದ್ದರು ಇದರ ಬಗ್ಗೆ ನಾನು ಬಹಳ ದೊಡ್ಡದಾಗಿ ವಿಸ್ತಾರವಾಗಿ ಹೇಳಲು ಹೋಗುವುದಿಲ್ಲ. ನಮ್ಮ ಕರಾವಳಿ ಜಿಲ್ಲೆಯಲ್ಲಿ ಹಿಂದೆ ಯಾರು ಕೇಳುತ್ತಿರಲಿಲ್ಲ ಯಥೇಚ್ಛವಾಗಿ ಮರಳುಗಾರಿಕೆಯನ್ನು ಮಾಡುತ್ತಿದ್ದರು. 2002ರಲ್ಲಿ ಯಾರು ಮರಳುಗಾರಿಕೆ ಮಾಡುತ್ತಾರೆ ಅವರು ಗಣಿ ಇಲಾಖೆಯಿಂದ ಅನುಮತಿ ತೆಗೆದುಕೊಳ್ಳಬೇಕು ಎನ್ನುವ ನಿಯಮವನ್ನು ಮಾಡಲಾಯಿತು. ನಂತರ ಪ್ರತಿ ವರ್ಷ ಮರಳುಗಾರಿಕೆಗೆ restrictions ಹಾಕಲಾಗುತ್ತಿದೆ. ನೀವು ಇಷ್ಟೆ ಮಾಡಬೇಕು, ಇಲ್ಲೇ ಮಾಡಬೇಕು, ಇಂತಹವರೆ ಮಾಡಬೇಕು ಎಂದು ನಿಯಮ ಮಾಡಿದ್ದಾರೆ. ನಾನು ಕರಾವಳಿ ಭಾಗದಿಂದ ಬಂದಿರುವವನು. ಬೆಳಗ್ಗೆ ಫೋನ್ ಮಾಡಿ ಮಧ್ಯಾಹ್ನ ಮರಳು ತಂದು ಹಾಕಿ ಎಂದು ಹೇಳಿದರೆ ಒಂದು ಗಂಟೆಯಲ್ಲಿ ಮರಳು ಲಾರಿಯಲ್ಲಿ ಮನೆಗೆ ಬರತ್ತಾ ಇತ್ತು. ಯಾರಾದರೂ ಸರಿ ಅನುಮತಿಯನ್ನು ಪಡೆದು ಎಕರೆಗಟ್ಟಲೆ ಮರಳುಗಾರಿಕೆಯನ್ನು ಹಿಂದೆ ಮಾಡುತ್ತಿದ್ದರು. ಹಿಂದೆ ಒಂದು ಟ್ರಕ್ ಲೋಡ್ ಮರಳು ಒಂದು ಸಾವಿರ ರೂಪಾಯಿಗಳಿಂದ ಮೂರು ಸಾವಿರ ರೂಪಾಯಿಗಳ ಒಳಗೆ ಸಿಗುತ್ತಿತ್ತು. ಕಟ್ಟಡ ಕಾಮಗಾರಿಗಳಿಗೆ ಯಥೇಚ್ಛವಾಗಿ ಮರಳು ಸಿಗುತ್ತಿತ್ತು. ಸರ್ಕಾರ ರಾಜ್ಯದ ಎಲ್ಲ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿದಿದೆ. ಆದರೆ ಮರಳಿಗ್ಘರಿಕೆ ವಿಷಯದಲ್ಲಿ ಸರ್ಕಾರಕ್ಕೆ ಕಳೆದ 8 ವರ್ಷಗಳಿಂದ ಪರಿಹಾರ ಕಂಡುಹಿಡಿಯಲು ಆಗುತ್ತಿಲ್ಲ. ಮರಳುಗಾರಿಕೆಯೇ ಒಂದು ದೊಡ್ಡ ಮಾಫಿಯಾ ಆಗಿದೆ ಎಂದು ಬಣ್ಣಿಸಲಾಗುತ್ತಿದೆ. ಇಂದು ಎಷ್ಟು ಸಮಸ್ಯೆ ಇದೆ ಎಂದರೆ ಮಲೇಶಿಯಾದಿಂದ ಮರಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. (ಮುಂದು)

(546)18.12.2018,7.10,ಟಿಸಿಹೆಚ್/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಮಲೇಶಿಯಾದಿಂದ ಆಮದು ಮಾಡಿಕೊಂಡ ಮರಳು ಮಂಗಳೂರು ಬಂದರಿಗೆ ಎಲ್ಲಾ ಮರಳು ಬಂದಿರುತ್ತದೆ. ಅದನ್ನು ಹೇಗೆ ಮಾರಾಟ ಮಾಡುತ್ತಾರೆ ಎಂದರೆ, ಗೋಣಿ ಚೀಲದಲ್ಲಿ ಸಿಮೆಂಟ್‌ನ್ನು ಯಾವ ರೀತಿ ಪ್ಯಾಕ್ ಮಾಡುತ್ತಾರೋ ಅದೇ ರೀತಿಯಲ್ಲಿ ಪ್ಯಾಕ್ ಮಾಡಿ ಮರಳನ್ನು ತಂದು ಜನರಿಗೆ ಮಾರಾಟ ಮಾಡುತ್ತಿದ್ದಾರೆ. ನನಗೆ ಅನಿಸಿದಹಾಗೆ ಮರಳಿಗೆ ಈ ರೀತಿಯ ಸಮಸ್ಯೆಗಳು ಬರಲು ಕಾರಣವೇಂದರೆ, ಎರಡು ವಿಚಾರಗಳ ಬಗ್ಗೆ ಹೇಳಿದ್ದಾರೆ. ಕರಾವಳಿ ಭಾಗಗಳಿಗೆ ಮರಳುಗಾರಿಕೆಯ ಬಗ್ಗೆ ಒಂದು ಪ್ರತ್ಯೇಕ ನೀತಿಯನ್ನು ತರುತ್ತೇವೆ ಎಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿದ್ದರು. ಆ ವಿಚಾರ ಕೂಡ ಮಾನ್ಯ ಸಚಿವರಿಗೆ ಗೊತ್ತಿದೆ. ನನ್ನಬಳಿ ಅದರ ಟಿಪ್ಪಣಿ ಇದೆ. ಮರಳುಗಾರಿಕೆಯಲ್ಲಿ 2 ವಿಧಗಳು ಇವೆ. ಕರಾವಳಿ ಭಾಗಕ್ಕೆ CRZ (Costal Regulation Zone) ಮತ್ತು Non-CRZ ಎಂದು ಘೋಷಣೆ ಮಾಡಿದ್ದಾರೆ. ನದಿಗಳ ಭಾಗ ಏನಿದೆ, ಅಲ್ಲಿಂದ 10 ಕಿಲೋಮೀಟರ್ ದೂರದಲ್ಲಿ ಮರಳುಗಾರಿಕೆ ಮಾಡುವುದಾದರೆ Non-CRZ ಆಗುತ್ತದೆ. ಸಮುದ್ರಕ್ಕೆ ನೀರು ಸೇರುವಂತಹ ಭಾಗಗಳಲ್ಲಿ ಮರಳುಗಾರಿಕೆ ಮಾಡಿದರೆ, ಅದನ್ನು CRZ ಎಂದು ಘೋಷಣೆ ಮಾಡಿದರು. ಇವತ್ತಿನ ದಿವಸ CRZ ಮತ್ತು Non-CRZನಲ್ಲಿ ಯಾರು ಅನುಮತಿ ಪಡೆದುಕೊಳ್ಳುತ್ತಾರೆ, ಅವರು ಗ್ರಾಮದಲ್ಲಿ ವಾಸವಾಗಿರಬೇಕೆಂದು ನಮೂದಿಸಿದ್ದಾರೆ. ಸಾಂಪ್ರದಾಯಿಕ ಮರಳುಗಾರಿಕೆ ಎಂದು ಮಾಡಿದ್ದಾರೆ. ಈ ಸಾಂಪ್ರದಾಯಿಕ ಮರಳುಗಾರಿಕೆಯಲ್ಲಿ ಮರಳನ್ನು ತೆಗೆಯುವವರು ಯಾರು? ಈ ಸಾಂಪ್ರದಾಯಿಕ ಎಂದರೇನು? ಹಾಗಾದರೆ, ಅಸಂಪ್ರದಾಯಿಕ ಎಂದರೆ ಯಾರು? ಇದರ ಬಗ್ಗೆ ಏನೂ ಉಲ್ಲೇಖವಿಲ್ಲ. ಇವತ್ತಿನ ದಿವಸ ಮರಳು ಬೇಕಾದಲ್ಲಿ ನಮ್ಮ ಜಿಲ್ಲೆಯ ಭಾಗದಲ್ಲಾದರೂ ಮನೆ ಕಟ್ಟುವ ಕೆಲಸ ನಡೆಯುತ್ತಿದೆ ಎಂದಾಗ, ನಾವು ಅವರಿಗೆ ಒಂದು ಲೋಡ್ ಮರಳನ್ನು ತಂದು ಕೊಡಿ ಎಂದು ಕೇಳಿದರೆ, ಆತನು ಮರಳನ್ನು ಹಗಲಿನಲ್ಲಿ ತಂದು ಕೊಡದೆ ರಾತ್ರಿ ವೇಳೆ ಮರಳನ್ನು ತಂದು ಕೊಡುತ್ತೇನೆಂದು ಹೇಳುತ್ತಾರೆ. 15,000/- ರಿಂದ 20,000/- ರೂಪಾಯಿಗಳನ್ನು ತೆಗೆದುಕೊಂಡು ರಾತ್ರಿ 12 ಯಿಂದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳಿಗ್ಗೆ 6 ಗಂಟೆಯೊಳಗೆ ಮರಳನ್ನು ಮನೆಗೆ ತಂದು ಹಾಕುತ್ತಾನೆ. ಆದರೆ ಹಗಲು ಹೊತ್ತಿನಲ್ಲಿ ಮರಳನ್ನು ತಂದು ಹಾಕುವುದಿಲ್ಲ. ಹಲವು ಬಾರಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮೂರು ಜಿಲ್ಲೆಯ ಮಾನ್ಯ ಶಾಸಕರುಗಳನ್ನು ಕರೆದು, ಸಭೆ ಮಾಡಿ, ನೀವು ಸೆಪ್ಟೆಂಬರ್ 15ರೊಳಗೆ ಅವರಿಗೆ ಮರಳುಗಾರಿಕೆ ನಡೆಸಲು ಅನುಮತಿ ಕೊಡಬೇಕೆಂದು ತಾಕೀತು ಮಾಡಿದ್ದೇವೆ. ಆದರೆ ಯಾವುಬ್ಬ ಅಧಿಕಾರಿಗಳು ತಮ್ಮ ಕಿವಿಗೆ ಹಾಕಿಕೊಂಡಿಲ್ಲ. ಅಧಿಕಾರಿಗಳಿಗಾಗಿ ಮರಳು ಇದೆಯೋ ಅಥವಾ ನಮಗೆ ಮರಳು ಇದೆಯೋ ಗೊತ್ತಿಲ್ಲ. ಆದರೆ, ಈ ಮರಳುಗಾರಿಕೆ ಸಮಸ್ಯೆ ಇವತ್ತಿನವರೆಗೂ ಪರಿಹಾರವಾಗಲಿಲ್ಲ. ಹಾಗಾಗಿ, ಸನ್ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ, ನಾನೇನಾದರೂ ತುಂಬಾ ಮಾತನಾಡಿದರೆ ಗೊಂದಲ ಆಗಬಹುದು. ಇವತ್ತಿನ ದಿವಸ ಇದು confusion ಆಗುವ ರೀತಿಯಲ್ಲಿ ಇದೆ. ಏಕೆಂದರೆ, ಸರ್ಕಾರ ಕೊಟ್ಟಿರತಕ್ಕಂಥ ಉತ್ತರದಲ್ಲಿ ಏನು ಹೇಳುತ್ತಾರೆಂದರೆ, ಒಂದು ಲೋಡ್ ಮರಳಿಗೆ ಈ ರೀತಿಯಾದ ಬೆಲೆ ಇದೆಯೆಂದು ಹೇಳಿದ್ದಾರೆ. ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರೇ, ಇವತ್ತಿನ ದಿವಸ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರಳು ತೆಗೆಯುವುದಕ್ಕೆ 22 ಸ್ಯಾಂಡ್ ಬ್ಲಾಕ್ ಗಳನ್ನು ಗುರ್ತಿಸಿದ್ದಾರೆ. ಅದರಲ್ಲಿ 10 ಬ್ಲಾಕ್‌ಗಳಿಗೆ ಮಾತ್ರ ಸರ್ಕಾರ ಅನುಮತಿಯನ್ನು ಕೊಟ್ಟಿದೆ. ಇದು ತಮಗೂ ಕೂಡ ಗೊತ್ತಿದೆ. ಇವತ್ತಿನ ದಿವಸ ಮರಳಿಗೆ ಬೃಹತ್ ಪ್ರಮಾಣದಲ್ಲಿ ಬೇಡಿಕೆಯಿದ್ದು ಸಮಸ್ಯೆಯಾಗಿದೆ. ಇದರ ಬಗ್ಗೆ ಸಾಕಷ್ಟು ಹೋರಾಟಗಳು ನಡೆಯುತ್ತಿವೆ. ಮಾನ್ಯ ಶಾಸಕರು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಅಲ್ಲಿಗೆ ಬಂದು, 'ನೋಡಿ ಸ್ವಾಮಿ, ಇದರಲ್ಲಿ ಸ್ವಲ್ಪ ಸಮಸ್ಯೆ ಇದೆ, ಇಂತಹ ತಾರೀಖಿನೊಳಗೆ ಮರಳು ತೆಗೆಯುವುದಕ್ಕೆ ಅನುಮತಿ ಕೊಡುತ್ತೇವೆ' ಎಂದು ಹೇಳಿರುತ್ತಾರೆ. ಆದರೆ, ಯಾರೂ ಕೂಡ ಇದರ ಬಗೆ ಧ್ವನಿ ಎತ್ತುತ್ತಿಲ್ಲ. ಈ ರಾಜ್ಯದಲ್ಲಿ ಬೇರೆ ಎಲ್ಲವಕ್ಕೂ ಪರಿಹಾರವಿದೆ. ಆದರೆ, ಮರಳುಗಾರಿಕೆಗೆ ಮಾತ್ರ ಪರಿಹರಿಸಲು ಸಾಧ್ಯವಾಗುತ್ತಿಲ್ಲ. ಇದು ಏಕೆ ಸಾಧ್ಯವಾಗುತ್ತಿಲ್ಲವೆಂದು ನಾನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಮರಳಿನಿಂದ ಎಷ್ಟು ಸಮಸ್ಯೆಯುಂಟಾಗಿದೆ ಎಂದು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಸಿ.ಎ.ಜಿ. ವರದಿ ಕೂಡ ಇದೆ. ಇದನ್ನು ನಾನು ಯಾವುದೋ ಒಂದು ಕಾರಣಕ್ಕಾಗಿ ಓದುತ್ತಿರುವ ಸಂದರ್ಭದಲ್ಲಿ ಒಂದು ವಿಚಾರವನ್ನು ಉಲ್ಲೇಖಿಸಲಾಗಿದೆ. ಅದೇನೆಂದರೆ, 'ಪ್ರಧಾನ ಶೀರ್ಷಿಕೆ 2059 ಲೋಕೋಪಯೋಗಿ ಇಲಾಖೆ ಕಾಮಗಾರಿಗಳು, ಸಾಮಾನ್ಯ ಇತರೆ ವೆಚ್ಚಗಳು, ಮರಳುಗಾರಿಕೆಯ ಆಡಳಿತ, ಸಾಮಾನ್ಯ ವೆಚ್ಚಗಳ ಅಡಿಯಲ್ಲಿ 80.55 ಕೋಟಿ ಉಳಿಕೆಗೆ ಮರಳುಗಾರಿಕೆ ಟೆಂಡರ್ ಕರೆಯುವುದರಲ್ಲಿ ಆದ ವಿಳಂಬವೇ ಕಾರಣವಾಗಿದೆ' ಎಂದು ಹೇಳಿದ್ದಾರೆ. ಈ ಕಾಮಗಾರಿಗಳು ನಡೆಯದೇ ದುಡ್ಡನ್ನು ಹಂಚಿಕೆ ಮಾಡಿದ್ದಾರೆ, ಆದರೆ, ಅದು ಬಳಕೆಯಾಗದೇ ಉಳಿಯುವುದಕ್ಕೆ ಕಾರಣ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮರಳು ಸಿಗದೇ ಇರುವುದು ಎಂದು ಸಿ.ಎ.ಜಿ ವರದಿ ಕೊಟ್ಟಿದೆ. ಹಾಗಾದರೆ, ಈ ಸರ್ಕಾರವೇನು ನಿದ್ರಿಸುತ್ತಿದೆಯೇ, ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಇವತ್ತಿನ ದಿವಸ ಹಳಿ ಹಳ್ಳಿಗಳಲ್ಲಿ ಮರಳು ಸಿಗದೆ ಜನ ತೊಂದರೆ ಅನುಭವಿಸುತ್ತಿದ್ದಾರೆ. ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡಿದ್ದೇವೆಂದು ಹೇಳಿದ್ದಾರೆ. ಚಿಕ್ಕ ಟೆಂಪೋಗಳಲ್ಲಿ ಅಥವಾ ಎತ್ತಿನಗಾಡಿಗಳಲ್ಲಿ ಮರಳನ್ನು ಕೊಂಡೊಯ್ಯುವುದಾದರೆ ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಡಿ. ಈ ಮರಳುಗಾರಿಕೆಯಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ, ಸರ್ಕಾರ ಚಿಕ್ಕ ಚಿಕ್ಕ ಲಾರಿಗಳು, ಟೆಂಪೋಗಳು, ಎತ್ತಿನ ಗಾಡಿಯಲ್ಲಿ ಮರಳನ್ನು ಕೊಂಡೊಯುವವರನ್ನು ಬಂಧಿಸಿ ಜೈಲಿಗೆ ಕಳುಹಿಸಿದರೆ, ನಿಮಗೆ 'ಶಹಬಾಸ್‌ಗಿರಿ' ಬರುತ್ತದೆಯೆ? ಹಾಗಾದರೆ, ನಾವು ಮರಳನ್ನು ಎಲ್ಲಿಂದ ತರುವುದು? ಇವತ್ತಿನ ದಿವಸ ಮರಳನ್ನು ತೆಗೆಯದೇ ಇರುವುದರಿಂದಲೇ ಕೊಡಗಿನಲ್ಲಿ ಪ್ರವಾಹ ಬರುವುದಕ್ಕೆ ಕಾರಣವಾಯಿತು. ನಮ್ಮ ಕರಾವಳಿ ಭಾಗಗಳಲ್ಲಿ ಅನೇಕ ಬೋಟ್‌ಗಳಲ್ಲಿ ಅಪಘಾತಗಳು ನಡೆಯುತ್ತಿವೆ. ಅಲ್ಲಿ ಮರಳನ್ನು ತೆಗೆಯುತ್ತಿದ್ದರೆ, ಮೀನುಗಾರಿಕೆಗೆ ದೋಣಿಗಳನ್ನು ನಡೆಸಿಕೊಂಡು ಹೋಗಿಬರಲು ಸಹಾಯವಾಗುತ್ತಿತ್ತು. ಆದರೆ high-tide ಬಂದು ಆ ಭಾಗದಲ್ಲಾದರೂ ನೆರೆಹಾವಳಿ ಸಂಭವಿಸಿ ಸಮುದ್ರ ನೀರನ್ನು ತೆಗೆದುಕೊಳ್ಳುವುದಿಲ್ಲ. ಹಾಗಾಗಿ, ಮೂರು ತಿಂಗಳ ಹಿಂದೆ ಕೊಡಗಿನಲ್ಲಿ ನೆರೆಹಾವಳಿ ಬಂದಂತಹ ಸಂದರ್ಭದಲ್ಲಿ ಅಧಿಕಾರಿಗಳು 'ಅಲ್ಲಿ ಹೆಚ್ಚಾಗಿ ಮಳೆ ಬಂತು, ಅದು high-tide ನೀರು ಸಮುದ್ರಕ್ಕೆ ಅಥವಾ ನದಿಗಳಿಗೆ ಹರಿದು ಹೋಗದೇ ಹಿಂದಕ್ಕೆ ಬಂದಿದ್ದಕ್ಕಾಗಿ ಅಲ್ಲಿನ ಎಲ್ಲಾ ಮನೆಗಳು ಮುಳುಗಿ ಹೋದವು' ಎನ್ನತಕ್ಕಂಥ ಮಾತನ್ನು ಹೇಳಿದರು. ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನನ್ನ ವಿನಂತಿ ಏನೆಂದರೆ, ಇವತ್ತಿನ ದಿವಸ ದಕ್ಷಿಣ ಕನ್ನಡ, ಉಡುಪಿ ಮತ್ತು ಕರಾವಳಿ ಭಾಗದ ಎಲ್ಲಾ ಭಾಗಗಳಲ್ಲಿ ಮರಳುಗಾರಿಕೆಯನ್ನು ವಸ್ತುಶಃ ನಿಷೇಧ ಮಾಡಿದ್ದಾರೆ. ಇದರಿಂದಾಗಿ ಲಾರಿಗಳಿಗೆ ಮತ್ತು ಲಾರಿಗಳಲ್ಲಿ ಕೆಲಸ ಮಾಡುವಂತಹ ಕಾರ್ಮಿಕರಿಗೂ ಕೆಲಸವಿಲ್ಲ. ಜನರಿಗೆ ಮರಳು ಸಿಗುತ್ತಿಲ್ಲ. ಅದಕ್ಕಾಗಿ ನಾನು ಒಂದು ಅಂಕಿ-ಅಂಶವನ್ನು ತಮ್ಮ ಮುಂದಿಡಲು ಬಯಸುತ್ತೇನೆ. 2015-16ನೇ ಸಾಲಿನಿಂದ 2017-18ನೇ ಸಾಲಿನವರೆಗೆ ಕರಾವಳಿ ಜಿಲ್ಲೆಗಳಲ್ಲಿ CRZ ಪ್ರದೇಶಗಳಲ್ಲಿ ಗುರ್ತಿಸಿರುವ ಮರಳಿನ ದಿಬ್ಬಗಳು, ವಿತರಿಸಿರುವ ತಾತ್ಕಾಲಿಕ ಪರವಾನಿಗೆಗಳ ಹಾಗೂ ಅವುಗಳಿಂದ ಸಂಗ್ರಹವಾಗಿರುವ ಜಿಲ್ಲಾವಾರು ವಿವರ ಈ ರೀತಿ ಕಂಡುಬರುತ್ತದೆ. 2015-16ನೇ ಸಾಲಿಗೆ ಸರ್ಕಾರ 52 ಮರಳಿನ ದಿಬ್ಬಗಳನ್ನು ಗುರ್ತಿಸಿದ್ದಾರೆ. 1111 ಜನರಿಗೆ ಪರವಾನಿಗೆಯನ್ನು ಕೊಟ್ಟಿದ್ದಾರೆ. 2016-17ನೇ ಸಾಲಿನಲ್ಲಿ 744 ಜನರಿಗೆ ಮಾತ್ರ ಮರಳು ತೆಗೆಯುವುದಕ್ಕೆ ಪರವಾನಿಗೆಯನ್ನು ಕೊಟ್ಟಿದ್ದಾರೆ. 2017-18ನೇ ಸಾಲಿನಲ್ಲಿ ಬರೀ 390 ಜನರಿಗೆ ಮರಳು ತೆಗೆಯುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಕಳೆದ ಮೂರು ವರ್ಷದ ಹಿಂದೆ 1111 ಜನರಿಗೆ ಪರವಾನಿಗೆಯನ್ನು ಕೊಟ್ಟಿದ್ದು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ವರ್ಷದಲ್ಲಿ ಬರೀ 390 ಜನರಿಗೆ ಮಾತ್ರ ಪರವಾನಿಗೆಯನ್ನು ಕೊಟ್ಟಿದ್ದಾರೆ. ಅಂದರೆ ಸರ್ಕಾರ ಪರವಾನಿಗೆ ಕೊಡುವುದನ್ನು ಕಡಿಮೆ ಮಾಡಿದೆ. ಸರ್ಕಾರ ಡಿಮಾಂಡ್‌ಗೆ ತಕ್ಕಂತೆ ಮರಳನ್ನು ಸರಬರಾಜು ಮಾಡಬೇಕಾಗುತ್ತದೆ. ಇದರ ಅರ್ಥ ಸರ್ಕಾರ ಅನುಮತಿಯನ್ನು ಕೊಟ್ಟಿಲ್ಲ. ಹೀಗಿರುವಾಗ, ಮರಳಿನ ಸಮಸ್ಯೆ ಖಂಡಿತ ಉದ್ಭವವಾಗುತ್ತದೆ ಎಂದು ಜನರ ನಂಬಿಕೆಯಾಗಿದೆ. ಜನ ಏನು ಮಾತನಾಡಿಕೊಳ್ಳುತ್ತಾರೆಂದರೆ, ಮಲೇಶಿಯಾದಿಂದ ಮರಳನ್ನು ಆಮದು ಮಾಡಿಕೊಂಡಿರುತ್ತಾರೆ. ನೈಸರ್ಗಿಕವಾಗಿ ಸಿಗುವಂತಹ ಮರಳಿಗೆ ಸರ್ಕಾರ ಅನುಮತಿ ನೀಡುತ್ತಿಲ್ಲ. There is a lobby behind it. ಇದರ ಹಿಂದೆ ಎಂ–ಸ್ಯಾಂಡ್ ಲಾಬಿ ಇದೆಯೆಂದು ಮಾತನಾಡುತ್ತಾರೆ. ಮಲೇಶೀಯಾದಿಂದ ಆಮದು ಮಾಡಿಕೊಳ್ಳುವವರ ಹಿಂದೆ ಇವರು ಕೈಜೋಡಿಸಿದ್ದಾರೆ. ನೈಸರ್ಗಿಕವಾಗಿ ಸಿಗುವಂತಹ ಮರಳು ಪ್ರತಿ ಲೋಡ್‌ಗೆ 3000/– ರೂಪಾಯಿಗಳಿಗೆ ಜನರಿಗೆ ಸಿಗಬೇಕಾಗಿತ್ತು. ಯಾರು ಚಿಕ್ಕ ಮನೆಗಳನ್ನು ಕಟ್ಟಬೇಕಾಗಿತ್ತು, ಅದು ಆಸರೆ ಮನೆ ಇರಬಹುದು, ಗೂಡ್ಸ್ ಶೆಡ್‌ಗಳು ಇರಬಹು ಅಥವಾ ತನ್ನ ಮನೆ ಆಗಿರಬಹುದು, ಕಾಮಗಾರಿಗಳಿಗೆ ಉಪಯೋಗ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಸಾವಿರಾರು ಕಾರ್ಮಿಕರು ಬೀದಿಪಾಲಾಗಿದ್ದಾರೆ. ಲಾರಿ ಚಾಲಕರಿಗೆ ಕೂಲಿ ಸಿಗುತ್ತಿಲ್ಲ, ಲಾರಿ ಮಾಲೀಕರಿಗೆ ಬಾಡಿಗೆ ಸಿಗುತ್ತಿಲ್ಲ, ಸಾಂಪ್ರದಾಯಿಕವಾಗಿ ಯಾರು ದೋಣಿಯಲ್ಲಿ ಹೋಗಿ, ನದಿಯಲ್ಲಿ ಮುಳುಗಿ, ಬಾಂಡ್ಲಿಗಳಲ್ಲಿ ಮರಳನ್ನು ಎತ್ತಿಕೊಂಡು ಹೊರಕ್ಕೆ ತೆಗೆದು ಸಂಗ್ರಹ ಮಾಡುತ್ತಿದ್ದರು. ಈಗ ಅವರಿಗೆ ಕೆಲಸವಿಲ್ಲದೇ ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಇವತ್ತಿನ ದಿವಸ ದೋಣಿಗಳಿಗೆ ಜಿ.ಪಿ.ಎಸ್. ಅಳವಳಿಸಬೇಕು, ಆ ದೋಣಿಗಳು ಸಮುದ್ರದಿಂದ ಬರುವಾಗ ಜಿ.ಪಿ.ಎಸ್‌ನ್ನು ಹಾಗೂ ಅಲ್ಲಿನ ಸುತ್ತಮುತ್ತ ಕ್ಯಾಮರಾವನ್ನು ಅಳವಡಿಸುಂತೆ ಹೊಸ ಹೊಸ ಕಾನೂನುಗಳನ್ನು ಜಾರಿಗೆ ತಂದಿದ್ದಾರೆ. ಅವರು ಎಲ್ಲೋ ಕಾಡಿನ ಮಧ್ಯೆ ಅಥವಾ ಸಮುದ್ರದ ಬದಿಯಲ್ಲಿ ಮರಳನ್ನು ತೆಗೆಯುತ್ತಾರೆ, ಪವರ್‌ಫುಲ್ ಇರುವಂತಹ ಕ್ಯಾಮರಾವನ್ನು ಅಳವಡಿಸಬೇಕು, ಲಾರಿಗಳಿಗೆ ಜಿ.ಪಿ.ಎಸ್‌ನ್ನು ಅಳವಡಿಸಬೇಕು ಎಂದು ಹೇಳಿದ್ದಾರೆ. ಎಲ್ಲೋ ಒಂದು ಕಡೆ ಅಲ್ಲಿ ಮರಳನ್ನು ತೆಗೆಯುವಂತಹವರ ಪ್ಯಾಂಟಿಗೆ ಜಿ.ಪಿ.ಎಸ್‌ನ್ನು ಅಳವಡಿಸಬೇಕು ಎಂದು ಹೇಳಿಲ್ಲ. ಅದನ್ನು ಹೇಳಿದ್ದರೆ ಈ ಸಮಸ್ಯೆಯೇ ಬರುತ್ತಿರಲಿಲ್ಲ. ಇದರಲ್ಲಿ ಜಿ.ಪಿ.ಎಸ್. ಅಳವಡಿಸುವವರು ದುಡ್ಡು ಮಾಡಿಕೊಳ್ಳುತ್ತಾರೆ. ದೋಣಿ ನಡೆಸುವವರಿಗೂ ದುಡ್ಡು ಸಿಗುತ್ತಿದೆ. ಆದರೆ ಪಾಪ, ಆ ಮರಳು ತೆಗೆಯುವಂಥವನು ದುಡ್ಡಿಗೆ ಏನು ಮಾಡಬೇಕು. ಮನೆ ಕಟ್ಟುವಂತಹವರಿಗೆ ಮನೆ ಕಟ್ಟದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಇವತ್ತಿನ ದಿವಸ ಮಂಗಳೂರಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

76 ಜನರಿಗೆ ಮರಳನ್ನು ತೆಗೆಯುವುದಕ್ಕೆ ಅನುಮತಿ ಕೊಟ್ಟಿದ್ದಾರೆ. 22 ಬ್ಲಾಕ್‌ಗಳಿವೆ. ಆದ್ದರಿಂದ ನನಗೆ ನೀವೇ ಹೇಳಬೇಕು. 12 ಬ್ಲಾಕ್‌ಗಳಿಗೆ ಅನುಮತಿ ಕೊಡದೆ ಬಾಕಿ ಇಡಲು ಕಾರಣವೇನು?

(ಮುಂದು)

(547)18-12-2018(7-20)mm-vk

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):–**

ಉಡುಪಿ ಜಿಲ್ಲೆಯಲ್ಲಿ 45 ಅರ್ಜಿದಾರರು ಅರ್ಜಿ ಹಾಕಿದ್ದರು. ನೀವು 10 ಬ್ಲಾಕ್‌ಗಳನ್ನು ಗುರುತಿಸಿದ್ದೀರಿ. ಅಲ್ಲಿ ಕೂಡ ಕೇವಲ 45 ಪರವಾನಗಿಗಳನ್ನು ಮಾತ್ರ ನೀಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 77 ನೊಂದಾಯಿತ ಮರಳುಗಾರಿಕೆಗೆ ಅನುಮತಿಯನ್ನು ನೀಡಿದ್ದು 20 ದಿವಸಗಳಿಂದ ಸುಮಾರು 14,800 ಮೆಟ್ರಿಕ್ ಟನ್ ಪ್ರಮಾಣದ ಮರಳನ್ನು ತೆಗೆದು ಕಾಮಗಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಪೂರೈಸುತ್ತಿದ್ದೇವೆ ಎಂದು ಹೇಳಿದ್ದಾರೆ. ನೀವು ಮರಳುಗಾರಿಕೆಯನ್ನು ಗುರುತಿಸಿದ್ದರೂ ಅವರಿಗೆ ಅನುಮತಿ ಕೊಡುವುದಕ್ಕೆ ನಿಮಗೆ ಸಾಧ್ಯವಾಗಲಿಲ್ಲ. ಒಂದು ವೇಳೆ ನೀವು ಮರಳುಗಾರಿಕೆಗೆ ಒಂದು ಭಾಗವನ್ನು ಗುರುತಿಸಿ ಯಾರಿಗೆ ಬೇಕಾದರೂ ಮರಳು ತೆಗೆಯಲು ಅನುಮತಿ ಕೊಟ್ಟಿದ್ದರೆ, ಅನುಮತಿ ನೀಡುವಾಗ ಮತ್ತು ಸಾಗಾಣಿಕೆಯಲ್ಲಿ ಜವಾಬ್ದಾರಿ ತೆಗೆದುಕೊಂಡಿದ್ದಿದ್ದರೆ ಅಥವಾ ಅದನ್ನು regulate ಮಾಡಿದ್ದರೆ ಬಹುಶಃ ಈ ಸಮಸ್ಯೆ ಬರುತ್ತಾ ಇರಲಿಲ್ಲ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾ ಅವರೆ, ಒಂದೇ ಸಲ ಅಷ್ಟಕ್ಕೂ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಉತ್ತರ ಕೊಡುವುದಕ್ಕೆ ಸಚಿವರು ತಯಾರಾಗಿದ್ದರೆ ಮುಂದೆ ಅದಕ್ಕೆ ಸ್ಪಷ್ಟೀಕರಣವನ್ನು ಕೇಳುತ್ತೇನೆ.

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಮರಳು ಸಮಸ್ಯೆಯ ಬಗ್ಗೆ ಹೇಳಿದರು. ಮರಳು ಸಮಸ್ಯೆ ಇತ್ಯರ್ಥವಾಗುವಲ್ಲಿ ಬಹಳ ವಿಳಂಬವಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಯವರು ಕರಾವಳಿ ಜಿಲ್ಲೆಯ ಎಲ್ಲಾ ಶಾಸಕರುಗಳನ್ನು ಕರೆದು ಅಧಿಕಾರಿಗಳೊಂದಿಗೆ ವಿಧಾನಸೌಧದಲ್ಲಿ ಸಭೆಯೊಂದನ್ನು ಮಾಡಿದರು. ಜಿಲ್ಲಾ ಕೇಂದ್ರದಲ್ಲಿಯೂ ಮಾಡಿದರು. ನನಗೆ ತಿಳಿದ ಮಟ್ಟಿಗೆ ಅಕ್ಟೋಬರ್ 15ರೊಳಗೆ ಮರಳು ಸಮಸ್ಯೆಯನ್ನು ಇತ್ಯರ್ಥಪಡಿಸಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಯವರು ಜಿಲ್ಲಾಡಳಿತಕ್ಕೆ ಸೂಚನೆಯನ್ನು ಕೊಟ್ಟಿದ್ದರು. ಅಷ್ಟರೊಳಗೆ ಎಲ್ಲಾ ಜನರಿಗೆ ಮರಳು ಸಿಗಬೇಕೆಂದು ನಿರ್ದೇಶನ ಕೊಟ್ಟಿದ್ದರು. ಇತ್ತೀಚಿನ ದಿನಗಳಲ್ಲಿ CRZ ನಲ್ಲಿ ಕೆಲವು ಜನರಿಗೆ ಮಾತ್ರ ಅವಕಾಶವನ್ನು ಕೊಟ್ಟು, ಯಾವುದೇ ಹಳ್ಳಿಗಳಲ್ಲಿ ಅಥವಾ Non-CRZ ನಲ್ಲಿ ಮರಳು ತೆಗೆಯುವ ವ್ಯವಸ್ಥೆ ಇವತ್ತಿನವರೆಗೂ ಆಗಿಲ್ಲ. ಈ ವಿಷಯವನ್ನು ಸದನದ ಪ್ರಾರಂಭದ ದಿನದಿಂದ ಮುಂದೂಡುತ್ತಾ ಬಂದು ಇವತ್ತು ಕೊನೇ ಘಳಿಗೆಯಲ್ಲಿ ಮರಳಿನ ಸಮಸ್ಯೆಗೆ ಅವಕಾಶ ಸಿಕ್ಕಿದೆ. ಮರಳಿನ ಸಮಸ್ಯೆಯಿಂದ ಕಟ್ಟಡ ಕಾಮಗಾರಿಗಳಿಗೆ ಅಥವಾ ಆಶ್ರಯ ಮನೆಗಳಿಗೆ ಅಥವಾ ಬೇರೆ-ಬೇರೆ ಕಟ್ಟಡಗಳಿಗೆ ಮಾತ್ರ ತೊಂದರೆಯಾಗಿಲ್ಲ ಇದರಿಂದ ಕೃಷಿಕರಿಗೆ, ಹಳ್ಳಿಗಾಡಿನಲ್ಲಿ ಮನೆ ಕಟ್ಟುವವರಿಗೆ ಕೂಡ ಬಹಳಷ್ಟು ತೊಂದರೆಯಾಗಿದೆ. ಇವತ್ತು ಆರ್ಥಿಕವಾಗಿ ನಮ್ಮ ಜಿಲ್ಲೆಗೆ ಮಾತ್ರವಲ್ಲ, ಇಡೀ ರಾಜ್ಯಕ್ಕೇ ಬಹಳಷ್ಟು ತೊಂದರೆಯಾಗುತ್ತಿದೆ. ರೂ. 4,000/- ಅಥವಾ ರೂ. 5000/-ಕ್ಕೆ ಸಿಗುತ್ತಿದ್ದ ಮರಳು ಇವತ್ತು 14,000 ದಿಂದ 18,000 ಸಾವಿರ ರೂಪಾಯಿಗೆ ಸಿಗುತ್ತಿದೆ. ಅದು ಕೂಡ ಹಗಲಿನಲ್ಲಿ ಸಿಗುತ್ತಿಲ್ಲ. CRZ ನಲ್ಲಿ ಕೇವಲ 70-75 ಜನರಿಗೆ ಅವಕಾಶ ಕೊಟ್ಟಿದ್ದಾರೆ. ಆದರೆ ಸುಮಾರು 250 ರಿಂದ 300 ಜನರು ಮರಳುಗಾರಿಕೆಯಲ್ಲಿ ತೊಡಗಿಸಿಕೊಂಡವರು ಇದ್ದಾರೆ. ಅವರನ್ನೆಲ್ಲಾ ಬಿಟ್ಟು ಕೇವಲ 75 ಜನರಿಗೆ ಮಾತ್ರ ಅವಕಾಶ ಕೊಟ್ಟಿದ್ದಾರೆ. ಸಾಕಷ್ಟು ಮರಳು ಸಿಗುವಲ್ಲಿ ಜನರಿಗೆ ವಿಳಂಬವಾಗುತ್ತಿದೆ. ಬಹುಶಃ ಸಭಾಪತಿಗಳಿಗೆ ಗೊತ್ತಿರುವ ಹಾಗೆ ಅವರ ಜಿಲ್ಲೆಯಲ್ಲಿಯೂ ಕೂಡ ಮರಳಿನ ಬಗ್ಗೆ ಅನೇಕ ದಿನಗಳಿಂದ ಮುಷ್ಕರ, ಧರಣಿ ಆಗುತ್ತಿವೆ. ಇದರಿಂದ ಬಹಳಷ್ಟು ಸಂಖ್ಯೆಯ ಜನರು ನೊಂದಿದ್ದಾರೆ. 15 ದಿವಸಗಳ ಹಿಂದೆ ಮಂಗಳೂರಿನಲ್ಲಿ ಇಡೀ ಜಿಲ್ಲೆಯ ಸುಮಾರು 2000 ಲಾರಿಗಳನ್ನು 'ನೆಹರು ಮೈದಾನ'ದಲ್ಲಿ ನಿಲ್ಲಿಸಿ ಕೆಲಸವನ್ನು ಸ್ಥಗಿತಮಾಡಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಜನರು ಮಾತ್ರವಲ್ಲ, ಲಾರಿ ಮಾಲೀಕರು, ಕೂಲಿ ಕಾರ್ಮಿಕರು ಮತ್ತು ಲಕ್ಷಾಂತರ ಬಡ ಕುಟುಂಬಗಳು ಇದರಲ್ಲಿ ತೊಡಗಿಸಿಕೊಂಡಿದ್ದು ಅವರಿಗೆ ಬಹಳಷ್ಟು ತೊಂದರೆಯಾಗಿದೆ. ಆದ್ದರಿಂದ ಆದಷ್ಟು ಶೀಘ್ರವಾಗಿ ಈ ಸಮಸ್ಯೆಯನ್ನು ಸರ್ಕಾರ ಬಗೆಹರಿಸಬೇಕೆಂದು ಮಾನ್ಯ ಮಂತ್ರಿಗಳ ಗಮನಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವಿಚಾರ ಇಷ್ಟೇ. ಒಂದು Non-CRZ ಮತ್ತು CRZ ಸಮುದ್ರರೇಖೆಗಿಂತ 500 ಮೀಟರ್‌ನ ಒಳಗಿನ ಪ್ರದೇಶವನ್ನು CRZ ಎನ್ನುತ್ತಾರೆ. ಅದಕ್ಕೆ ಪ್ರತ್ಯೇಕ ನಿಯಮಗಳಿವೆ ಅಥವಾ ನದಿಗಿಂತ 100 ಮೀಟರ್ ಆಚೆ ಈಚೆ ಇದೆ. Non-CRZ ಎಂದರೆ, ಸಿಹಿನೀರು ಮತ್ತು ಒಳಪ್ರದೇಶಗಳನ್ನು Non-CRZ ಎಂದು ಕರೆಯುತ್ತಾರೆ. ಎಲ್ಲಾ ವಿಚಾರಗಳನ್ನೂ ಉಲ್ಲೇಖ ಮಾಡುತ್ತಿಲ್ಲ. ಕೆಲವೊಂದು ಬಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಗಳು, ಮುಖ್ಯಮಂತ್ರಿಯವರು ಸಭೆಯಲ್ಲಿ ಕಾನೂನು ಕಾಯಿದೆಗಳ ಚೌಕಟ್ಟನ್ನು ಮೀರಿ ಸಾರ್ವಜನಿಕ ಹಿತಾಸಕ್ತಿಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಅದನ್ನು ಅನುಷ್ಠಾನ ಮಾಡಬೇಕಾದವರು ಜಿಲ್ಲಾಧಿಕಾರಿ. ಎಂತಹ ದುರಂತವೆಂದರೆ, ಸೆಪ್ಟೆಂಬರ್ 25ರಂದು ವಿಧಾನಸೌಧದಲ್ಲಿ ಸಭೆಯೊಂದನ್ನು ಮಾಡಿದರು. ಅಲ್ಲಿ 13 ಜನ ಎಂ.ಎಲ್.ಎ ಮತ್ತು ಎಂ.ಎಲ್.ಸಿಗಳು ಇದ್ದರು. ಅಲ್ಲಿ ತಾವು ಮತ್ತು ಮುಖ್ಯಮಂತ್ರಿಯವರು ಇದ್ದರು. ಮುಖ್ಯಮಂತ್ರಿಯವರು ಜಿಲ್ಲಾಧಿಕಾರಿಗಳಿಗೆ ಸೂಚನೆಯೊಂದನ್ನು ಕೊಟ್ಟಿದ್ದರು. ಒಂದೊಂದು ಜಿಲ್ಲೆಯಲ್ಲಿ ಸುಮಾರು 3000 ಆಶ್ರಯ ಮನೆಗಳಿಗೆ ಮಂಜೂರಾತಿ ಪತ್ರ ಕೊಟ್ಟು ಅದರ ಹಿಂದೆ 'ಈ ಮನೆಗಳನ್ನು ಮಂಜೂರಾತಿ ಮಾಡಿದ ಆರು ತಿಂಗಳೊಳಗೆ ಪೂರ್ಣಗೊಳಿಸದಿದ್ದಲ್ಲಿ ಅದು ತನ್ನಷ್ಟಕ್ಕೇ ರದ್ದಾಗುತ್ತದೆ' ಎಂದು ಷರಾ ಬರೆದಿದ್ದಾರೆ. ಎರಡೂ ಜಿಲ್ಲೆಯಲ್ಲಿ 6000 ಮನೆಗಳಾಗುತ್ತವೆ, ಆದರೆ ಒಂದು ಮನೆಯನ್ನೂ ಕಟ್ಟುವುದಕ್ಕೆ ಆಗಿಲ್ಲ. ಈ ರೀತಿಯ ಪರಿಸ್ಥಿತಿ ಇದೆ. ಕರ್ನಾಟಕದ ಮುಖ್ಯಮಂತ್ರಿಯವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರಿಗೆ ಹೇಳಿದಾಗ ಯಾವ ಬಡವರು ಮನೆ ಕಟ್ಟುವುದಕ್ಕೋಸ್ಕರ ಟ್ರ್ಯಾಕ್ಟರ್‌ನಲ್ಲಿ, ಸಣ್ಣ ಸಣ್ಣ ಟೆಂಪೋದಲ್ಲಿ ಮತ್ತು ಎತ್ತಿನ ಗಾಡಿಯಲ್ಲಿ ಮರಳನ್ನು ತೆಗೆದುಕೊಂಡು ಹೋಗುತ್ತಾರೋ ಅವರಿಗೆ ರಿಯಾಯಿತಿ ಕೊಡಿ ಎಂದು ಹೇಳಿದರು. ಅದಕ್ಕೆ ಜಿಲ್ಲಾಧಿಕಾರಿಗಳು ಒಪ್ಪಿಕೊಂಡರು. ನಾವು ಕನಿಷ್ಠ ಬಡವರ ಮನೆಯಾದರೂ ನಿರ್ಮಾಣವಾಗುತ್ತದೆ ಎಂದು ತಿಳಿದುಕೊಂಡಿದ್ದೆವು. ದುರಂತವೆಂದರೆ ಜಿಲ್ಲಾಧಿಕಾರಿ ಮತ್ತು ಗಣಿ ಅಧಿಕಾರಿಗಳು ಮುಖ್ಯಮಂತ್ರಿಯವರು ಹೇಳಿದ ಕೂಡಲೇ ಆಗುವುದಿಲ್ಲ ಸುತ್ತೋಲೆ ಕೊಡಿ ಎಂದು ನಮ್ಮನ್ನು ಕೇಳುತ್ತಾರೆ. ನನ್ನ ಇತಿಹಾಸದಲ್ಲಿ ಸೌಜನ್ಯವನ್ನು ಮೀರಿ ಮಾತುಗಳನ್ನಾಡಿದ ಇಂತಹ ಅಧಿಕಾರಿಗಳನ್ನು ಕಂಡಿಲ್ಲ. ಅವರ ಮೇಲೆ ಕ್ರಮ ಕೈಗೊಳ್ಳಿ ಎಂದು ಹೇಳುತ್ತಿಲ್ಲ. ಆನಂತರವಾದರೂ ಅವರನ್ನು ಕರೆದು ಬದಲಿ ವ್ಯವಸ್ಥೆಗಳನ್ನು ಮಾಡಬೇಕಲ್ಲವೇ? ಅದನ್ನು ಕೂಡ ಮಾಡುತ್ತಿಲ್ಲ. ಉಡುಪಿ ಜಿಲ್ಲಾಧಿಕಾರಿಗಳು ರಾಜ್ಯ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿಗೆ ಇಂತಿಂತಹ ನಿಯಮ ಇದೆ, ನನಗೆ ಮಾರ್ಗದರ್ಶನ ಕೊಡಿ ಎಂದು ಪತ್ರವೊಂದನ್ನು ಬರೆಯುತ್ತಾರೆ. ಉಡುಪಿ ಜಿಲ್ಲಾಧಿಕಾರಿಗಳು ಯಾವ ದಿವಸ ಪತ್ರ ಬರೆದಿದ್ದಾರೋ ಅದೇ ದಿವಸ ರಾಜ್ಯದ ಗಣಿ ಅಧಿಕಾರಿಗಳು ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಮಾರ್ಗದರ್ಶನ ಕೊಡಿ ಎಂದು ಪತ್ರವೊಂದನ್ನು ಕಳುಹಿಸಿಕೊಡುತ್ತಾರೆ. ಅಂದರೆ ಅವರಿಗೆ ತಪ್ಪಿಸಿಕೊಳ್ಳುವುದು ಬಿಟ್ಟರೆ ಬೇರೆ ಏನೂ ತಿಳಿದಿಲ್ಲ. ಎಲ್ಲಿಯಾದರೂ ಒಂದು ಕಡತವನ್ನು ಮಂತ್ರಿಗಳಿಗೆ ಕೊಟ್ಟರೆ, ಒಂದು ದಿವಸದಲ್ಲಿ ವಿಲೇವಾರಿಯಾಗಿದ್ದರೆ ಹೇಳಿ, ಅಂತಹ ಉದಾಹರಣೆಗಳಿಲ್ಲ. ಏಕೆಂದರೆ, ಈ ರೀತಿಯ ಜಿಡ್ಡುಗಟ್ಟಿದ ವ್ಯವಸ್ಥೆಗಳ ನಡುವೆ ಕೆಲಸ ಮಾಡುವುದು ಹೇಗೆ? ಗಣಿ ಇಲಾಖೆಯನ್ನು ಆರೋಪಿ ಸ್ಥಾನದಲ್ಲಿ ಇಡುತ್ತಿಲ್ಲ. ಆದರೆ ಇವತ್ತು ಉತ್ತರ ಕೊಡುವುದು ಅವರೇ. ಎಲ್ಲಾ ತಪ್ಪುಗಳನ್ನೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಣಿ ಸಚಿವರು ಮಾಡುತ್ತಾರೆ ಎಂದು ನಾನು ಹೇಳುತ್ತಿಲ್ಲ. ಆದರೆ ರಾಜ್ಯದಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕಾದ ಜವಾಬ್ದಾರಿ ಇರುವವರಲ್ಲಿ ಸಚಿವರಾದ ತಾವೂ ಒಬ್ಬರು. ಈಗ ನಾವು ನಿಮ್ಮನ್ನು ಕೇಳುವುದಿಷ್ಟೇ. ಈ ವ್ಯವಸ್ಥೆಗಳನ್ನು ಸರಿಪಡಿಸುವುದಕ್ಕೆ ಶಾಸಕರ ಸಭೆ, ಮುಖ್ಯಮಂತ್ರಿಗಳ ಸಭೆ ಮಾಡಿದ್ದರೂ ಸಹ ಆಗದಿದ್ದರೆ ಇದಕ್ಕೆ ಪರಿಹಾರವೇನು? ನೀವು ಅದನ್ನಾದರೂ ಮಾಡಬೇಕಲ್ಲವೇ? ದಯವಿಟ್ಟು ಇದರ ಬಗ್ಗೆ ಉತ್ತರ ಕೊಡಿ. ಮಾನ್ಯ ಸಭಾಪತಿಯವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಒಂದು ರೀತಿ ರೋಸಿ ಹೋಗುವ ವಾತಾವರಣ ಇದೆ. ನಾನು ಒಂದು ಮಾತನ್ನು ಕೇಳುತ್ತೇನೆ. ಗಣಿ ಇಲಾಖೆ ಇರುವುದು ಅಕ್ರಮವಾದ ಗಣಿಯನ್ನು ತಡೆಗಟ್ಟುವುದಕ್ಕೆ ಎನ್ನುವುದನ್ನು ಒಪ್ಪುತ್ತೇನೆ. ಅದೇ ರೀತಿ ಮರಳನ್ನು ಸರಬರಾಜು ಮಾಡುವ ಜವಾಬ್ದಾರಿ ನಿಮಗಿಲ್ಲವೇ? ನೀವು ಗಣಿ ಇಲಾಖೆಯ ಮೂಲಕ ಅದನ್ನು ಮಾಡಬೇಕಲ್ಲವೇ? ನಮಗೆ ಸಂಬಂಧವಿಲ್ಲ ಎನ್ನುವ ರೀತಿಯಲ್ಲಿ ಇರಬಾರದು. ಒಬ್ಬ ಬಡವ ಮನೆಯ ಅಡಿಪಾಯ ಹಾಕುವುದಕ್ಕೆ ಅವನ ಮನೆಯ ಹತ್ತಿರವಿರುವ ಹೊಳೆಯಲ್ಲಿ ಮರದ ದೋಣಿಯಲ್ಲಿ ಒಂದಿಷ್ಟು ಮರಳನ್ನು ತೆಗೆಯುತ್ತಾನೆ. ಅದು ವಾಹನ ಕೂಡ ಅಲ್ಲ, ಮರಳಿನ ದೋಣಿಯನ್ನು ವಶಪಡಿಸಿಕೊಂಡು ಅವನನ್ನು ಜೈಲಿಗೆ ಹಾಕಿದ್ದಾರೆ. ಇಂತಹ ಸ್ಥಿತಿಗಳಲ್ಲಿ ಗಣಿ ಇಲಾಖೆಯ ಅಧಿಕಾರಿಗಳಿಗೆ ಹೇಳುವುದೇನೆಂದರೆ, ಮರಳು ಇಲ್ಲದಿರುವುದರಿಂದ ಕೂಲಿ ಕೆಲಸ ನಿಂತು ಹೋಗಿದೆ. ಅಂಗಡಿ ವ್ಯಾಪಾರಗಳು ನಿಂತು ಹೋಗಿವೆ, ಟೆಂಪೋ, ಸಣ್ಣ ಪುಟ್ಟ ವಾಹನಗಳು ಸತ್ತು ಹೋಗುವ ಪರಿಸ್ಥಿತಿ ಇದೆ. ಜನರು ರೋಸಿ ಹೋಗಿ ಕಾನೂನನ್ನು ಕೈಗೆತ್ತಿಕೊಳ್ಳುವ ಸ್ಥಿತಿಯಲ್ಲಿದ್ದಾರೆ. ಇಂತಹ ಸ್ಥಿತಿಯಲ್ಲಿರುವಾಗಲೂ ಸರ್ಕಾರ ಸುಮ್ಮನಿದ್ದರೆ ಅದು ಗೌರವವಲ್ಲ. ನಾನು ರಾಜಕಾರಣದ ಬಗ್ಗೆ ಮಾತನಾಡುತ್ತಿಲ್ಲ. ನಾನು ಆಗ್ರಹ ಪಡಿಸುವುದೇನೆಂದರೆ, ಕೇಂದ್ರಕ್ಕೆ ಪತ್ರ ಬರೆದ ಕೂಡಲೇ ಕೇಂದ್ರ ಸರ್ಕಾರ ಉತ್ತರದಾಯಿಯಲ್ಲ. ಅಲ್ಲಿಗೆ ಪತ್ರ ಹೋಗಿ, ಅಲ್ಲಿನ ಮಂತ್ರಿಗಳು, ಅಧಿಕಾರಿಗಳು ಪತ್ರವನ್ನು ನೋಡಿದ ನಂತರ, ಕೆಲವು guidelines ಗಳನ್ನು ಹಾಕಿ ರಾಜ್ಯಕ್ಕೆ ಯಾವ ರೀತಿ ಪತ್ರ ಬರೆದಿದ್ದಾರೆಂದರೆ; ಸೇತುವೆಗಳು, vented dams ಗಳ ರಕ್ಷಣೆಯನ್ನು ಹೊರತು ಪಡಿಸಿದರೆ, ಉಳಿದೆಲ್ಲಾ ವಿಚಾರಗಳಲ್ಲಿ ರಾಜ್ಯಕ್ಕೆ ಜವಾಬ್ದಾರಿ ಕೊಟ್ಟಿದ್ದೇವೆ ಎಂದು ಕೇಂದ್ರದಿಂದ ಪತ್ರ ಬರೆದಿದ್ದಾರೆ. ಇದನ್ನು ಜಗಳ ಮಾಡುವುದಕ್ಕೋಸ್ಕರ ಹೇಳುತ್ತಿಲ್ಲ. ಇದನ್ನು ಪರಿಹಾರ ಮಾಡಲೇಬೇಕಾದ ಅವಶ್ಯಕತೆ ಇದೆ. ಇಲ್ಲದಿದ್ದರೆ ಸಮಸ್ಯೆಗಳು ಸೃಷ್ಟಿಯಾಗುತ್ತದೆ ಎನ್ನುವುದನ್ನು ಸರ್ಕಾರಕ್ಕೆ ಮನವರಿಕೆ ಮಾಡುತ್ತಿದ್ದೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧಪಕ್ಷದ ನಾಯಕರು, ಶ್ರೀ ಐವನ್ ಡಿ'ಸೋಜಾ ಮತ್ತು ಶ್ರೀ ಹರೀಶ್ ಕುಮಾರ್ ರವರು ಮಾತನಾಡಿರುವುದು ಅಕ್ಷರಶಃ ಸತ್ಯ ಇದೆ, ಅದು ತಮಗೂ ಕೂಡ ಗೊತ್ತಿದೆ. ತಾವು ಕೂಡ ಉಡುಪಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಮಂಗಳೂರಿನ ಸಭೆಗಳಲ್ಲಿಯೂ ಕೂಡ ಭಾಗವಹಿಸಿದ್ದಿರಿ. 15ನೇ ತಾರೀಖಿನೊಳಗೆ ಇದನ್ನು clear ಮಾಡಬೇಕೆಂದು ಹೇಳಿದ್ದೆವು. ಇಲ್ಲಿ ಯಾರ ಕಡೆಗೂ ಬೆರಳು ಮಾಡಿ ತೋರಿಸುತ್ತಿಲ್ಲ. ಸಮಸ್ಯೆ ಪರಿಹಾರವಾಗಬೇಕು. ಸಮಸ್ಯೆ ಪರಿಹಾರವಾಗುವುದಕ್ಕೆ ಸಾಂಪ್ರದಾಯಿಕ ಮರಳುಗಾರಿಕೆ ಮಾಡುವವರಿಗೆ ಅವಕಾಶ ಕೊಡಬೇಕೆಂದು ಸುಪ್ರೀಂ ಕೋರ್ಟ್ ಕೂಡ ಹೇಳಿದೆ. ಸಾಂಪ್ರದಾಯಿಕ ಮರಳುಗಾರಿಕೆಯನ್ನು ಯಾರು ಮಾಡುತ್ತಾರೆ ಅವರನ್ನು ಕೂಡ ಗುರುತಿಸಲಾಗಿದೆ. ಇಲ್ಲಿ ಇನ್ನೊಂದು ಸಮಸ್ಯೆ ಏನಾಗಿದೆಯೆಂದರೆ, identify ಮಾಡುವಾಗ ಇದರಲ್ಲಿ ಸಾಂಪ್ರದಾಯಿಕ ಮರಳುಗಾರಿಕೆ ಯಾರು ಮಾಡುತ್ತಾರೆ ಅವರನ್ನು clear ಆಗಿ identify ಮಾಡಿ ಆಗಿದೆ. ಸಾಂಪ್ರದಾಯಿಕ ಮರಳುಗಾರಿಕೆ ಮಾಡುವವರಿಗೆ ಲೈಸೆನ್ಸ್ ಕೊಡುತ್ತೇವೆಂದು ಜಿಲಾಧಿಕಾರಿಯವರು ಹೇಳಿದರು.

(ಮುಂದು . . .

(548) 18–12–2018/07–30/ಕೆಹೆಚ್–ವಿಕೆ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):–** ಈಗ ಇದರಲ್ಲಿ ಏನಾಗಿದೆಯೆಂದರೆ ಸಾಂಪ್ರದಾಯಿಕ ಮರಳುಗಾರಿಕೆ ಯಾರು ಮಾಡುತ್ತಾರೋ, ಅವರನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಆ ಸಾಂಪ್ರದಾಯಿಕ ಮರಳುಗಾರಿಕೆ ಮಾಡುವವರಿಗೆ ಲೈಸೆನ್ಸ್ ಕೊಡುತ್ತೇವೆಂದು ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ಆ ಜಿಲ್ಲಾಧಿಕಾರಿಗಳು ಹೇಳಿದ ಮೇಲೆ ಸಾಂಪ್ರದಾಯಿಕ ಮರಳುಗಾರಿಕೆ ಮಾಡುವವರು ಬಂದು ಲೈಸೆನ್ಸ್ ತೆಗೆದುಕೊಳ್ಳಬೇಕಲ್ಲವೇ, ಇದರ ಬಗ್ಗೆ ಘೋಷಣೆ ಕೂಡ ಮಾಡಿದ್ದಾರೆ. ಸುಮಾರು 129 ಜನರ ಪಟ್ಟಿ ಕೂಡ ಹಾಕಿದ್ದಾರೆ. ಇದರಲ್ಲಿ 179 ಸದಸ್ಯರು ಸಾಂಪ್ರದಾಯಿಕ ಮರಳುಗಾರಿಕೆಯನ್ನು . . .

**ಸಭಾಪತಿಯವರು:–** ಅದು CRZ ಗೆ ಮಾತ್ರ. Non-CRZ ಗೆ ಅಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, CRZ ಗೆ ಕೊಟ್ಟವರಾದರೂ ಮರಳುಗಾರಿಕೆಯ ಲೈಸೆನ್ಸ್‌ನ್ನು ತೆಗೆದುಕೊಳ್ಳಬೇಕಲ್ಲವೇ, ಈ ಸಮಸ್ಯೆ ಹೇಗೆ ಪರಿಹಾರವಾಗುತ್ತದೆ ಎಂಬುದಕ್ಕೆ ಹೇಳುತ್ತಿದ್ದೇನೆ. ದಯಮಾಡಿ, ಅವರು ಕೂಡ ಲೈಸೆನ್ಸ್ ತೆಗೆದುಕೊಳ್ಳಲಿಲ್ಲ. ಕೊನೆಗೆ ಈ ವಿಷಯ ಏನಾಯಿತು? ಈ ಅಧಿಕಾರಿಗಳ ಗಲಾಟೆಯಲ್ಲಿ "ಕೂಸು ಬಡವಾಯಿತು". ಕೊನೆಗೆ ಅಧಿಕಾರಿಗಳು ಕೇಂದ್ರ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದರು. ಈ ಸದನದಲ್ಲಿ ಹಿರಿಯ ಅಧಿಕಾರಿಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದ್ದರೆ ಆ ಪತ್ರ ಏನಾಯಿತು ಎಂಬುದು ಗೊತ್ತಾಗುತ್ತದೆ. ಕೇಂದ್ರ ಸರ್ಕಾರಕ್ಕೆ ಆ ಪತ್ರ ಹೋದ ಮೇಲೆ ಎಲ್ಲಾ ಎಂ.ಎಲ್.ಎ.,ಗಳು ಅಲ್ಲಿಗೆ ಒಂದು ನಿಯೋಗ ಹೋಗೋಣವೆಂದು ನನ್ನನ್ನು ಸಹ ಕರೆದಿದ್ದರು. ಇದರ ಬಗ್ಗೆ ಪೂರ್ತಿ ವಿಚಾರ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಿದೆ. "ಅಂಗೈ ಹುಣ್ಣಿಗೆ ಕನ್ನಡಿ ಬೇಕೇ?" ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಅಂಶಗಳನ್ನು ಮುಚ್ಚುತ್ತಾರೆ, ಕೆಲವು ಅಂಶಗಳ ಬಗ್ಗೆ ಬಾಯಿ ಬಿಡುತ್ತಾರೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ ಮಾನ್ಯ ಭೋಜೇಗೌಡರವರು ತಮ್ಮ ಬಗ್ಗೆ ಮಾತನಾಡುತ್ತಿದ್ದಾರೆ. ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಬುದ್ಧಿವಂತರು ಇದ್ದಾರೆ. ಅವರ ಬುದ್ಧಿವಂತಿಕೆಯ ಮುಂದೆ ನಮ್ಮದೇನೂ ಇಲ್ಲ. ಆ ಬುದ್ಧಿವಂತಿಕೆಗೆ ನಾವು ಉತ್ತರವನ್ನು ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸದಸ್ಯರು ಮಾತನಾಡಿ ಆಗಿದೆ. ತಾವು ಈಗ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ..

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಸಮಸ್ಯೆಗಳು ಮಾತ್ರ ಮುಖ್ಯ. ಅವರ ಬುದ್ಧಿವಂತಿಕೆಯ ಮುಂದೆ ನಮ್ಮದೇನೂ ಇಲ್ಲ ಸ್ವಾಮಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಆಗಲೇ ಹೇಳಿದ್ದೇನೆ. ನಾನು ಅವರ ಅಭಿಮಾನಿಯಾಗಿದ್ದೇನೆ. ಅದರಲ್ಲಿ ಎರಡನೇ ಮಾತಿಲ್ಲ. ಹಾಗಾಗಿ ಮಾನ್ಯ ಸಚಿವರೇ, ಈಗ ನಮಗೆ ಸಮಸ್ಯೆ ಬಗೆಹರಿಯಬೇಕಾಗಿದೆ. ದಯಮಾಡಿ, ಇದರಲ್ಲಿ ಅಧಿಕಾರಿಗಳು ಕೂಡ ಸ್ವಲ್ಪ ಚೆಲ್ಲಾಟ ಆಡುತ್ತಿದ್ದಾರೆ. ಇದರ ಬಗ್ಗೆ ಇಲ್ಲವೆಂದು ನಾನು ಹೇಳುವುದಿಲ್ಲ. ಅಧಿಕಾರಿಗಳು ಚೆಲ್ಲಾಟ ಆಡುತ್ತಿರುವ ಸಂದರ್ಭದಲ್ಲಿ ಮಂಗಳೂರು, ಉಡುಪಿ ಮತ್ತು ಕರಾವಳಿ ಪ್ರದೇಶದಲ್ಲಿ 5000 ರೂಪಾಯಿಯೊಳಗೆ ಮರಳು ಸಿಗಬೇಕು. ಈ ಪ್ರದೇಶದಲ್ಲಿ ಅತಿ ಹೆಚ್ಚು ಮರಳು ಸಿಗುವಂತಹ ಜಾಗವಾಗಿದೆ. ಮಂಗಳೂರಿನಿಂದ ನಮ್ಮ ಊರಿಗೆ ಮರಳು ಬರಬೇಕು. ಮಂಗಳೂರಿನಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ರಾತ್ರೋರಾತ್ರಿ ಮರಳು ಕೇರಳಗೆ ಹೋಗುತ್ತದೆ. ಕೇರಳಗೆ ಮರಳು ಲಾರಿಗಳು ಎಷ್ಟು ಬೇಕಾದರೂ ಹೋಗುತ್ತದೆ, ಅಷ್ಟು ಲಾರಿಗಳು ಹೇಗೆ ಕೇರಳಗೆ ಹೋಗುತ್ತದೆ. ಈ ವಿಚಾರದ ಬಗ್ಗೆ ಮಾನ್ಯ ಐವನ್ ಡಿ'ಸೋಜಾ ರವರು ಬಹಳ ಗಂಭೀರವಾದ ವಿಚಾರವನ್ನು ಹೇಳಿದರು. ಅವನ್ಯಾರಿಗೋ ಮರಳು ಬೇಕೆಂದು ಹೇಳಿದರೆ ರಾತ್ರಿ ಹೊತ್ತು ಮರಳು ತಂದು ಕೊಡುತ್ತೇನೆಂದು ಹೇಳುತ್ತಾನೆ. ಇದು ಹೇಗೆ ಸಾಧ್ಯವಾಗುತ್ತದೆ? ಮರಳನ್ನು ಹಗಲಿನ ಹೊತ್ತು ಸಾಗಿಸದೇ, ರಾತ್ರಿ ಹೊತ್ತು ತಂದು ಕೊಡುತ್ತೇನೆಂದು ಹೇಳುತ್ತಾನೆ. ಹಾಗಾಗಿ ನಿತ್ಯ-ನಿರಂತರವಾಗಿ ಮರಳನ್ನು ಹೊಡೆಯುವಂತಹ ಕೆಲಸ ಇನ್ನೂ ನಿಂತಿಲ್ಲ. ಆದರೆ ಇದು ಮಾಫಿಯಾದವರ ಕೈಯಲ್ಲಿ ಇದೆ. ಇದನ್ನು ತಪ್ಪಿಸಿ, ಬಡವರಿಗೆ ಮರಳು ಸಿಗಬೇಕಾದರೆ ಸಾಂಪ್ರದಾಯಿಕ ಮರಳು ಏನು ಮಾಡುತ್ತಿದ್ದಾರೋ, ಅದು ಬಡವರ ಕೈಗೆ ಸಿಗುವಂತಹ ವ್ಯವಸ್ಥೆಯನ್ನು ಜಿಲ್ಲಾಡಳಿತದವರು ಮಾಡಬೇಕು.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉತ್ತರ ಕೊಡುವುದಕ್ಕಿಂತ ಮೊದಲು ಮರಳುಗಾರಿಕೆಯ ದಿಬ್ಬಗಳು (sand bars)ನ್ನು ಖಾಲಿ ಇಡಲಾಗಿದೆ. ಅವರಿಗೆಲ್ಲರಿಗೂ ಅನುಮತಿ ಕೊಟ್ಟರೆ, competition ಪ್ರಕ್ರಿಯೆಯ ಮೂಲಕ ಕಡಿಮೆ ದರದಲ್ಲಿ ಮರಳು ಸಿಗುತ್ತದೆ. ಮರಳುಗಾರಿಕೆಗೆ ಎಷ್ಟು ಬೇಕಾದರೂ ಅನುಮತಿಯನ್ನು ಕೊಡಿ. ಆದರೆ, ಇದಕ್ಕೆ ದರವನ್ನು ನಿಗದಿ ಮಾಡಬೇಕು. ಇದರ ಬಗ್ಗೆ ಜಿಲ್ಲಾಡಳಿತದವರನ್ನು ಕೇಳಿದರೆ, ಅವರು ದರವನ್ನು ನಿಗದಿ ಮಾಡುವುದಿಲ್ಲ. ಅವರು ಸುಮ್ಮನೆ ಜನರನ್ನು ಸತಾಯಿಸುತ್ತಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ನಾನು ಯಾರನ್ನೂ ಅಪರಾಧಿ ಸ್ಥಾನದಲ್ಲಿ ಇಡುವುದಕ್ಕೆ ಹೋಗುವುದಿಲ್ಲ. ದಯಮಾಡಿ, ಈ ವಿಷಯ ಬಹಳ ಗಂಭೀರವಾಗಿದೆ. ಕರಾವಳಿ ಪ್ರದೇಶದಲ್ಲಿ ಮರಳುಗಾರಿಕೆಗೆ ಸಂಪೂರ್ಣ ಅನುಮತಿ ದೊರತರೆ, ನಮ್ಮಂತಹ ಜಿಲ್ಲೆಗಳಿಗೆಲ್ಲಾ ಮರಳು ಸಿಗುತ್ತದೆ. ಈಗ ಮರಳಿನ ಲಭ್ಯತೆ ಕಡಿಮೆ ಇದೆ. ಅಲ್ಲಿ 10 ರಿಂದ 15 ಸಾವಿರ ರೂಪಾಯಿಯೊಳಗೆ ಮರಳು ಸಿಗುತ್ತದೆ. ಶೇಕಡ 100ರಷ್ಟು ಬಡವರಿಗೆ ತೊಂದರೆಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು 6 ಸಾವಿರ ಆಶ್ರಯ ಮನೆಗಳಿಗೆ ಮಂಜೂರಾತಿ ಪತ್ರ ಕೊಟ್ಟು, 6 ತಿಂಗಳಲ್ಲಿ ಅವುಗಳನ್ನು ಕಟ್ಟದಿದ್ದರೆ, ಅದು ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ ಎಂದು ಷರಾ ಬರೆದಿದ್ದಾರೆ ಎಂದು ಹೇಳಿದರು.  ಇದು ಸತ್ಯ ಕೂಡ ಇದೆ. ಮಾನ್ಯ ಸಚಿವರೇ, ಇದರಲ್ಲಿ ಅಧಿಕಾರಿಗಳು ಚೆಲ್ಲಾಟ ಆಡುತ್ತಿದ್ದಾರೆ. ಅಧಿಕಾರಿಗಳು ಒಂದು ಸಭೆಯಲ್ಲಿ ಒಂದು ರೀತಿಯ ಉತ್ತರವನ್ನು ಕೊಡುತ್ತಾರೆ. ಬೆಂಗಳೂರಿನಲ್ಲಿ ಒಂದು ರೀತಿಯ ಉತ್ತರವನ್ನು ಕೊಡುತ್ತಾರೆ ಮತ್ತು ಜಿಲ್ಲಾ ಕೇಂದ್ರದಲ್ಲಿ ಇನ್ನೊಂದು

ರೀತಿಯ ಉತ್ತರವನ್ನು ಕೊಡುತ್ತಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಕಾಳಜಿ ಬಹಳ ಮುಖ್ಯ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು 15ನೇ ತಾರೀಖಿನೊಳಗೆ ಪರಿಹಾರವನ್ನು ಕಂಡು ಹಿಡಿದು, ಎಲ್ಲರಿಗೂ ಇದನ್ನು ನಿರಂತರವಾಗಿ ಮಾಡಿಸುವಂತಹ ವ್ಯವಸ್ಥೆ ಮಾಡಬೇಕು ಅದಕ್ಕೆ ಪೂರಕವಾಗಿ ಸರ್ಕಾರದಿಂದ ಏನು ಸಾಧ್ಯವೋ, ಅದಕ್ಕೆ ಸಂಪೂರ್ಣ ಸಹಕಾರ ನೀಡುತ್ತೇನೆ ಎನ್ನುವಂತಹ ವಿಚಾರವನ್ನು ಮಾನ್ಯ ಸದಸ್ಯರನ್ನೆಲ್ಲಾ ಕೂರಿಸಿ ಗಂಭೀರವಾಗಿ ಹೇಳಿದ್ದಾರೆ. ಇದರ ಬಗ್ಗೆ ಅಧಿಕಾರಿಗಳಿಗೆ ತಿಳಿಸಬೇಕು. ಮಾನ್ಯ ಸಚಿವರು CRZ ಮತ್ತು Non-CRZ ಎನ್ನುವುದರ ಬಗ್ಗೆ ಒಂದೇ ಮಾನದಂಡವನ್ನು ಇಟ್ಟುಕೊಂಡು ಮಾಡಬೇಕು. ಇನ್ನೊಂದು Green Tribunal ಮತ್ತು ಸರ್ವೋಚ್ಛ ನ್ಯಾಯಲಯದ ಆದೇಶವನ್ನು ತೋರಿಸುತ್ತಾರೆ. ಇದು ಯಾರು ನೋಡದೇ ಇರುವಂತಹ ಆದೇಶವಲ್ಲ. ನಾವು ನೋಡಿ ಆಗಿದೆ. ಅಧಿಕಾರಿಗಳು ಇದನ್ನು ನೆಪವಾಗಿಟ್ಟುಕೊಂಡು ಜನರನ್ನು ಆಟವಾಡಿಸುವುದು ಬೇಡ. ದಯಮಾಡಿ, ಇದಕ್ಕೆ ಕಡಿವಾಣ ಹಾಕಬೇಕೆಂದು ಹೇಳಿ ಸಭಾಪತಿಯವರ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಡಾ|| ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಐವನ್ ಡಿ'ಸೋಜಾ ಮತ್ತು ಶ್ರೀ ಹರೀಶ್ ಕುಮಾರ್‌ರವರು ತುಂಬಾ ಜ್ವಲಂತ ಸಮಸ್ಯೆಯ ಬಗ್ಗೆ ಗಮನ ಸೆಳೆದಿದ್ದಾರೆ. ಕರಾವಳಿ ಮತ್ತು ಬಯಲು ಸೀಮೆಯ ಭಾಗದಲ್ಲೂ ಕೂಡ ಉತ್ತಮ ಗುಣಮಟ್ಟದ ಮರಳು ನದಿಗಳಿಂದ ಸಿಗುವಂತಹದ್ದು ಇದ್ದು, ಮರಳು ದುಬಾರಿಯಾದರೂ ಅಲ್ಲಿಂದ ಮರಳು  ಬರುತ್ತಿತ್ತು. ಸಾಮಾನ್ಯ ಪರಿಸ್ಥಿತಿಯಲ್ಲಿ ಬೆಲೆ ಒಂದು ನಿಯಂತ್ರಣದಲ್ಲಿತ್ತು. ಇತ್ತೀಚಿನ ದಿನಗಳಲ್ಲಿ ಅತಿವೃಷ್ಟಿಯಾದಂತಹ ಸಂದರ್ಭದಲ್ಲಿ ಕರಾವಳಿ ಮತ್ತು ಮಲೆನಾಡು ಭಾಗಕ್ಕೆ ನಾವೆಲ್ಲರೂ ಕೂಡ ಹೋದಾಗ ಸಾಂಪ್ರದಾಯಿಕವಾಗಿ ನದಿಯ ಒಳಹರಿವನ್ನು ನಿಯಂತ್ರಣ ಮಾಡುವಂತಹ ಒಂದು ನೈಸರ್ಗಿಕವಾದಂತಹ ಸೂತ್ರವನ್ನು ಪ್ರಕೃತಿ ಮಾಡಿಕೊಂಡಿರುತ್ತದೆ. ಗುಡ್ಡ ಕುಸಿತ ಮತ್ತು ಭೂಮಿ ಸವೆತದಿಂದ ಬರುವಂತಹ ಅತಿ ಹೆಚ್ಚು ಮರಳು. ಅಂದರೆ, finest ಮರಳು ಆಗುತ್ತದೆ. ಇದನ್ನು ತೆಗೆಯುವುದರ ಬಗ್ಗೆ ಸ್ಥಳೀಯ ಜನರಿಗೆ ಮಾತ್ರ ಗೊತ್ತಿರುವುದು. ಇದನ್ನು ಯಾವುದೋ ಕಾಲೇಜಿನಲ್ಲಿ ಕಲಿತುಕೊಂಡು ಬರುವಂತಹದ್ದಲ್ಲ. ಮೀನುಗಾರಿಕೆ, ಬೋಟುಗಳಲ್ಲಿ ಹೋಗುವಂತಹವರಿಗೆ ಮತ್ತು ಆ ಭಾಗದಲ್ಲಿ ಜಿಲ್ಲಾಡಳಿತದವರಿಗೆ ಪರಿಣಿತಿ ಇರುತ್ತಿತ್ತು. ಈಗ ಇದರ ಬಗ್ಗೆ ಕಾನೂನು ಮಾಡಿದ ಉದ್ದೇಶ ಸರಿಯಾಗಿ ಇದೆ. ಏಕೆಂದರೆ ನದಿ ಪಾತ್ರಗಳಲ್ಲಿ ಅತಿ ಹೆಚ್ಚು ಮರಳುಗಾರಿಕೆಯನ್ನು ವ್ಯಾಪಾರಕ್ಕೋಸ್ಕರ ಮಾಡುವಂತಹದ್ದು. ಕೃತಕ scarcity ಯನ್ನು ಸೃಷ್ಟಿಸಿ, ಒಂದು ಕಡೆ ಮಲೇಶಿಯಾದಿಂದ ಮರಳು ಬರುವಂತಹದ್ದು, ಮತ್ತೊಂದು ಕಡೆ ನಮ್ಮ ಭಾಗಗಳಲ್ಲಿ ಭೂಮಿಯನ್ನೇ ಉಪಯೋಗಿಸಿ ಮರಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂತಹ ಸಮಸ್ಯೆಯನ್ನು ಕೂಡ ಎದುರಿಸುತ್ತಿದ್ದೇವೆ. ಮರಳು ಯಾವಾಗ ಸಿಗುತ್ತಿಲ್ಲ, ಕೃಷಿ ಭೂಮಿಯಲ್ಲಿ ನೀರು ಬಿಟ್ಟು ಮರಳು ಮಾಡುವುದರ ಬಗ್ಗೆ ಕೂಡ ಕಡಿವಾಣ ಹಾಕಬೇಕು. ಈ ಸಂದರ್ಭದಲ್ಲಿ ನೈಸರ್ಗಿಕ ಮತ್ತು ವೈಜ್ಞಾನಿಕವಾಗಿ ಮರಳನ್ನು ಎತ್ತಬೇಕು. ಮೊದಲ ಆದ್ಯತೆಯನ್ನು ಸ್ಥಳೀಯ ಜನರಿಗೆ ಕೊಡಬೇಕು. ಏಕೆಂದರೆ, ಇದು ಮಾರಾಟ ಅಲ್ಲ. ಇದು ಪ್ರತಿಯೊಬ್ಬರಿಗೂ ಮನೆ ಕಟ್ಟುವುದಕ್ಕೆ, ಗೃಹ ಕೆಲಸದ ಅಭಿವೃದ್ಧಿಗೆ ಮರಳನ್ನು ಕೊಂಡುಕೊಳ್ಳುವ ಹಕ್ಕಿದೆ ಮತ್ತು ಮರಳನ್ನು ಪೂರೈಕೆ ಮಾಡುವಂತಹ ಜವಾಬ್ದಾರಿ ಜಿಲ್ಲಾಡಳಿತ ಮೇಲಿದೆ. ಅದನ್ನು ಬಿಟ್ಟು ವ್ಯಾಪಾರಕ್ಕಾಗಿ ಮಾಡುವಂತಹದ್ದಲ್ಲ. ಹಿಂದಿನ ಕಾಂಗ್ರೆಸ್ ಸರ್ಕಾರ ಇದ್ದಾಗ ಇವತ್ತಿನ ದಿವಸ ಮುಖ್ಯಮಂತ್ರಿಯಾಗಿರುವವರು ಪ್ರತಿ ಪಕ್ಷದಲ್ಲಿದ್ದರು. ಅವರು ಕೂಡ ಈ ಮರಳುಗಾರಿಕೆಯ ಬಗ್ಗೆ ತುಂಬಾ ಮಾತನಾಡಿದ್ದಾರೆ. ಈ ಸಮಸ್ಯೆಯ ಆಳದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಅರಿವಿದೆ. ನಾನು ಇವತ್ತು ವಿನಂತಿ ಮಾಡುವುದೇನೆಂದರೆ, ವಿಶೇಷವಾಗಿ ಮಹಿಳೆಯರು ಮೀನುಗಾರಿಕೆಯ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಗಣಿಗಾರಿಕೆಯಲ್ಲೂ ಕೂಡ ತುಂಬಾ ಜನ ಕೂಲಿ ಕಾರ್ಮಿಕರಿಗೆ ನಿರುದ್ಯೋಗ ಉಂಟಾಗಿದೆ. ಹಾಗಾಗಿ ಇದನ್ನು ಸರ್ಕಾರ ತಕ್ಷಣ ಗಂಭೀರವಾಗಿ ಪರಿಗಣಿಸಿ, ಇದರ ಬಗ್ಗೆ ಸ್ಪಂದಿಸಬೇಕು ಮತ್ತು ಇದಕ್ಕೆ ಸಂಬಂಧಪಟ್ಟವರು ವೈಜ್ಞಾನಿಕ ರೀತಿಯಲ್ಲಿಯೇ ಮರಳನ್ನು ಎತ್ತಿಸುವುದಕ್ಕೆ ಬೇಕಾದಂತಹ ಕಠಿಣವಾದ ಮೇಲುಸ್ತುವಾರಿಕೆಯನ್ನು ಸಹ ಮಾಡಬೇಕೆಂದು ಆಗ್ರಹಪಡಿಸುತ್ತೇನೆ. ಧನ್ಯವಾದಗಳು.

**ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಜಾಸ್ತಿ ಎಳೆಯುವುದಕ್ಕೆ ಹೋಗುವುದಿಲ್ಲ. ಮಾನ್ಯ ಸ್ನೇಹಿತರಾದ ಐವನ್ ಡಿ'ಸೋಜಾ ರವರು ಬಹಳ ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದಾರೆ. ಒಂದು ಕಡೆ CRZ ವಲಯ ಕರಾವಳಿ ಪ್ರದೇಶಕ್ಕೆ ಬಿಟ್ಟರೆ, ಸಮಗ್ರವಾಗಿ ರಾಜ್ಯದಲ್ಲಿ ಮರಳು ನೀತಿ ಜಾರಿಯಲ್ಲಿ ಇದೆಯೇ ಎಂಬುದು ನನ್ನ ಮೂಲಭೂತ ಪ್ರಶ್ನೆಯಾಗಿದೆ. ಈ ಸದನದಲ್ಲಿ ಹಾಗೂ ಕೆಳಮನೆಯಲ್ಲಿ 10 ವರ್ಷಗಳಿಂದ ನಿರಂತರವಾಗಿ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಯಾವ ಇಲಾಖೆಗೆ ಮರಳಿನ ಮೇಲೆ ಅಧಿಕಾರ ಇದೆ. ಇಲ್ಲಿ ಐದಾರು ಇಲಾಖೆಗಳನ್ನು ಒಟ್ಟುಗೂಡಿಸಿ, ಇದಕ್ಕೆ ಅನುಮತಿ ಕೊಡುವವರು ಒಬ್ಬರು, ಟೆಂಡರ್ ಹಾಕುವವವರು ಒಬ್ಬರು, ರಾಜಧನವನ್ನು ಸಂಗ್ರಹಣೆ ಮಾಡುವವವರು ಒಬ್ಬರು ಮತ್ತು Enforcement ಇಲಾಖೆಯವರು ಒಬ್ಬರಿರುತ್ತಾರೆ. ಹೀಗಾಗಿ ಯಾರ ಮೇಲೂ ಜವಾಬ್ದಾರಿ ಇಲ್ಲದೆ, ಈ ಮಾಫಿಯಾಗಳಿಗೆ ಆಡಿದ ಆಟದಂತಾಗಿದೆ. ಕರಾವಳಿ ವಿಚಾರಕ್ಕೆ ಬಂದಾಗ ತಮ್ಮಲ್ಲಿ ಬಹಳಷ್ಟು ಬಡವರು ಇದೇ ಒಂದು ಉದ್ಯೋಗವನ್ನು ಆರಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಕರಾವಳಿ ಭಾಗದಲ್ಲಿ ಮಾತ್ರ ಮನೆಗಳು ನಿಂತಿಲ್ಲ. ಈ ರಾಜ್ಯದಲ್ಲಿ ವಸತಿ ಯೋಜನೆಗಳು ಸಂಪೂರ್ಣವಾಗಿ ವೈಫಲ್ಯವಾಗುವುದಕ್ಕೆ ಮೊದಲನೆಯದಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮರಳು ನೀತಿಯೇ ಕಾರಣವಾಗಿದೆ. ಎರಡನೆಯದು, ಸರ್ಕಾರದ ಯೋಜನೆಗಳು ಪಿ.ಡಬ್ಲ್ಯೂ.ಡಿ., ಇಲಾಖೆಯಲ್ಲಿ constructive schemes ಏನಿದೆ, ಆ ಯೋಜನೆಗಳ ಎಸ್.ಆರ್ ದರಗಳನ್ನು ಮರಳಿನ ಕೃತಕವಾದ ಡಿಮ್ಯಾಂಡ್‌ನ್ನು ಸೃಷ್ಟಿಸುವುದಕ್ಕೋಸ್ಕರ ಎಸ್.ಆರ್ ದರದಲ್ಲಿ ಶೇಕಡ 5 ರಿಂದ 6 ರಷ್ಟು ಜಾಸ್ತಿ ಮಾಡಿ, ರಾಜ್ಯದ Exchequerಗೆ burden ಆಗುವಂತಹ ವ್ಯವಸ್ಥೆಯನ್ನು ನೋಡುತ್ತಿದ್ದೇವೆ. ಇತ್ತೀಚೆಗೆ ದಾವಣಗೆರೆಯಲ್ಲಿ ನಮ್ಮ ಶಾಸಕರೊಬ್ಬರು ಗಲಾಟೆ ಮಾಡಿ, ಮರಳು ಬಗ್ಗೆ ಚರ್ಚೆ ಮಾಡಿ, ಅವರ ಮೇಲೆ ಪ್ರಕರಣ ದಾಖಲು ಮಾಡಿದ್ದೇವೆ ಇದರ ಬಗ್ಗೆ ಮಾನ್ಯ ಸಣ್ಣ ಕೈಗಾರಿಕೆ ಸಚಿವರಾದ ಶ್ರೀನಿವಾಸ್‌ರವರಿಗೆ ಈ ವಿಚಾರವು ತಿಳಿದಿದೆ. ಅವರು ಒಬ್ಬರೇ ಅಲ್ಲ. ತಾವು ಈಗ ಸಚಿವರಾಗಿದ್ದೀರಿ. ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಕ್ಕೆ ಅವರ ಮೇಲೆ ಪ್ರಕರಣವನ್ನು ದಾಖಲು ಮಾಡಲಾಗಿದೆ. ತಾವೇ ಆ ಜಾಗದಲ್ಲಿ ಇದ್ದಿದ್ದರೆ ತಮ್ಮ ಗತಿ ಏನಾಗುತ್ತಿತ್ತು? ಇದರ ಬಗ್ಗೆ ನನ್ನ ಮನವಿಯೇನೆಂದರೆ, ಮಾನ್ಯ ಕುಮಾರಸ್ವಾಮಿಯವರು ವಿಧಾನಸಭೆಯಲ್ಲಿದ್ದಾಗ ನಾನು ಆ ಮನೆಯ ಸದಸ್ಯನಾಗಿದ್ದಾಗ ಇದರ ಬಗ್ಗೆ ಬಹಳ ದೊಡ್ಡ ಚರ್ಚೆಯಾಯಿತು. ಅಂದಿನ ಲೋಕೋಪಯೋಗಿ ಸಚಿವರ ಸಂಬಂಧಿಕರು ಈ ಅಕ್ರಮ ಮರಳು ಗಣಿಗಾರಿಕೆಯಲ್ಲಿ ಸಾವಿರಾರು ಕೋಟಿ ಹಣವನ್ನು ಲೂಟಿ ಮಾಡಿ, ಕೇರಳಕ್ಕೆ ಮರಳನ್ನು ಕಳುಹಿಸಿದ್ದಾರೆ ಎನ್ನುವ ದಾಖಲೆಗಳುಳ್ಳ ಮಾತುಗಳನ್ನು ಹೇಳಿದ್ದಾರೆ. ಇವತ್ತಿನ ದಿವಸ ಅದೇ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾರೆ. ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತಿದ್ದೇನೆ. ಎಲ್ಲಾ ಸಮಸ್ಯೆಗಳನ್ನು ಅರಿತಿದ್ದರೂ ಸಹ ಜಾಣ ಕುರುಡು ಪ್ರದರ್ಶನ ಮಾಡುವುದು ಬೇಡ. ತಾವು ಇದರ ಬಗ್ಗೆ ತಾಂತ್ರಿಕವಾಗಿ ಉತ್ತರವನ್ನು ಕೊಡುವುದು ಬೇಡ.

**(ಮುಂದು)**

**(549) 18-12-2018 (7-40) ಎಸ್‌ಪಿಆರ್-ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಡಾ॥ ವೈ.ಎ.ನಾರಾಯಣಸ್ವಾಮಿ(ಮುಂದು):-**

ಸರ್ಕಾರ ಕೊಡುವ ಉತ್ತರದಿಂದ ಮಾನ್ಯ ಸಭಾಪತಿ, ಮಾನ್ಯ ಐವನ್ ಡಿ'ಸೋಜಾ ಹಾಗೂ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಎಷ್ಟು ಸಮಾಧಾನವಾಗುತ್ತದೆಯೋ ಅದೇ ರೀತಿ ಸಮಾಧಾನ ಈ ರಾಜ್ಯದ ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಉತ್ತರವನ್ನು ಕೊಡಬೇಕೆಂದು ಮನವಿ ಮಾಡುತ್ತೇನೆ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಒಂದು ಲೋಡ್ ಮರಳು 70-75 ಸಾವಿರ ರೂಪಾಯಿಗಳಿಗೆ ದೊರೆಯುತ್ತಿದೆ. ಈ ವಿಷಯ ಮಾನ್ಯ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿ ರವರಿಗೆ ತಿಳಿದಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಲಾರ, ಚಿಕ್ಕಬಳ್ಳಾಪುರ ಪ್ರದೇಶಗಳಲ್ಲಿ ಅದೇ ಒಂದು ಲೋಡ್ ಮರಳು ಒಂದು ಲಕ್ಷ ರೂಪಾಯಿಗಳಿಗೆ ದೊರೆಯುತ್ತಿದೆ. ಕೃತಕವಾಗಿ ಮರಳನ್ನು ತಯಾರು ಮಾಡುವ ಘಟಕಗಳಿವೆ. ಅವುಗಳ ಮೇಲೆ ಸರ್ಕಾರಿ ಇಲಾಖೆಗಳ ನಿಯಂತ್ರಣವಿಲ್ಲ. ನೆರೆಯ ತಮಿಳುನಾಡು ರಾಜ್ಯದಲ್ಲಿ ಒಂದು ರೀತಿಯಾದ ವ್ಯವಸ್ಥೆ ಇದೆ. ಅಲ್ಲಿ ಲೋಕೋಪಯೋಗಿ ಇಲಾಖೆಯು ಮರಳನ್ನು ಸರಬರಾಜು ಮಾಡುತ್ತದೆ. ಯಾವುದೇ ರೀತಿಯಾದ ನಕ್ಷೆ ಅನುಮೋದನೆಗೊಂಡ ತಕ್ಷಣವೇ ಅದಕ್ಕನುಗುಣವಾಗಿ ಕಟ್ಟಡವನ್ನು ನಿರ್ಮಿಸಲು ಎಷ್ಟು ಮರಳಿನ ಅವಶ್ಯಕತೆ ಇದೆ ಎನ್ನುವ Indentನ್ನು ಇಲಾಖೆಗೆ ನೀಡಿದರೆ, ಇಲಾಖೆಯವರು ಇಂತಿಷ್ಟು ರಾಜಧನವನ್ನು ನಿಗದಿಪಡಿಸಿ, ಅದನ್ನು ಸ್ವೀಕರಿಸಿದ ನಂತರ ಅಷ್ಟು ಪ್ರಮಾಣದ ಮರಳನ್ನು ಇಲಾಖೆಯು ಸರಬರಾಜು ಮಾಡುತ್ತದೆ. ಆ ರೀತಿಯ ವ್ಯವಸ್ಥೆಯನ್ನು ನಾವು ನಮ್ಮ ರಾಜ್ಯದಲ್ಲಿ ಜಾರಿಗೆ ತರಲು ಇರುವ ತೊಂದರೆಯಾದರೂ ಏನು? ಇವತ್ತಿನ ದಿವಸ ಈ ಅಕ್ರಮ ದಂಧೆಯಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಣವನ್ನು ದಲ್ಲಾಳಿಗಳು, ಪೊಲೀಸ್ ಹಾಗೂ ಬೇರೆ ಇಲಾಖೆಯವರು, ಬೇರೆ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಜೇಬಿಗೆ ಸೇರುತ್ತಿದೆ. ಇದನ್ನು ತಪ್ಪಿಸಲು ದಯಮಾಡಿ ನೆರೆಯ ತಮಿಳುನಾಡು ರಾಜ್ಯಕ್ಕೆ ಪ್ರವಾಸ ಮಾಡಿ ಅಲ್ಲಿನ ವ್ಯವಸ್ಥೆಯನ್ನು ಅಧ್ಯಯನ ಮಾಡಿಕೊಂಡು ಬರಬೇಕು. ಆ ರೀತಿಯ ವ್ಯವಸ್ಥೆಯನ್ನು ರಾಜ್ಯದಲ್ಲಿ ಜಾರಿಗೊಳಿಸಿದರೆ, ಲೋಕೋಪಯೋಗಿ ಇಲಾಖೆಯಲ್ಲಿ ಒಬ್ಬ ಅಧಿಕಾರಿಯು ಹೆಚ್ಚಿಗೆ ಆಗುತ್ತಾರೆ. ಪ್ರಸ್ತುತ ಇಲಾಖೆಯಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರುಗಳ ಜೊತೆಗೆ ತಾಲ್ಲೂಕಿಗೆ ಒಂದರಂತೆ ಸಹಾಯಕ ಇಂಜಿನಿಯರ್ ಅಥವಾ ಕಿರಿಯ ಇಂಜಿನಿಯರ್ ಇವರುಗಳು ಮರಳಿನ excavation, supply and transporation, ಇವುಗಳ ಜವಾಬ್ದಾರಿಯನ್ನು ನಿರ್ವಹಿಸುವ ಒಂದು ಹುದ್ದೆಯನ್ನು ಸೃಜಿಸಿದರೆ, ಎಲ್ಲಾ ರೀತಿಯ ಅವಾಂತರಗಳಿಗೆ ಇತಿಶ್ರೀ ಹಾಡಿದಂತಾಗುತ್ತದೆ. ದಯಮಾಡಿ ಆ ನಿಟ್ಟಿನಲ್ಲಿ ಸರ್ಕಾರವು ನೀಡಿರುವ ಉತ್ತರವು ಸಮರ್ಪಕವಾಗಿರಬೇಕೆಂದು ನಾನು ಬಯಸುತ್ತೇನೆ.

**ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರು ಕರಾವಳಿ ಭಾಗಗಳಾದ ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ವಿಚಾರಗಳನ್ನು ಹೇಳುತ್ತಿದ್ದಾರೆ. ಆದರೆ ವಾಸ್ತವವಾಗಿ ಇಡೀ ರಾಜ್ಯದ ಚಿತ್ರಣ ಇದೇ ರೀತಿಯಾಗಿದೆ. ಇದಕ್ಕೆ ಸಂಬಂಧಪಟ್ಟಂತಿರುವ ಸಚಿವರು ಈಗ ಸದನದಲ್ಲಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ನೈಸರ್ಗಿಕವಾಗಿ ಹೇರಳವಾದ ಮರಳು ದೊರೆಯುತ್ತದೆ. ಈಗಾಗಲೇ ಸುಮಾರು 28 ಬ್ಲಾಕ್‌ಗಳಿಗೆ ಟೆಂಡರ್‌ನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರೆಯಲಾಗಿದೆ. ಅಲ್ಲಿನ ಮರಳನ್ನು ತೆಗೆದು ಮಾರಾಟ ಮಾಡಬೇಕು. ಈ ವಿಚಾರದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಸಾಕಷ್ಟು ಕಾನೂನುಗಳನ್ನು ಮಾಡಿ, ಹೆಚ್ಚಿನ ನಿಬಂಧನೆಗಳನ್ನು ವಿಧಿಸಿದ್ದಾರೆ. ಮರಳು ಯಾರ್ಡ್‌ನ್ನು ಮಾಡಿ, ಅಲ್ಲಿ ಮರಳನ್ನು ಶೇಖರಣೆ ಮಾಡಬೇಕು. ಯಾರ್ಡ್‌ನಲ್ಲಿ way-bridge ನ್ನೂ ಸಹ ಅಳವಡಿಸಬೇಕು. ಅಲ್ಲಿ e-fencing ಮಾಡಬೇಕು. ಮರಳು ಯಾವ ದರದಲ್ಲಿ ಮಾರಾಟ ಮಾಡಲಾಗುವುದು ಎಂಬುದನ್ನು ಫಲಕದಲ್ಲಿ ಸೂಚಿಸಬೇಕು. ಇಂತಹ ಹಲವಾರು ನಿಬಂಧನೆಗಳನ್ನು ಇಲಾಖೆಯು ವಿಧಿಸಿದೆ. ಆದರೆ ಇದುವರೆವಿಗೂ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ನೇರವಾಗಿ ಯಾವುದೇ ಸಾರ್ವಜನಿಕರಿಗೆ ಮರಳು ದೊರೆಯುತ್ತಿಲ್ಲ. ಅಲ್ಲಿ ಮರಳು ಮಾಫಿಯಾ ಸೃಷ್ಟಿಯಾಗಿದೆ. ಮರಳು ಗಣಿಗಾರಿಕೆಯನ್ನು ಯಾರು ವಹಿಸಿಕೊಂಡಿದ್ದಾರೋ ಅವರೇ ಮರಳನ್ನು ಸರಬರಾಜು ಮಾಡುತ್ತಿದ್ದಾರೆ. ಒಂದು ಲೋಡ್ ಮರಳಿಗೆ 25-35 ಸಾವಿರ ರೂಪಾಯಿಗಳಷ್ಟು ಹಣವನ್ನು ಕೇಳುತ್ತಿದ್ದಾರೆ. ಆದರೆ ಅವರಿಗೆ ಕೇವಲ 8-10 ಸಾವಿರ ರೂಪಾಯಿಗಳಷ್ಟೆ ಆಗುತ್ತದೆ. ಇದರ ಮೇಲೆ ಲಾರಿ ಬಾಡಿಗೆಯು 5 ಸಾವಿರ ರೂಪಾಯಿಗಳಷ್ಟು ಆಗುತ್ತದೆ. ಒಟ್ಟಾರೆಯಾಗಿ ಎಲ್ಲಾ ಖರ್ಚುಗಳು ಸೇರಿ ಮರಳು ತೆಗೆಯುವವರಿಗೆ ಒಂದು ಲೋಡ್ ಮರಳಿಗೆ 15 ಸಾವಿರ ರೂಪಾಯಿಗಳಷ್ಟೆ ಖರ್ಚಾಗುತ್ತದೆ. ಆದಾಗ್ಯೂ ಸಹ ಅವರು ಒಂದು ಲೋಡ್ ಮರಳಿಗೆ 30 ಸಾವಿರ ರೂಪಾಯಿಗಳಿಗಿಂತ ಕಡಿಮೆ ಮೊತ್ತದಲ್ಲಿ ಮರಳನ್ನು ಸರಬರಾಜು ಮಾಡುತ್ತಿಲ್ಲ. 28 ಬ್ಲಾಕ್‌ಗಳಿಗೆ ಟೆಂಡರ್ ಪ್ರಕ್ರಿಯೆ ಆಗಿದ್ದರೆ, ಅವರುಗಳು ಕೇವಲ 10-15 ಬ್ಲಾಕ್‌ಗಳಲ್ಲಿ ಮಾತ್ರವೇ ಮರಳನ್ನು ತೆಗೆಯುತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ, ಎಲ್ಲಾ ಬ್ಲಾಕ್‌ಗಳಲ್ಲಿ ಒಂದೇ ಬಾರಿಗೆ ಮರಳನ್ನು ತೆಗೆದರೆ, ಮರಳಿನ ಅಭಾವವಿಲ್ಲದೆ, ಮರಳಿಗೆ ಬೇಡಿಕೆ ಇಲ್ಲದಂತಾಗುತ್ತದೆ ಎಂಬುದಾಗಿ ಹೇಳುತ್ತಾರೆ. ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ವಿಚಾರದಲ್ಲಿ ಗಣಿಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶವನ್ನು ನೀಡಬೇಕು. ಟೆಂಡರ್ ಪ್ರಕ್ರಿಯೆ ಆಗಿರುವ ಎಲ್ಲಾ 28 ಬ್ಲಾಕ್‌ಗಳಲ್ಲಿ ಮರಳನ್ನು ತೆಗೆಯುವಂತಾಗಬೇಕು. ಇಲಾಖೆಯು ವಿಧಿಸಿರುವ ನಿಬಂಧನೆಗಳ ಕಟ್ಟುನಿಟ್ಟಿನ ಪಾಲನೆಯಾಗಬೇಕು. ಇಲ್ಲವಾದಲ್ಲಿ ಅಂತಹವರುಗಳ ವಿರುದ್ಧ ಸೂಕ್ತ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು. ರಾಜ್ಯದ ಇತರೆ ಜಿಲ್ಲೆಗಳಿಗೆ ಮರಳನ್ನು ನೀಡುವಷ್ಟು ಹೇರಳ ಮರಳು ಶಿವಮೊಗ್ಗ ಜಿಲ್ಲೆಯಲ್ಲಿದೆ. ಈ ವಿಚಾರದಲ್ಲಿ ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಯುತ ಐವನ್ ಡಿ'ಸೋಜಾ ರವರು ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ರಾಜ್ಯದಲ್ಲಿ ಯಾವ ರೀತಿಯಾಗಿ ಮರಳು ಮಾಫಿಯಾ ಆಗಿದೆ ಎಂಬುದರ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಈ ವಿಷಯದಲ್ಲಿ ನಾನು ಕೆಲವು ಅಂಶಗಳನ್ನು ಹೇಳಲಿಚ್ಛಿಸುತ್ತೇನೆ. ನಮ್ಮ ರಾಜ್ಯದಲ್ಲಿ ಮರಳಿನ ಅಭಾವ ಜಾಸ್ತಿಯಾಗಿದ್ದು, ಇದರ ಲಾಭವನ್ನು ನೆರೆಯ ರಾಜ್ಯಗಳು ಪಡೆದುಕೊಳ್ಳುತ್ತಿವೆ. ಇವತ್ತಿನ ದಿವಸ ಬೆಂಗಳೂರು ನಗರಕ್ಕೆ ನೆರೆಯ ತಮಿಳುನಾಡು ರಾಜ್ಯದಿಂದ ಯಥೇಚ್ಛವಾಗಿ ಮರಳು ಸರಬರಾಜಾಗುತ್ತಿದೆ. ತಮಿಳುನಾಡು ರಾಜ್ಯದಿಂದ ಮರಳನ್ನು ಲಾರಿಗಳಲ್ಲಿ ತುಂಬಿಕೊಂಡು ರಾಜ್ಯದ ಗಡಿಭಾಗದ ಪ್ರದೇಶಕ್ಕೆ ಬಂದು, ನಂತರದಲ್ಲಿ ಅದನ್ನು ಸಣ್ಣ-ಸಣ್ಣ ಲಾರಿಗಳಿಗೆ ವರ್ಗಾಯಿಸುತ್ತಾರೆ. ಇವತ್ತಿನ ದಿವಸ ಬೆಂಗಳೂರು ನಗರ ಪ್ರದೇಶದಲ್ಲಿ ಒಂದು ಲೋಡ್ ಮರಳಿಗೆ ಒಂದು ಲಕ್ಷ ರೂಪಾಯಿಗಳಷ್ಟು ಹಣವನ್ನು ನೀಡಬೇಕಾಗಿದೆ. ಇದರಿಂದಾಗಿ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಕಾಮಗಾರಿಗಳು ಕುಂಠಿತವಾಗುತ್ತಿವೆ. ಮರಳಿನ ಅಭಾವ ಜಾಸ್ತಿಯಾಗಿರುವುದರಿಂದ ಎಂ-ಸ್ಯಾಂಡ್ ಎಂಬುದಾಗಿ ಪ್ರಾರಂಭ ಮಾಡಿದ್ದಾರೆ. ಎಂ-ಸ್ಯಾಂಡ್‌ಗೆ ತಾಂತ್ರಿಕವಾಗಿ ಯಾವ ವಸ್ತುಗಳನ್ನು ಹಾಕಬೇಕಾಗಿತ್ತೋ ಅವುಗಳನ್ನು ಹಾಕಿರುವುದಿಲ್ಲ ಹಾಗೂ ಅವುಗಳ ಗುಣಮಟ್ಟದ ಬಗ್ಗೆಯೂ ಸಹ ನಿಯಂತ್ರಣವನ್ನು ಹೊಂದಬೇಕಾಗಿತ್ತು. ಆದರೆ ಅದನ್ನು ಪರೀಕ್ಷೆ ಮಾಡುವವರು ಯಾರೂ ಸಹ ಇಲ್ಲ. ಇತ್ತೀಚಿನ ದಿನಗಳಲ್ಲಿ ಎಂ-ಸ್ಯಾಂಡ್‌ನ್ನು ಸರಬರಾಜು ಮಾಡುತ್ತಿದ್ದಾರೆ. Crusher ನಲ್ಲಿ ಬರುವ ಪುಡಿಯನ್ನು ಎಂ-ಸ್ಯಾಂಡ್ ಎಂಬುದಾಗಿ ನೇರವಾಗಿ ಮಾರಾಟ ಮಾಡುತ್ತಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಬಡವರು ಯಾವುದಾದರೂ ರೀತಿಯ ಮರಳು ದೊರೆತರೆ ಸಾಕು, ತಮ್ಮ ಕಟ್ಟಣ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸೋಣ ಎಂಬುದಾಗಿ ಭಾವಿಸುತ್ತಿದ್ದಾರೆ. ಇವತ್ತಿನ ದಿವಸ ಬಹುಮಹಡಿಗಳ ಕಟ್ಟಡಗಳ ನಿರ್ಮಾಣ ಕಾಮಗಾರಿಗಳಲ್ಲೂ ಸಹ ಸದರಿ ಜೆಲ್ಲಿ ಪುಡಿಯನ್ನು ಉಪಯೋಗಿಸಿಕೊಂಡು ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ಇಂತಹ ಕಟ್ಟಡಗಳನ್ನು ನಾವೆಲ್ಲರೂ ಇತ್ತೀಚಿನ ದಿನಗಳಲ್ಲಿ ನೋಡುತ್ತಿದ್ದೇವೆ. ಅಂತಹ ಕಳಪೆ ಗುಣಮಟ್ಟ ಹೊಂದಿರುವ ಎಂ-ಸ್ಯಾಂಡ್‌ನ್ನು ಬಳಸಿ ಕಟ್ಟಡವನ್ನು ಕಟ್ಟುತ್ತಿರುವ ಹಂತದಲ್ಲಿಯೇ ಅದು ಕುಸಿದು ಬೀಳುತ್ತಿದೆ. ಇಂತಹ ಮರಳಿನ ವಿಚಾರದಲ್ಲಿ ಸರ್ಕಾರವು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಉತ್ತಮ ಗುಣಮಟ್ಟದ ಮರಳನ್ನು ಬಳಕೆ ಮಾಡದಿದ್ದರೆ ಅಂತಹ ಅನಾಹುತಗಳು ಹೆಚ್ಚಿನ ಸಂಖ್ಯೆಯಲ್ಲಿ ಮರುಕಳಿಸುತ್ತವೆ. ಮಾನ್ಯ ಸಚಿವರು ಈ ವಿಷಯದಲ್ಲಿ ಗಮನಹರಿಸಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿದಂತೆ, ಸಾಮಾನ್ಯ ಪ್ರಜೆಗಳು ಹಾಗೂ ಬಡವರು ಆಶ್ರಯ ಯೋಜನೆಯಡಿ ಮನೆಗಳನ್ನು ನಿರ್ಮಿಸಲು ಸರಿಯಾದ ರೀತಿಯಲ್ಲಿ ಮರಳನ್ನು ಸರಬರಾಜು ಮಾಡದಿದ್ದರೆ; ಬಡವರಿಗೆ ಮನೆಗಳನ್ನು ಕೊಡುವ ಕನಸನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಂದಿರುವ ಸರ್ಕಾರದ ಯೋಜನೆಗಳು ಈಡೇರುವುದಿಲ್ಲ. ಈ ಕಾರಣಗಳಿಂದ ಮಾನ್ಯ ಸಚಿವರು ಈ ವಿಷಯದಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಪ್ರಾರ್ಥಿಸುತ್ತೇನೆ.

**ಶ್ರೀ ರಾಜಶೇಖರ ಬಿ.ಪಾಟೀಲ(ಗಣಿ ಮತ್ತು ಭೂ ವಿಜ್ಞಾನ ಹಾಗೂ ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಸದನದ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ತಿನ ಗೌರವಾನ್ವಿತ ಸದಸ್ಯರುಗಳಾದ ಶ್ರೀ ಐವನ್ ಡಿ'ಸೋಜಾ, ಶ್ರೀ ಎಸ್.ಎಲ್.ಭೋಜೇಗೌಡ, ಡಾ॥ ವೈ.ಎ.ನಾರಾಯಣ ಸ್ವಾಮಿ, ಡಾ॥ ತೇಜಸ್ವಿನಿ ಗೌಡಗಳಂತಹ ಅನೇಕರು ಈ ವಿಷಯದಲ್ಲಿ ತಮ್ಮ ಸಾಕಷ್ಟು ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಎಲ್ಲರಿಗೂ ತಿಳಿದಿರುವಂತೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆ ಭಾಗದ ಎಲ್ಲಾ ಜನ ಪ್ರತಿನಿಧಿಗಳ, ಜಿಲ್ಲಾಧಿಕಾರಿಗಳ ಮತ್ತು ಅಧಿಕಾರಿಗಳ ಸಭೆಯನ್ನು ಮಾಡಲಾಗಿದೆ. ಮಾನ್ಯ ಐವನ್ ಡಿ'ಸೋಜಾರವರು ಮಂಗಳೂರು, ಉತ್ತರ ಕನ್ನಡ ಮತ್ತು ಈ ಭಾಗದ ಇತರೆ ಪ್ರದೇಶಗಳಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಮಾತನಾಡಿದ್ದಾರೆ. ಇಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸದನದ ಉಪ ಸಮಿತಿಯನ್ನು ರಚನೆ ಮಾಡಲಾಗಿದೆ. ರಾಜ್ಯದಲ್ಲಿರುವ ಮರಳಿನ ಅಭಾವದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. C.R.Z. (Coastal Regulation Zone) ಮತ್ತು non-C.R.Z. ಪ್ರದೇಶಗಳ ಬಗ್ಗೆಯೂ ಸಹ ಪ್ರಸ್ತಾಪ ಮಾಡಲಾಗಿದೆ. ಈ ಹಿಂದೆ ರಾಜ್ಯದಲ್ಲಿ ಮರಳಿನ ಬೇಡಿಕೆ ಯಾವ ಪ್ರಮಾಣದಲ್ಲಿತ್ತು ಹಾಗೂ ಇವತ್ತಿನ ದಿವಸ ಯಾವ ಪ್ರಮಾಣದಲ್ಲಿದೆ ಎಂಬುದರ ಬಗ್ಗೆ ತಿಳಿದಿದೆ. ಮಂಗಳೂರು ಭಾಗದಲ್ಲಿ 75 ಜನರಿಗೆ ಮರಳು ಗಣಿಗಾರಿಕೆ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಉಡುಪಿ ಜಿಲ್ಲೆಯಲ್ಲಿ 171 ಜನರಿಗೆ ಮರಳು ಗಣಿಗಾರಿಕೆ ಮಾಡಲು ಅನುಮತಿ ಕೊಡಬೇಕೆಂಬ ಬೇಡಿಕೆ ಇದೆ. ಇಂತಹ ಸಂಗತಿಗಳನ್ನು ಇಲಾಖೆಯ ಅಧಿಕಾರಿಗಳು ನೋಡುತ್ತಿದ್ದಾರೆ. ಈ ಸದನದ ಸಾಕಷ್ಟು ಮಾನ್ಯ ಸದಸ್ಯರುಗಳು ಕರಾವಳಿ ಭಾಗದಲ್ಲಿನ ಮರಳು ಸಮಸ್ಯೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹೀಗಾಗಿ ಪ್ರಸ್ತುತ ಅಧಿವೇಶನ ಪೂರ್ಣಗೊಂಡ ನಂತರ ನಾನು ಖುದ್ದಾಗಿ ಮಂಗಳೂರು ಜಿಲ್ಲೆಗೆ ಭೇಟಿ ನೀಡಿ, ಸಮಸ್ಯೆಯನ್ನು ಬಗೆಹರಿಸುವಂತಹ ಕೆಲಸಗಳನ್ನು ಮಾಡುತ್ತೇನೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಿದ್ದಾರೆ. ಇದೇ ವಿಚಾರವಾಗಿ ರಚನೆಯಾಗಿರುವ ಸದನದ ಉಪ ಸಮಿತಿಯು ತನ್ನ ವರದಿಯನ್ನು ನೀಡಿದರೆ, ಅದರಿಂದ ನಮಗೆ ಅನುಕೂಲವಾಗುತ್ತದೆ. ಪ್ರಸ್ತುತ ಅಧಿವೇಶನ ಪೂರ್ಣಗೊಂಡ ನಂತರ ಸದರಿ ಸ್ಥಳಗಳಿಗೆ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಯನ್ನು ನೋಡುತ್ತೇನೆ. ಮರಳು ಅಭಾವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ಸಮಸ್ಯೆಯಲ್ಲ ; ಕಳೆದ 10 ವರ್ಷಗಳಿಂದ ಇದೆ ಎಂಬುದಾಗಿ ಮಾನ್ಯ ನಾರಾಯಣಸ್ವಾಮಿರವರು ಹೇಳಿದರು. ಇದೇ ವಿಷಯವಾಗಿ ಇವತ್ತಿನ ದಿವಸ ಕೆಳಮನೆಯಲ್ಲಿ ಬಹಳ ಗಂಭೀರವಾದ ಚರ್ಚೆ ನಡೆಯುತ್ತಿದೆ. ಅಲ್ಲಿಯೂ ಸಹ ಸರ್ಕಾರವು ಉತ್ತರವನ್ನು ನೀಡಬೇಕು. ಆದರೆ ನಾನು ಈ ಸದನದಲ್ಲಿ ಉತ್ತರ ನೀಡುತ್ತಿದ್ದೇನೆ. ಕೆಳಮನೆಯಲ್ಲಿಯೂ ಸಹ ಅಲ್ಲಿನ ಮಾನ್ಯ ಸದಸ್ಯರಾದ ರೇಣುಕಾಚಾರ್ಯ ಹಾಗೂ ಇತರರು ಇದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅಲ್ಲಿಯೂ ಸಹ ಚರ್ಚೆ ನಡೆಯುತ್ತಿದೆ. ಈ ವಿಷಯದಲ್ಲಿ ಕರಾವಳಿ ಭಾಗದಲ್ಲಿರುವ ಸಮಸ್ಯೆಯ ಬಗ್ಗೆ ಹಾಗೂ ಮಾನ್ಯ ಸದಸ್ಯರುಗಳು ಹೇಳಿರುವ ಅವರ ಅನಿಸಿಕೆಗಳನ್ನು ಸರ್ಕಾರವು ಗಮನದಲ್ಲಿಟ್ಟುಕೊಂಡಿದೆ. ಆದಷ್ಟು ಬೇಗನೇ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡಲಾಗುವುದು. ಸ್ವಲ್ಪ ಕಾಲಾವಕಾಶ ನೀಡಿ ಎಂಬುದಾಗಿ ನಾನು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಸದಸ್ಯರಾದ ನಾರಾಯಣಸ್ವಾಮಿ ರವರು ಹೇಳಿದಂತೆ, ಸರ್ಕಾರವು ಈಗಾಗಲೇ ಅಧಿಕಾರಿಗಳ ತಂಡವನ್ನು ಮಾಡಿ, ನಮ್ಮ ನೆರೆಯ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಿಗೆ ಮರಳು ಸಮಸ್ಯೆ ಕುರಿತಾಗಿ ಅಲ್ಲಿರುವ ವ್ಯವಸ್ಥೆಗಳ ಬಗ್ಗೆ ಅಧ್ಯಯನ ಮಾಡಲು ಕಳುಹಿಸಿಕೊಡಲಾಗಿದೆ. ನಿನ್ನೆಯ ದಿವಸ ಕಲ್ಲು ಗಣಿಗಾರಿಕೆಯ ಬಗ್ಗೆ ಸಾವಿರಾರು ಜನರು ಧರಣಿಯಲ್ಲಿದ್ದರು. ಇದೇ ವಿಷಯದ ಬಗ್ಗೆ ಕೆಳಮನೆಯಲ್ಲಿ ಅಲ್ಲಿನ ವಿರೋಧ ಪಕ್ಷದ ನಾಯಕರು ಆ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆ ಸದನದಲ್ಲಿಯೂ ಸಹ ನಾನು ಉತ್ತರವನ್ನು ನೀಡಬೇಕಾಗಿದೆ. ಐದು ರಾಜ್ಯಗಳಿಗೆ ಅಧ್ಯಯನಕ್ಕಾಗಿ ಕಳುಹಿಸಿದ್ದ ಅಧಿಕಾರಿಗಳನ್ನೊಳಗೊಂಡ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ. ಸದರಿ ವರದಿಯನ್ನು ಪರಿಶೀಲಿಸಿ, ಸದರಿ ರಾಜ್ಯಗಳಲ್ಲಿ ಮರಳ ಬಗ್ಗೆ ಯಾವ ರೀತಿಯ ವ್ಯವಸ್ಥೆ ಇದೆ ಎಂಬುದನ್ನು ನೋಡಲಾಗುವುದು. ಮರಳು ನೀತಿಯನ್ನು ಸರಳೀಕರಣಗೊಳಿಸಬೇಕಾಗಿದೆ. ರಾಜ್ಯದ ಬಡ ಜನರಿಗೆ ಯಾವುದೇ ತೊಂದರೆಯಿಲ್ಲದೇ ಸುಲಭವಾಗಿ ಹಾಗೂ ಕಡಿಮೆ ದರದಲ್ಲಿ ಮರಳು ದೊರೆಯುವಂತಾಗಬೇಕು ಎಂಬುದೇ ನಮ್ಮ ಸರ್ಕಾರದ ಉದ್ದೇಶವಾಗಿದೆ.

**(ಮುಂದು)**

**(550) 18-12-2018 7.50 ಸಿಎಸ್/ಬಿಎನ್ಎಸ್**

**ಶ್ರೀ ಐವನ್ ಡಿಸೋಜಾ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಕಳಕಳಿ ನನಗೆ ಅರ್ಥವಾಗುತ್ತದೆ. ಜನರಿಗೆ ಕಡಿಮೆ ದರದಲ್ಲಿ ಮರಳು ಸಿಗಬೇಕು, ಅದರಲ್ಲಿ ಜನರ ಕಟ್ಟಡಗಳು ಕಾಮಗಾರಿಗಳು ನಡೆಯಬೇಕು ಎನ್ನುವ ಸರ್ಕಾರದ ಕಳಕಳಿ ನನಗೆ ಅರ್ಥವಾಗುತ್ತದೆ. ಇದು ಇಂದು ನಿನ್ನೆಯ ಹೋರಾಟ ಅಲ್ಲ, ಬಹಳ ದೀರ್ಘ ಕಾಲದ್ದು, ಆದರೆ ಸರ್ಕಾರ ಅಥವಾ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಆದೇಶ ಮಾಡಿದಲ್ಲಿ ಅದಕ್ಕೂ ನಮಗೂ ಸಂಬಂಧವಿಲ್ಲ ಎನ್ನುವ ರೀತಿಯಲ್ಲಿ ಅಧಿಕಾರಿಗಳು ವರ್ತನೆಯನ್ನು ಮಾಡುತ್ತಾರೆ. ಸಚಿವರು ಏನೇ ಹೇಳಿದರೂ ಸಹ ಅವರು ಕೇಳುವುದೇ ಇಲ್ಲ. ನಾವೇನಾದರೂ ಕೇಳಿದರೆ "ಅಯ್ಯೊ, ನೀವು ಹೇಳಿದಂತೆ ಕೇಳಿದರೆ, ನಾವು ಜೈಲಿಗೆ ಹೋಗಬೇಕಾಗುತ್ತದೆ" ಎಂದು ಹೇಳುತ್ತಾರೆ. ನಾವು ಜನಪ್ರತಿನಿಧಿಗಳು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ, ಪಾರ್ಲಿಮೆಂಟ್, ಸಂವಿಧಾನ ಎಲ್ಲ ಇದ್ದರೂ ಕೂಡ ನಮ್ಮ ಮಾತನ್ನು ಅಧಿಕಾರಿಗಳು ಕೇಳುವುದಿಲ್ಲ. It means that they are above the law. ಆ ರೀತಿಯ ಚಿಂತನೆ ಇದೆ. ಹಾಗಾಗಿ ಸರ್ಕಾರ ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಈಗ ಮಂಗಳೂರಿನಲ್ಲಿ 22, ಉಡುಪಿಯಲ್ಲಿ 7, ಹಾಗಯೇ ಕಾರವಾರದಲ್ಲಿ 9 sand blocks ಅನ್ನು ಗುರುತಿಸಲಾಗಿದೆ. ಗುರುತಿಸಿದ ಮೇಲೆ ಅಲ್ಲಿ ಯ್ಯಾರ್ಯಾರಿಗೆ ಕೊಡಬೇಕೋ ಅದನ್ನು ಗುರುತಿಸಿ ಕೊಟ್ಟಿ. ಈಗ ಸರ್ಕಾರ 22 sand blocks ನಲ್ಲಿ 10 sand blocks ಅನ್ನು ಕೊಟ್ಟು 12 sand blocks ಅನ್ನು ಬಾಕಿ ಇಟ್ಟಿದ್ದಾರೆ. ಉಡುಪಿ ಜಿಲ್ಲೆಯಲ್ಲಿ 7 sand blocks ನಲ್ಲಿ 5 sand blocks ಅನ್ನು ಕೊಟ್ಟು, 2 sand blocks ಅನ್ನು ಬಾಕಿ ಉಳಿಸಲಾಗಿದೆ. ಕಾರವಾರದಲ್ಲಿ 9 sand blocks ನಲ್ಲಿ 7 sand blocks ಅನ್ನು ಕೊಟ್ಟು 2 sand blocks ಅನ್ನು ಬಾಕಿ ಉಳಿಸಲಾಗಿದೆ. ಕನಿಷ್ಠ ಎಲ್ಲೆಲ್ಲಿ ಮರಳು ತೆಗೆಯಬಹುದೆಂದು ಗುರುತು ಮಾಡಲಾಗಿದೆ ಅಲ್ಲಿ ಮರಳನ್ನು ತೆಗೆಯಲು ಪರ್ಮಿಟ್ ನೀಡಿದರೆ 3-4 ಸಾವಿರ ರೂಪಾಯಿಗಳಿಗೆ ಒಂದು ಲೋಡ್ ಮರಳು ಸಿಗುತ್ತದೆ. ನಮ್ಮಲ್ಲಿ ಯಥೇಚ್ಚ ಮರಳಿದೆ. ಮಲೇಷಿಯಾದಿಂದ ಮರಳನ್ನು ತರಿಸುವ ಪ್ರಮೇಯ ಬರುವುದಿಲ್ಲ. ನಮ್ಮ ಮಂಗಳೂರಿನ ಕರಾವಳಿ ಭಾಗಕ್ಕೆ ಬೇರೆ ಕಡೆಯಿಂದ ಮರಳನ್ನು ತರಿಸುವ ಅಗತ್ಯವಿಲ್ಲ. ಈ ಬಗ್ಗೆ ತಾವು ಗಮನಹರಿಸಿ, ತಕ್ಷಣ ಭೇಟಿ ಕೊಡುವುದಾಗಿ ಸಚಿವರು ಹೇಳಿರುವುದಕ್ಕೆ ನಾನು ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಇಂತಹ ದಿನ ಬರುತ್ತೇನೆಂದು ನಮಗೆ ದಿನಾಂಕವನ್ನು ತಿಳಿಸಿದರೆ, ನಮ್ಮ ಭಾಗದ ಜನರಿಗೆ ನಾನು ಅದನ್ನು ತಿಳಿಸುತ್ತೇನೆ. ನಾವೆಲ್ಲರೂ ಕೂಡ ತಮಗೆ ಸಹಕಾರ ನೀಡುತ್ತೇವೆ. ಈ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಕೊಳ್ಳಬಹುದು.

ಶ್ರೀ **ರಾಜಶೇಖರ ಬಿ ಪಾಟೀಲ:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಐವನ್ ಡಿಸೋಜಾರವರು ಮಂಗಳೂರಿನಲ್ಲಿ 22 ಮರಳಿನ ದಿಬ್ಬಗಳನ್ನು ಗುರುತು ಮಾಡಿದ್ದು ಅದರಲ್ಲಿ 12 ಮರಳಿನ ದಿಬ್ಬಗಳಿಗೆ ಅನುಮತಿ ನೀಡಿರುವ ವಿಚಾರದ ಬಗ್ಗೆ ಪ್ರಸ್ತಾಪವನ್ನು ಮಾಡಿದರು. ದಕ್ಷಿಣ ಕನ್ನಡ ಜಿಲ್ಲೆಯ C.R.Z. (Coastal Regulation Zone) ಪ್ರದೇಶದಲ್ಲಿ ಒಟ್ಟು 76 ಜನರಿಗೆ

ತಾತ್ಕಾಲಿಕ ಪರವಾನಿಗಿಯನ್ನು ನೀಡಲಾಗಿರುತ್ತದೆ, ಇದುವರೆವಿಗೆ ವಿಲೇವಾರಿ ಮಾಡಿದ ಮರಳಿದ ಪ್ರಮಾಣ, 48000 ಮೆಟ್ರಿಕ್ ಟನ್. ಈಗ ರಾಜಧನ ಕೂಡ 28,80,000 ಹೇಳಿದ್ದಾರೆ. ಉಳಿದ ಮರಳಿನ ದಿಬ್ಬಗಳಿಗೆ Karnataka State Coastal Zone Management Authority ಯಿಂದ ನಮಗೆ ಅನುಮತಿ ಬರಬೇಕಾಗಿದೆ. ಇವತ್ತು ಆ ಕಾರಣಗಳಿಂದ 10 ದಿಬ್ಬಗಳು ಉಳಿದಿವೆ. ನಾನು ಈ ಅಧಿವೇಶನ ಮುಗಿದ ಮೇಲೆ ಮಂಗಳೂರಿಗೆ ಭೇಟಿಯನ್ನು ನೀಡಿ, ಈ ನಿಟ್ಟಿನಲ್ಲಿ ವ್ಯವಸ್ಥೆಯನ್ನು ಇನ್ನಷ್ಟು ಸರಳೀಕರಣ ಮಾಡುವ ಬಗ್ಗೆ ಚಿಂತನೆ ಮಾಡಲಾಗುವುದು. ಮಾನ್ಯ ಉಪ ಮುಖ್ಯಮಂತ್ರಿಗಳು ಕೂಡ ಆ Sub-Committee ಯ ಅಧ್ಯಕ್ಷರಾಗಿದ್ದಾರೆ. ಅವರ ಜೊತೆಯಲ್ಲಿ ಸಭೆ ನಡೆಸಿ, ಇಡೀ ರಾಜ್ಯದಲ್ಲಿ ಮರಳಿನ ನೀತಿಯ ಬಗ್ಗೆ ಬದಲಾವಣೆಯನ್ನು ತರುವ ಪ್ರಯತ್ನವನ್ನು ಮಾಡಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಈ ವಿಚಾರ ಮಾನ್ಯ ಸಚಿವರು ತಿಳಿದುಕೊಂಡಿರುವಷ್ಟು ಸುಲಭವಾಗಿಲ್ಲ. ಏಕೆಂದರೆ ಪಕ್ಷಬೇಧವನ್ನು ಮರೆತು ಹೇಳುವುದಾದರೆ ನಮ್ಮ ಜನಪ್ರತಿನಿಧಿಗಳು, ಅಲ್ಲಿರತಕ್ಕ ಜನರನ್ನು ಎದುರಿಸಲು ಆಗದಂತಹ ಕಷ್ಟ ಪರಿಸ್ಥಿತಿ ಬಂದೊದಗಿದೆ. ಅಧಿವೇಶನ ಮುಗಿದ ಮೇಲೆ ಸಚಿವರು ಜಿಲ್ಲೆಗಳಿಗೆ ಭೇಟಿ ನೀಡುವುದಕ್ಕಿಂತ ಈಗ ನಮ್ಮ ದಕ್ಷಿಣ ಕನ್ನಡದ ಶಾಸಕರೆಲ್ಲರೂ ಕೂಡ ಅಧಿವೇಶನದಲ್ಲಿದ್ದಾರೆ. ಇಡೀ ರಾಜ್ಯದಲ್ಲಿರುವ ಮರಳಿನ ನೀತಿಯಲ್ಲಿ ಬದಲಾವಣೆಗಳನ್ನು ತರಬೇಕಾಗಿದೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಜಿಲ್ಲೆಗಳಲ್ಲಿ C.R.Z. ಇರುವುದರಿಂದ, ನಮ್ಮ ಎರಡು ಜಿಲ್ಲೆಗಳ ಶಾಸಕರನ್ನು ನಾಳೆ ತಮ್ಮ ಕೊಠಡಿಯಲ್ಲಿ ಕರೆದು, ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳ ಜೊತೆ ಚರ್ಚೆಯನ್ನು ಮಾಡಲಿಕ್ಕೆ ನಮಗೆ ಅವಕಾಶವನ್ನು ಮಾಡಿಕೊಡಿ.

**ಶ್ರೀ ರಾಜಶೇಖರ ಬಿ ಪಾಟೀಲ:-** ಮಾನ್ಯ ಸಭಾಪತಿಗಳೇ, ನಾನು ಗಣಿ ಭೂವಿಜ್ಞಾನ ಮತ್ತು ಮುಜರಾಯಿ ಇಲಾಖೆಯ 5-6 ಪ್ರಶ್ನೆಗಳು, ನಿಯಮ 68, ಅರ್ಧ ಗಂಟೆ ಕಾಲಾವಧಿ ಚರ್ಚೆ ಎಲ್ಲವೂ ಮತ್ತು ಕೆಳಮನೆಯಲ್ಲಿ ಸಾಕಷ್ಟು ಬರುತ್ತಿವೆ, ಕೆಳಮನೆಯಲ್ಲಿಯೂ ಸಹ ಮರಳಿನ ಬಗ್ಗೆ ಚರ್ಚೆ ನಡೆದಿದ್ದು, ನಾನು ಉತ್ತರವನ್ನು ನೀಡಬೇಕಾಗಿದೆ. ನಾನು ಸಭಾಧ್ಯಕ್ಷರ ಅನುಮತಿಯನ್ನು ಪಡೆದು ಇಲ್ಲಿಗೆ ಬಂದಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಮಗೆ 8 ರಿಂದ 9 ಗಂಟೆಯವರೆಗೆ ಸಮಯವನ್ನು ಕೊಡಬಹುದಲ್ಲವೇ?, ಸದನ ಮುಗಿದ ನಂತರ ನಿಮಗೆ ಸಮಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಲು ಆಗದಿರಬಹುದು, ಆದ್ದರಿಂದ ಮಾನ್ಯ ಸಭಾಪತಿಯವರಿಗೆ ನಾಳೆ ಬೆಳಿಗ್ಗೆ C.R.Z. ಬಗ್ಗೆ ಸಭೆ ನಡೆಸಲು ಅನುವು ಮಾಡಿಕೊಡಬೇಕೆಂದು ಕೋರುತ್ತೇನೆ. ಏಕೆಂದರೆ ಕೇಂದ್ರಸರ್ಕಾರ ಈ ವಿಚಾರವನ್ನು ರಾಜ್ಯಸರ್ಕಾರದ ಮಿತಿಗೆ ಬಿಟ್ಟುಬಿಟ್ಟಿದೆ. ಆದ್ದರಿಂದ ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡುವುದಕ್ಕೆ ಇಲಾಖಾ ಸಚಿವರು, ಅಧಿಕಾರಿಗಳು ಹಾಗೂ ಸಾಧ್ಯವಾದರೆ ಗೃಹಮಂತ್ರಿಗಳು ಇದ್ದು ಸಭಾಪತಿಯವರ ಕೊಠಡಿ ಅಥವಾ ಸಭಾಂಗಣದಲ್ಲಿ ಸಭೆ ಸೇರಿ ಚರ್ಚೆ ಮಾಡಬಹುದು.

**ಶ್ರೀ ರಾಜಶೇಖರ ಬಿ ಪಾಟೀಲ:-** ಮಾನ್ಯ ಸಭಾಪತಿಗಳೇ, ನನಗೆ ನಾಳೆಯೂ ಸಹ ಈ ಸದನದಲ್ಲಿ ಇರಬೇಕಾಗಿದೆ. ಆಗ ನಾನು ಸಮಯವನ್ನು ತಿಳಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಸಚಿವರಿಗೆ ನಮ್ಮ ಸಂಪೂರ್ಣ ಸಹಕಾರವಿದೆ. ಏಕೆಂದರೆ ಈ ಮರಳು ನೀತಿಯಿಂದ ನಾವೆಲ್ಲರೂ ಸಾಕಷ್ಟು ರೋಸಿ ಹೋಗಿದ್ದೇವೆ. ನಾಳೆ ಸಂಜೆ ಸದನ ಮುಗಿದ ಮೇಲೆ ರಾತ್ರಿ 8 ರಿಂದ 8.30 ಗಂಟೆಯವರೆಗೆ ಸಭೆ ಕರೆಯಲು ಅವಕಾಶ ಕೊಡಿ. ನಮ್ಮ ಎರಡು ಜಿಲ್ಲೆಗಳ ಶಾಸಕರನ್ನು ನಾವೇ ಕರೆಯುತ್ತೇವೆ. ಆಗ ಈ C.R.Z. ಬಗ್ಗೆ ಚರ್ಚೆಯನ್ನು ಮಾಡೋಣ.

**ಸಭಾಪತಿಯವರು:-** ಮಾನ್ಯ ಸಚಿವರೆ, ಚರ್ಚೆ ನಡೆಯಬೇಕಾಗಿರುವುದು, ಮರಳು ಮತ್ತು ಮರಳುಗಾರಿಕೆ ಬಗ್ಗೆ, ಇವತ್ತು 200 ಜನ ಮರಳುಗಾರಿಕೆಯನ್ನು ಮಾಡುತ್ತಿರುವವರ ಬಗ್ಗೆ ಚರ್ಚೆ ನಡೆಯುತ್ತಿಲ್ಲ. ಇವತ್ತು ಕರಾವಳಿ ಭಾಗದಲ್ಲಿರುವ ಜನರಿಗೆ ಮರಳಿನ ಅವಶ್ಯಕತೆ ಇದೆ. ಅದನ್ನು ಯಾವ ರೀತಿ ಒದಗಿಸಲಾಗುವುದು ಎನ್ನುವುದರ ಬಗ್ಗೆ ಸರ್ಕಾರಕ್ಕೆ ಇವತ್ತು clarity ಇಲ್ಲ. ಈಗ ಸಾಂಪ್ರದಾಯಿಕ ಮರಳನ್ನು ಯಾರು ತೆಗೆಯುತ್ತಿದ್ದಾರೆ, ಈ ಹಿಂದೆ ಹೇಗಿತ್ತು? ಇವತ್ತಿನ ಪರಿಸ್ಥಿತಿ ಹೇಗಿದೆ? ಸಾಂಪ್ರದಾಯಿಕ ಎನ್ನುವ ಹೆಸರಿನಲ್ಲಿ ಬಹುಶಃ non-C.R.Z. ಎನ್ನುವುದು ಸಾಂಪ್ರದಾಯಿಕ ಮರಳುಗಾರಿಕೆ ಅಲ್ಲ. ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ C.R.Z. ಎನ್ನುವುದು ಸಾಂಪ್ರದಾಯಿಕವಾಗಿ ಮರಳಿನ ದಿಬ್ಬವನ್ನು ತೆರವು ಮಾಡಲು ಅವಕಾಶವನ್ನು ಮಾಡಿಕೊಟ್ಟಿದೆ. ಆದರೆ non-C.R.Z. ಅಂದರೆ, ಸಿಹಿ ನೀರಿನಿಂದ ಮರಳನ್ನು ತೆಗೆಯುವುದಕ್ಕೆ ಸಾಂಪ್ರದಾಯಿಕ ಪದ್ಧತಿ ಏನಿಲ್ಲ. ಈ ಸಾಂಪ್ರದಾಯಿಕ ಮರಳುಗಾರಿಕೆಯ ಹೆಸರಿನಲ್ಲಿ ಮರಳನ್ನು ಇಲ್ಲಿಯತನಕ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ I.T. Certificate ಹೊಂದಿರಬೇಕು ಮತ್ತು ಹಿಂದೆ ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮರಳುಗಾರಿಕೆಯನ್ನು ಮಾಡಿರಬೇಕು. ಹೀಗೆ ಬೇರೆ ಬೇರೆ ನಿಬಂಧನೆಗಳನ್ನು ಹಾಕಿ, ಯಾರಿಗೂ ಸಹ ಮರಳನ್ನು ತೆಗೆಯಲು ಆಗದಿರುವಂತಹ ಪರಿಸ್ಥಿತಿ ಬಂದಿದೆ. ಇಲ್ಲಿ ಸಚಿವರು ಮಾತನಾಡಿದಷ್ಟು ಸುಲಭವಾಗಿ ಈ ಸಮಸ್ಯೆ ಇತ್ಯರ್ಥವಾಗುವುದಿಲ್ಲ. ಇದು ಒಂದು ದಿವಸದ ಸಮಸ್ಯೆ ಕೂಡ ಅಲ್ಲ. ಬಹುಶಃ ಕಳೆದ ಒಂದೂವರೆ ವರ್ಷದಿಂದ ಮರಳು ಸಿಗುತ್ತಿಲ್ಲ. ಬೇರೆ ಕಡೆಗಳಿಂದ ಬೇರೆ ಬೇರೆ ಮೂಲದಿಂದ ಮರಳು ಬಂದರೂ ಸಹ ಕರಾವಳಿ ಪ್ರದೇಶದಲ್ಲಿ ಒಂದೂವರೆ ವರ್ಷದಿಂದ ಮರಳು ಸಿಗುತ್ತಿಲ್ಲ. ಇದನ್ನು ಸಚಿವರು ಯಾವ ರೀತಿ ಇತ್ಯರ್ಥ ಮಾಡುತ್ತೀರೋ ಮಾಡಿ, ಉಪ ಮುಖ್ಯಮಂತ್ರಿಗಳು ಸಹ Sub-Committee ಯ Chairman ಆಗಿದ್ದಾರೆ. ಇದನ್ನು ಇತ್ಯರ್ಥಗೊಳಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೇ, ನಾಳಿದ್ದು ಬೆಳಿಗ್ಗೆ 9 ಗಂಟೆಯಿಂದ 10 ಗಂಟೆಯವರೆಗೆ ಸಭೆ ಕರೆಯಲು ಅವಕಾಶವನ್ನು ಮಾಡಿಕೊಡಿ, ನಾವು ನಮ್ಮ ಎಲ್ಲಾ ಸದಸ್ಯರನ್ನು ಕರೆಯುತ್ತೇವೆ. ಬಹುಶಃ ಸಚಿವರು ಒಂದು ಅರ್ಧ ಗಂಟೆ ಬೇಗ ಏಳಬೇಕಾಗಬಹುದು. ಉಪ ಮುಖ್ಯಮಂತ್ರಿಗಳು ಬರುತ್ತಾರೆ, ನಮ್ಮ ಎರಡು ಜಿಲ್ಲೆಗಳ ಉಸ್ತುವಾರಿ ಸಚಿವರುಗಳು ಸಹ ಬರುತ್ತಾರೆ. ಸಭಾಪತಿಯವರು ನಿಗದಿ ಮಾಡಿದರೆ ನಾಳಿದ್ದು ಬೆಳಿಗ್ಗೆ ಸಭೆ ಸೇರಬಹುದು. ಈ ಬಗ್ಗೆ ಸೂಚನೆಯನ್ನು ಸಭಾಪತಿಯವರು ಕೊಡುತ್ತಾರೆ.

**ಸಭಾಪತಿಯವರು:–** ಶ್ರೀ ಎನ್.ರವಿಕುಮಾರ್ ಅವರ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಬೇಕಾಗಿತ್ತು, ಅದಕ್ಕೆ ಮುಖ್ಯಮಂತ್ರಿಗಳು ಉತ್ತರವನ್ನು ನೀಡಿರುವುದಿಲ್ಲ. ಅರ್ಧ ಗಂಟೆ ಕಾಲಾವಧಿ ಪ್ರಶ್ನೆಗೆ ನೀರಾವರಿ ಸಚಿವರು ಉತ್ತರ ನೀಡಬೇಕಾಗಿತ್ತು, ಅವರು ಸಹ ಸದನದಲ್ಲಿ ಇಲ್ಲ, ಮತ್ತೊಂದು ಪ್ರಶ್ನೆಯನ್ನು ಮಾನ್ಯ ಸದಸ್ಯರುಗಳಾದ ಧರ್ಮಸೇನ ಮತ್ತು ಪ್ರಾಣೇಶ್‌ರವರು ಸಹ ಸದನದಲ್ಲಿ ಇಲ್ಲ. ಆದ್ದರಿಂದ ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವುದು.

**(ಸದನವು ಸಂಜೆ 7 ಗಂಟೆ 58 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 19ನೇ ಡಿಸೆಂಬರ್ ಮಾಹೆ 2018ರ ಬುಧವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"